

# ಮಂಜಮ್ಮ ಜೋಗತಿ

ಡಾ. ಚಂದ್ರಪ್ಪ ಸೊಬಟಿ





# ಮಂಜಮ್ಮ ಜೋಗತಿ

ಡಾ. ಚಂದ್ರಪ್ಪ ಸೊಬಟಿ

ವಿಸ್ತರಣೆ ಹಾಗೂ ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ - ೫೮೧ ೧೯೭
ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ

# MANJAMMA JOGATI

by
**Dr. Chandrappa Sobati**
Assistant Professor
Karantaka Janapada University
Gotagodi - 581 197
Cell: 94492 33966

Published by
**Prof. S.C. Ramesh**
Director
Centre for Extension and Consultancy
Karantaka Janapada University
Gotagodi - 581 197
Shiggavi Taluk, Haveri Dist., Karnataka
Phone: 0836 - 2255180

Pages: xii + 116 Price: ₹ **80/-**

www.janapadauni.in

First Impression: 2014

**ISBN 978-93-8314-21-6**



ಬೆಲೆ : ₹ ೮೦/-

ಅಕ್ಷರ ಸಂಯೋಜನೆ
**ವಿಶ್ವ ಗುಜ್ಜರ್**
ಪುಟವಿನ್ಯಾಸ
**ಸವಿತ ಗ್ರಾಫಿಕ್ಸ್, ಕಮಲಾಪುರ**
Cell No.: 94802 57392

ಪುಸ್ತಕ ದೊರೆಯುವ ಸ್ಥಳ
**ಕರ್ನಾಟಕ ಜಾನಪದ ವಿಶ್ವವಿದ್ಯಾಲಯ**
ಗೊಟಗೋಡಿ ೫೮೧ ೧೯೭
ಶಿಗ್ಗಾವಿ ತಾಲೂಕು ಹಾವೇರಿ ಜಿಲ್ಲೆ
ಮುದ್ರಣ
**ರಾಜಾ ಪ್ರಿಂಟರ್ಸ್, ಬೆಂಗಳೂರು**

# ದೇಶ ಸುತ್ತು ಕೋಶ ಓದು

ಕನ್ನಡ ನಾಡು ಅಮೂಲ್ಯ ಹಾಗೂ ಸಮೃದ್ಧ ಜಾನಪದ ಸಂಪತ್ತಿನ ಆಗರವಾಗಿದೆ. ಅಪಾರವಾದ ಜ್ಞಾನದ ಅನನ್ಯತೆಯನ್ನು ಶೋಧಿಸುವ, ಸಂರಕ್ಷಿಸುವ ಹಾಗೂ ಸಂವರ್ಧಿಸುವ ಕಾರ್ಯಗಳು ಯಾವ ಕಾಲಕ್ಕೂ ಆಗಬೇಕಾದ ಕಾರ್ಯವೇ ಆಗಿದೆ. ಈ ಮಹತ್ವದ ಉದ್ದೇಶಗಳ ಈಡೇರಿಕೆಗಾಗಿ ಜಾನಪದ ವಿಶ್ವವಿದ್ಯಾಲಯದ ಸ್ಥಾಪನೆಯ ಅಗತ್ಯವಿತ್ತು. ನೆಲದ ಸಂಸ್ಕೃತಿಯನ್ನು ಉಸಿರಾಗಿಸಿಕೊಂಡು ಬದುಕುತ್ತಿರುವ ನಾಡಿನ ಸಮಸ್ತರ ಒಲವು ಮತ್ತು ನಿರೀಕ್ಷೆಗಳು ನಿಜವಾಗಬೇಕೆಂಬ ಮಹದಾಸೆಯೊಂದಿಗೆ ಜಗತ್ತಿನ ಪ್ರಪ್ರಥಮ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಸ್ಥಾಪನೆಯಾಗಿದೆ. ಇದು ಕನ್ನಡದಮಟ್ಟಿಗೆ ಅಷ್ಟೇ ಅಲ್ಲ ದೇಶೀ ಸಂಸ್ಕೃತಿಯ ಮೂಲವನ್ನು ಶೋಧಿಸುವ ಮತ್ತು ಅದರ ಹರವು ವಿಸ್ತಾರಗೊಳ್ಳುವಂತೆ ಮಾಡಬೇಕಾದ ಮಹತ್ವದ ಜವಾಬ್ದಾರಿಯನ್ನು ಹೊತ್ತಿರುವುದರಿಂದ ವಿಶ್ವವಿದ್ಯಾಲಯದ ಸ್ಥಾಪನೆ ಚಾರಿತ್ರಿಕವಾಗಿ ಮಹತ್ವದ್ದೆನಿಸಿದೆ.

ಸಮಾಜದ ಎಲ್ಲ ಸಮುದಾಯಗಳ ಜ್ಞಾನ ಸಂಗ್ರಹಣೆ, ಸಂಪಾದನೆ, ಕಲಿಕೆ, ಪ್ರದರ್ಶನ ಕಾರ್ಯಗಳು ಇನ್ನೂ ತೀವ್ರಗತಿಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಹಾಗೂ ಪ್ರಮಾಣಬದ್ಧವಾಗಿ ಮತ್ತು ವೈಜ್ಞಾನಿಕವಾಗಿ ನಡೆಸುವ ಉದ್ದೇಶವೇ ವಿಶ್ವವಿದ್ಯಾಲಯದ ಮೂಲ ಧ್ಯೇಯವಾಗಿದೆ. ಬಹುಭಾಷಿಕ ಹಾಗೂ ಬಹುಸಂಸ್ಕೃತಿಗಳು ಇರುವ ನಾಡಿನಲ್ಲಿ ಇನ್ನೂ ಅನಾವರಣಗೊಳ್ಳಬೇಕಾದ ಜ್ಞಾನಸಂಪತ್ತು ಅಗಾಧ ಪ್ರಮಾಣದಲ್ಲಿದೆ. ಈವರೆಗೆ ಆದ ಜಾನಪದ ಕ್ಷೇತ್ರ ಸಂಬಂಧೀ ಕಾರ್ಯಗಳ ಬಗೆಗೆ ನಾವು ಅಷ್ಟೇನೂ ಬೀಗುವಂತಿಲ್ಲ. ಇನ್ನೂ ಆಗಬೇಕಾದ ಕೆಲಸ ಕಾರ್ಯಗಳು ಬೇಕಾದಷ್ಟು ಇವೆ ಎಂಬ ವಿನಯದಿಂದಲೇ ಜಾನಪದ ವಿಶ್ವವಿದ್ಯಾಲಯ ಕಾರ್ಯಪ್ರವೃತ್ತವಾಗಿದೆ. ಜನಪದರ ಲೋಕದೃಷ್ಟಿ, ಅವರ ವಿವೇಕ ಹಾಗೂ ಜಾಗತೀಕರಣದಿಂದಾಗಿ ತೀವ್ರಗತಿಯಲ್ಲಿ ಬದಲಾಗುತ್ತಿರುವ ಪ್ರಪಂಚಕ್ಕೆ ಪರ್ಯಾಯ ದೇಶೀ ಜ್ಞಾನ ಆಕರವಾಗಿ ಅದರ ಪ್ರಸ್ತುತತೆಗೆ ವಿಶ್ವವಿದ್ಯಾಲಯ ವಿಶೇಷವಾಗಿ ಗಮನಹರಿಸಿದೆ. ಶಿಷ್ಟ ಭಾಷೆಯ ಯಾಜಮಾನ್ಯಕ್ಕೆ ಭಿನ್ನವಾಗಿ ಮೌಖಿಕತೆಯಲ್ಲಿನ ಸಾಂಸ್ಕೃತಿಕ ಅಭಿವ್ಯಕ್ತಿ ಹಾಗೂ ಮೌಖಿಕ ಸಂಕಥನಕ್ಕೆ ಹೆಚ್ಚು ಒತ್ತು ಕೊಡುವ ಜರೂರತ್ತು ನಮ್ಮ ಮುಂದಿದೆ.

ಜಾನಪದ ಎಂದರೆ ಆಧುನಿಕ ಜ್ಞಾನ ಮತ್ತು ತಂತ್ರಜ್ಞಾನಕ್ಕೆ ವಿರುದ್ಧವಾದುದು ಎಂಬ ತಿಳಿವಳಿಕೆ ಬಲವಾಗಿ ಬೇರೂರಿದೆ. ಅಷ್ಟೇ ಅಲ್ಲ ಹಳೆಯದನ್ನು ಸಂಗ್ರಹಿಸುವುದು, ಮುಂದಿನ ವರ್ಗಕ್ಕೆ ಕೂಡಿಟ್ಟು ಕೊಡುವುದು ಎಂಬ ಸ್ಥಾಪಿತ ತಿಳಿವಳಿಕೆಯ

ಚೌಕಟ್ಟಿನಾಚೆಗೂ, ಜಾನಪದವನ್ನು ವಿಶಾಲ ಮನೋಭೂಮಿಕೆಯಲ್ಲಿ ಅರ್ಥೈಸಿಕೊಳ್ಳಬೇಕಾದುದು ಇಂದಿನ ಅಗತ್ಯವಾಗಿದೆ. ಜಾನಪದವು ಭೂಮಿ ತೂಕದ್ದು, ಆಕಾಶದಷ್ಟು ವಿಸ್ತಾರವಾದುದು, ನೀರಿನಷ್ಟು ಚಲನಶೀಲವಾದುದು, ಗಾಳಿಯಂತೆ ನಮ್ಮ ಉಸಿರು ಎಂಬುದು ನಮ್ಮ ಅರಿವಿಗೆ ಬರಬೇಕಾಗಿದೆ. ಒಟ್ಟಿನಲ್ಲಿ ಜಾನಪದ ಎಂದರೆ ಎಲ್ಲವನ್ನೂ ಅಖಂಡವಾಗಿ ಅನುಸರಿಸಿದ ಒಂದು ಜೀವನ ವಿಧಾನ; ಜ್ಞಾನವನ್ನು ವಿಶೇಷ ರೀತಿಯಲ್ಲಿ ಹಂಚಿಕೊಂಡಿರುವ ಒಂದು ತವನಿಧಿಯಾಗಿದೆ. ಹಾಗಾಗಿ 'ಹೊನ್ನ ಬಿತ್ತೇವು ಹೊಲಕೆಲ್ಲ' ಎಂಬ ಧ್ಯೇಯವಾಕ್ಯವನ್ನು ತನ್ನ ಮೂಲಮಂತ್ರವಾಗಿಸಿಕೊಂಡು ವಿಶ್ವವಿದ್ಯಾಲಯ ಕಾರ್ಯೋನ್ಮುಖವಾಗಿದೆ. ಈವರೆಗೆ ಗುಪ್ತನಿಧಿಯಾಗಿದ್ದ ತವನಿಧಿ ಹೊನ್ನು ಈಗ ಜಗತ್ಪ್ರಕಟವಾಗಬೇಕಿದೆ. ವಿದ್ಯೆಯನ್ನು ಬೋಧಿಸುವುದು, ಸಂರಕ್ಷಿಸುವುದು ಅಷ್ಟೇ ಅಲ್ಲ ಹಂಚುವುದು-ಪ್ರಸರಣ ಮಾಡುವುದು ಜ್ಞಾನ ಕೇಂದ್ರವಾದ ವಿಶ್ವವಿದ್ಯಾಲಯದ ಮೂಲ ಗುರಿಯಾಗಿರಬೇಕು. ಈ ನಾಡು ಮೊದಲ ಬಾರಿಗೆ ವಿಶ್ವವಿದ್ಯಾಲಯದ ಮೂಲಕ ದೇಸೀ ಜ್ಞಾನಸಂಪತ್ತನ್ನು ಜಾಗತಿಕ ಪರಿಸರದಲ್ಲಿ ಬಿತ್ತುವ ಕಾರ್ಯಕ್ಕೆ ಕಂಕಣಬದ್ಧವಾಗಿದೆ. ಬಿತ್ತುವ, ಬೆಳೆಯುವ ಪ್ರಕ್ರಿಯೆ ಹೊಸಹುಟ್ಟಿಗೆ ನಾಂದಿ ಹಾಡುವುದಲ್ಲದೆ ಜ್ಞಾನಪರಂಪರೆಯ ಸತತ ಮುಂದುವರಿಕೆ, ಸಂರಕ್ಷಣೆ, ಅಭಿವೃದ್ಧಿಯ ರೂಪವೂ ಆಗಿದೆ.

ಪಾರಂಪರಿಕ ಜ್ಞಾನ/ಸಮುದಾಯ ಜ್ಞಾನ ಮತ್ತು ಆಚರಣೆಯ ಮೂಲ ನೆಲೆಯಿಂದಲೇ ಈ ಹೊತ್ತಿನ ಜ್ಞಾನಪದ್ಧತಿ ಬೆಳೆದು ಬಂದಿದೆ. ಸಮುದಾಯ ಜ್ಞಾನದಿಂದ ತಂತ್ರಜ್ಞಾನ ಕೌಶಲಗಳ ಬಳಕೆಯನ್ವಯ ನಮ್ಮ ಗ್ರಾಮ ವ್ಯವಸ್ಥೆಯನ್ನು ಹೆಚ್ಚು ಉತ್ಪಾದಕವಾಗಿಯೂ, ಪ್ರಾಯೋಜಕವಾಗಿಯೂ, ದೃಢವಾಗಿಯೂ ರೂಢಿಸಬೇಕಾಗಿದೆ. ಆದರೆ ಇವೊತ್ತಿನ ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ಪ್ರಭಾವದಿಂದಾಗಿ ಜಾನಪದದಲ್ಲಿ ತೀವ್ರ ಸ್ವರೂಪದ ಬದಲಾವಣೆಗಳು ಆಗಿವೆ. ಅದರಲ್ಲೂ ಉದ್ಯಮಪತಿತ್ವ ತನಗೆ ಬೇಕಾದ ಜ್ಞಾನವನ್ನು ಮಾತ್ರ ಸೆಳೆದುಕೊಂಡು ಲಾಭದಾಯಕವಲ್ಲದ್ದನ್ನು ಹಿಂದಕ್ಕೆ ತಳ್ಳುತ್ತಲೇ ಬರುತ್ತಿದೆ. ಪಾರಂಪರಿಕ ಜ್ಞಾನ-ವಿಜ್ಞಾನ ಕುರಿತು ಅತ್ಯಂತ ವೈಜ್ಞಾನಿಕ ತಳಹದಿಯ ಮೇಲೆ ಹಾಗೂ ವರ್ತಮಾನಕ್ಕೆ ಹೊಂದಿಕೆಯಾಗುವ ಅಧ್ಯಯನ ಮಾದರಿಗಳನ್ನು ರೂಪಿಸಿಕೊಳ್ಳುವುದು ಆವಶ್ಯಕವಾಗಿದೆ. ಬದಲಾದ ಸನ್ನಿವೇಶದಲ್ಲಿ ಜಾನಪದ ಎನ್ನುವುದು ನಿತ್ಯದ ಬದುಕಿನ ಒಡಲಾಳದಿಂದಲೇ ರೂಪಾಂತರವನ್ನು ಹೊಂದುತ್ತಿರುವುದರಿಂದ ಜಾನಪದದಲ್ಲಿಯೇ ಅದಕ್ಕೆ ಪರ್ಯಾಯವಾಗಿ, ಪ್ರತಿರೋಧ ಒಡ್ಡುವ ಶಕ್ತಿ ಇರುವುದನ್ನು ಗುರುತಿಸಬೇಕಾಗಿದೆ. ಈ ನಿಟ್ಟಿನಲ್ಲಿ ನಮ್ಮದೇ ಜ್ಞಾನ, ಸಂಸ್ಕೃತಿಯನ್ನು ಆಧುನಿಕ ಸಂದರ್ಭಕ್ಕೆ ಅನ್ವಯಿಸಿಕೊಂಡು ನೋಡಲು ಯತ್ನಿಸಬೇಕಾಗಿದೆ. ಜನಪದರ ನಾಣ್ಣುಡಿಯಂತೆ, ಜ್ಞಾನ ಸಂಪಾದನೆಗೆ ಸಾಮಾನ್ಯವಾಗಿ ಅನುಸರಿಸುವ ಮಾರ್ಗಗಳು ಎರಡೇ; ಅವುಗಳಲ್ಲಿ ಒಂದು ದೇಶ ಸುತ್ತುವುದು, ಮತ್ತೊಂದು ಕೋಶ

ಓದುವುದು. ಮನುಷ್ಯ ತನ್ನ ಜ್ಞಾನದಾಹವನ್ನು ನೀಗಿಸಿಕೊಳ್ಳಲು ಎರಡೂ ಮಾರ್ಗಗಳನ್ನು ಅನುಸರಿಸುವುದು ಅಗತ್ಯ. ಆದರೆ ಜ್ಞಾನ ಸಂಪಾದನೆಗೆ ಅವೆರಡರಲ್ಲಿ ಒಂದನ್ನಾದರೂ ಮಾಡಲೇಬೇಕು. ವಿಶ್ವವಿದ್ಯಾಲಯವು ಮೌಲಿಕವಾದ ಕೋಶಗಳನ್ನು ಪ್ರಕಟಿಸಿ ಓದುವಂತೆ ಪ್ರೇರೇಪಿಸುವ ಮೂಲಕ ಮಹತ್ವದ ಪ್ರಯತ್ನವನ್ನು ಮಾಡುತ್ತಿದೆ. ವಿಶ್ವವಿದ್ಯಾಲಯ ನೆಲಮೂಲವಾದ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿ ಪರಂಪರೆಗಳ ಕುರಿತು ವಿಶೇಷ ಅಧ್ಯಯನ, ಅಧ್ಯಾಪನ, ಸಂಶೋಧನೆ ಸೇರಿದಂತೆ ಹತ್ತು ಹಲವು ಕಾರ್ಯಯೋಜನೆ ಗಳನ್ನು ರೂಪಿಸಿಕೊಂಡು ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಳ್ಳುತ್ತಲಿದೆ. ದೇಶೀ ಎನ್ನಬಹುದಾದ ಎಲ್ಲ ಜ್ಞಾನವನ್ನು ಸಂಗ್ರಹಿಸುವ, ನಿರಂತರವಾಗಿ ಚಲನಶೀಲಗೊಳ್ಳುವ ಜಾನಪದವನ್ನು ಅದೇ ನೆಲೆಯಿಂದಲೇ ಗ್ರಹಿಸಿ, ಹೊಸ ಹೊಸ ಜ್ಞಾನಶೋಧದೊಂದಿಗೆ ಜಾನಪದವನ್ನು ಇಟ್ಟು ನೋಡುವ ಮತ್ತೆ ಹೊಸದಾಗಿ ಕಟ್ಟಿಕೊಳ್ಳುವ ಕಾರ್ಯವನ್ನು ನೋಂಪಿಯಂತೆ ಮುನ್ನಡೆಸಿಕೊಂಡು ಹೋಗುವುದೇ ಜಾನಪದ ವಿಶ್ವವಿದ್ಯಾಲಯದ ಮೂಲ ಆಶಯವಾಗಿದೆ. ಅದರ ಭಾಗವಾಗಿ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಪುಸ್ತಕ ಪ್ರಕಟಣೆಗೆ ಮುಂದಾಗಿದೆ. ಈ ಮೂಲಕ ಅಂತರ್‌ಶಿಸ್ತೀಯ ಜ್ಞಾನಶೋಧದ ವಿನೂತನ ಮಾರ್ಗಗಳು ತೆರೆದುಕೊಳ್ಳಲು ವಿಶ್ವವಿದ್ಯಾಲಯ ನಾಂದಿ ಹಾಡಿದೆ.

ಜೈವಿಕ ಅಂಶಗಳ ಕಾರಣದಿಂದಾಗಿ ವ್ಯಕ್ತಿಯ ಭೌತಿಕ ಚಹರೆಗಳಲ್ಲಿ ವ್ಯತ್ಯಾಸಗಳು ಕಾಣಿಸುವುದು ಸಹಜ. ಪ್ರತಿಭೆಗೆ ಯಾವುದೇ ತೆರನಾದ ಲಿಂಗಭೇದವಾಗಲಿ, ಜಾತಿಮತಗಳ ಹಂಗಾಗಲೀ ಇರುವುದಿಲ್ಲ. ಸಮಾಜದ ಮುಖ್ಯವಾಹಿನಿಯಿಂದ ದೂರ ಉಳಿದ ಅನೇಕ ವಿಕಲಚೇತನರು ಅತ್ಯಂತ ಆತ್ಮವಿಶ್ವಾಸದಿಂದ ಜೀವನ ನಡೆಸುತ್ತಿರುವುದು ಕಂಡುಬರುತ್ತದೆ. ವಿಜ್ಞಾನಲೋಕಕ್ಕೆ ವಿಸ್ಮಯಕಾರಿಯಾಗಿ ತೋರುವ ಇಂತಹ ವ್ಯಕ್ತಿಗಳ ದೈಹಿಕ ದೌರ್ಬಲ್ಯ ಗಳು ಎಂದೂ ಮುಖ್ಯವಾಗಬಾರದು. ಅವರನ್ನೂ ಸಹ ಮಾನವೀಯ ನಲೆಯಿಂದ ನೋಡುವ ಮನಸ್ಥಿತಿಯನ್ನು ರೂಢಿಸಿಕೊಳ್ಳಬೇಕಾದುದು ಸಮಾಜದ ಆರೋಗ್ಯದ ದೃಷ್ಟಿಯಿಂದ ಮುಖ್ಯವೆನಿಸುತ್ತದೆ. ಈ ಹಿನ್ನೆಲೆಯಲ್ಲಿ ಗಮನಿಸಿದಾಗ, ಅವರಲ್ಲಿರುವ ಅಗಾಧ ಕಲಾಪ್ರತಿಭೆ ಎಂಥವರನ್ನೂ ಹುಬ್ಬೇರಿಸುವಂತೆ ಮಾಡುತ್ತದೆ. ಸಮಾಜದಿಂದ ನಿರ್ಲಕ್ಷ್ಯಕ್ಕೆ ಒಳಗಾದ ಜೋಗತಿ ಕಲಾವಿದರು ತಮ್ಮದೇಯಾದ ವಿಶಿಷ್ಟ ಕಲಾಪರಂಪರೆ ಯನ್ನು ಮುಂದುವರೆಸಿಕೊಂಡು ಹೋಗುವಲ್ಲಿ ಶ್ರಮಿಸುತ್ತಿರುವುದು ಗಮನಾರ್ಹ. ಅಂತಹ ವಿರಳ ಕಲಾವಿದರಲ್ಲಿ ಮಂಜಮ್ಮ ಜೋಗತಿಯೂ ಒಬ್ಬರು. ಜೋಗತಿ ಕಲೆಯ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಮನಗಾಣಿಸಿದ ಮಂಜಮ್ಮ ಜೋಗತಿಯ ಬದುಕು ಮಾತ್ರ ಸಾಹಸದಿಂದ ಕೂಡಿದೆ. ಅಂತಹ ಸಾಹಸದ ಜೀವನ ನಡೆಸಿದ ಮಂಜಮ್ಮಳ ಬದುಕಿನ ಚಿತ್ರಣವನ್ನು ಡಾ. ಚಂದ್ರಪ್ಪ ಸೊಬಟಿ ಅವರು 'ಮಂಜಮ್ಮ ಜೋಗತಿ' ಕೃತಿಯಲ್ಲಿ ಅನಾವರಣಗೊಳಿಸಿದ್ದಾರೆ. ಮಂಜಮ್ಮಳ ಬದುಕಿನ ಜೊತೆಗೆ

ಇಡೀ ಜೋಗತಿ ಸಮುದಾಯದ ಬದುಕಿನ ಬಹು ಆಯಾಮಗಳನ್ನು ಅರಿಯುವಲ್ಲಿ ಈ ಕೃತಿ ಮಹತ್ವದ್ದಾಗಿದೆ. ಇಂತಹ ಅಮೂಲ್ಯವಾದ ಕೃತಿಯನ್ನು ರಚಿಸಿಕೊಟ್ಟಿರುವ ಡಾ. ಚಂದ್ರಪ್ಪ ಸೊಬಟಿ ಅವರು ಅಭಿನಂದನಾರ್ಹರು.

ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತುವಲ್ಲಿ ತುಂಬ ಮುತುವರ್ಜಿ ವಹಿಸಿದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರದ ನಿರ್ದೇಶಕರೂ, ಮೌಲ್ಯಮಾಪನ ಕುಲಸಚಿವರೂ ಆದ ಪ್ರೊ. ಸ.ಚಿ. ರಮೇಶ ಹಾಗೂ ಸಿಬ್ಬಂದಿ ವರ್ಗಕ್ಕೆ ಅಭಿನಂದನೆಗಳು.

**ಪ್ರೊ. ಅಂಬಳಿಕೆ ಹಿರಿಯಣ್ಣ**

ಕುಲಪತಿ

# ನಿರ್ದೇಶಕರ ಮಾತು

ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ಸಮಾಜದ ಸಮಸ್ತ ಸಮುದಾಯಗಳ ಜ್ಞಾನ ಸಂಗ್ರಹಣೆ, ಅಧ್ಯಯನ, ಅಧ್ಯಾಪನ, ಸಂಶೋಧನೆಯಂಥ ಶೈಕ್ಷಣಿಕ ಕಾರ್ಯ ಚಟುವಟಿಕೆಗಳನ್ನು ರೂಪಿಸಿಕೊಂಡು ಕಾರ್ಯಪ್ರವೃತ್ತವಾಗಿದೆ. ವಿಶ್ವವಿದ್ಯಾಲಯವು ಇನ್ನೊಂದು ಹೆಜ್ಜೆ ಮುಂದೆ ಹೋಗಿ ತನ್ನ ಕಾರ್ಯಕ್ಷೇತ್ರಗಳನ್ನು ವಿಸ್ತರಿಸಿಕೊಳ್ಳುವ ಭಾಗವಾಗಿ 'ವಿಸ್ತರಣೆ ಹಾಗೂ ಸಲಹಾ ಕೇಂದ್ರ'ವನ್ನು ಆರಂಭಿಸಿದೆ. ವಿಶ್ವವಿದ್ಯಾಲಯಗಳು ನಿಜವಾದ ಅರ್ಥದಲ್ಲಿ ಜ್ಞಾನದ ಪುನರುತ್ಪಾದನೆಯಲ್ಲಿ ತೊಡಗಿಕೊಳ್ಳಬೇಕು. ಸ್ಥಾಪಿತ ಸಿದ್ಧ ಜ್ಞಾನದ ಸಂಗ್ರಹದ ಜೊತೆಗೆ ನಿತ್ಯನೂತನವಾದ ಜನಪದ ಸಂಸ್ಕೃತಿಯನ್ನು ಪುನರ್‌ನಿರ್ವಚಿಸುವ, ಹೊಸ ರೀತಿಯಲ್ಲಿ ಸ್ಥಾಪಿತಗೊಳಿಸುವ ಕೈಂಕರ್ಯಕ್ಕೆ ಕೈ ಹಾಕಬೇಕು. ಋತುಮಾನಗಳು ಬದಲಾದಂತೆ ಮನುಷ್ಯನ ಬದುಕು ಬದಲಾಗುತ್ತಲೇ ಸಂವೇದನಾಶೀಲಗೊಳ್ಳುತ್ತ ಹೋಗುತ್ತಿದೆ. ನಮ್ಮ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿಗಳು ತನ್ನತನದ ಛಾಯೆಯನ್ನು ಕಳೆದುಕೊಳ್ಳುತ್ತ ನಡೆಯುತ್ತಿರುವ ಇವೊತ್ತಿನ ಸಂದಿಗ್ಧತೆಯಲ್ಲಿ ನಾವು ಮಾಡುವ ವಿನೂತನ ಜ್ಞಾನಶೋಧಗಳು, ಪ್ರಯೋಗಗಳು, ಕಳೆಗುಂದುತ್ತಿರುವ ಜನಪದ ಸಂಸ್ಕೃತಿಯನ್ನು ಕಳೆಗಟ್ಟುವಂತೆ ಮಾಡದೇ ಹೋದರೆ ನಮ್ಮ ಪ್ರಯತ್ನಗಳು ನಿರರ್ಥಕ. ಆ ಎಚ್ಚರಿಕೆಯನ್ನು ಇಟ್ಟುಕೊಂಡೇ ಜಾನಪದ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಅತ್ಯುಪಯುಕ್ತ ಕಾರ್ಯಯೋಜನೆಗಳನ್ನು ರೂಪಿಸಿದೆ.

ಅಂತರ್‌ಶಿಸ್ತೀಯ ಜ್ಞಾನಶಾಖೆಗಳಲ್ಲಿ ಜಾನಪದವೂ ಒಂದು. ನೆಲಮೂಲ ಜೀವನ, ಕಲೆ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದ ಹೊಸ ಹೊಸ ಜ್ಞಾನವನ್ನು ಶೋಧಿಸಿ, ಜಗತ್ತಿನ ಮೂಲೆಮೂಲೆಗೆ ತಲುಪಿಸುವ ಗುರುತರ ಜವಾಬ್ದಾರಿ ವಿಶ್ವವಿದ್ಯಾಲಯದ ಮೇಲಿದೆ. ಅದನ್ನು ಸಾಧ್ಯವಾಗಿಸುವ ಉದ್ದೇಶ ಇಟ್ಟುಕೊಂಡೇ ಆರಂಭವಾದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರವು, ಜಾನಪದ ಕ್ಷೇತ್ರದ ಬಾಹುಳ್ಯತೆ, ವಿಶ್ವವ್ಯಾಪಕತೆ, ಅದರ ಮೂಲ–ಚೂಲಗಳನ್ನು ಕಂಡರಿಸುವ ಪ್ರಯತ್ನ ಮಾಡುವ ಮಹದಾಸೆ ಹೊಂದಿದೆ. ಜೊತೆಗೆ ಹೊಸ ಅಧ್ಯಯನಗಳು, ನೂತನ ಮಾದರಿಯ ಸಂಶೋಧನೆಗಳು, ನಾಡಿನ ಶ್ರೇಷ್ಠ ವಿದ್ವಾಂಸರ ಕೃತಿಗಳನ್ನು ಪ್ರಕಟಿಸುವ ಮೂಲಕ ಜ್ಞಾನ ಪ್ರಸಾರದ ಉದ್ದೇಶಕ್ಕೆ ಒತ್ತಾಸೆಯಾಗಿ ನಿಲ್ಲಲಿದೆ. ಕೇಂದ್ರವು ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಮೌಲಿಕವಾದ ಪುಸ್ತಕಗಳ ಪ್ರಕಟಣೆಗೆ ಮುಂದಾಗಿದೆ. ನಾವು ಪ್ರಕಟ ಮಾಡುವ ವೈವಿಧ್ಯಪೂರ್ಣವಾದ ಮೌಲಿಕ ಕೃತಿಗಳು ನಾಡಿನ ಓದುಗರಿಗೆ

ತಲುಪಿ, ಅವು ಸದುಪಯೋಗವಾದರೆ ಮಾತ್ರ ನಮ್ಮ ಶ್ರಮ ಸಾರ್ಥಕ ಎಂದು ಭಾವಿಸುತ್ತೇನೆ.

ಸಮಾಜದ ಮುಖ್ಯವಾಹಿನಿಯಲ್ಲಿ ಕಾಣಸಿಗದ ಅನೇಕ ಜನಸಮುದಾಯಗಳ ಬದುಕು ಇಂದಿಗೂ ದುಸ್ತರವಾಗಿದೆ. ದಯನೀಯತೆಯ ನಡುವೆಯೂ ಅತ್ಯಂತ ಸ್ವಾಭಿಮಾನದಿಂದ ಜೀವನ ನಡೆಸುತ್ತಿರುವ ಹಲವು ಸಮುದಾಯಗಳಲ್ಲಿ ಜೋಗತಿ ಸಮುದಾಯವೂ ಒಂದು. ಜೋಗತಿಗಳ ಜೀವನಶೈಲಿ ಎಂಥವರಿಗೂ ಆತ್ಮವಿಶ್ವಾಸದ ಪಾಠ ಬೋಧಿಸುತ್ತದೆ. ಸಮಾಜದ ಎಲ್ಲಾ ವರ್ಗದವರಿಂದ ನಿರ್ಲಕ್ಷ್ಯಕ್ಕೊಳಗಾದರೂ ತಮಗೆ ಮೂಲಾಧಾರವಾಗಿರುವ ಭಿಕ್ಷಾಟನೆ, ಕಲಾಪ್ರದರ್ಶನದ ಮೂಲಕವೇ ಅವರು ತಲೆಯೆತ್ತಿ ಬಾಳುತ್ತಿದ್ದಾರೆ. ಲಿಂಗಾಂತರಿಗಳನ್ನು ಬೇರೆಯದೇ ಆದ ದೃಷ್ಟಿಯಿಂದ ನೋಡುವ ಪ್ರಸಕ್ತ ಸಮಾಜದಲ್ಲಿ ಜೋಗತಿ ಸಮುದಾಯ ಅನೇಕ ಬಗೆಯ ತಲ್ಲಣ-ತಳಮಳಗಳನ್ನು ಅನುಭವಿಸಿದೆ. ಕೀಳರಿಮೆಯನ್ನು ತೊರೆದು ಭಿಕ್ಷಾಟನೆ ಮಾಡುತ್ತ, ತಮಗೆ ಗೊತ್ತಿರುವ ಕಲೆಗಳನ್ನು ಪ್ರದರ್ಶಿಸುತ್ತ ಹೇಗೋ ಬದುಕಿನ ಬಂಡಿಯನ್ನು ನಡೆಸುತ್ತಿರುವ ಈ ಸಮುದಾಯದಲ್ಲಿ ಮಂಜಮ್ಮ ಜೋಗತಿ ವಿಶಿಷ್ಟ ಎನಿಸುತ್ತಾರೆ. ಇಂತಹ ವಿಶಿಷ್ಟ ಕಲಾಪ್ರತಿಭೆಯಾಗಿರುವ ಮಂಜಮ್ಮನ ಬದುಕಿನ ಪುಟಗಳು ಮಾನವೀಯತೆಯ ಮಿಡಿತದ ಚಿತ್ರಗಳಾಗಿ ತೋರುತ್ತವೆ. ಆರ್ದ್ರತೆಯಿಂದ ಕೂಡಿದ ಮಂಜಮ್ಮಳ ಜೀವನ ಚಿತ್ರಣವನ್ನು ಡಾ. ಚಂದ್ರಪ್ಪ ಸೊಬಟಿ ಅವರು ಅತ್ಯಂತ ಮನನೀಯಗೊಳಿಸಿದ್ದಾರೆ. ಕಲೆಯ ಜೊತೆಗೆ ಬದುಕಿನ ಹೆಣಗಾಟವನ್ನು ಹಾಗೂ ಸಮಾಜದ ನಿರ್ಲಕ್ಷಿತ ವರ್ಗದ ಜೀವನ ಪಯಣವನ್ನು ಅರಿಯುವಲ್ಲಿ ಈ ಕೃತಿ ಮುಖ್ಯವೆನಿಸುತ್ತದೆ. ಇಂತಹ ಕೃತಿಯನ್ನು ರಚಿಸಿದ ಡಾ. ಚಂದ್ರಪ್ಪ ಸೊಬಟಿ ಅವರಿಗೆ ಕೃತಜ್ಞತೆಗಳು ಸಲ್ಲುತ್ತವೆ.

ಈ ಗ್ರಂಥವು ಅಚ್ಚುಕಟ್ಟಾಗಿ ಪ್ರಕಟಗೊಳ್ಳಲು ಸರ್ವರೀತಿಯಲ್ಲೂ ಸಹಕಾರ ನೀಡಿದ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಯವರಾದ ಪ್ರೊ. ಅಂಬಳಿಕೆ ಹಿರಿಯಣ್ಣ ಅವರಿಗೆ, ಕುಲಸಚಿವರಾದ ಪ್ರೊ. ಡಿ.ಬಿ. ನಾಯಕ, ಹಿರಿಯ ಸಂಶೋಧನಾಧಿಕಾರಿ ಡಾ. ಕೆ. ಪ್ರೇಮಕುಮಾರ, ಆನ್ವಯಿಕ ಜಾನಪದ ನಿಕಾಯದ ಡೀನ್‌ರಾದ ಪ್ರೊ. ಎಂ. ಚಂದ್ರ ಪೂಜಾರಿ, ಕರಡು ತಿದ್ದಿ ಸಹಕರಿಸಿದ ಡಾ. ಎಸ್. ಮೋಹನ್, ಶ್ರೀ ಸಂಗಮೇಶ ಎಸ್. ಗಣಿ, ಅಕ್ಷರ ಸಂಯೋಜನೆ ಮಾಡಿದ ಶ್ರೀ ವಿಶ್ವ ಗುಜ್ಜರ್, ಪುಟವಿನ್ಯಾಸ ಮಾಡಿದ ಸವಿತ ಗ್ರಾಫಿಕ್ಸ್‌ನ ಶ್ರೀ ಜೆ. ಬಸವರಾಜ, ಅಂದವಾದ ಮುಖಪುಟ ವಿನ್ಯಾಸ ಮಾಡಿಕೊಟ್ಟ ಶ್ರೀ ಕೆ.ಕೆ. ಮಕಾಳಿ, ಕಚೇರಿ ಸಹಾಯಕ ಶ್ರೀ ಕೆ.ಎಲ್. ಲಕ್ಷ್ಮಣ ಅವರಿಗೆ ಹಾಗೂ ಗ್ರಂಥವು ಪ್ರಕಟಗೊಳ್ಳುವಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಶ್ರಮಿಸಿದ ಎಲ್ಲರಿಗೂ ಕೃತಜ್ಞತೆಗಳು.

**ಪ್ರೊ. ಸ.ಚಿ. ರಮೇಶ**
ನಿರ್ದೇಶಕರು
ವಿಸ್ತರಣೆ ಹಾಗೂ ಸಲಹಾ ಕೇಂದ್ರ

# ಅರಿಕೆ

**ಜಾ**ನಪದ ವಕ್ತಾರರ ಆತ್ಮಕಥನಗಳ ಸಂಗ್ರಹ ಮತ್ತು ಅಧ್ಯಯನಕ್ಕಾಗಿಯೇ ಮಾನ್ಯ ಕುಲಪತಿಯವರು 'ತಿಂಗಳ ಅತಿಥಿಯೊಂದಿಗೆ ಪಟ್ಟಾಂಗ' ಎನ್ನುವ ವಿಶಿಷ್ಟ ಕಾರ್ಯಕ್ರಮವನ್ನು ಆರಂಭಿಸಿ ಸೈದ್ಧಾಂತಿಕವಾಗಿ ಮನ್ನಡೆಸಿಕೊಂಡು ಹೋಗುತ್ತಿದ್ದಾರೆ. ಈ ಕಾರ್ಯಕ್ರಮದ ಭಾಗವಾಗಿಯೇ ಪ್ರಸ್ತುತ ಕೃತಿ ರೂಪಗೊಂಡಿದೆ. ಇದಕ್ಕೆ ಕಾರಣರಾದ ಪ್ರೊ. ಅಂಬಳಿಕೆ ಹಿರಿಯಣ್ಣ ಅವರಿಗೆ ಗೌರವಪೂರ್ವಕ ಕೃತಜ್ಞತೆಗಳು. ಕುಲಸಚಿವರಾದ ಪ್ರೊ. ಡಿ.ಬಿ. ನಾಯಕ ಅವರಿಗೆ, ಮೌಲ್ಯಮಾಪನ ಕುಲಸಚಿವರು, ನನ್ನ ವಿದ್ಯಾಗುರುಗಳು ಮತ್ತು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ನಿರ್ದೇಶಕರಾದ ಪ್ರೊ. ಸ.ಚಿ ರಮೇಶ ಅವರಿಗೆ, ಸಂಶೋಧನಾಧಿಕಾರಿಗಳಾದ ಡಾ. ಕೆ. ಪ್ರೇಮಕುಮಾರ ಅವರಿಗೆ, ಆನ್ವಯಿಕ ಜಾನಪದ ವಿಭಾಗ ಮುಖ್ಯಸ್ಥರಾದ ಪ್ರೊ. ಎಂ. ಚಂದ್ರ ಪೂಜಾರಿ ಅವರಿಗೆ, ಗೌರವಪೂರ್ವಕ ನಮನಗಳು.

ಕರಡುಪ್ರತಿಯನ್ನು ಪರಿಶೀಲನೆ ಮಾಡಿ ಸೂಕ್ತ ಸಲಹೆಗಳನ್ನು ನೀಡಿದ ಗುರುಗಳಾದ ಪ್ರೊ. ಕೆ.ಎಂ. ಮೇತ್ರಿ ಅವರಿಗೆ, ಬರಹದ ದೋಷಗಳನ್ನು ತಿಳಿಸಿ ಅವುಗಳನ್ನು ಸರಿಪಡಿಸಿ ಕರಡು ಪ್ರತಿ ತಿದ್ದಿಕೊಟ್ಟ ಕನ್ನಡ ವಿಶ್ವವಿದ್ಯಾಲಯದ ಪ್ರಕಟಣ ಸಹಾಯಕರಾದ ಡಾ. ಎಸ್. ಮೋಹನ್ ಅವರಿಗೆ, ಅಕ್ಷರ ಸಂಯೋಜನೆ ಮಾಡಿದ ಶ್ರೀ ವಿಶ್ವ ಗುಜ್ಜರ್ ಅವರಿಗೆ, ಪುಟವಿನ್ಯಾಸ ಮಾಡಿದ ಕಮಲಾಪುರದ ಶ್ರೀ ಜೆ. ಬಸವರಾಜ ಅವರಿಗೆ, ಮುಖಪುಟ ವಿನ್ಯಾಸ ಮಾಡಿಕೊಟ್ಟ ಕೆ.ಕೆ ಮಕಾಳಿಯವರಿಗೆ ಗೌರವಪೂರ್ವಕ ವಂದನೆಗಳು.

ಪ್ರಸ್ತುತ ಮಸ್ತಕದ ಬರವಣಿಗೆಗೆ ಬೇಕಾದ ಅತ್ಯಮೂಲ್ಯ ಮಾಹಿತಿಗಳನ್ನು ನೀಡಿ ಸಹಕರಿಸಿದ ಮಂಜಮ್ಮ ಜೋಗತಿ ಮತ್ತು ಅವರ ತಂಡದವರಿಗೆ, ಖ್ಯಾತ ರಂಗಕಲಾವಿದೆಯರಾದ ಡಾ. ಕೆ. ನಾಗರತ್ನಮ್ಮ, ಶ್ರೀಮತಿ ಇಳಕಲ್ ಉಮರಾಣಿ ಅವರಿಗೆ, ಸಮಾಜ ಸೇವಕರಾದ ಶ್ರೀ ರಾಮಾಂಜನೇಯ ಅವರಿಗೆ, ಛಾಯಾಚಿತ್ರಗಳನ್ನು ನೀಡಿದ ಡಾ. ಸೋಮೇಶ್ ಉಪ್ಪಾರ್ ಅವರಿಗೆ ಹಾಗೂ ವಿಶ್ವವಿದ್ಯಾಲಯದ ಸಿಬ್ಬಂದಿ ಬಳಗಕ್ಕೆ ಧನ್ಯವಾದಗಳು.

**ಡಾ. ಚಂದ್ರಪ್ಪ ಸೊಬಟಿ**

# ಪರಿವಿಡಿ

# ೧

# ಪ್ರಸ್ತಾವನೆ

ಅಪರೂಪದ ಗಂಡುಜೋಗತಿ ಕಲಾವಿದೆ ಮಂಜಮ್ಮ ಜೋಗತಿಯವರ ಆತ್ಮಕಥನವಿದು. ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಪಟ್ಟಾಂಗ ಕಾರ್ಯಕ್ರಮದ ಭಾಗವಾಗಿ ಈ ಕೃತಿ ರೂಪುಗೊಂಡಿದೆ. ಪಟ್ಟಾಂಗ ತಿಂಗಳ ಕಾರ್ಯಕ್ರಮ. ಈ ಕಾರ್ಯಕ್ರಮವನ್ನು ಪ್ರತಿ ತಿಂಗಳ ಕೊನೆಯ ವಾರದಲ್ಲಿ ಮಾಡಲಾಗುತ್ತಿದೆ. ಇಲ್ಲಿಯ ತನಕ ನಡೆದಿರುವ ಕಾರ್ಯಕ್ರಮಗಳಲ್ಲಿ ತಿಂಗಳ ಕೊನೆಯ ದಿನ ನಡೆದಿರುವುದೇ ಹೆಚ್ಚು. ಈ ಕಾರ್ಯಕ್ರಮಕ್ಕಾಗಿ ಜಾನಪದ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರನ್ನು ಅಥವಾ ವಕ್ತಾರರನ್ನು[೧] 'ತಿಂಗಳ ಅತಿಥಿ'ಯನ್ನಾಗಿ ಆಹ್ವಾನ ಮಾಡಲಾಗುತ್ತದೆ. ಈ ಆಯ್ಕೆಯ ವಿಧಾನದಲ್ಲಿ ಕಲಾವಿದರಿಗೆ ಹೆಚ್ಚು ಆದ್ಯತೆ. ಇಂತಹ ವಿಶಿಷ್ಟ ಕಾರ್ಯಕ್ರಮಕ್ಕೆ ೧೩ನೇ ತಿಂಗಳ ಅತಿಥಿಯಾಗಿ, ನವೆಂಬರ್ ೩೦, ೩೦೧೩ರಂದು ಮಂಜಮ್ಮ ಜೋಗತಿ ಅವರನ್ನು ಕರೆಯಿಸಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಮಂಜಮ್ಮ ಅನಾವರಣ ಗೊಳಿಸಿದ ಆತ್ಮಕಥನವಿದು. ಈ ಆತ್ಮಕಥನಕ್ಕೆ ಅಥವಾ ಈ ಕಾರ್ಯಕ್ರಮಕ್ಕೆ ನಿರ್ದಿಷ್ಟವಾದ ಉದ್ದೇಶಗಳಿರುವಂತೆ ತನ್ನದೇಯಾದ ಮಿತಿಗಳು ಇವೆ. ಅಂತಹ ಉದ್ದೇಶಗಳಲ್ಲಿ ಕೆಲವು ಇಂತಿವೆ. ಜನಪದ ಕಲಾವಿದರು/ವಕ್ತಾರರು ತಮ್ಮ ಜೀವನಾನುಭವ ಮತ್ತು ಕ್ಷೇತ್ರದ ಅನುಭವಗಳನ್ನು ಹೇಳಿಕೊಳ್ಳಬೇಕು. ಹಾಗೆ ಹೇಳಿಕೊಂಡ ಮಾತುಗಳನ್ನು ಕೇಳಿಸಿಕೊಂಡು ಪ್ರೇಕ್ಷಕರು[೨] ಅವರೊಂದಿಗೆ ಸಂವಾದ ಮಾಡಬೇಕು. ಈ ಸಂವಾದಕ್ಕೂ ಸೈದ್ಧಾಂತಿಕವಾದ ಚೌಕಟ್ಟಿದೆ. ಇಲ್ಲಿ ಅನಾವರಣಗೊಂಡ ಮಾತುಗಳನ್ನು ಪ್ರಧಾನವಾಗಿಟ್ಟು ಕೊಂಡು ಮತ್ತು ಪ್ರಸ್ತುತದ ಜಾನಪದದ ಸ್ಥಿತಿಗತಿಯನ್ನು ಆಧರಿಸಿ ಚರ್ಚೆ ನಡೆಯಬೇಕು. ಸಂವಾದದಲ್ಲಿ ಬಂದ ಪ್ರಶ್ನೆಗಳಿಗೆ ತಿಂಗಳ ಅತಿಥಿಯೇ ಉತ್ತರವನ್ನು ಹೇಳಲೇಬೇಕು ಎನ್ನುವ ಕಡ್ಡಾಯ ನಿಯಮವಿಲ್ಲ. ಉತ್ತರ ನೀಡಿದರೆ ಒಳಿತು ಎನ್ನುವ ಆಶಯವಿದೆ. ಪ್ರಸ್ತುತ ಜಾನಪದ ಕ್ಷೇತ್ರದ ವಾಸ್ತವತೆಯನ್ನು ಅರಿತುಕೊಳ್ಳುವುದಕ್ಕೆ ಅಥವಾ ಆ ಕ್ಷೇತ್ರದಲ್ಲಿ ಮುನ್ನಡೆಯುವುದಕ್ಕೆ ಇರುವ ಸಾಧ್ಯತೆ ಮತ್ತು ಸವಾಲುಗಳನ್ನು ಅರ್ಥ ಮಾಡಿಕೊಳ್ಳುವುದಕ್ಕೆ, ಅವುಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವುದಕ್ಕೆ ಈ ವಕ್ತಾರರೇ ಪ್ರಮುಖರು ಅನ್ನುವುದು ವಿಶ್ವವಿದ್ಯಾಲಯದ ಗ್ರಹಿಕೆ. ಇದು ವಾಸ್ತವವೂ ಹೌದು.

ಏಕೆಂದರೆ ಜಾನಪದ ಅಧ್ಯಯನ ಸಮಾಜಮುಖಿಯಾದದ್ದು. ಸಮಾಜದಲ್ಲಿ ನಡೆಯುವ ಅನೇಕ ಸಂಗತಿಗಳು ಇದರ ಆತ್ಮದೊಳಗೆ ಸೇರಿಕೊಂಡಿರುತ್ತವೆ. ಅಂದರೆ ಜಾನಪದ ನಿತ್ಯ ಬದಲಾಗುತ್ತಿರುತ್ತದೆ. ಆ ಸಂದರ್ಭದಲ್ಲಿ ಸ್ವೀಕಾರ ಮತ್ತು ನಿರಾಕಾರ ನಡೆಯುತ್ತಿ ರುತ್ತದೆ. ಇದು ಜಾನಪದ ಸಹಜ ಗುಣವಾದರೂ ಅಂತಹ ಸಂದರ್ಭದಲ್ಲಿ ಅನೇಕ ಸಂಘರ್ಷಗಳಾಗುತ್ತವೆ. ಇದರ ಪರಿಣಾಮ ಆ ಕ್ಷೇತ್ರದ ವಕ್ತಾರರ ಮೇಲಾಗುತ್ತದೆ. ಆಯಾ ಸಂದರ್ಭಕ್ಕೆ ಅನುಗುಣವಾಗಿ ಬರುವ ಸಮಸ್ಯೆಗಳನ್ನು ಮತ್ತು ಸವಾಲುಗಳನ್ನು ಎದುರಿಸಿದವರು, ತುತ್ತಾದವರು ಅವುಗಳಿಗಾಗಿಯೇ ಹಲವು ಪರಿಹಾರೋಪಾಯಗಳನ್ನು ಹುಡುಕಿದವರು, ಆ ಪ್ರಯೋಗಗಳನ್ನು ಪ್ರಯೋಗಿಸಿ ಸೋಲನ್ನು ಉಂಡವರು, ಗೆಲುವನ್ನು ಕಂಡವರು. ಆ ಸೋಲು–ಗೆಲುವಿನ ಅನುಭವದ ಪಯಣ ದೊಡ್ಡದು. ಇದು ಯಾವ ವಿದ್ವತ್ತಿಗೂ ನಿಲುಕಲಾರದ ಜ್ಞಾನ. ಆ ಜ್ಞಾನಗಳು ಆಯಾ ಕ್ಷೇತ್ರಕ್ಕೆ ತಕ್ಕಂತೆ ರೂಪು ಗೊಂಡಿರುತ್ತವೆ. ಇಂತಹ ವಿಭಿನ್ನವಾದ ಜ್ಞಾನ ಮಾದರಿಗಳನ್ನು ಸಂಗ್ರಹಿಸಿ, ಆ ಮಾಹಿತಿಯನ್ನು ಬಹು ಆಯಾಮಗಳಿಂದ ವಿಶ್ಲೇಷಣೆಗೆ ಒಳಪಡಿಸಿ, ಈ ಕ್ಷೇತ್ರದಲ್ಲಿ ಸುಸ್ಥಿರವಾಗಿ ಮುನ್ನಡೆಯುವುದಕ್ಕೆ ಬೇಕಾದ ಸೈದ್ಧಾಂತಿಕ ಪರಿಕಲ್ಪನೆಯನ್ನು ಕಟ್ಟಿಕೊಳ್ಳ ಬೇಕಾಗಿದೆ. ಈ ವಿಧಾನದಿಂದ ದೇಸೀಯತೆಯನ್ನು ಅಥವಾ ಜಾನಪದದ ಸುಸ್ಥಿರ ಅಭಿವೃದ್ಧಿ ಸಿದ್ಧಾಂತವನ್ನು ಗಟ್ಟಿಗೊಳಿಸಬಹುದು ಎಂಬ ಹಂಬಲದಿಂದ ಪ್ರಸ್ತುತ ಕಾರ್ಯಕ್ರಮವನ್ನು ರೂಪಿಸಲಾಗಿದೆ ಅಥವಾ ಇಂತಹ ವಿವಿಧ ಆಯಾಮಗಳನ್ನು ತನ್ನೊಳಗಡೆ ಗರ್ಭೀಕರಿಸಿಕೊಂಡು ಈ ಕಾರ್ಯಕ್ರಮ ವಿಸ್ತರಣೆಯಾಗುತ್ತಿದೆ.

ಇಂತಹ ವೈಧಾನಿಕತೆಗಾಗಿಯೇ ಜಾನಪದದ ವಿವಿಧ ಕ್ಷೇತ್ರಗಳ, ವಿವಿಧ ಪ್ರದೇಶಗಳ ವಕ್ತಾರರನ್ನು ಗುರುತಿಸಿ ಕಾರ್ಯಕ್ರಮಕ್ಕೆ ಕರೆತರಲಾಗುತ್ತಿದೆ. ಕಳೆದ ಹನ್ನೆರಡು ತಿಂಗಳುಗಳಲ್ಲಿ ಈ ಕಾರ್ಯಕ್ರಮಕ್ಕೆ ಜನಪದ ಕಲಾವಿದರು, ಜನಪದ ವೈದ್ಯರು, ಜನಪದ ಮತ್ತು ಶಿಷ್ಟ ಕಲೆಯನ್ನು ಕರಗತ ಮಾಡಿಕೊಂಡವರು, ಸಾಂಪ್ರದಾಯಿಕ ಕಲಾವಿದರು–ಜನಪ್ರಿಯ ಕಲಾವಿದರು, ವಿದ್ವಾಂಸರು ಕಾರ್ಯಕ್ರಮಕ್ಕೆ ತಮ್ಮ ಬದುಕಿನ ಮಜಲುಗಳನ್ನು ಅಭಿವ್ಯಕ್ತಪಡಿಸಿದ್ದಾರೆ. ಇವರೆಲ್ಲರ ಅನುಭವಗಳು ಭಿನ್ನವಾಗಿವೆ. ಏಕೆಂದರೆ ತಮ್ಮ ಕಲೆ ಪ್ರದರ್ಶನಕ್ಕಾಗಿ ಶ್ರೀ ಬಸವಲಿಂಗಯ್ಯ ಹಿರೇಮಠ ಅವರು ಹೆಚ್ಚು ಗೌರವ ಸಂಭಾವನೆ ಮತ್ತು ವರ್ಷದಲ್ಲಿ ಹೆಚ್ಚು ಪ್ರದರ್ಶನಗಳನ್ನು ಮಾಡುವ ಕಲಾವಿದ. ಇವರ ಪ್ರದರ್ಶನಗಳೆಲ್ಲವೂ ವೇದಿಕೆಯ ಪ್ರದರ್ಶನಗಳು. ದೇಶ–ವಿದೇಶಗಳಲ್ಲಿ ಕಲೆ ಪ್ರದರ್ಶನ ಮಾಡಿದ ಅನುಭವ ಇವರಿಗಿದೆ. ಶ್ರೀಮತಿ ಬುರ್ರಕತೆ ಜಯಮ್ಮನ ಕಲಾ ಅಭಿವ್ಯಕ್ತಿಲೋಕ ಇದಕ್ಕಿಂತ ಭಿನ್ನ. ಈಕೆ ಅತಿ ಕಡಿಮೆ ಸಂಭಾವನೆ ತೆಗೆದುಕೊಳ್ಳುವ ಹಾಗೂ ಕೇವಲ ಸಂಭಾವನೆ ದೊರೆಯುವ ಪ್ರದರ್ಶನಗಳನ್ನು ಅವಲಂಬಿಸದೆ ಅಲೆಮಾರಿ ಕಲಾವಿದೆಯಾಗಿ ಕಲಾಪ್ರದರ್ಶನ ಮಾಡುತ್ತಿರುವ ಕಲಾವಿದೆ. ಶ್ರೀ ರಾಮನಗೌಡ ಹನುಮನಗೌಡ ಜೀವನಗೌಡ್ರು (ಗೊಂಬೇಗೌಡ್ರು) ಕೇವಲ ಸರಕಾರಿ ಕಾರ್ಯಕ್ರಮಗಳ

ಆದೇಶವನ್ನು ಕಾಯುತ್ತಾ, ಈಗ ವರ್ಷದಲ್ಲಿ ಕೇವಲ ಒಂದೆರಡು ಪ್ರದರ್ಶನಗಳನ್ನು ಮಾಡುತ್ತಿರುವ ಕಲಾವಿದ. ಅಂದರೆ ಆತನ ಕಲೆ ಇಂದು ಅಷ್ಟಕ್ಕೆ ಮಾತ್ರ ಸೀಮಿತ ವಾಗುತ್ತಿದೆ. ಕಿನ್ನಾಳ ಕಲೆಯನ್ನು ಹಾಗೂ ಜನಪದ ವೈದ್ಯವನ್ನು ನಂಬಿಕೊಂಡು ಜೀವನ ಮಾಡುತ್ತಿರುವ ವಕ್ತಾರರ ಅನುಭವಗಳು ಈ ಕಲಾಲೋಕದ ವಕ್ತಾರರಿಗಿಂತ ಭಿನ್ನ. ಜನಪದ ಕಲೆಗಳ ಜೊತೆಗೆ ಶಿಷ್ಟಕಲೆಗಳನ್ನು ಕರಗತ ಮಾಡಿಕೊಂಡ ಶ್ರೀ ಅಪ್ಪಗೆರೆ ತಿಮ್ಮರಾಜು, ಶ್ರೀ ಹುಮಾಯೂನ್ ಹರಲಾಪುರ ಅವರ ಬದುಕಿನ ಮತ್ತು ಕಲಾ ಅನುಭವಗಳ ಲೋಕವೇ ಮೇಲಿನ ವಕ್ತಾರರಿಗಿಂತ ವಿಭಿನ್ನ. ಈ ತಾತ್ವಿಕತೆಯ ಉದಾಹರಣೆಗಾಗಿ ಶ್ರೀಮತಿ ಜಯಮ್ಮ ಕಥನ ಪ್ರದರ್ಶನ ಮಾಡುವ ಶೈಲಿಯನ್ನು ಗಮನಿಸಬಹುದು. ಆಕೆ "ನಲ್ಲತಂಗಿಯ ಕಥೆಯನ್ನು ಹೇಳುತ್ತಾ ಅದರಲ್ಲಿ ತಲ್ಲೀನಗೊಂಡು ಭಾವತೀವ್ರತೆಯಲ್ಲಿ ತನ್ನದೇ ಜೀವನದ ಕಥೆಯನ್ನು ಆಕೆಯ ಕಥೆಯೊಂದಿಗೆ ಹೋಲಿಸಿ ಹಾಡತೊಡಗುತ್ತಾಳೆ. ಈ ಕಥೆಯಲ್ಲಿ ರಾಣಿ ಕುದುರೆಯ ಮೇಲೆ ಹೋಗುತ್ತಿರುತ್ತಾಳೆ. ಆಗ ಸಾಕಷ್ಟು ಹಾದಿ ಕ್ರಮಿಸುತ್ತಾಳೆ. ಕುದುರೆ ದಿಢೀರ್ ಎಂದು ನೆಗ್ಗಾ ನೆಗೆದು ಮುಂದಕ್ಕೆ ಹೋಗುತ್ತದೆ... ಎಂದು ಹೇಳುತ್ತಾ ಜಯಮ್ಮ ಕಥೆ ಶುರು ಮಾಡಿಕೊಂಡು... ಕುದುರೆಗಾಡಿ ಪಲ್ಟಿ ಹೊಡೆದು ರಾಣಿ ಕೆಳಗೆ ಬೀಳುತ್ತಾಳೆ. ಕಾವಲಿಗೆ ಬಂದ ಸೈನಿಕರ ಪಡೆ ಕುದುರೆಯ ವೇಗಕ್ಕೆ ಹೆಜ್ಜೆ ಹಾಕಲಾರದೆ ಹಿಂದೆ ಬಿದ್ದಿದ್ದಾರೆ. ರಾಣಿಯನ್ನು ಕಾಪಾಡಲು ಯಾರು ಇಲ್ಲ... ಎಂದು ಹೇಳುತ್ತಾ ಜಯಮ್ಮ ಸುಮಾರು ಮೂವತ್ತು ನಿಮಿಷ ತನ್ನ ಬದುಕಿನ ಕಥೆಯನ್ನು ಹೇಳುತ್ತಾಳೆ."[೩] ಈ ಕಥೆಯನ್ನು ಸಂಯುಕ್ತಗೊಳಿಸಿ ಪ್ರದರ್ಶನ ಮಾಡುವ ಸಂದರ್ಭ ಪ್ರಮುಖವಾಗುತ್ತದೆ. ಅಂದರೆ ಜಯಮ್ಮ ತನ್ನ ತಂದೆಯನ್ನು ಕಳೆದುಕೊಂಡು, ಸಹೋದರನಿಂದ ತಿರಸ್ಕಾರಕ್ಕೆ ಒಳಗಾಗಿ, ಅನಾರೋಗ್ಯದ ಸ್ಥಿತಿಯಲ್ಲಿದ್ದ ಪತಿ ಮತ್ತು ಮಕ್ಕಳನ್ನು ಸಾಕುವ ಹೊಣೆ ಹೊತ್ತಿದ್ದಳು. ಆಗ ಊಟಕ್ಕಾಗಿ ಏನು ಇರಲಿಲ್ಲ. ಕಲೆ ಪ್ರದರ್ಶನ ಮಾಡಿ ಭಿಕ್ಷೆ ಬೇಡಿಕೊಳ್ಳುವುದಕ್ಕೆ ಕಲಾಪರಿಕರಗಳು ಇರಲಿಲ್ಲ ಎಂದು ಹೇಳುತ್ತಲೇ ಆ ರಾಣಿಯ ಸ್ಥಿತಿಯಂತೆ ನನ್ನ ಬದುಕು ಅತಂತ್ರ ವಾಯಿತು. ಆ ರಾಣಿಯಂತೆ ನನ್ನನ್ನು ಕಾಪಾಡುವವರು ಯಾರು ಇರಲಿಲ್ಲವೆಂದು ಹೇಳುತ್ತಾಳೆ. "ನಾವು ಅಕ್ಷರಸ್ಥರು ಕಲೆಯನ್ನು ಮತ್ತು ಬದುಕನ್ನೇ ಬೇರೆ ಬೇರೆ ಮಾಡಿ ನೋಡುತ್ತೇವೆ. ಆದರೆ ಕಲಾವಿದರಿಗೆ ಅವೆರಡೂ ಒಂದೇ. ಕಲೆ ಅವರ ಬದುಕಿನ ಭಾಗವಾಗಿರುತ್ತದೆ. ಅದಕ್ಕಾಗಿಯೇ ಪಾರಂಪರಿಕ ಕಥನವನ್ನು ಆ ರೀತಿಯಲ್ಲಿ ಬಳಸಿಕೊಂಡಿದ್ದಾರೆ, ದುಡಿಸಿಕೊಂಡಿದ್ದಾರೆ. ಅದಕ್ಕೆ ಅವರು ತಮ್ಮನ್ನು ತಾವು ಅರ್ಪಿಸಿಕೊಂಡಿದ್ದಾರೆ."[೪] ಈ ವೈಧಾನಿಕತೆಯನ್ನು ಜನಪ್ರಿಯ ಮತ್ತು ಅಕ್ಷರಸ್ಥ ಕಲಾವಿದರಲ್ಲಿ ಕಾಣುವುದಕ್ಕೆ ಸಾಧ್ಯವಿಲ್ಲ. ಇವರ ಸೃಜನಾತ್ಮಕತೆ ಜಯಮ್ಮನಿಗಿಂತ ಭಿನ್ನ. ಇವರು ಕಥೆಯನ್ನು ಆನ್ವಯಿಕಗೊಳಿಸುವುದಕ್ಕೆ ಹೆಚ್ಚು ಪ್ರಯತ್ನಿಸುತ್ತಾರೆ ಹೊರತು ತಮ್ಮ ಜೀವನದ ಕಥೆಗಳನ್ನು ಪ್ರದರ್ಶನದ ಕಥನಗಳೊಂದಿಗೆ ಬೆಸೆಯುವುದು ಕಡಿಮೆ.

ಕಲೆ ಬೇರೆ ಜೀವನ ಬೇರೆ ಎನ್ನುವ ಪ್ರಜ್ಞೆ ಇದಕ್ಕೆ ಪ್ರಮುಖ ಕಾರಣ. ಅಲ್ಲದೆ ಶಿಕ್ಷಕರಾಗಿ, ವಿಶ್ವವಿದ್ಯಾಲಯಗಳಲ್ಲಿ ಮತ್ತು ಸರಕಾರಿ ಕಲಾ ಸಂಸ್ಥೆಗಳಲ್ಲಿ ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಿರುವುದು ಇದಕ್ಕೆ ಪ್ರಮುಖ ಕಾರಣವಿರಬಹುದು. ಇದೇ ಅಂತಿಮವಲ್ಲ. ಅಲ್ಲದೆ ಇಲ್ಲಿ ಶ್ರೀಮತಿ ಜಯಮ್ಮನ ಸೃಜನಾತ್ಮಕತೆ ಶ್ರೇಷ್ಠ, ಜನಪ್ರಿಯ ಕಲಾವಿದರ ಸೃಜನಾತ್ಮಕತೆ ಕನಿಷ್ಠ ಎನ್ನುವ ವಾಗ್ವಾದವಲ್ಲ. ಜಾನಪದವನ್ನು ಸೈದ್ಧಾಂತಿಕವಾಗಿ, ಸುಸ್ಥಿರವಾಗಿ ಜೀವಂತಗೊಳಿಸುವುದಕ್ಕೆ ಈ ಎಲ್ಲ ಬಗೆಯ ಜ್ಞಾನಪರಂಪರೆಗಳು ಮುಖ್ಯ. ಆದರೆ ಅವುಗಳನ್ನು ಸೈದ್ಧಾಂತಿಕವಾಗಿ ವಿಶ್ಲೇಷಣೆಗೆ ಒಳಪಡಿಸಬೇಕಷ್ಟೆ. ಆ ಕೆಲಸವನ್ನು ಜಾನಪದ ವಿಶ್ವವಿದ್ಯಾಲಯ ಆರಂಭಿಸಿದೆ.

*****

ಜಾನಪದದ ಪ್ರಸ್ತುತ ಸ್ಥಿತಿಗತಿಯನ್ನು ವಿವಿಧ ಆಯಾಮಗಳಿಂದ ಅರ್ಥ ಮಾಡಿಕೊಳ್ಳುವ ಹಲವು ಪ್ರಯತ್ನಗಳು ಆಯಾ ಕಾಲದಲ್ಲಿ ನಡೆಯುತ್ತ ಬಂದಿವೆ. ಕಳೆದ ಎರಡು ದಶಕದಲ್ಲಿ ಇದರ ತೀವ್ರತೆ ಮತ್ತಷ್ಟು ಹೆಚ್ಚಾಗಿದೆ. ಇದಕ್ಕೆ ಹಲವು ಕಾರಣಗಳಿದ್ದರೂ ಆತಂಕ ಮತ್ತು ಭರವಸೆಗಳೇ ಪ್ರಮುಖ ಕಾರಣಗಳು. ಜಾಗತೀಕರಣದ ಪರಿಣಾಮದಿಂದಾಗಿ ಜಾನಪದ ಅಥವಾ ನಮ್ಮದೇಯಾದ ಸಾಂಸ್ಕೃತಿಕ, ಪಾರಂಪರಿಕ ಜ್ಞಾನವನ್ನು ಕಳೆದುಕೊಂಡಿದ್ದೇವೆ ಅಥವಾ ವಿಸ್ಮೃತಿಯಾಗುತ್ತಿವೆ. ಅವುಗಳಲ್ಲಿ ಕಳೆದುಹೋಗಿರುವಂತಹದು ಯಾವುದು? ಕಳೆದುಹೋಗುವ ಹಂತದಲ್ಲಿರುವಂತಹದು ಯಾವುದು? ಯಾಕಾಗಿ? ಅದನ್ನು ಮರಳಿ ಕಟ್ಟಬೇಕಾದ ಅನಿವಾರ್ಯತೆ ಇದೆಯೇ? ಒಂದು ವೇಳೆ ಕಟ್ಟಲೇಬೇಕಾದ 'ಪಾರಂಪರಿಕ ಜ್ಞಾನಬಿಂದು'ಗಳನ್ನು ಕಟ್ಟುವುದಾದರೆ ಹೇಗೆ? ಈಗ ಉಳಿದಿರುವುದನ್ನು ಮುಂದಿನ ದಿನಗಳಲ್ಲೂ ಉಳಿಸಿಕೊಳ್ಳುವುದಕ್ಕೆ ಸಾಧ್ಯವೇ? ಉಳಿಸಿಕೊಳ್ಳುವುದಾದರೆ ಅದನ್ನು ಯಾವ ಬಗೆಯಲ್ಲಿ ಉಳಿಸಿಕೊಳ್ಳಬಹುದು ಎನ್ನುವ ಹಲವಾರು ತಾತ್ವಿಕ ಪ್ರಶ್ನೆಗಳು ಜಾನಪದ ವಿದ್ವಾಂಸರನ್ನು, ಕಲಾವಿದರನ್ನು ಕಾಡುತ್ತಿವೆ. ಜೊತೆಗೆ ಜಾನಪದವನ್ನು ವಿಶಾಲವಾದ ಸಾಂಸ್ಕೃತಿಕ ಚೌಕಟ್ಟಿನಲ್ಲಿ ವಿಶ್ಲೇಷಣೆಗೆ ಒಳಪಡಿಸಿ ಮರುವ್ಯಾಖ್ಯಾನೀಕರಿಸುವ ಪ್ರಯತ್ನಗಳು ಸಹ ತೀವ್ರವಾಗಿ ನಡೆಯುತ್ತಲಿವೆ. ಈ ವೈಧಾನಿಕತೆಗಾಗಿಯೇ ವಿವಿಧ ಬಗೆಯ ಅಥವಾ ಭಿನ್ನ ಜ್ಞಾನಕ್ಷೇತ್ರಗಳ ಆಕರಗಳನ್ನು ಬಳಸಿಕೊಳ್ಳಲಾಗುತ್ತಿದೆ. ಆದ್ದರಿಂದಲೇ ವಿವಿಧ ಬಗೆಯ ಜ್ಞಾನ ಪರಂಪರೆಗಳು ಅಧ್ಯಯನದ ಮುಖ್ಯವಾಹಿನಿಗೆ ಬರುತ್ತಿವೆ ಅಥವಾ ಆಕರಗಳಾಗಿ ಬಳಕೆಯಾಗುತ್ತಿವೆ. ಅಂತಹ ಆಕರಗಳಲ್ಲಿ ಜಾನಪದ ವಕ್ತಾರರ ಅನುಭವಗಳು : ಆತ್ಮಕಥನಗಳನ್ನು ಪ್ರಮುಖ ಆಕರಗಳೆಂದು ಪರಿಗಣಿಸಲಾಗುತ್ತಿದೆ ಅಥವಾ ಪರಿಗಣಿಸಲೇಬೇಕಾದ ಸಾಂಸ್ಕೃತಿಕ ಒತ್ತಡ ನಮ್ಮ ಮುಂದಿದೆ. ಇದು ಆರೋಗ್ಯಕರ ಬೆಳವಣಿಗೆ. ಏಕೆಂದರೆ ಆತ್ಮಕಥನಗಳು ಸಮಕಾಲೀನ ಸಂಗತಿಗಳನ್ನು ಅನಾವರಣ ಮಾಡುವ ಪ್ರಮುಖ ಆಕರಗಳು. ಹಾಗಾಗಿಯೇ ಜಾನಪದ ಅಧ್ಯಯನದಲ್ಲಿ ಈ ಆತ್ಮಕಥನಗಳನ್ನು ಪರಿಗಣಿಸಲೇಬೇಕು.

ಅಲಕ್ಷಿತ ಸಮುದಾಯಗಳ ಅಧ್ಯಯನಕ್ಕಂತೂ ಇವು ಅವಶ್ಯಕ. ಏಕೆಂದರೆ ಜನಪದರ ಆತ್ಮಕಥನಗಳು ಶಿಷ್ಟರ ಆತ್ಮಕಥನಗಳಿಗಿಂತ ಭಿನ್ನ. ಅಲ್ಲದೆ "ಒಂದು ಜನತೆಯ ಅನುಭವ ಸಂಪತ್ತಿನ ಹಿನ್ನೆಲೆಯಲ್ಲಿ. ರೂಪುಗೊಂಡಿರುವ ಈ ಜ್ಞಾನ ಸನ್ನಿಧಿಯಲ್ಲಿ ಒಂದು ನಾಡಿನ ಮೌಲ್ಯ, ವಿವೇಕ ಮತ್ತು ಆದರ್ಶಗಳು ಅಡಗಿರುತ್ತವೆ".[೫] ಜನಪದರ ಆತ್ಮಕಥನಗಳು ಶ್ರೇಷ್ಠ, ಶಿಷ್ಟರ ಆತ್ಮಕಥನಗಳು ಕನಿಷ್ಠ ಎನ್ನುವ ವಾಗ್ವಾದ ಇಲ್ಲಿನದಲ್ಲ. ಸಾಂಸ್ಕೃತಿಕ ಅಧ್ಯಯನದಲ್ಲಿ ಆ ಎರಡು ಬಗೆಯ ಆತ್ಮಕಥನಗಳು ಮುಖ್ಯ. ಇವುಗಳಲ್ಲಿ ಜನಪದರ ಆತ್ಮಕಥನಗಳು ಹೆಚ್ಚು ಸಹಾಯಕವಾಗಬಲ್ಲವು ಎನ್ನುವುದೇ ಇಲ್ಲಿನ ಆಶಯ. "ಒಂದು ಸಮಾಜದ ಅಂತರಂಗವನ್ನು ಅರಿತುಕೊಳ್ಳಲು ಬುದ್ಧದೇವ, ಅಕ್ಕಮಹಾದೇವಿ, ಗಾಂಧೀಜಿ, ಅಂಬೇಡ್ಕರ್, ಲೋಹಿಯಾ, ವಿಶ್ವೇಶ್ವರಯ್ಯ, ಕುವೆಂಪು ಅವರಂತಹ ಮಹನೀಯರ ಆತ್ಮಕಥನಗಳು ಹೇಗೆ ಮುಖ್ಯವೋ ಹಾಗೆಯೇ ಸತ್ಯ ಮತ್ತು ಸೌಂದರ್ಯಕ್ಕಾಗಿ, ನಿರಂತರವಾಗಿ ಹಾರೈಸಿದ ಮತ್ತು ಆ ಮೂಲಕ ತಮ್ಮ ಸಮಸ್ತ ಬದುಕನ್ನೇ ಇನ್ನಿಲ್ಲದಷ್ಟು ಆನಂದಮಯವಾಗಿಸಿಕೊಂಡ ನಮ್ಮ ಜನಪದ ಕಲಾವಿದರ ಆತ್ಮಕಥನಗಳು ಕೂಡ ಅತ್ಯಂತ ಮಹತ್ವದವುಗಳಾಗಿವೆ".[೬] ಹಾಗಾಗಿಯೇ ಜಾನಪದದ ವಿವಿಧ ಕ್ಷೇತ್ರದ, ವಿವಿಧ ವಯಸ್ಸಿನವರ, ವಿವಿಧ ಪ್ರದೇಶ ಮತ್ತು ವಿವಿಧ ಭಾಷೆಗಳ ವಕ್ತಾರರ ಆತ್ಮಕಥನಗಳನ್ನು ಸಂಗ್ರಹಿಸಬೇಕು. ಆ ಎಲ್ಲ ಆತ್ಮಕಥನಗಳನ್ನು ಸಂಯುಕ್ತಗೊಳಿಸಿ ಸೈದ್ಧಾಂತಿಕವಾದ ವಿಶ್ಲೇಷಣೆಗೆ ಒಳಪಡಿಸಬೇಕು. ಏಕೆಂದರೆ ಜಾನಪದದ ಅನುಭವ ಪರಂಪರೆಯನ್ನು ಅರ್ಥ ಮಾಡಿಕೊಳ್ಳಬೇಕು. "ಈ ಅನುಭವ ಪರಂಪರೆಯೇ ವ್ಯಕ್ತಿಯ ಆತ್ಮಕಥೆ. ಇಂತಹ ಹಲವಾರು ವ್ಯಕ್ತಿಗಳ ಅನುಭವ ವಿಶೇಷಗಳ ಸಮುದಾಯವೇ ನಾಡಿನ ಆತ್ಮಕಥೆಯಾಗುತ್ತದೆ ಅಥವಾ ನಾಡಿನ ಸಂಸ್ಕೃತಿಯಾಗುತ್ತದೆ"[೭] ಎನ್ನುವ ಪ್ರಜ್ಞೆ ಈ ಕಾರ್ಯಕ್ರಮಕ್ಕಿದೆ.

ಅಲ್ಲದೆ, ಜಾನಪದ ಬದಲಾವಣೆಯಾದಂತೆ ಅಧ್ಯಯನದ ವಿಧಾನಗಳು ಮತ್ತು ಗ್ರಹಿಕೆಗಳು ಬದಲಾಗಬೇಕು ಎನ್ನುವುದು ಹಲವು ವಿದ್ವಾಂಸರ ವಾದ. ಇದು ವಾಸ್ತವವೂ ಹೌದು. ಈಗ ಜಾನಪದ ಬದಲಾಗಿದೆ ಮತ್ತು ಬದಲಾಗುತ್ತಲೇ ಇರುತ್ತದೆ. ಇದು ಜಾನಪದದ ಸಹಜ ಗುಣ. ಆದರೂ ಇಲ್ಲಿ ಆಗಿರುವ ಪಲ್ಲಟಗಳನ್ನು ಗುರುತಿಸಿಕೊಳ್ಳಬೇಕು. ಅಂದರೆ ಪಾರಂಪರಿಕ ಕಲಾವಿದರು, ವೃತ್ತಿಮೂಲ ಕಲಾವಿದರು, ಕುಲಮೂಲ ಕಲಾವಿದರು ಈ ಕ್ಷೇತ್ರದಲ್ಲಿ ಮುಂದುವರೆಯುವುದಕ್ಕೆ ಇಷ್ಟಪಡುತ್ತಿರುವುದು ಕಡಿಮೆಯಾಗಿದೆ. ತಮ್ಮ ಮಕ್ಕಳನ್ನು ಈ ಕ್ಷೇತ್ರದಲ್ಲಿ ಮುಂದುವರೆಸುವುದಕ್ಕೆ ಇಷ್ಟಪಡದೇ ಇರುವ ವರ್ಗ ದಿನದಿಂದ ದಿನಕ್ಕೆ ಹೆಚ್ಚಾಗುತ್ತಲಿದೆ. ತಮ್ಮ ಜ್ಞಾನವನ್ನು ತಮ್ಮ ಮಕ್ಕಳಿಗೆ ಹೇಳಿಕೊಟ್ಟರೆ ಅವರು ತಮ್ಮ ಕಲೆ ಕಲಿತು ನಮ್ಮಂತಾಗಿಬಿಡುತ್ತಾರೆನ್ನುವ ಭಯ ಮತ್ತು ಆತಂಕಕ್ಕಾಗಿಯೇ ತಮ್ಮ ಪಾರಂಪರಿಕ ಜ್ಞಾನವನ್ನು ತಮ್ಮಲ್ಲೇ ಬಚ್ಚಿಟ್ಟುಕೊಂಡ ಅನೇಕ ಸಂಗತಿಗಳು ಪಟ್ಟಾಂಗ ಕಾರ್ಯಕ್ರಮಕ್ಕೆ ಆಗಮಿಸಿದ 'ತಿಂಗಳ ಅತಿಥಿ'ಗಳಿಂದ ಅಭಿವ್ಯಕ್ತ

ಗೊಂಡಿವೆ. ವೃತ್ತಿಗಾಯಕರಿಗಿಂತ ಹವ್ಯಾಸ ಗಾಯಕ ವರ್ಗ ಹೆಚ್ಚಾಗುತ್ತಿದೆ. ಜನಪ್ರಿಯ ಕಲಾವಿದರು ಪಾರಂಪರಿಕ ಕಲಾವಿದರಿಗಿಂತ ಹೆಚ್ಚು ಅವಕಾಶಗಳನ್ನು ಪಡೆಯುತ್ತಿದ್ದಾರೆ. ಪಟ್ಟಾಂಗ ಕಾರ್ಯಕ್ರಮದಲ್ಲೂ ಮಂಜಮ್ಮ ಜೋಗತಿಯಿಂದ ಈ ಬಗೆಯ ಆತಂಕವೂ ವ್ಯಕ್ತವಾಗಿದೆ. ಕುಲಮೂಲ ಕಲೆಗಳು, ಕುಲಮೂಲ ಜ್ಞಾನ ಪರಂಪರೆಗಳು ಎನ್ನುವ ಅಸ್ಮಿತೆಗಳಿಂದ ಕಲೆಗಳು ಮತ್ತು ಪಾರಂಪರಿಕ ವೃತ್ತಿಗಳು ಛಿದ್ರವಾಗುತ್ತಿವೆ. ಅವುಗಳಿಗಿದ್ದ ಮಡಿಮೈಲಿಗೆಗಳು ಕಣ್ಮರೆಯಾಗುತ್ತಿವೆ. ಇಂತಹ ಬದಲಾವಣೆಗಳಿಂದ ಒಳಿತು ಮತ್ತು ಕೆಡುಕುಗಳಾಗಿವೆ. ಈ ಬಗೆಯ ಅನೇಕ ಪಲ್ಲಟಗಳನ್ನು ತಿಳಿದುಕೊಳ್ಳುವುದಕ್ಕೆ ಕ್ಷೇತ್ರದಲ್ಲಿ ಜೀವಂತವಾಗಿರುವ ಮಾಹಿತಿ ಅವಶ್ಯಕ. ಹಾಗಾಗಿ ಕ್ಷೇತ್ರದ ಮಾಹಿತಿ ದಾಖಲೀಕರಣ ವಾಗಬೇಕಾಗಿದೆ. "ಈ ಬಗೆಯ ದಾಖಲೀಕರಣ ಮಾತ್ರವೇ ಚರಿತ್ರೆಯಾಗಬಲ್ಲದು ಎಂಬ ನಂಬಿಕೆಯೂ ಇದರಲ್ಲಿದೆ. ಅಂದರೆ ವರ್ತಮಾನದಲ್ಲಿ ದಾಖಲೀಕರಣಗೊಳ್ಳುವು ದೆಂದರೆ ಭವಿಷ್ಯದಲ್ಲಿ 'ಚರಿತ್ರೆ'ಯಾಗುವ ಅಪೇಕ್ಷೆಯು ಪ್ರಜ್ಞಾಪೂರ್ವಕವಾಗಿಯೋ ಅಪ್ರಜ್ಞಾಪೂರ್ವಕವಾಗಿಯೋ ಕೆಲಸ ಮಾಡುತ್ತದೆ. ವರ್ತಮಾನದಲ್ಲಿ ತೀವ್ರ ಬಿಕ್ಕಟ್ಟಿನಲ್ಲಿರುವ ಸಾಮಾನ್ಯರು ಭವಿಷ್ಯದಲ್ಲಿ ಭರವಸೆಯನ್ನು ಕಾಣಬೇಕಾಗಿದೆ. ಇದಕ್ಕಾಗಿ ಇವರು ಭವಿಷ್ಯವನ್ನು ರೂಪಿಸಿಕೊಳ್ಳಬೇಕಾಗಿದೆ. ಇದು ಸಮಾಜದ ಮುಂದಿರುವ ಸಂಕೀರ್ಣವಾದ ಮತ್ತು ಬಹುದೊಡ್ಡ ಸವಾಲು. ಆದರೆ ಕೇವಲ ವೈಯಕ್ತಿಕ ವಿವರಗಳಲ್ಲಿ ದಾಖಲಾಗುವ ಧೋರಣೆಗೆ ಮುಂದಿನ ಕನಸುಗಳಿರುವುದಿಲ್ಲ, ಹಿಂದಿನ ನೆನಪುಗಳು ಮಾತ್ರ ಮುಖ್ಯ ವಾಗುತ್ತವೆ. ನೆನಪುಗಳೇ ಕನಸುಗಳ ಬೀಜಗಳು ಇರಬಹುದಾದರೂ ನೆನಪುಗಳ ದಾಖಲೀಕರಣದ ಕ್ರಮದಲ್ಲಿ ಕನಸುಗಳನ್ನೇ ನಾಶ ಮಾಡುವ ವಿದ್ರೋಹವೂ ಇಲ್ಲದಿಲ್ಲ. ಹಾಗಾಗಿ ನೆನಪುಗಳನ್ನು ಆಯ್ಕೆ ಮಾಡುವ, ಜೋಡಿಸುವ ಮತ್ತು ಮಂಡಿಸುವ ಕ್ರಮದಲ್ಲೇ ಕನಸುಗಳನ್ನು ಹುಟ್ಟಿಹಾಕುವ ಮತ್ತು ಇಲ್ಲವಾಗಿಸುವ ಪ್ರಯತ್ನ ಅನಾಯಾಸ ವಾಗಿ ನಡೆದಿರುತ್ತದೆ".[೮] ಇಂತಹ ವೈಧಾನಿಕತೆಯನ್ನು ಅರ್ಥ ಮಾಡಿಕೊಳ್ಳು ವುದಕ್ಕಾಗಿಯೇ ವಿಶ್ವವಿದ್ಯಾಲಯ 'ಪಟ್ಟಾಂಗ'ದ ಮೂಲಕ ಕಲಾವಿದರ ಆತ್ಮಕಥನಗಳನ್ನು ದಾಖಲೀಕರಣ ಮಾಡುವ ಕಾರ್ಯವನ್ನು ಆರಂಭಿಸಿದೆ. ಇದು ಆಶಾದಾಯಕ ಕಾರ್ಯ. ಅಲ್ಲದೆ ಆತ್ಮಕಥೆಗಳನ್ನು ಸಂಗ್ರಹಿಸಬೇಕು ಎನ್ನುವ ತಹತಹವನ್ನು ಮೀರಿ ಮತ್ತು ಸೈದ್ಧಾಂತಿಕ ವಿಧಾನಗಳಲ್ಲಿ ಸಂಗ್ರಹಿಸಲಾಗುತ್ತಿರುವುದು ವೈಜ್ಞಾನಿಕ ವಿಧಾನವೇ ಸರಿ.

*****

ಜಾನಪದ ವಕ್ತಾರರ ಆತ್ಮಕಥೆಗಳಲ್ಲಿ ಅಥವಾ ಕನ್ನಡ ಆತ್ಮಕಥೆಗಳಲ್ಲಿ ಮಂಜಮ್ಮ ಜೋಗತಿಯ ಆತ್ಮಕಥೆ ವಿಭಿನ್ನವಾಗಿದೆ. ಏಕೆಂದರೆ ಮಂಜಮ್ಮ 'ತೃತೀಯಲಿಂಗಿ', 'ಗಂಡುಜೋಗತಿ' ಮತ್ತು 'ಜನಪದ ಕಲಾವಿದೆ'ಯೂ ಹೌದು. ಹಾಗಾಗಿಯೇ ಮಂಜಮ್ಮನ ಆತ್ಮಕಥನದಲ್ಲಿ ಈ ಮೂರು ವರ್ಗಗಳ ಸಂಯುಕ್ತ ಸಂವೇದನೆಯ ವಿಭಿನ್ನ ಚಿತ್ರಣಗಳಿವೆ.

ಮಂಜಮ್ಮ ತೃತೀಯಲಿಂಗಿ'ಯಾಗಿ ರೂಪಾಂತರಗೊಳ್ಳುತ್ತಿರುವ ಸಂದರ್ಭದಲ್ಲಿ ಮತ್ತು ರೂಪಾಂತರಗೊಂಡ ನಂತರ ಆಕೆ ಅನುಭವಿಸಿದ ಮಾನಸಿಕ ಮತ್ತು ದೈಹಿಕ ಯಾತನೆಗಳು ಇತರೆ ತೃತೀಯಲಿಂಗಿಗಳಂತೆ ಕಂಡುಬರುತ್ತಿವೆಯಾದರೂ ಆ ಸಂದರ್ಭದಲ್ಲಿ ಅನುಭವಿಸಿದ ಕೌಟುಂಬಿಕ ಮತ್ತು ಸಾಮಾಜಿಕ ಹಿಂಸೆಗಳ ಸ್ವರೂಪ ಬೇರೆಯಾಗಿವೆ. 'ನಾವು ಮೇಲುಜಾತಿಯವರು, ನಮ್ಮಲ್ಲಿ 'ದ್ವಿಲಿಂಗತ್ವ'ದ ಪರಿಕಲ್ಪನೆ ಹಾಗೂ ಜೋಗತಿ ಯಾಗುವ ಸಂದರ್ಭಗಳು ಬರಲೇಬಾರದು. ಇಂತಹ ಘಟನೆಗಳು ತಳಸಮುದಾಯಗಳಿಗೆ ಮಾತ್ರ ಸೀಮಿತವಾದಂಥವು. ಇವನು ದ್ವಿಲಿಂಗಿಯಾಗಿ ಅಂತಹ ನೀಚ ಕುಲಕ್ಕೆ ಸೇರಿಬಿಟ್ಟ, ನಮ್ಮ ಮನೆತನದ ಗೌರವ, ನಮ್ಮ ಜಾತಿಯ ಗೌರವ ಹಾಳು ಮಾಡಿಬಿಟ್ಟ ಎನ್ನುವ ಕುಟುಂಬದವರ ಮನಸ್ಥಿತಿ ವಿಶೇಷವಾಗಿ ಮಂಜಮ್ಮನ ಅಪ್ಪನ ಮನಸ್ಥಿತಿ ಕೌಟುಂಬಿಕ ಹಿಂಸೆಗೆ ಹೆಚ್ಚು ಕಾರಣವಾಗಿದೆ.

ಮಂಜಮ್ಮ ಕೌಟುಂಬಿಕ ಬಹಿಷ್ಕಾರಕ್ಕೆ ಒಳಗಾದ ನಂತರ ತನ್ನ ಬದುಕನ್ನು ಕಟ್ಟಿಕೊಂಡ ವಿಧಾನ ಮಾದರಿಯಾದದ್ದೇ ಸರಿ. ಇವರು ತಮ್ಮ ಬದುಕಿಗಾಗಿ ಅನುಸರಿಸಿದ ವಿಧಾನಗಳು ಮನುಷ್ಯಕುಲಕ್ಕೆ ನೈತಿಕ ಪಾಠವನ್ನು ಹೇಳುತ್ತವೆ. ಆಕೆ ಕೌಟುಂಬಿಕ ಬಹಿಷ್ಕಾರಕ್ಕೆ ಒಳಗಾಗುವ ವೇಳೆಗಾಗಲೇ ಸ್ವೀಕಾರ ಮಾಡಿಕೊಂಡಿದ್ದ 'ಜೋಗತಿ' ವೃತ್ತಿಯನ್ನೇ ತನ್ನ ಬದುಕಿಗಿರುವ ಆಸರೆ ಎಂದುಕೊಂಡು ಆ ಕಲೆಯಲ್ಲೇ ತನ್ನನ್ನು ತಾನು ತೊಡಗಿಸಿ ಕೊಂಡವಳು. ತನ್ನ ಭಿಕ್ಷಾಟನೆಯ ಅಲೆಮಾರಿತನದಲ್ಲಿ ಆಕಸ್ಮಿಕವಾಗಿ ಕಣ್ಣಿಗೆ ಬಿದ್ದ ಜೋಗತಿ ಕಲೆಯನ್ನು ಕಲಿಯಲೇಬೇಕು ಎನ್ನುವ ಛಲಕ್ಕೆ ಬಿದ್ದವಳು. ಜೋಗತಿ ನೃತ್ಯವನ್ನು ಕಲಿಸುತ್ತಿದ್ದ ಗುರುವಿನಿಂದ ಅನೇಕ ಬಗೆಯ ಹಿಂಸೆಗಳನ್ನು ಅನುಭವಿಸುತ್ತಲೇ ಭಿಕ್ಷಾಟನೆಯ ಅಲೆಮಾರಿತನದಲ್ಲೇ ಕಲೆ ಕಲಿತವಳು. ಕಲಿಯಲೇಬೇಕೆಂಬ ಛಲದಿಂದ ಕಲಿಯುವುದಕ್ಕಾಗಿಯೇ ದನಿವರಿಯದೇ ದಿನಗಟ್ಟಲೇ ಕುಣಿದವಳು. ಇದು ಸಮಾಜದಲ್ಲಿ ಗೌರವಯುತವಾದ ಬದುಕನ್ನು ಕಟ್ಟಿಕೊಳ್ಳಬೇಕು ಎನ್ನುವ ಛಲ ಮತ್ತು ಕಲಾಬದ್ಧತೆಯನ್ನು ತಿಳಿಸುತ್ತದೆ. ಈ ಬದ್ಧತೆ ಹಿರಿಯ ಕಲಾವಿದೆ ಕಾಳವ್ವ ಜೋಗತಿ ಮತ್ತು ಆಕೆಯ ತಂಡ ಮಂಜಮ್ಮನನ್ನು ಹುಡುಕಿಕೊಂಡು ಬರುವಂತೆ ಮಾಡಿತು. ತನ್ನ ಅಲೆಮಾರಿ ಬದುಕಿನಲ್ಲಿ ಆಕಸ್ಮಿಕವಾಗಿ ಸಿಕ್ಕ ಕಾಳವ್ವ ಜೋಗತಿಯನ್ನು ತಾಯಿಯಾಗಿ, ಗುರುವಾಗಿ ಸ್ವೀಕಾರ ಮಾಡಿಕೊಂಡು ಆಕೆಯ ಗರಡಿಯಲ್ಲೇ ಪಳಗಿದಳು. ಕಲಾಕ್ಷೇತ್ರದಲ್ಲಿ 'ತಾಯಿಯನ್ನು ಮೀರಿಸಿದ ಮಗಳು', 'ಗುರುವನ್ನೇ ಮೀರಿಸಿದ ಶಿಷ್ಯೆ' ಎನ್ನುವ ಕೀರ್ತಿಗೆ ಪಾತ್ರರಾದವಳು. ಕಾಳವ್ವ ಜೋಗತಿ ಕಣ್ಮರೆಯಾದ ನಂತರ ತಮ್ಮ ತಂಡದಲ್ಲಿ ಕಾಳವ್ವಳ ಸ್ಥಾನವನ್ನು ತುಂಬಿ ತಂಡವನ್ನು ವ್ಯವಸ್ಥಿತವಾದ ರೀತಿಯಲ್ಲಿ ಮುನ್ನಡೆಸಿಕೊಂಡು ಹೋಗುತ್ತಿದ್ದಾಳೆ ಮಂಜಮ್ಮ ಜೋಗತಿ. ತನ್ನತ್ತಿರ ಬರುವ ಗಂಡುಜೋಗತಿಯರನ್ನು ಮಗಳನ್ನಾಗಿ ಸ್ವೀಕಾರ ಮಾಡಿಕೊಂಡು ಮನೆಯಲ್ಲೇ ಆಸರೆ ನೀಡಿದವರು. ಜೊತೆಗೆ ಅವರಿಗೆಲ್ಲ ಸಮಾಧಾನ ಹೇಳುವುದರ ಮುಖಾಂತರ ಕಲೆ ಕಲಿಸಿ, ಪ್ರದರ್ಶನಕ್ಕೆ ಅನುವುಮಾಡಿಕೊಟ್ಟು

ಸಾಮಾಜಿಕ ಗೌರವ ತಂದುಕೊಡುವುದರ ಮೂಲಕ ಅವರಲ್ಲಿರುವ ಕೀಳರಿಮೆಯನ್ನು ತೊಡೆದು ಹಾಕುತ್ತಿದ್ದಾಳೆ. 'ನಾವು ಮನುಷ್ಯರು. ನಮ್ಮಲ್ಲೂ ಸಾಕಷ್ಟು ಪ್ರತಿಭೆಗಳಿವೆ. ಅವು ಸಮಾಜದ ನಿರಾಕರಣೆಗಳಿಗೆ ಒಳಗಾಗಿ ಆತಂಕದಿಂದ ಬಚ್ಚಿಟ್ಟುಕೊಂಡಿವೆ. ಅವಕಾಶ ಸಿಕ್ಕರೆ ಅವು ರಾಜಾರೋಷವಾಗಿ ಪ್ರಜ್ವಲಗೊಳ್ಳುತ್ತವೆ. ಹಾಗಾಗಿ ಅವಕಾಶಗಳನ್ನು ಕೊಡಿ' ಎನ್ನುವುದನ್ನು ಹಲವು ಪ್ರದರ್ಶನ ಮೂಲಕ ಸಾಬೀತುಪಡಿಸುತ್ತಿದ್ದಾಳೆ. ಇದಕ್ಕಾಗಿಯೇ ಹಲವಾರು ಹಿರಿಯ ರಂಗನಟಿಯರೊಂದಿಗೆ ಬೆರೆತು ಕಲೆಗಳನ್ನು ಕಲಿಯುತ್ತಿದ್ದಾಳೆ, ಕಲಿಸುತ್ತಿದ್ದಾಳೆ ಮತ್ತು ಪ್ರದರ್ಶನ ನೀಡುತ್ತಿದ್ದಾಳೆ. ಗಂಡುಜೋಗತಿ, ಹಿಜಡಾ ಸಮುದಾಯಕ್ಕೆ ಅನ್ಯಾಯವಾದಲ್ಲಿ ಭಾಗಿಯಾಗಿ ಆ ಅನ್ಯಾಯಗಳ ವಿರುದ್ಧ ಹೋರಾಟ ಮಾಡಿ ತಮ್ಮ ಪ್ರತಿರೋಧ ವ್ಯಕ್ತಪಡಿಸುತ್ತಿದ್ದಾಳೆ. ಮನುಷ್ಯರ ಬಗ್ಗೆ ಅಲ್ಲದೇ ಪ್ರಾಣಿಗಳ ಮೇಲೂ ಈ ಪ್ರೀತಿಯಿದೆ. ನಾಯಿ, ಬೆಕ್ಕು ಮತ್ತು ಕೋತಿಗಳನ್ನು ಮನೆಯಲ್ಲಿ ಸಾಕಿದ್ದಾಳೆ. ಅವುಗಳೆಲ್ಲವೂ ಮಂಜಮ್ಮ ಮತ್ತು ಇತರೆ ಗಂಡುಜೋಗತಿಯರ ಜೊತೆ ಒಂದುಗೂಡಿ ಆಟವಾಡುತ್ತಿವೆ. ಗಂಡುಜೋಗತಿಯರಿಗಲ್ಲದೇ ತನ್ನ ಮನೆಯ ಸುತ್ತಮುತ್ತಲಿನ ಅಲಕ್ಷಿತ ಸಮುದಾಯಗಳ ಯುವತಿಯರಿಗೂ ಕಲಿಸಿಕೊಡುತ್ತಿದ್ದಾಳೆ. ಮಂಜಮ್ಮ ಜೋಗತಿಯಿಂದ ತರಬೇತಿ ಪಡೆದ ಕುಮಾರಿ ಶೋಭಾ ಅವರು ಹಲವು ನಾಟಕಗಳಲ್ಲಿ ಅಭಿನಯ ಮಾಡಿ ತಮ್ಮದೇ ಆದ ಛಾಪು ಮೂಡಿಸಿದ್ದಾಳೆ ಹಾಗೂ ರಂಗಭೂಮಿಗೆ ಆಗಮಿಸಿದ ಯುವ ಪ್ರತಿಭೆ ಎನ್ನುವ ಕೀರ್ತಿಗೆ ಪಾತ್ರಳಾಗಿದ್ದಾಳೆ. ಅಲ್ಲದೇ ಮಂಜಮ್ಮ ಜನಪದ ವೈದ್ಯೆಯೂ ಹೌದು. 'ಸರ್ಪಹುಣ್ಣಿ'ಗೆ ಔಷಧಿ ಕೊಡುತ್ತಾಳೆ. ಹತ್ತಾರು ಜನರು ಈಕೆಯಿಂದ ಔಷಧಿ ಪಡೆದು ಗುಣಮುಖರಾಗಿದ್ದಾರೆ. ಇಂತಹ ವ್ಯಕ್ತಿತ್ವವುಳ್ಳ ಗಂಡುಜೋಗತಿಯೊಬ್ಬಳ ಬದುಕಿನ ಅನೇಕ ಅನುಭವಗಳ ಕಥನಗಳು ಇಲ್ಲಿವೆ. ಹಿಂದೆ ಹೇಳಿದಂತೆ ತೃತೀಯಲಿಂಗಿಗಳನ್ನು, ಗಂಡುಜೋಗತಿಯರನ್ನು, ಜನಪದ ಕಲಾವಿದೆ ಹಾಗೂ ಅಲಕ್ಷಿತ ಸಮುದಾಯಗಳ ಬದುಕಿನ ಹೋರಾಟವನ್ನು ಅರ್ಥ ಮಾಡಿಕೊಳ್ಳುವುದಕ್ಕಾಗಿ ಆತ್ಮಕಥನ ಸಹಾಯಕವಾಗುತ್ತದೆ ಎನ್ನುವ ಭರವಸೆ.

ಪ್ರಸ್ತುತ ಕೃತಿಗೆ ತನ್ನದೇಯಾದ ಮಿತಿಗಳಿವೆ. ಪಟ್ಟಾಂಗ ಕಾರ್ಯಕ್ರಮದಲ್ಲಿ ಅನಾವರಣಗೊಂಡ ಮಾತುಗಳಿಗೆ ಹೆಚ್ಚು ಸೀಮಿತವಾಗಿದೆ. ಹಾಗೆಂದು ಪಟ್ಟಾಂಗದಲ್ಲಿ ಬಿಂಬಿತವಾದ ಚಿತ್ರಣಗಳಾಚೆ ವಿಸ್ತರಣೆಯಾಗಿಲ್ಲ ಎಂದರ್ಥವಲ್ಲ. ಸಾಕಷ್ಟು ವಿಸ್ತರಣೆ ಯಾಗಿದೆ. ಆದರೆ ಆ ವಿಸ್ತರಣೆ ಪಟ್ಟಾಂಗದ ಮಾತುಗಳ ಸುತ್ತಲೂ ಸುತ್ತಿವೆ. ಇವುಗಳಲ್ಲದೆ ಇವರ ಭಿಕ್ಷಾಟಣೆಯ ಅನುಭವಗಳು, ಕಲೆ ಪ್ರದರ್ಶನದ ಅಲೆಮಾರಿತನದ ಅನುಭವಗಳು, ಜೋಗತಿಯಾಗಿ ಆಚರಿಸುವ ಆಚರಣೆ ಮತ್ತು ಸಂಪ್ರದಾಯಗಳ ವಿವರಗಳು, ಗಂಡುಜೋಗತಿ ಮತ್ತು ಹಿಜಡಾಗಳ ಸಂಘರ್ಷಗಳು - ಹೀಗೆ ಇನ್ನು ಮುಂತಾದ ಆಯಾಮಗಳ ವಿವರಗಳನ್ನು ಸಂಗ್ರಹಿಸುವುದಕ್ಕೆ ಸಾಕಷ್ಟು ಅವಕಾಶವಿತ್ತು ಹಾಗೂ ಸಂಗ್ರಹಿಸಬೇಕು. ಆಗ ಇವರ ಸಮಷ್ಟಿ ಬದುಕನ್ನು ಅರ್ಥ ಮಾಡಿಕೊಳ್ಳುವುದಕ್ಕೆ

ಸಾಧ್ಯವಿದೆ. ಹಿಂದೆ ಹೇಳಿದಂತೆ ಪಟ್ಟಾಂಗ ಕಾರ್ಯಕ್ರಮಕ್ಕೆ ಸಮಯದ ಚೌಕಟ್ಟಿದೆ. ಇಂತಹ ಬದುಕನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಬೇಕಾದ ಮಾರ್ಗದರ್ಶಿಯಾಗಿ ರೂಪಿಸುವುದು ಪಟ್ಟಾಂಗ ಕಾರ್ಯಕ್ರಮದ ಮುಖ್ಯ ಆಶಯ. ಪ್ರಸ್ತುತ ಕೃತಿ ಆ ಕಾರ್ಯವನ್ನು ನಿರ್ವಹಿಸುತ್ತದೆ ಎನ್ನುವ ಭರವಸೆಯಿದೆ.

**ಅಡಿಟಿಪ್ಪಣಿಗಳು**

೧. ವಕ್ತೃಗಳನ್ನೇ ಇಲ್ಲಿ ವಕ್ತಾರರೆಂದು ಕರೆಯಲಾಗಿದೆ.

೨. ಇಲ್ಲಿನ ಪ್ರೇಕ್ಷಕರು ಕೇವಲ ನೋಡುಗರು, ಕೇಳುಗರು ಮಾತ್ರವಾಗಿರದೆ ಸಂವಾದಕ ರಾಗಿರುತ್ತಾರೆ. ಹಾಗಾಗಿ ಇವರನ್ನು ನಿರ್ದಿಷ್ಟವಾದ ಉದ್ದೇಶಗಳಿಗಾಗಿಯೇ ಸೇರಿದ ಬಳಗವೆಂದು ಕರೆಯಬಹುದು. ಈ ಬಳಗಕ್ಕೆ(ವಿಶ್ವವಿದ್ಯಾಲಯದ ಬೋಧಕ-ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು) ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಸಂವಾದ ನಡೆಸುವ ವೈಧಾನಿಕತೆಯ ತರಬೇತಿ ನೀಡಿದೆ. ಹಾಗೆಂದು ಇದು ಕೇವಲ ಈ ಸಂವಾದಕರಿಗೆ ಮಾತ್ರ ಸೀಮಿತವಾದ ಕಾರ್ಯಕ್ರಮವಲ್ಲ. ಕಲಾಸಕ್ತರೂ ಸಹ ಭಾಗವಹಿಸುತ್ತಾರೆ ಮತ್ತು ಅವರು ಸಹ ಸಂವಾದಕರಾಗಿರುತ್ತಾರೆ.

೩. ಡಾ. ಕೆ. ಪ್ರೇಮಕುಮಾರ್, ಬುರ್ರಕಥಾ ಜಯಮ್ಮ, ಪು. ೨೮.

೪. ಅದೇ., ಪು. ೨೮.

೫. ಮನದಾಳದ ಕನಸುಗಳು, ಪ್ರೊ. ಕಾಳೇಗೌಡ ನಾಗವಾರ, ಪ್ರಸ್ತಾವನೆ, ಪು. ೩.

೬. ಗರಿಗೆದರಿದ ನವಿಲು, ಪ್ರೊ. ಕಾಳೇಗೌಡ ನಾಗವಾರ, ಪ್ರಸ್ತಾವನೆ, ಪು. ೧೦.

೭. ನುಡಿಕಾಣಿಕೆ, ದೇ.ಜ.ಗೌ., ಪ್ರಸ್ತಾವನೆ, ಪು. III.

೮. ಪುಟ್ಟಯ್ಯ ಬಿ.ಎಂ., ಆತ್ಮಕಥೆಗಳಲ್ಲಿ ಕರ್ನಾಟಕದ ಕಥೆ; ಪು. ೩.

೯. 'ತೃತೀಯಲಿಂಗಿ' ಹಾಗೂ 'ಮಂಗಳಮುಖಿ' ಎನ್ನುವ ಪರಿಭಾಷೆಗಳು ಇತ್ತೀಚೆಗೆ ಅಧಿಕೃತವಾಗಿ ಮತ್ತು ಹೆಚ್ಚಾಗಿ ಬಳಕೆಯಾಗುತ್ತವೆ. ಈ ಪದಗಳ ಬಳಕೆಗಿಂತ ಮುಂಚೆ ಹಿಜಡಾ, ಹಿಜರಾ, ಚಕ್ಕ, ಚ... ಕೋಜಾ, ಹೆಣ್ಣಿಗ, ನಪುಂಸಕ, ದ್ವಿಲಿಂಗೀ, ಒಂಬತ್ತು ಮುಂತಾದ ಪದಗಳು ಬಳಕೆಯಾಗುತ್ತಿದ್ದವು. ಈಗಲೂ ಬಳಕೆಯಾಗುತ್ತಿವೆ. ಆದರೆ ಹಿಂದಿನ ದಿನಮಾನಗಳಿಗಿಂತಲೂ ಈಗ ಕಡಿಮೆಯಾಗಿ ಬಳಕೆಯಾಗುತ್ತಿವೆ. ಅಲ್ಲದೆ ಈ ಪದಗಳ ಬಳಕೆಯಲ್ಲೂ ಅಥವಾ ಅವುಗಳ ವ್ಯಾಪ್ತಿಯಲ್ಲಿ ಗುರುತಿಸಿಕೊಳ್ಳುತ್ತಿರುವ ವಿಚಾರದಲ್ಲೂ ತೃತೀಯಲಿಂಗಿಗಳಲ್ಲೇ ಪರ ಮತ್ತು ವಿರೋಧಿಗಳ ವಾಗ್ವಾದಗಳು ನಡೆಯುತ್ತಿರುವುದು ವಿಶೇಷ. ಉದಾಹರಣೆಗೆ ಮಂಗಳಮುಖಿ, 'ನಾವು ಮಂಗಳಮುಖಿ ಯರಾದರೆ ಅಮಂಗಳಮುಖಿಯರು ಯಾರು?' ಎನ್ನುವ ಪ್ರಶ್ನೆಯನ್ನು ತಮ್ಮ ಮುಂದಿಟ್ಟು ಕೊಂಡು ಆ ಪದದಡಿಯಲ್ಲಿ ಗುರುತಿಸಿಕೊಳ್ಳುವುದಕ್ಕೆ ಇಷ್ಟಪಡದೇ ಇರುವ ತೃತೀಯ ಲಿಂಗಿ ವರ್ಗವಿದೆ. ನಮಗೆ ಹಿಜರಾ : ಹಿಜಡಾ ಪದವೇ ಸೂಕ್ತವೆನ್ನುವ ಮತ್ತೊಂದು ವರ್ಗವಿದೆ. ಹಿಜರಾ ಎನ್ನುವುದಕ್ಕೆ ಪರ್ಶಿಯನ್ ಭಾಷೆಯಲ್ಲಿ 'ವಲಸೆ ಹೋಗುವವರು'

ಎನ್ನುವ ಅರ್ಥವಿದೆ. ಇವರು ಹಿಂದೆ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಿಶೇಷವಾಗಿ ಲೈಂಗಿಕ ಕಾರ್ಯಕರ್ತೆಯರಾಗಿ ವಲಸೆ ಹೋಗುತ್ತಿದ್ದರು. ಆಗ ಸಂಘಜೀವಿಗಳಾಗುತ್ತಿದ್ದರು. ಆ ಕಾರಣಕ್ಕೆ ನಮ್ಮನ್ನು 'ಹಿಜರಾ' ಪರಿಭಾಷೆಯ ವ್ಯಾಪ್ತಿಯಲ್ಲಿ ಗುರುತಿಸಿ ಎನ್ನುವ ಮತ್ತೊಂದು ವರ್ಗವಿದೆ. ಮಂಜಮ್ಮ ಜೋಗತಿ ಮತ್ತು ಗಂಡು ಜೋಗತಿ ಬಳಗ 'ಮಂಗಳಮುಖಿ' ನಮಗೆ ಸೂಕ್ತವಾದ ಪದ. ಇದರಿಂದ ನಮಗೆ ಖುಷಿಯಾಗುತ್ತಿದೆ ಎನ್ನುತ್ತಿದ್ದಾರೆ.

□□

## ೨

# ಆತ್ಮಕಥನದ ಅನಾವರಣ

ಪ್ರಸ್ತುತ ಕೃತಿಯಲ್ಲಿ ಬಿ. ಮಂಜಮ್ಮ ಜೋಗತಿಯವರು ಮೂರು ಹಂತಗಳಲ್ಲಿ ಮಾತನಾಡಿದ ಮಾತುಗಳಿವೆ. ಈ ಹಂತಗಳ ವಿವರ ಇಂತಿದೆ. **ಒಂದು:** ಪಟ್ಟಾಂಗ ಕಾರ್ಯಕ್ರಮಕ್ಕಾಗಿ ಅತಿಥಿಯಾಗಿ ಆಯ್ಕೆಯಾದ ನಂತರ ಕಾರ್ಯಕ್ರಮಕ್ಕೆ ಆಗಮಿಸುವ ಎರಡುದಿನ ಮುಂಚೆ ಫೋನಿನಲ್ಲಿ ಮಾತನಾಡಿದ ಕೆಲವೇ ಕೆಲವು ಪರಿಚಯಾತ್ಮಕ ಮಾತುಗಳು. ಇವುಗಳನ್ನು ಅನೌಪಚಾರಿಕ ಮಾತುಗಳೆಂದು ಕರೆಯಬಹುದು. **ಎರಡು:** ಪಟ್ಟಾಂಗ ಕಾರ್ಯಕ್ರಮದಲ್ಲಿ ಅಭಿವ್ಯಕ್ತಿಗೊಂಡ ಮಾತುಗಳು. ಈ ಮಾತುಗಳು ಎರಡು ವಿಧಾನಗಳಲ್ಲಿ ಅನಾವರಣಗೊಂಡಿವೆ. ಒಂದನೆಯುದೆಂದರೆ ಮಂಜಮ್ಮ ಜೋಗತಿಯವರು ವೇದಿಕೆಯಲ್ಲಿ ತಮ್ಮ ಆತ್ಮಕಥನದ ಸಂಗತಿಗಳನ್ನು ತಮ್ಮಷ್ಟಕ್ಕೆ ತಾವು ಹೇಳಿಕೊಂಡಿರುವುದು. ಪ್ರಸ್ತುತ ಕೃತಿಯಲ್ಲಿ ದಾಖಲಾಗಿರುವ ಹೆಚ್ಚು ಮಾತುಗಳಿವು. ಈ ಕೃತಿಯ ಉದ್ದೇಶವೂ ಇದಾಗಿದೆ. ಎರಡನೆಯದು ಈ ಆತ್ಮಕತನದ ಮಾತುಗಳನ್ನು ಕೇಳಿಸಿಕೊಂಡ ನಂತರ ಅಂದರೆ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು, ಅಧಿಕಾರಿಗಳು, ಹಾವೇರಿ ಜಿಲ್ಲೆಯ ಕಲಾವಿದರು, ಕಲಾಸಕ್ತರು ಹಾಗೂ ಮಾಧ್ಯಮದವರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದ ಮಾತುಗಳು. **ಮೂರು:** ಪುಸ್ತಕ ಬರವಣಿಗೆಯ ಸಂದರ್ಭದಲ್ಲಿ ಒಂದು ಮತ್ತು ಎರಡನೆ ಹಂತದ ಮಾತುಗಳನ್ನು ಕೇಳಿಸಿಕೊಂಡ ನಂತರ ಮೊದಲೆರಡು ಹಂತಗಳಲ್ಲಿ ಅಭಿವ್ಯಕ್ತಗೊಂಡ ಮಾತುಗಳ ವಿಸ್ತರಣೆಗಾಗಿ ಮಾತನಾಡಿದ ಮಾತುಗಳಿವೆ. ಇಲ್ಲಿಯು ಸಹ ಎರಡು ವಿಧಾನದ ಮಾತುಕತೆ ನಡೆದಿದೆ. ಒಂದನೆಯದೆಂದರೆ ಮಂಜಮ್ಮ ಪಟ್ಟಾಂಗ ಕಾರ್ಯಕ್ರಮದಲ್ಲಿ ತಮ್ಮ ಅನುಭವಗಳನ್ನು ಅನಾವರಣ ಮಾಡಿದ ಕೆಲವು ಮಾತುಗಳ ವಿಸ್ತರಣೆಗಾಗಿ ಮತ್ತು ಖಚಿತತೆಗಾಗಿ ಸಂದರ್ಶನ ಮಾಡಿದ ಮಾತುಗಳಿವೆ. ಎರಡನೆಯದು ನಿರ್ದಿಷ್ಟವಾದ ಪ್ರಶ್ನೆಗಳಿಗೆ ಉತ್ತರಗಳನ್ನು ಹೇಳಿರುವುದು. ಈ ಮೂರು ಹಂತಗಳಲ್ಲಿ ಬಿಂಬಿತವಾದ ಮಾತುಗಳು ಸಹ ಭಿನ್ನವಾಗಿವೆ. ಅಂದರೆ ಕಾರ್ಯಕ್ರಮಕ್ಕೆ ಆಗಮಿಸುವ ಮುಂಚೆ ಮಾತನಾಡಿದ ಮಾತುಗಳು ತನ್ನನ್ನು ತಾನು ಪ್ರಾಥಮಿಕವಾಗಿ ಪರಿಚಯ ಮಾಡಿಕೊಳ್ಳುವುದಕ್ಕೆ ಬೇಕಾದ ಮಾತುಗಳಿದ್ದವು. ವೇದಿಕೆಯ ಮಾತುಗಳಲ್ಲಿ ಕೆಲವು ಗಂಭೀರ, ಆತಂಕ ಹಾಗೂ ಭಾವನಾತ್ಮಕತೆಯಿಂದ ಕೂಡಿದ್ದವು.

ಮೂರನೆ ಹಂತದಲ್ಲಿ ಮಾತನಾಡುವಾಗ ವೇದಿಕೆಯಲ್ಲಿದ್ದ ಗಂಭೀರತೆ, ಭಾವನಾತ್ಮಕತೆ ಇತ್ತಾದರೂ ವೇದಿಕೆಯಲ್ಲಿದ್ದೇನೆ ಎನ್ನುವ ಮನಸ್ಥಿತಿ ಇರಲಿಲ್ಲ. ಕ್ಯಾಮರಾ, ವಿಡಿಯೋ ಮುಂತಾದ ದಾಖಲೀಕರಣ ಮಾಡುವುದಕ್ಕೆ ಬಳಸುವ ಯಾಂತ್ರಿಕ ಪರಕರಗಳಿವೆ ಎನ್ನುವ ಪ್ರಜ್ಞೆ ಮತ್ತು ಭಯವಿರಲಿಲ್ಲ. ಹಾಗಾಗಿಯೇ ತನ್ನ ಅಂತರಂಗದಲ್ಲಿ ಅಡಕವಾಗಿದ್ದ ಕೆಲವು ಮಾತುಗಳನ್ನು ವಿಶೇಷವಾಗಿ ಪಟ್ಟಾಂಗ ಕಾರ್ಯಕ್ರಮದಲ್ಲಿ ಹೇಳಿಕೊಳ್ಳಲಾಗದೆ ಇದ್ದ ಕೆಲವು ಅನುಭವಗಳನ್ನು ಈ ಸಂದರ್ಭದಲ್ಲಿ ಮುಕ್ತವಾಗಿ ಹೇಳಿಕೊಂಡರು. ಆ ಎಲ್ಲಾ ಮಾತುಗಳನ್ನು ಜೀವನದ ಘಟನೆಗಳ ವಿಶ್ಲೇಷಣೆಯ ಸಂದರ್ಭಕ್ಕೆ ಅನುಗುಣವಾಗಿ ಸಮೀಕರಣಗೊಳಿಸಿ ನಿರೂಪಿಸಲಾಗಿದೆ. ಜೊತೆಗೆ ಮಂಜಮ್ಮ ಜೋಗತಿಯ ಕಲೆ ಮತ್ತು ಜೀವನವನ್ನು ತಾತ್ವಿಕವಾಗಿ ವಿಶ್ಲೇಷಣೆ ಮಾಡುವ ಸಂದರ್ಭದಲ್ಲಿ ಈ ಮಾತುಗಳ ಜೊತೆಗೆ ಪಟ್ಟಾಂಗ ಕಾರ್ಯಕ್ರಮದಲ್ಲಿ ಚರ್ಚೆ ಮಾಡಿದ ಕೆಲವು ಮಾತುಗಳನ್ನು, ಮಾನ್ಯ ಕುಲಪತಿಯವರ ಅಧ್ಯಕ್ಷೀಯ ಭಾಷಣದ ಕೆಲವು ಮಾತುಗಳನ್ನು, ವಿವಿಧ ಜೋಗತಿಯರೊಂದಿಗೆ ಮಾತನಾಡಿದ ಕೆಲವು ಮಾತುಗಳನ್ನು ಬಳಸಿಕೊಂಡು ಸೈದ್ಧಾಂತಿಕವಾಗಿ ವಿಶ್ಲೇಷಣೆ ಮಾಡಲಾಗಿದೆ. ಈ ವೈಧಾನಿಕತೆಗಾಗಿ ಆಯ್ಕೆ ಮಾಡಿಕೊಂಡ ಜೋಗತಿಯರಲ್ಲಿ ಇವರ ತಂಡದಲ್ಲಿರುವ ಕೆಲವು ಜೋಗತಿಯರು, ಇವರಿಂದ ತರಬೇತಿ ಪಡೆದ ಕೆಲವು ಜೋಗತಿಯರು ಹಾಗೂ ಜೋಗತಿಯರಾಗದೇ ಇರುವ ತೃತೀಯ ಲಿಂಗದವರು ಅಥವಾ ಲಿಂಗಾಂತರಿಗಳು ಸೇರಿದ್ದಾರೆ. ಜೊತೆಗೆ ಈಗಾಗಲೇ ಇವರ ಬಗ್ಗೆ ಪ್ರಕಟವಾಗಿರುವ ಕೆಲವು ಆಕರಗಳನ್ನೂ ಬಳಸಿಕೊಳ್ಳಲಾಗಿದೆ.

## ನಮ್ಮವ್ವ ಇಪ್ಪತ್ತೊಂದು ಮಕ್ಕಳ್ನ ಹೆತ್ತಾಳ್ರಿ

ಮೊದಲನೆಯದಾಗಿ ನನ್ನ ತಂದೆ–ತಾಯಿಗೆ ನಮಸ್ಕಾರಗಳು. ನಂತರ ನನ್ನ ಗುರು ಕಾಳವ್ವ ಜೋಗತಿಗೆ ನಮಸ್ಕಾರಗಳು. ಈ ವೇದಿಕೆ ಮೇಲೆ ಆಸೀನವಾಗಿರುವ ಹಿರಿಯರೆ, ವೇದಿಕೆಯ ಮುಂದೆ ಕುಳಿತಿರುವ ಅಧಿಕಾರಿಗಳೆ, ವಿದ್ಯಾರ್ಥಿ, ವಿದ್ಯಾರ್ಥಿನಿಯರೆ ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲೂಕು ಡಣಾಯಕನಕೆರೆ ಪಂಚಾಯ್ತಿಗೆ ಸೇರಿದ, ಗೊಲ್ಲರಹಳ್ಳಿ ಗ್ರಾಮದ ಬೆಲ್ಲಂಕೊಂಡಿ ಮಂಜಮ್ಮ ಜೋಗತಿಯ ನಮಸ್ಕಾರಗಳು. ಈ ವಿಶ್ವವಿದ್ಯಾಲಯ ಮಾಡುತ್ತಿರುವ ಪಟ್ಟಾಂಗ ಕಾರ್ಯಕ್ರಮದ ಉದ್ದೇಶ ಬಹಳ ಚೆನ್ನಾಗಿದೆ. ಈ ವೇದಿಕೆಗೆ ಬರುವ ಮುಂಚೆ ನೀವು ನಿಮ್ಮ ಕಲೆ ಮತ್ತು ಬದುಕಿನ ಅನುಭವವಗಳನ್ನು ಹೇಳಿಕೊಳ್ಳಬೇಕೆಂದು ಮಾನ್ಯ ಕುಲಪತಿಯವರು ತಿಳಿಸಿದರು. ನಮ್ಮ ನೋವು, ನಲಿವು ಮತ್ತು ಸಾಧನೆಗಳನ್ನು ಹೇಳಿಕೊಳ್ಳುವುದಕ್ಕಾಗಿಯೇ ವಿಶ್ವವಿದ್ಯಾಲಯದಲ್ಲಿ ಒಂದು ವೇದಿಕೆ ಐತೆಲ್ಲ ಅಂತ ಖುಷಿಯಾಯ್ತು. ಮುಕ್ತವಾಗಿ ಹೇಳಿಕೊಳ್ಳಬೇಕೆಂಬ ಹಂಬಲದಿಂದ ನನ್ನ ಜೀವನದ ಕೆಲವು ಮಾತುಗಳನ್ನು ಹೇಳುತ್ತಿರುವೆ.

ನನ್ನ ಸ್ವಂತ ಊರು ಬಳ್ಳಾರಿ ಜಿಲ್ಲೆ, ಬಳ್ಳಾರಿ ತಾಲೂಕು ಕಲ್ಲುಕಂಬ ಗ್ರಾಮ. ನಾನು ಆ ಊರಲ್ಲಿ ಹುಟ್ಟಿಲ್ಲ, ಬೆಳೆದಿಲ್ಲ. ಅಲ್ಲಿ ಆಗಾಗ ಒಂದಿಷ್ಟು ದಿನಗಳನ್ನು ಕಾಲ

ಕಳೆದ ನೆನಪುಗಳಿವೆಯಷ್ಟೆ. ಜೋಗತಿ ಆಗುವುದಕ್ಕಿಂತ ಸ್ವಲ್ಪ ದಿನಗಳ ಮುಂಚೆ ಆ ಊರಲ್ಲಿದ್ದ ದಿನಗಳೇ ಹೆಚ್ಚು ನೆನಪಲ್ಲಿವೆ. ಆವಾಗ ಅಣ್ಣ ಮತ್ತು ಮಾವನಿಂದ ತಿಂದ ಹೊಡೆತಗಳನ್ನಂತೂ ನಾನು ಯಾವ ಕಾಲಕ್ಕೂ ಮರೆಯಂಗಿಲ್ಲ. ಆದ್ರೆ ಕಲ್ಲುಕಂಬ ನಮ್ಮ ಅಜ್ಜ, ಅಪ್ಪನ ಊರು. ಈಗಲೂ ನಮ್ಮ ವಂಶಸ್ಥರು ಅಲ್ಲಿದ್ದಾರೆ. ವಂಶಸ್ಥರ ಆಸ್ತಿ–ಪಾಸ್ತಿಗಳು ಅಲ್ಲಿವೆ. ನಾನೂ ಆಗಾಗ ಹೋಗಿಬರುತ್ತೇನೆ. ಆದ್ರೂ ಬಹಳ ಕಡಿಮೆ. ನಾನು ಅಥವಾ ನನ್ನಂತಹ ಮಂಗಳಮುಖಿಯರು, ಗಂಡುಜೋಗತಿಯರು ಎಂದರೆ ಅಲೆಮಾರಿಗಳು. ನಮಗೆ ಒಂದು ನೆಲೆ ಇಲ್ಲ. ನನಗೂ ಇಪ್ಪತ್ತು ವರ್ಷದ ಕೆಳಗೆ ಯಾವ ಊರು ಇರಲಿಲ್ಲ. ನನಗ್ಯಾಗೆ ನಮ್ಮಪ್ಪನಿಗೂ ಯಾವ ಊರು ಅಂತ ಇರಲಿಲ್ಲ. ಅವರು ಒಂದು ರೀತಿಯಲ್ಲಿ ಅಲೆಮಾರಿಗಳಾಗಿದ್ರು. ಹಂಗಾಗಿ ಅಜ್ಜನ ಊರನ್ನೇ ನನ್ನೂರೆಂದು ಹೇಳಿಕೊಂತ ಬಂದೀನಿ. ಗೊಲ್ಲರಳ್ಳಿಯಲ್ಲಿ ಇವತ್ತು ಸರಕಾರದವರು ಕಟ್ಟಿಸಿಕೊಟ್ಟ ಮನೆ ಇದೆ. ಮರಿಯಮ್ಮನ ಹಳ್ಳಿಯಲ್ಲಿ ಕಾಳವ್ವ ಜೋಗತಿಯವರ ಮನೆ ಇದೆ. ಅವರು ತೀರಿಕೊಂಡ ನಂತರ ಆ ಮನೆಯಲ್ಲಿ ನಾನು ಮತ್ತು ನನ್ನ ಜೊತೆಗಿರುವ ಜೋಗತಿಯರು ವಾಸವಾಗಿದ್ದೇವೆ. ಈಗ ಮರಿಯಮ್ಮನಹಳ್ಳಿ ಮತ್ತು ಗೊಲ್ಲರಹಳ್ಳಿಯಲ್ಲಿ ಇರ್ತೀನಿ.

ನನ್ನ ಜನ್ಮನಾಮ ಮಂಜುನಾಥ. ಶಾಲಾ ದಾಖಲಾತಿಗಳಲ್ಲಿ ಕುಮಾರ ಬಿ. ಮಂಜುನಾಥ ಶೆಟ್ಟಿ ಅಂತ ಇದೆ. ಮಂಜುನಾಥ ಅನ್ನುವ ಹೆಸರು ನನಗೆ ಕೇವಲ ಹದಿನೆಂಟು ವರ್ಷಗಳಷ್ಟೆ ಬಳಕೆಯಾಯ್ತು. ಆ ನಂತರ ಮಂಜಮ್ಮನೆಂಬ ಹೆಸರು ಬಳಕೆಗೆ ಬಂತು. ಕಾಲ ಅನೇಕ ಬದಲಾವಣೆಗಳನ್ನು ತರುತ್ತದೆಯಲ್ಲವೆ? ಹಂಗಾಗಿ ಕಾಲದ ಹಾದಿಯಲ್ಲಿ ಮಂಜಮ್ಮನಾಗಿಬಿಟ್ಟೆ. ನಾನೇ ಈ ರೀತಿ ಆಗಿಬಿಟ್ಟೆ ಅನ್ನುವುದಕ್ಕಿಂತ ನನ್ನ ದೇಹ ಮತ್ತು ಮನಸ್ಸು ಈ ರೀತಿ ಮಾಡಿತು. ಅದನ್ನ ತಡಿಯೋಕೆ ಯಾರಿಂದಲೂ ಸಾಧ್ಯವಾಗಲಿಲ್ಲ. ಯಾರ್‍ಯಾಕೇ? ನನ್ನಿಂದಲೂ ಆಗಲಿಲ್ಲ. ಇದೊಂದು ದೈಹಿಕ ಮತ್ತು ಮಾನಸಿಕ ರೋಗ. ಈ ರೋಗಕ್ಕೆ ಬಲಿಯಾಗಿದ್ದೇನೆ. ಇದೆಲ್ಲ ದೈವಿ ಶಕ್ತಿಯಿಂದಾಗಿದೆ ಎನ್ನುವುದು ನನ್ನ ಬಲವಾದ ನಂಬಿಕೆ. ನಮ್ಮ ಮನೆಯವರೂ ಸಹ ಇದನ್ನೇ ನಂಬಿದ್ದಾರೆ. ನಾನು ಮಾತ್ರವಲ್ಲ. ನನ್ನಂತೆ ಸಾವಿರಾರು ಜನರು ಈ ಖಾಯಿಲೆಗೆ ಒಳಗಾಗಿದ್ದಾರೆ ಮತ್ತು ಒಳಗಾಗುತ್ತಲೇ ಇರುತ್ತಾರೆ. ಕರ್ನಾಟಕದಲ್ಲಿ ಸುಮಾರು ಐದು ಸಾವಿರಕ್ಕೂ ಹೆಚ್ಚು ಜನ ಮಂಗಳಮುಖಿಯರಿದ್ದಾರೆ ಅನ್ನುವುದನ್ನು ಪತ್ರಿಕೆಯಲ್ಲಿ ಓದಿದ್ದೇನೆ. ಇದೊಂದು ರೋಗ ಅನ್ನುವ ಪ್ರಜ್ಞೆ ಜನರಲ್ಲಿ ಇಲ್ಲ. ವೈದ್ಯರು ಇದೊಂದು ಅಂಗವಿಕಲತೆ ಎನ್ನುತ್ತಾರೆ. ಕುರುಡನಾದ್ರೆ, ಕುಂಟನಾದ್ರೆ ಜನರಿಗೆ ಗೊತ್ತಾಗತ್ತೈತಿ. ಈ ಖಾಯಿಲೆ ಹಂಗ ಕಾಣುವ ಖಾಯಿಲೆ ಅಲ್ಲ. ಕನಿಕರ ಹುಟ್ಟಿಸುವ ಅಂಗವಿಕಲತೆಯಂತೂ ಅಲ್ಲವೇ ಅಲ್ಲ. ಹಾಗಾಗಿಯೇ ನಮ್ಮ ಬಗ್ಗೆ ಜನರಲ್ಲಿ ಅಂಗವಿಕಲರು ಅನ್ನುವ ಭಾವನೆ ಇಲ್ಲ.

ಅಪ್ಪ ಶ್ರೀ ಹನುಮಂತಯ್ಯ ಶೆಟ್ಟಿ, ಅವ್ವ ಶ್ರೀಮತಿ ಜಯಲಕ್ಷ್ಮೀ. ನಮ್ಮವ್ವ ಬಾರಿ ಗಟ್ಟಿ. ಆಕಿ ಇಪ್ಪತ್ತೊಂದು ಮಕ್ಕಳ್ನ ಹೆತ್ತಾಳ್ರಿ. ಎರಡು ಬಾರಿಯಂತೂ ಒಮ್ಮೆಗೆ ಮೂರು ಮಕ್ಕಳ್ನ ಹೆತ್ತಾಳೆ. ಒಂದು ಸಾರಿಯಂತೂ ನಾನೇ ನೋಡೀನಿ. ಆ ಮೂರು ಕೂಸುಗಳಿಗೆ ಡಾಕ್ಟರ್ ಬ್ರಹ್ಮ, ವಿಷ್ಣು, ಮಹೇಶ್ವರ ಅಂತ ಹೆಸರಿಟ್ಟಿದ್ದರು. ಹೆರಿಗೆ ಆದ ಮೇಲೆ ಡಾಕ್ಟರು ನಿಮ್ಮಪ್ಪನ ಕರಕೊಂಡು ಬಾ ಅಂತ ನಮ್ಮಣ್ಣನನ್ನು ಅಪ್ಪ ಕೆಲಸ ಮಾಡುತ್ತಿದ್ದ ಫ್ಯಾಕ್ಟರಿಗೆ ಕಳಿಸಿದ್ರು. ಇದನ್ನ ಕೇಳಿದ ಫ್ಯಾಕ್ಟರಿ ಜನರು ಯಾರಾದ್ರೂ ಒಂದೇಟಿಗೆ ಮೂರು ಹಡಿತಾರೇನೋ? ಅಂತ ನಕ್ಕಿದ್ರಂತೆ. ನಮ್ಮವ್ವನಿಗೆ ಮೂರು ಪಾಪು ಆಗಿದ್ದು ರೇಡಿಯೋದಲ್ಲಿ, ಪೇಪರಿನಲ್ಲೂ ಸುದ್ದಿ ಬಂತು. ಇದನ್ನ ನೋಡಿದ ಸರಕಾರದವರು ಒಂದು ತೊಟ್ಟಿಲನ್ನು ಫ್ರೀಯಾಗಿ ಕೊಟ್ಟಿದ್ರು. ಅವರು ಕೊಟ್ಟಾಗ ಅವ್ವ ಆ ತೊಟ್ಟಿಲನ್ನು ನೋಡಿ ಬಾಳ ಖುಷಿಯಾಗಿದ್ದಳು. ಸ್ವಲ್ಪ ದಿನದ ಮ್ಯಾಗ ಅಂದರೆ ಎರಡನೆ ಕೂಸು ಸತ್ತಾಗ ಸರಕಾರ ಒಂದೇ ತೊಟ್ಟಿಲು ಕೊಟ್ಟಿತು. ಹಂಗಾಗಿಯೇ ನನಗೆ ಒಂದೇ ಮಗು ಉಳಿದುಕೊಂಡಿತು ಅಂತ ಅವ್ವ ಬೇಜಾರಾಗಿದ್ದಳು. ಅಲ್ಲದೆ ಆಗಾಗ ಸರಕಾರದವರನ್ನ ಬೈಯ್ಯುತ್ತಿದ್ದಳು. ಈ ಮೂರು ಕೂಸುಗಳು ಹುಟ್ಟಿದ ಸುದ್ದಿ ಕೇಳಿ ಅಪ್ಪನ ಜೊತೆಗೆ ಕೆಲಸ ಮಾಡುತ್ತಿದ್ದವರೆಲ್ಲ ಒಟ್ಟಿಗೆ ಸೇರಿ ಅಡುಗೆ ಮಾಡ್ಸಿ, ಬುತ್ತಿ ಕಟ್ಟಿಕೊಟ್ಟು ಕಳಿಸಿದ್ರು. ಆ ಮೂರು ಮಗುಗಳಲ್ಲಿ ಒಂದು ಮಗು ಒಂದು ತಿಂಗಳಾಗ, ಇನ್ನೊಂದು ಮಗು ಎರಡು ತಿಂಗಳಾಗ ತೀರಿಕೊಂಡವು. ಒಬ್ಬನು ಇಪ್ಪತ್ತೊಂದು ವರ್ಷದವನಾಗಿದ್ದಾಗ ಕ್ಯಾನ್ಸರ್ ಆಗಿ ತೀರಿಕೊಂಡ. ಹೆರಿಗೆ ಬಗ್ಗೆ, ಮಕ್ಕಳ ಆರೈಕೆ, ತಾಯಿಯಂದಿರ ಶುಚಿತ್ವದ ಬಗ್ಗೆ ಜನಜಾಗೃತಿ ಕಾರ್ಯಕ್ರಮ ಕೊಡ್ತಿವಿಯಲ್ಲ ಆಗಂತೂ ಅವ್ವ ತಪ್ಪದೆ ನೆನಪಿಗೆ ಬರ್ತಾಳೆ. ವರ್ಷಕ್ಕೊಂದು, ಎರಡೊರ್ಷಕ್ಕೊಂದು ಅನ್ನುವಂಗೆ ಕನಿಷ್ಠ ಇಪ್ಪತ್ತರಿಂದ ಇಪ್ಪತ್ತೆರಡು ವರ್ಷ ಹೆರುವ ಕೆಲಸ ಮಾಡ್ಯಾಳ್ರಿ, ಅದೆಂತಾ ಜೀವನೋ? ಆಕೀದು! ನತಾದೃಷ್ಟ ಅಂದ್ರೆ ಆ ಇಪ್ಪತ್ತೊಂದು ಮಕ್ಕಳಲ್ಲಿ ಹದಿನೇಳು ಅವರ ಕಣ್ಮುಂದೆ ತೀರಿಕೊಂಡವು. ಅದರಲ್ಲಿ ಎಳೆಮಕ್ಕಳೆ ಹೆಚ್ಚು. ಮಕ್ಕಳು ಸತ್ತಾಗಂತು ಅವ್ವ ಬಾರಿ ಸಂಕಟಪಡುತ್ತಿದ್ದಳು. ಈಗ ಅಣ್ಣ ನಾನು ಮತ್ತು ಇಬ್ಬರು ತಂಗಿಯರು ಮಾತ್ರ ಉಳಿದಿದ್ದೇವೆ.

ನಮ್ಮಣ್ಣನ ಹೆಸರು ಶ್ರೀ ವೀರಾಂಜನೇಯ ಶೆಟ್ಟಿ. ಆತ ದಾವಣಗೆರೆಯಲ್ಲಿ ಗ್ಯಾಸ್ ಸ್ಟವ್, ಗೀಜರ್ ರಿಪೇರಿ ಮಾಡುವ ಕೆಲಸ ಮಾಡುತ್ತಿದ್ದಾನೆ. ಆತ ನನ್ನ ಮತ್ತು ತಂಗೆರ್ನ ಸಾಕ್ಯಾನ. ಅವ್ವನಿಗೆ ಆರೋಗ್ಯ ಸರಿಯಿಲ್ಲದಿದ್ದಾಗ, ಹೆರಿಗೆ ಆದಾಗ ಅವ್ವ ಎಲ್ಲಿಗಾದ್ರು ಹೋದಾಗ ಅಡುಗೆ ಮಾಡಿ ನಮಗೆಲ್ಲ ಊಟ ಮಾಡಿಸುತ್ತಿದ್ದ. ಅವ್ವ ಬೆನ್ನುತಟ್ಟಿ ಮಲಗಿಸಿದಂಗ ನಮ್ಮನ್ನ ತಟ್ಟಿ ತಟ್ಟಿ ಮಲಗಿಸುತ್ತಿದ್ದ. ಆ ಸಣ್ಣ ವಯಸ್ಸಿನಲ್ಲಿ ಅವ್ವಗ ಬಾಳ ಆಸರೆಯಾಗಿದ್ದ. ಅದಕ್ಕ ಅವ್ವ ಆತನ ಮ್ಯಾಲೆ ಬಾಳ ಜೀವ ಮಾಡುತ್ತಿದ್ಲು.

ಅವ್ವ ತೀರಿಕೊಂಡು ಎರಡು ವರ್ಷ ಆಯಿತಷ್ಟೆ. ಸಾಯುವಾಗ ನನ್ನ ಹತ್ತಿರನೇ ಇದ್ಲು. ಕೊನೆಯ ಹತ್ತು ವರ್ಷವಂತೂ ನನ್ನನ್ನು ಬಾಳ ಇಷ್ಟಪಟ್ಟಳು. ಅದ್ಯಾಕೊ ಗೊತ್ತಿಲ್ಲ ಜೋಗತಿ ಆದಾಗ ಮರುಕಪಟ್ಟಂಗೆ ಕೊನೆದಿನಗಳಲ್ಲಿ ಮರುಕಪಡಲಿಲ್ಲ. ಯಾಕೆ? ಅಂತ ಕೇಳಿದ್ರೆ ಜೋಗತಿಯಾಗಿ ಸಾಧನೆ ಮಾಡಿಯಲ್ಲ, ಅಷ್ಟು ಸಾಕು. ಆ ದೇವತೆ ನಿನ್ನನ್ನು ಚೆನ್ನಾಗಿಟ್ಟಳಲ್ಲ. ಅದಕ್ಕ ನಾನು ನೆಮ್ಮದಿಯಾಗಿರುವೆ ಅಂತಿದ್ಲು.

ಅಪ್ಪ ಕಂಪ್ಲಿ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿರುವಾಗ ಕಂಪ್ಲಿಯ ತೆಗ್ಗಿನಮಠ ಎಂಬ ಓಣಿಯಲ್ಲಿ ನಾನು ಹುಟ್ಟಿನಂತೆ. ನಾನು ಎಷ್ಟನೆಯವನು ಅಂತ ನನಗೆ ಗೊತ್ತಿಲ್ಲ. ಅವ್ವನನ್ನು ಕೇಳಿ ತಿಳಿದುಕೊಳ್ಳುವ ಗೋಜಿಗೆ ಹೋಗಿಲ್ಲ. ನಾನು ದೊಡ್ಡವ ನಾಗುವ ತನಕ ಐದು ಮಕ್ಕಳು ಇದ್ವಿ. ಆವಾಗ್ಲೆ ಹೇಳಿದ್ನಲ್ಲ ಒಬ್ಬ ತಮ್ಮ ಕ್ಯಾನ್ಸರ್ ಬಂದು ಸತ್ತ ಅಂತ. ನಾನು ಐದು ವರ್ಷದವನಿದ್ದಾಗ ಅಪ್ಪ ಕಂಪ್ಲಿಯ ಫ್ಯಾಕ್ಟರಿ ಕೆಲಸಬಿಟ್ಟು ಹರಿಹರದ ಬಿರ್ಲಾ ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಸೇರಿಕೊಂಡ್ರು. ಫ್ಯಾಕ್ಟರಿ ಇರುವ ಹೊಳೆದಂಡ್ಯಾಗ ನಮ್ಮ ಮನೆ ಇತ್ತು. ಅಲ್ಲಿ ಓಣ್ಯಾಗಿನ ಹುಡುಗರು ಮತ್ತು ನಾವು ಮನೆ ಕಟ್ಟಿ ಆಟ ಆಡುತ್ತಿದ್ವಿ. ಆ ಮನೆ ಆಟದಲ್ಲೂ ನಾನು ಹುಡುಗಿ ಕೆಲಸ ಮಾಡುತ್ತಿದ್ದೆ, ಅಂತ ಜೋಗತಿಯಾದ ಮೇಲೆ ಅವ್ವ ಆಗಾಗ ಹೇಳುತ್ತಿದ್ದರು.

### ಕೃಷ್ಣನಂತಾಗದೆ ಬೃಹನ್ನಳೆಯಂತಾದೆ !

ಹರಿಹರದಲ್ಲಿ ನನ್ನನ್ನು ಶಾಲೆಗೆ ಸೇರಿಸಿದ್ರು. ನಾನು ಕಪ್ಪಗೆ ಇರುವುದರಿಂದ ನನ್ನನ್ನು ಅವ್ವ ಪ್ರೀತಿಯಿಂದ ಕೃಷ್ಣ ಅಂತ ಕರೆತಿದ್ರು. ಎಷ್ಟೋ ಸಲ ಕೃಷ್ಣನ ಡ್ರೆಸ್ ಹಾಕಿಸಿ ಮುದ್ದಾಡಿದ್ರು. ಆ ಮುದ್ದಾಟ ಈಗಲೂ ನೆನಪಿದೆ. ಅದನ್ನ ಜೀವನಪೂರ್ತಿ ಮರೆಯಂಗಿಲ್ಲ. ಒಮ್ಮೆ ಫೋಟೊ ತೆಗೆಸಿದ್ರು ಆ ಫೋಟೊವನ್ನು ಈಗಲೂ ಜೋಪಾನವಾಗಿ ಕಾಪಾಡಿಕೊಂಡು ಬಂದಿರುವೆ. ಆದ್ರೆ ನನ್ನ ಜೀವನ ಕೃಷ್ಣನಂಗೆ ಆಗದೆ ಬೃಹನ್ನಳೆಯಂತಾಯ್ತು. ಇದನ್ನ ಕಂಡ ಅವ್ವ ಎಷ್ಟು ನೊಂದುಕೊಂಡಿರಬೇಕೋ? ಆ ನೋವು ಹೇಳಿಕೊಂಡಿದ್ದನ್ನು ಕೇಳಿರುವೆ. ಅದಕ್ಕ ಮರಗಿರುವೆ. ಹೇಳಿಕೊಳ್ಳಲಾರದೆ ತನ್ನ ಒಡಲೊಳಗೆ ಇಟ್ಟುಕೊಂಡು ಅನುಭವಿಸಿದ ನೋವನ್ನು ಕೇಳುವುದಕ್ಕೆ ಆಗಿಲ್ಲ. ಇನ್ನೂ ಅನುಭವಿಸುವ ಮಾತಂತು ಮತ್ತಷ್ಟು ದೂರ. ಶಾಲೆಗೆ ಸೇರಿಸುವ ದಿನ ಕೃಷ್ಣನ ವೇಶ ಹಾಕಿ, ಜುಟ್ಟು ಕಟ್ಟಿ, ಕೊರಳಿಗೆ ಮಂಡಕ್ಕಿ ಸರ, ಕಲ್ಲಂಗಡಿ ಬೀಜ ಮತ್ತು ಕರಬೂಜ ಹಣ್ಣಿನ ಬೀಜದ ಮಾಲೆ ಹಾಕಿ ಶಾಲೆಯಲ್ಲಿ ಪೂಜೆ ಮಾಡಿದ್ರು. ತೆಂಗಿನಕಾಯಿ ಕೊಬ್ರಿ, ಬೆಲ್ಲ, ಮಂಡಕ್ಕಿ ಮಿಶ್ರಣಮಾಡಿ ಮಕ್ಕಳಿಗೆಲ್ಲ ಹಂಚಿದ್ರು. ಅವತ್ತು ಶಾಲೆಗೆ ಸೇರುವುದು ಅಂದ್ರೆ ಸಂಭ್ರಮ. ಈಗ ಅಂತಹ ಸಂಪ್ರದಾಯವಿಲ್ಲ. ಸಂಭ್ರಮನು ಇಲ್ಲ, ಆ ಖುಷಿನೂ ಇಲ್ಲ.

ಅಪ್ಪ ಫ್ಯಾಕ್ಟರಿಯಿಂದ ಕಬ್ಬಿನ ಹಾಲು, ಸಕ್ಕರೆ ತರ್ತಿದ್ರು. ನಾನಂತೂ ಸಾಕಷ್ಟು ಹಾಲು ಕುಡಿತ್ತಿದ್ದೆ. ಅಪ್ಪನಿಗೆ ಬೆಳಗ್ಗೆನೆ ಹೊಟ್ಟೆತುಂಬಾ ಊಟ ಬೇಕಾಗಿತ್ತು. ಬೆಳಗಿನ

ಶಿಫ್ಟ್ ಕೆಲಸಕ್ಕೆ ಹೋದ್ರೆ ನಾನು ಬುತ್ತಿ ತಗೊಂಡೋಗಿ ಕೊಡುತ್ತಿದ್ದೆ. ಅಪ್ಪನಿಗೆ ಅದು ಬಾಳ ಇಷ್ಟ ಆಗತಿತ್ತು. ಸಣ್ಣ ವಯಸ್ಸಿಗೆ ಇಷ್ಟು ಕೆಲ್ಸ ಮಾಡ್ತಿಯಲ್ಲ ಅಂತ ನನ್ನನ್ನು ಮೇಲಕ್ಕೆತ್ತಿಕೊಂಡು ಮುದ್ದಾಡೋರು. ಫ್ಯಾಕ್ಟರಿ ಒಳಗಡೆ ಕರಕ್ಕೊಂಡೋಗಿ ಕಬ್ಬಿನಹಾಲು ಕುಡಿಸುತ್ತಿದ್ರು. ನನ್ನ ಮಗ ಬಾಳ ಜಾಣ ಅದಾನ. ಅವ ಫ್ಯಾಕ್ಟರಿ ಮ್ಯಾನಜೆರ್ ಆಗೋವಂಗೆ ಓದುತ್ತಾನೆ ಅಂತಿದ್ರು. ಅಪ್ಪನಿಗೆ ಪ್ರೀತಿಸುವ ಗುಣ ಇದ್ದಂಗೆ ಅಷ್ಟೇ ಕೋಪ ಇತ್ತು. ಅವ್ವನ ಜೊತೆ ಬಾರಿ ಗುದ್ದಾಡೋರು. ಅಪ್ಪ ಕಂಪ್ಲಿ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿರುವಾಗ ಶ್ರೀಮತಿ ಶಿವಗಂಗಮ್ಮನ ಜೊತೆ ಅನೈತಿಕ ಸಂಬಂಧ ಇಟ್ಕೊಂಡಿದ್ರಂತೆ. ಅದಕ್ಕಾಗಿ ಅಮ್ಮ ಆಗಾಗ ಜಗಳ ಮಾಡುತ್ತಿದ್ಲು. ಅಪ್ಪ ತಡವಾಗಿ ಮನೆಗೆ ಬಂದ್ರೆ ಸಾಕು. ನೀನು ಆಕಿ ಹತ್ತಿರ ಹೋಗಿ ಬಂದೀದಿ ಅಂತಿದ್ಲು. ಅಪ್ಪ ಇಲ್ಲ ಆಕಿತಾಕ ಹೋಗಿಲ್ಲ, ಓಟಿ ಮಾಡಿ ಬಂದೀನಿ ಅಂದ್ರೂ ಕೇಳ್ತಾನೆ ಇರಲಿಲ್ಲ. ಅವ್ವ ವಾದಿಸಿ ವಾದಿಸಿ ಅಪ್ಪನಿಗೆ ಕೋಪ ತರಿಸಿ ಹೊಡೆಸಿಕೊಳ್ಳುತ್ತಿದ್ಲು. ಅಪ್ಪನಿಗೆ ಸಿಟ್ಟು ಬಂದಾಗ ಅವ್ವನನ್ನು ಪಾತ್ರೆ ತಗೊಂಡು ಹೊಡೆತ್ತಿದ್ರು. ನಾವೆಲ್ಲ ಅಪ್ಪನ ಹಿಡಕೊಂಡ್ರ ಅವ್ವನ ಹೊಡೆಯುವುದನ್ನು ಬಿಡುತ್ತಿರಲಿಲ್ಲ. ತಾನು ನಿಂತ ಜಾಗದಿಂದಲೇ ಅವ್ವನ ಮೈಮೇಲೆ ಬೀಳುವಂಗ ಪಾತ್ರೆ ಎಸೆತ್ತಿದ್ರು. ಆಗ ನಾವು ಜೋರಾಗಿ ಅಳುತ್ತಿದ್ವಿ. ಅಕಸ್ಮಾತ್ ನಾವು ಅಡ್ಡ ಹೋದ್ರೆ ನಮ್ಮನ್ನ ಮ್ಯಾಕೆತ್ತಿ ಒಗೆದು ಬಿಡುತ್ತಿದ್ರು.

ಆ ಶಿವಗಂಗಮ್ಮನಿಗೆ ನಾನಂದರೆ ಬಾಳ ಜೀವ. ಈಗ ಅವರು ದಾವಣಗೆರೆ ಯಲ್ಲಿದ್ದಾರೆ. ಪಾಪ ಅವರಿಗೆ ಮಕ್ಕಳಾಗಲಿಲ್ಲ. ಹಂಗಾಗಿ ನಮ್ಮ ಮ್ಯಾಲೆ ಬಿದ್ದು ಸಾಯ್ತಿದ್ಲು. ಅಪ್ಪ ಕೊಟ್ಟ ರೊಕ್ಕ ಹಾಳು ಮಾಡದಂಗೆ ಕೂಡಿಟ್ಟು ನಮಗೆ ಬಟ್ಟೆ-ಬರಿ ಕೊಡಿಸುತ್ತಿದ್ಲು. ಹಂಗಾಗಿ ಅಪ್ಪ ಆಕಿಮ್ಯಾಲ ಬಾಳ ಪ್ರೀತಿ. ಒಮ್ಮೊಮ್ಮೆ ಅಪ್ಪ ಆಕೆಯನ್ನು ಮನೆಗೆ ಕರಕೊಂಡ ಬರುತ್ತಿದ್ದ. ಆಗಂತೂ ಅವ್ವನಿಗೂ ಆಕೀಗೂ ಜಗಳ ಅಂದ್ರೆ ಜಗಳ. ಅಪ್ಪ ಇಲ್ಲದಾಗ ಅವ್ವ ಮತ್ತು ಶಿವಗಂಗಮ್ಮ ನಡುವೆ ರಂಪಾಟವಾಗುತಿತ್ತು. ದಿನಾಲು ಜಗಳ. ಅವ್ವ ಜಗಳ ಮಾಡಿದ್ದನ್ನ ಅಪ್ಪ ಮನೆಗೆ ಬಂದ ತಕ್ಷಣ ಶಿವಗಂಗಮ್ಮ ಹೇಳಿಬಿಡುತ್ತಿದ್ಲು. ಆಗ ಅಪ್ಪ ಅವ್ವನ ಹಿಡಕೊಂಡು ದನಕ್ಕ ಹೊಡದಂಗ ಹೊಡೆಯುತ್ತಿದ್ದ. ಆವಾಗ ನಾವ್ಯಾರು ಬಿಡಿಸಾಕ ಹೋಗ್ತಿರಲಿಲ್ಲ. ಆದ್ರು ಅವ್ವ ಆಕಿತಾಲಿ ಜಗಳ ಮಾಡೋದನ್ನ ಬಿಡ್ತಿರಲಿಲ್ಲ.

**ಹುಡುಗನಾದ್ರೂ ಹೆಂಗಸರ ಕೆಲಸವೆಂದ್ರೆ ಬಾಳ ಇಷ್ಟ ಆಗುತ್ತಿತ್ತು.**

ನಾನು ಏಳನೇ ತರಗತಿಯಲ್ಲಿ ಓದುತ್ತಿರುವಾಗ ನನ್ನ ಶರೀರದಲ್ಲಿ ಅನೇಕ ಬದಲಾವಣೆಗಳು ಆಗುವುದಕ್ಕೆ ಆರಂಭಿಸಿದವು. ವಿಚಿತ್ರ ಭಾವನೆಗಳು ಅವು. ಅವುಗಳ ಯಾತನೆ ಯಾರಿಗೆ ಬೇಡ. ಯಾರಮುಂದೆ ಹೇಳಿಕೊಳ್ಳುವುದಕ್ಕೆ ಆಗದೇ ಇರುವಂತಹ ಸಂಗತಿಗಳು, ನೋವುಗಳು ಅವು. ಇತ್ತ ಹುಡುಗನ ಭಾವನೆಗಳು ಅಲ್ಲ, ಅತ್ತ ಹುಡುಗಿಯ ಭಾವನೆಗಳು ಅಲ್ಲ. ಅವುಗಳನ್ನು ಹುಡುಗನ ಹತ್ತಿರ ಹೇಳಿಕೊಳ್ಳುವುದಕ್ಕೆ ಆಗುತ್ತಿಲ್ಲ.

ಹುಡುಗಿಯ ಹತ್ತಿರ ಹೇಳಿಕೊಳ್ಳುವುದಕ್ಕೂ ಆಗುತ್ತಿಲ್ಲ. ಇತ್ತ ಹುಡುಗರ ಜೊತೆ ಹೊಂದಿಕೊಳ್ಳುವುದಕ್ಕೆ ಆಗುತ್ತಿಲ್ಲ. ಹುಡುಗಿಯರ ಜೊತೆ ಹೊಂದಿಕೊಳ್ಳುವುದಕ್ಕೆ ಆಗುತ್ತಿಲ್ಲ. ಹುಡುಗರನ್ನು ಮಾತನಾಡಿಸುವುದಕ್ಕೆ ನಾಚಿಕೆ. ಅವರಂತೂ ಒಂದಿಷ್ಟು ಇಷ್ಟ ಆಗವಲ್ಲರು. ಹುಡುಗಿಯರನ್ನು ಮಾತನಾಡಿಸುವುದಕ್ಕೆ ಹಂಬಲವಿದೆ, ಇಷ್ಟವಿದೆ. ಮನಸ್ಸಿನ ಆಳ ತುಡಿಯುತ್ತಿದೆ. ಆದರೆ ಧೈರ್ಯವಾಗುತ್ತಿಲ್ಲ. ಒಂದಿಷ್ಟು ಧೈರ್ಯ ಮಾಡಿ ಹುಡುಗಿಯರ ಹತ್ತಿರ ಹೋದ್ರೆ ಆ ಹುಡುಗಿಯರು ನನ್ನನ್ನು ತಮ್ಮ ಹತ್ತಿರ ಸೇರಿಸಿಕೊಳ್ಳುತ್ತಿರಲಿಲ್ಲ. ನಾನು ಅವರತ್ತಿರ ಹೋಗುವುದನ್ನು ಅವರು ಸಹ ಇಷ್ಟಪಡುತ್ತಿರಲಿಲ್ಲ. ಅದು ಅವರ ತಪ್ಪು ಅಂತ ನಾನು ಹೇಳುತ್ತಿಲ್ಲ. ಅವರು ಹಂಗ ಮಾಡಿದ್ದೇ ಸರಿ. ಯಾಕಂದ್ರ ಅವನು(ನಾನು) ನಿಕ್ಕರ್ ಹಾಕಿದ್ದಾನೆ, ಪ್ಯಾಂಟ್ ಹಾಕಿದ್ದಾನೆ 'ಅವನ್ಯಾಕೆ ನಮ್ಮ ಜತೆ ಬರುತ್ತಾನೆ? ಈ ವಯಸ್ಸಿಗೆ ಅವನಿಗೇನು ಚಪಲ. ನೋಡೋಕೆ ಹೆಣ್ಣಿನಂಗಡ್ತಾನೆ, ಹೆಣ್ಣಿನ ಚಲಪ ಬ್ಯಾರೆ' ಎನ್ನುತ್ತಿದ್ದ ಅವರ ಮಾತುಗಳು ನಿಜವಾದವುಗಳೆ.

ಇಷ್ಟೆಲ್ಲಾ ಆಗುತ್ತಿದ್ರು ನನಗೆ ಈ ಹೆಣ್ಣುಮಕ್ಕಳ ಮಾತುಗಳನ್ನು ಕೇಳಬೇಕು. ಅವರಂಗೆ ಇರಬೇಕು ಅನ್ನುವ ಭಾವನೆ ಬರುತ್ತಿತ್ತು. ಆ ಭಾವನೆಗಳನ್ನು ಹೇಳುವುದು ಹೇಗೆ? ಅನ್ನುವ ಇಕ್ಕಟ್ಟಿನ ಪರಿಸ್ಥಿತಿ ನನ್ನದು. ಏಳನೇ ತರಗತಿಯಲ್ಲಿ ಆರಂಭವಾದ ಈ ಪರಿಸ್ಥಿತಿ ಒಂಬತ್ತನೇ ತರಗತಿ ಓದುತ್ತಿರುವಾಗ ಹೆಚ್ಚಾಯ್ತು. ಆಗಂತು ಹುಡುಗಿಯರಂಗ ಇರಲೇಬೇಕು ಅಂತ ಅನ್ನಿಸುತ್ತಿತ್ತು. ಇನ್ನೊಂದು ಸಂಗತಿ ಅಂದ್ರೆ ಇಂತಹ ಭಾವನೆಗಳು ಹೆಚ್ಚಾಗುವ ಸಮಯಕ್ಕಾಗಲೇ ಸುತ್ತಮುತ್ತಲಿನ ಜನಕ್ಕೆ ನನ್ನ ಈ ದೇಹದ ಬದಲಾವಣೆ, ವರ್ತನೆ ಗೊತ್ತಾಗಿತ್ತು. ಏಳನೇ ತರಗತಿ ಓದುತ್ತಿರುವಾಗ ಶಾಲೆಯಲ್ಲಿ 'ತಿರುನೀಲಕಂಠ' ಎನ್ನುವ ನಾಟಕವನ್ನು ಮಾಡಿದ್ದೆವು. ಶ್ರೀ ಬಸಪ್ಪ ಮೇಷ್ಟ್ರು ಎನ್ನುವರು ನನ್ನ ಭಾವನೆಯನ್ನು ಗುರುತಿಸಿ ಆ ನಾಟಕದಲ್ಲಿ ಪರಮಾತ್ಮನ ಪಾತ್ರವನ್ನು ಕೊಟ್ಟಿದ್ದರು. ಅಲ್ಲಿನ ಪರಮಾತ್ಮನದು ಗಂಡು ಪಾತ್ರವೆ ನಿಜ. ಆ ಗಂಡು ಪಾತ್ರವನ್ನು ನನಗೆ ಕೊಟ್ಟಿರುವ ಉದ್ದೇಶ ಬೇರೆ ಇತ್ತು. ತಿರುನೀಲಕಂಠ ಮತ್ತು ನೀಲಾಂಬಿಕೆಯನ್ನು ಒಂದುಗೂಡಿಸುವ ಸಂದರ್ಭದಲ್ಲಿ ಒಂದು ಬಗೆಯ ಅಭಿನಯ ಮಾಡಬೇಕಾಗಿತ್ತು. ಅದೇ ಸಂದರ್ಭದಲ್ಲಿ ಶ್ರೀ ಬಸಪ್ಪ ಮೇಷ್ಟ್ರು ಹುಡುಗಿ ತರ ಡ್ಯಾನ್ಸ್ ಮಾಡ್ತೀಯ? ಅಂದ್ರು. ಆಗಂತು ತಡಮಾಡದೆ ಒಪ್ಪಿಕೊಂಡುಬಿಟ್ಟೆ. ನನಗೆ ಗೊತ್ತಿಲ್ಲದಂತೆ ನಾನು ಒಪ್ಪಿಕೊಂಡಿರೋದು ಅದು. ನನಗೂ ಅಂತಹ ಅವಕಾಶ ಸಿಗಬೇಕಾಗಿತ್ತು ಮತ್ತು ಅನುಭವಿಸಬೇಕಾಗಿತ್ತು. ಅವತ್ತು ಲಂಗ, ಜಾಕೆಟ್ ಹಾಕಿಕೊಂಡು ಒಂದು ನೃತ್ಯ ಮಾಡಿದೆ. ಬಾಳ ಖುಷಿ ಆಗಿತ್ತು. ಲಂಗ ಹಾಕಿಕೊಂಡಿರುವುದಕ್ಕಾಗಿಯೇ ಡ್ಯಾನ್ಸ್ ಚೆನ್ನಾಗಿ ಮಾಡಿದ್ದೆ. ಇದಾದನಂತರ ಸ್ಕೂಲಲ್ಲಿ ಯಾವುದಾದರೂ ಸಣ್ಣಪುಟ್ಟ ಕಾರ್ಯಕ್ರಮಗಳಾದ್ರೆ ಅಲ್ಲಿನ ಸ್ತ್ರೀ ಪಾತ್ರಗಳನ್ನು ನನಗೆ ಕೊಡುತ್ತಿದ್ದರು. ಹಿಂಗೆ ಎರಡು-ಮೂರು ವರ್ಷದಲ್ಲಿ ನನ್ನ ಈ ಹೆಣ್ಣುತನದ ಗುಣ ಜನರಿಗೆ ಗೊತ್ತಾಗಿತ್ತು. ಅದು ನನ್ನಲ್ಲಿ ಒಂದು ಬಗೆಯ ಧೈರ್ಯ ತಂದಿತ್ತು. ಜನರಿಗೆ ಗೊತಿಲ್ಲ ಅನ್ನುವುದಕ್ಕಿಂತ ಗೊತ್ತಿದೆ ಎನ್ನುವ ಸಂಗತಿ ಕೊಡುವ ಧೈರ್ಯ ದೊಡ್ಡದು.

ಎಸ್.ಎಸ್.ಎಲ್.ಸಿ. ಓದುವಾಗಲಂತೂ ನನ್ನ ದೇಹದಲ್ಲಿ ತುಂಬಾ ಬದಲಾವಣೆಗಳಾಗುವುದಕ್ಕೆ ಆರಂಭವಾದ್ವು. ಆಗ ನನಗೆ ಗೊತ್ತಿಲ್ಲದಂತೆ ಸಹಜವಾಗಿ ಅನೇಕ ಹೆಣ್ಣುತನದ ಚಟುವಟಿಕೆಗಳನ್ನು ಮಾಡುತ್ತಿದ್ದೆ. ಅಂದರೆ ಮನೆಯಲ್ಲಿರುವ ಟವಲ್ ತಗೊಂಡು ಸೀರೆ ಸೆರಗಿನ ತರ ಹಾಕಿಕೊಳ್ಳುವುದು, ಪ್ಯಾಂಟ್, ಜುಬ್ಬ ಉಟಕೊಂಡ್ರೂ ಅದನ್ನು ಸೀರೆ ಉಟಗೊಂಡು ನೀರಿಗೆ ಇಡಕೊಂಡು ನಡೆಯುವವರಂತೆ ನಡೆಯುವುದು, ರಂಗೋಲಿ ಹಾಕುವುದು, ಪೂಜೆ ಮಾಡುವುದು, ಅಮ್ಮನಿಗೆ ಸಹಾಯ ಮಾಡೋದು, ಮುಸರೆ ತಿಕ್ಕುವುದು, ಅಡಿಗೆ ಮಾಡುವುದನ್ನು ಮಾಡುತ್ತಿದ್ದೆ. ಅಮ್ಮ ಎಷ್ಟೇ ಬೈದ್ರು ಅಮ್ಮ ಜೊತೆಗೆ ಇರುವುದಕ್ಕೆ ಇಷ್ಟಪಡುತ್ತಿದ್ದೆ. ನನ್ನಲ್ಲಾದ ಇಂತಹ ಗೊಂದಲದ ಬೆಳವಣಿಗೆ ನನ್ನ ಓದನ್ನು ಹಾಳು ಮಾಡಿತು. ಹಂಗಾಗಿಯೇ ಎಸ್.ಎಸ್.ಎಲ್.ಸಿ.ಯಲ್ಲಿ ವಿಜ್ಞಾನ, ಇಂಗ್ಲಿಷ್ ಪೇಪರ್‌ಗಳು ಹೋದ್ವು. ಆಗ ನಮ್ಮಪ್ಪ ನೀನು ಶಾಲೆ ಓದುವುದರಲ್ಲಿ ಅರ್ಥವಿಲ್ಲ ಬಿಟ್ಟುಬಿಡು ಅಂತ ಹೇಳಿ ಶಾಲೆ ಬಿಡಿಸಿ ಕಲ್ಲಕಂಬಕ್ಕೆ ನಮ್ಮಣ್ಣನತ್ತಿರ ಕಳುಹಿಸಿದ್ರು. ಅಣ್ಣ ಬೈಯುವ ಹಿಂಸೆಗಿಂತ ದೇಹದ ಹಿಂಸೆ ಅತಿಯಾಗಿತ್ತು. ಹಂಗಾಗಿ ಅಣ್ಣನ ನೋವಿನ ಮಾತುಗಳು ದೆಹದ ನೋವುಗಳ ಮುಂದೆ ಗೌಣವಾಗಿಬಿಡುತ್ತಿದ್ದವು.

ಕಲ್ಲಕಂಬದಾಗ ನಮ್ಮಣ್ಣ ಕಿರಾಣಿ ಅಂಗಡಿ ಇಟ್ಟಿದ್ದ. ಅಲ್ಲಿ ಆತನಿಗೆ ಸಹಾಯ ಮಾಡುವುದಕ್ಕೆ ಪ್ರಯತ್ನಪಡುತ್ತಿದ್ದೆ. ಆದ್ರೆ ಅಂತಹ ಯಾವುದೇ ಕೆಲಸವನ್ನು ಮಾಡುವುದಕ್ಕೆ ನನ್ನಿಂದಾಗುತ್ತಿರಲಿಲ್ಲ. ಒಂಟಿತನ ಮತ್ತಷ್ಟು ಇಷ್ಟವಾಗುವುದಕ್ಕೆ ಆರಂಭವಾಯ್ತು. ದಿನಗಟ್ಟಲೆ ಒಂಟಿಯಾಗಿ ಇರುತ್ತಿದ್ದೆ.

**ಶೆಟ್ರು ಹುಡುಗನ ಮೈಯಾಗ ಹುಲಿಗೆಮ್ಮ ಬರಕತ್ಯಾಳ**

ಒಂದು ದಿವಸ ಮನೆ ಮುಂಭಾಗದಲ್ಲಿ ನಿಂತು ಆಲೋಚನೆ ಮಾಡುತ್ತಿದ್ದೆ. ಆಗ ತಲೆ ತಿರುಗಿದಂಗಾಗಿ ದಪ್ಪಂತ ಬಿದ್ದುಬಿಟ್ಟೆ. ಆಗ ಏನೇನೋ ಮಾತನಾಡುತ್ತಿದ್ದೆನಂತೆ. ಅವು ಪ್ರಜ್ಞೆ ಕಳಕೊಂಡ ವ್ಯಕ್ತಿಯ ಹುಚ್ಚುತನದ ಮಾತಿನಂತಿರದೆ ದೇವರಾಡುವ ನುಡಿಗಳಂತೆ ಇದ್ವು ಅಂತ ಜನ ಸಾಕಷ್ಟು ಬಾರಿ ನನ್ನ ಹತ್ತಿರ ಹೇಳಿದ್ದಾರೆ. ನಾನು ಹಿಂಗಾಗುವುದಕ್ಕೆ 'ದೈವಿಶಕ್ತಿ' ಕಾರಣವೆಂದುಕೊಂಡಿರುವೆ. ಆಗ ಶೆಟ್ರು ಹುಡುಗನ ಮೈಯಾಗ ಹುಲಿಗೆಮ್ಮ ಬರ್ತ್ತಾಳೆ ಅಂತ ಜನರು ಆಡಿಕೊಳ್ಳುವುದನ್ನು ಹಾಗೂ ಆ ಹುಡುಗ ಜೋಗಮ್ಮ ಆಗುತ್ತಿದ್ದಾನೆ ಅನ್ನುವುದನ್ನು ಕೇಳಿದ್ದೇನೆ. ಜನರಾಡುವ ಇಂತಹ ಮಾತುಗಳನ್ನು ಕೇಳಿದಾಗ ನಮ್ಮ ಮನೆಯವರು ಬಹಳ ಸಿಟ್ಟು ಮಾಡಿಕೊಂತ್ತಿದ್ರು. ನಾವು ವೈಶ್ಯ ಕುಲದಲ್ಲಿ ಹುಟ್ಟಿದವರು. ನಮ್ಮ ವಂಶಕ್ಕೆ ಇಂತಹ ಮಾತು ಕೇಳಲೇಬಾರದು. ಕೆಳವರ್ಗದವರಲ್ಲಿ ಮಾತ್ರ ಯಲ್ಲಮ್ಮ, ಹುಲಿಗೆಮ್ಮ ಬರ್ತ್ತಾಳೆ. ಅವರಲ್ಲಿ ಮಾತ್ರ ದೇವರಿಗೆ ಬಿಡುವ, ದೇವದಾಸಿ ಬಿಡುವ ಸಂಪ್ರದಾಯ ಐತಿ. ನಮ್ಮ ವೈಶ್ಯ ಸಮಾಜದಲ್ಲಿ ಆ ಪದ್ಧತಿ ಇಲ್ಲವೇ ಇಲ್ಲ. ಅಂತಹ ಜಾತಿಗೆ ಇವನು ಸೇರಿ ಬಿಟ್ಟ ಅಂತ ನನ್ನನ್ನು ಬೈಯುತ್ತಿದ್ದರು. ಗೋಳಾಡಿ ಅಳುತ್ತಿದ್ದರು. ಇದು ನಮ್ಮ ಮನೆತನಕ್ಕೆ ಆಗಿರುವ ಅವಮಾನ

ಅಂದುಕೊಂಡು ಮನಿಯಾಗ ಇರಾಕ ಬಿಡ್ತಿರಲಿಲ್ಲ. ಮನಿಯಾಗ ಇದ್ರ ಹೆಂಗಸರ ಜೊತೆ ಸೇರಿ ಹೆಂಗಸರಂಗ ಮಾಡ್ತಾನಂತ ಗಂಡುಮಕ್ಕಳ ಜೊತೆ ಗದ್ದೆ ಕೆಲಸಕ್ಕೆ ಕಳುಹಿಸುತ್ತಿದ್ರು. ಆ ಹುಡುಗರ ಜೊತೆ ಕೆಲಸಕ್ಕೆ ಕಳುಸಿದ್ದು ನನಗಾದ ದೊಡ್ಡ ಹಿಂಸೆಯೇ ಸರಿ. ಹೆಣ್ಣು ಅಲ್ಲದೆ ಗಂಡು ಅಲ್ಲದೆ ಸಂಕಟವನ್ನು ಅನುಭವಿಸುತ್ತಿದ್ದ ಉತ್ತುಂಗದ ಸಂದರ್ಭವದು. ಅದು ಅಲ್ಲದೆ ಆ ಹುಡುಗರು ನನ್ನನ್ನು ಅಣಕಿಸುತ್ತಿದ್ರು. ಹೆಣ್ಣಿಗ ಹೆಣ್ಣಿಗ ಅಂತಿದ್ರು. ಈ ನೋವು ತಡಕೊಬಹುದಿತ್ತು. ಆದ್ರೆ ಅವರೊಂದಿಗೆ ಕಾಲ ಕಳೆಯುವುದೇ ಕಷ್ಟವಾಗಿತ್ತು. ಹಂಗಾಗಿ ಅವರೊಂದಿಗೆ ಕೆಲಸಕ್ಕೆ ಹೋಗುವುದಕ್ಕೆ ವಲ್ಲೆ ಎಂದೆ. ಆಗ ನನ್ನನ್ನು ಮಂಚಕ್ಕೆ ಕಟ್ಟಿಹಾಕಿ ಹೊಡೆದ್ರು. ಹಗ್ಗ ತಗೊಂಡು ಹೊಡೆದ್ರು. ಹೆಂಗಸರು ಮಾಡಿದಂಗ ಮಾಡ್ತಿ, ನಮ್ಮಪ್ಪರು ಆರುಮಂದಿ ಅಣ್ಣ ತಮ್ಮಂದಿರು. ಅವರೊಟ್ಟ್ಯಾಗ ಇಪ್ಪತ್ತೆಂಟು ಜನ ಗಂಡುಮಕ್ಕಳು. ನಮ್ಮ ಮನ್ಯಾಗ ಇಷ್ಟೊಂದು ಜನ ಗಂಡಸರು ಇದ್ರು ನೀನು ಮಾತ್ರ ಹೆಂಗಸು ಮಾಡಿದಂಗ ಮಾಡ್ತಿ. ನಮ್ಮ ಮನೆತನದ ಮರ್ಯಾದಿ ತೆಗಿಯಾಕತ್ತಿಯಲ್ಲ ನಿನಗೆ ನಾಚಿಕೆ ಆಗಲ್ಲೇನು? ಅಂತ ಹೊಡೆದ್ರು, ಬಡಿದ್ರು. ಕೊಡಬಾರ ಹಿಂಸೆ ಕೊಟ್ರು. ಇದ್ದೂರಾಗ ನಮ್ಮ ಮನೆತನದ ಮಾನ ಕಳಿತಾನ ಅಂತ ಹೇಳಿ ಅಪ್ಪನಿದ್ದ ಕುಕ್ಕುವಾಡಕ್ಕೆ ಕಳುಹಿಸಿಬಿಟ್ರು. ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ಹುಚ್ಚರಂಗ ಓಡಿಸ್ಯಾಡಿದ್ರು.

ಆದ್ರು ಕುಕ್ಕವಾಡಕ್ಕೆ ಖುಷಿಯಿಂದ ಹೋದೆ. ಯಾಕಂದ್ರ ಅಲ್ಲಿ ಹೊಡಿಯೋರು ನಮ್ಮಪ್ಪ ಮಾತ್ರ. ಕಲ್ಲಕಂಬದಲ್ಲಿ ಹಂಗಲ್ಲ. ಹೊಡೆಯೋಕೆ ಅಂತಲೇ ಹತ್ತಾರು ಜನ ಸೇರಿಬಿಡೋರು. ಅದರಲ್ಲಿ ಕಮ್ಮಿಯಂದ್ರು ನಾಲ್ಕೈದು ಜನ ಹೊಡೆತ್ತಿದ್ರು. ಅವರೆಲ್ಲ ನಮ್ಮ ಸಂಬಂಧಿಕರೆ. ಅದು ಅಲ್ಲದೆ ಹೊಡೆಯುತ್ತಿದ್ದಾಗ ಬಾರಿಜನ ಸೇರಿಬಿಡೋರು. ಅವರಲ್ಲಿ ಕೆಲವರು ನನ್ನ ಸ್ಥಿತಿಯನ್ನು ನೋಡಿ ನಗೋರು. ಇನ್ನು ಕೆಲವರು ಬೈಯ್ಯೋರು, ಮತ್ತೆ ಕೆಲವರು ಮರುಕಪಡೋರು. ಇದು ಹೊಡೆತಗಳ ನೋವಿಗಿಂತ ಬಾರಿ ನೋವು ತರುತ್ತಿತ್ತು. ಅವುಗಳನ್ನು ಅನುಭವಿಸುವುದಕ್ಕೆ ನನ್ನಿಂದಾಗುತ್ತಿರಲಿಲ್ಲ. ಆದ್ರೆ ಹೆಣ್ಣುತನದ ಗುಣಗಳು ಕುಕ್ಕುವಾಡಕ್ಕೆ ಹೋದ ಮ್ಯಾಲೆ ಮತ್ತಷ್ಟು ಹೆಚ್ಚಾದ್ವು. ಆಗ ಸಂಪೂರ್ಣವಾಗಿ ಹೆಣ್ಣಾಗಿರುವೆ ಅನ್ನುವ ಭಾವನೆ ನನ್ನಲ್ಲಿ ಬರುತ್ತಿತ್ತು. ಆದ್ರೆ ಅದನ್ನು ತೋರಿಸುವಂತಿರಲಿಲ್ಲ. ಎಷ್ಟು ಸಾಧ್ಯನೋ ಅಷ್ಟು ಮುಚ್ಚಿಟ್ಟುಕೊಳ್ಳಬೇಕಾಗಿತ್ತು. ಆ ಸಂದರ್ಭದಲ್ಲಿ ಸಂಕಟ ಅನುಭವಿಸಿದ್ದು ದೊಡ್ಡದು. ಅಂತಹ ಸಂಕಟ ಯಾರಿಗೂ ಕೊಡಬೇಡ ಅಂತ ಆ ಯಲ್ಲಮ್ಮನಲ್ಲಿ ಬೇಡಿಕೊಂತೀನಿ.

## ಹೆಣ್ಣುಮಕ್ಕಳ ನೆರಳೇ ಬೀಳದಂಗ ದೂರವಿಟ್ರು

ನಾನು ಆ ವೇಳೆಗಾಲೆ ಹೆಣ್ಣಾಗಿದ್ದೆ. ಆದ್ರೆ ನನ್ನ ಹೆಣ್ಣುತನವನ್ನು ಕಿತ್ತುಹಾಕುವುದಕ್ಕೆ ಮಾಡುತ್ತಿದ್ದ ಪ್ರಯತ್ನಗಳು ಮಾತ್ರ ನಿಂತಿರಲಿಲ್ಲ. ನಮ್ಮ ಮಾವ ಗಾಂಧಿಶೆಟ್ಟಿ ಅಂತ ಇದ್ದ. ನನ್ನ ತಾಯಿಯ ತಮ್ಮನಾತ. ಆತ ಮಹಾತ್ಮ ಗಾಂಧಿ ಸತ್ತಾಗ ಹುಟ್ಟಿದ್ದನಂತೆ.

ಅದಕ್ಕಾಗಿಯೇ ಗಾಂಧಿ ಅಂತ ಹೆಸರಿಟ್ಟಿದ್ದರು. ಆದ್ರೆ ಆತನೇನು ಗಾಂಧಿಯಂತಾಗಲಿಲ್ಲ, ನನ್ನತರ ಗಂಡುಜೋಗತಿಯಾಗಿದ್ದ. ಹಂಗಾಗಿ ಗಾಂಧಿಶೆಟ್ಟಿ ಅಂತ ಕರೆಯದೆ 'ಗಾಂದೆಮ್ಮ ಜೋಗ್ತಿ' ಅಂತ ಕರೆಯುತ್ತಿದ್ರು. ನಮ್ಮ ಮನೆಯವರು ಆತನನ್ನು ಮಾದರಿಯಾಗಿ ಇಟ್ಟುಕೊಂಡು ನನ್ನನ್ನು ಬೈಯ್ಯುತ್ತಿದ್ರು. ಅವನು ಜೋಗ್ತಿಯಾಗಿ ನಮ್ಮ ಮನೆತನದ ಮಾನ–ಮರ್ಯಾದೆ ತೆಗೆದಿರುವುದೇ ಸಾಕು. ಇವನು ಆ ಲುಚ್ಚ್ಯನಂಗಾಡಿ ಮಾನ ತೆಗೆಯಾಕಚ್ಚ್ಯಾನ ಅಂತ ಬೈಯ್ಯುತ್ತಿದ್ರು. ವಿಪರ್ಯಾಸ ಅಂದ್ರೆ ನನ್ನನ್ನು ಒಂದು ದಿವಸ ಆತನ ಹತ್ತಿರ ಕರಕೊಂಡೋದ್ರು. ಆಗ ಆತ ಕಂಪ್ಲಿಯಲ್ಲಿ ವಾಸವಾಗಿದ್ದ. ಅಲ್ಲಿಗೆ ಕರಕೊಂಡು ಹೋದಾಗ ನನಗೆ ಬಾಳ ಖುಷಿಯಾಗಿತ್ತು. ನನ್ನನ್ನು ಅರ್ಥ ಮಾಡಿಕೊಳ್ಳುವುದಕ್ಕೆ ನನ್ನಂತೆ ಇರುವ ನನ್ನ ಮಾವನತ್ತಿರ ಬಂದಿರುವೆಯಲ್ಲ ಎನ್ನುವ ಧೈರ್ಯ ಬಂದಿತ್ತು. ಆದ್ರೆ ಅಲ್ಲಿ ಆಗಿದ್ದೇ ಬೇರೆ. ಕೋಲು ತಗೊಂಡು, ಬಡಿಗೆ ತಗೊಂಡು ನನ್ನನ್ನು ಸಿಕ್ಕಾಬಟ್ಟಿ ಹೊಡೆದ್ರು, ಬಾಯಿಯಲ್ಲಿ ರಕ್ತ ಬರುವಂಗೆ ಹೊಡೆದ್ರು. ಮಾವನೇ ಇದಕ್ಕೆ ಸಹಕಾರ ನೀಡಿದ. ಆತನೂ ಸಹ ಹೊಡೆದ. ಆತ ನನ್ನ ಪರವಹಿಸಿ ಕೊಂಡು ಒಂದು ಮಾತು ಆಡಲಿಲ್ಲ. ಅದು ಅಲ್ಲದೆ ಅಪ್ಪ ಅಮ್ಮ ಬಿಟ್ಟುಬಂದಮ್ಯಾಗ ನನಗೆ ಊಟ ಕೊಡುತ್ತಿರಲಿಲ್ಲ. ಮನೆಯಲ್ಲಿ ಒಂಟಿಯಾಗಿ ಇರುವುದಕ್ಕೂ ಬಿಡುತ್ತಿರಲಿಲ್ಲ. ಹೆಣ್ಣುಮಕ್ಕಳು ಇರುವ ಜಾಗದಲ್ಲಂತೂ ಬಿಡ್ತಾನೆಯಿರಲಿಲ್ಲ. ಹೆಣ್ಣುಮಕ್ಕಳ ನೆರಳು ಬೀಳದಂಗ ದೂರವಿಟ್ರು. ಆಗ ನನಗೆ ಮಾವನ ಮೇಲೆ ಕೋಪ ಬಂತು. ಮಾವ ನೀನೇ ನನ್ನನ್ನು ಅರ್ಥ ಮಾಡಿಕೊಳ್ಳದಿದ್ದರೆ ಜಗತ್ತೇ ನನ್ನನ್ನು ಅರ್ಥ ಮಾಡಿಕೊಳ್ಳುವುದಿಲ್ಲ. ದಯವಿಟ್ಟು ಅರ್ಥ ಮಾಡಿಕೊ ಮಾವ ಅಂತ ಮನದಲ್ಲಿ ಎಷ್ಟೋ ಸಲ ಬೇಡಿಕೊಳ್ಳುತ್ತಿದ್ದೆ. ನನಗೆ ಆತನ ಮೇಲೆ ವಿಶೇಷ ಗೌರವ, ಭಕ್ತಿ ಇತ್ತು. ಆತ ನನಗೆ ಮಾವ ಆಗಿದ್ದರಿಂದ ಆತನನ್ನು ನಾನು 'ಜೋಗಮ್ಮ' ಅಂತ ಯಾವತ್ತೂ ಕರೆಯಲೇ ಇಲ್ಲ. ಬದಲಾಗಿ 'ಮಾವ' ಅಂತ ಕರೆಯುತ್ತಿದ್ದೆ.

ಒಂದು ದಿವಸ ಮಾವ ಚೌಡಿಕೆ ತಗೊಂಡು ಬೇರೆ ಊರಿಗೆ ಭಿಕ್ಷೆಗೆ ಹೋಗಿದ್ರು. ಅವತ್ತು ಮನೆಯಲ್ಲಿ ನಾನೊಬ್ಬನೆ ಇದ್ದೆ. ಒಂಟಿಯಾಗಿ ಮನೆಯಲ್ಲಿ ಇರೋದ್ರಿಂದ ಬಾಳ ಖುಷಿಯಾಗಿತ್ತು. ಯಾಕೆಂದರೆ ಅವತ್ತು ನನಗಿಷ್ಟ ಬಂದಂತೆ ನಾನಿದ್ದೆ. ಹಂಗಾಗಿ ಬಹುಕಾಲದ ನನ್ನ ಮನದಾಳದ ಆಸೆಯನ್ನು ಈಡೇರಿಸಿಕೊಳ್ಳಬೇಕು ಅಂತ ಆಸೆಯಾಯ್ತು. ಈಡೇರಿಸಿಕೊಂಡೇ ಬಿಡೋಣ ಅಂತ ನಿರ್ಧಾರ ಮಾಡಿದೆ. ಸೀರೆ ಹಾಕಿಕೊಳ್ಳಬೇಕು ಎನ್ನುವ ಆಸೆ ಇತ್ತಾದ್ರು ಮಾವ ನನಗೆ ಸಿಗದಂತೆ ಸೀರೆ ಬಚ್ಚಿಟ್ಟಿದ್ದಾನೆ ಅನ್ನುವ ಸಂಗತಿ ತಿಳಿದಿತ್ತು. ಆಗ ಲುಂಗಿಯನ್ನ ಸೀರೆ ತರ ಉಟ್ಟುಕೊಂಡೆ. ಜುಬ್ಬದಂತಹ ಅಂಗಿಯನ್ನು ಹಾಕಿಕೊಂಡೆ. ಮನೆಯಲ್ಲೆ ಹೆಂಗಸರಂಗ ನಡೆದಾಡಿ ನೋಡಿದೆ. ಬಹಳ ಹಿತ ಅನ್ನಿಸಿತು. ಆಗಂತೂ ಎಲ್ಲಿಲ್ಲದ ಖುಷಿಯಾಗುತ್ತಿತ್ತು. ಆ ಖುಷಿಯಲ್ಲೇ ಮಾವನ ಓಲೆ ಇಟ್ಟಕೊಂಡು, ಕುಂಕುಮ ಹಚ್ಚಿಕೊಂಡು, ನೀಟಾಗಿ ತಲೆ ಬಾಚಿಕೊಂಡು, ಬಳೆ

ಇಟ್ಟುಕೊಂಡು ಕನ್ನಡಿಯಲ್ಲಿ ನೋಡಿಕೊಂಡೆ. ನಾನು ಅಷ್ಟು ಚೆಂದವಾಗಿ ಹೆಣ್ಣಿನ ವೇಷದಲ್ಲಿ ರೆಡಿಯಾಗಿದ್ದು ಅದೇ ಮೊದಲ ಸಲ. ಅವತ್ತು ಏನೋ ಒಂದು ತರ ಸಂತೋಷವಾಗಿತ್ತು. ಹಂಗಾಗಿ ಸಾಕಷ್ಟು ಸಲ ಕನ್ನಡಿಯಲ್ಲಿ ನೋಡಿಕೊಂಡಿದ್ದೆ. ಆ ಸಂತೋಷವನ್ನು ಕೇವಲ ಮಾತಿನಲ್ಲಿ ಹೇಳುವುದಕ್ಕೆ ಆಗುವುದಿಲ್ಲ. ನನ್ನನ್ನು ನಾನು ಹೆಣ್ಣಾಗಿ ಅನುಭವಿಸಿದ ಮೊದಲ ಸಂತೋಷವದು. ಆ ಸಂತೋಷದಲ್ಲಿ ಸಿನಿಮಾ ನೋಡಬೇಕು ಅಂತ ಅನ್ನಿಸಿತು. ಅಲ್ಲಿ 'ಬಾಲ ಟಾಕೀಸು' ಅಂತ ಇದೆ. ಅಲ್ಲಿಗೆ ಆ ವೇಷದಲ್ಲೇ ಹೊರಟೆ. 'ಅಪೂರ್ವ ಸಂಗಮ' ಫಿಲಿಂ ಇತ್ತು. ಎರಡು ರೂಪಾಯಿ ಕೊಟ್ಟು ಬಾಲ್ಕನಿ ಟಿಕೆಟ್ ತಗೋಂಡು ಸಿನಿಮಾ ನೋಡ್ತಾ ಕುಳಿತ್ತಿದ್ದೆ.

ಊರಿಗೆ ಹೋಗಿದ್ದ ಮಾವ ಯಾವಾಗ ಬಂದನೊ ಬಂದುಬಿಟ್ಟಾನ. ಆತ ಮನೆಗೆ ಬಂದಾಗ ನಾನು ಕಾಣಿಸಿಲ್ಲ. ಆಗ ಅಕ್ಕಪಕ್ಕದ ಮನೆಯವರನ್ನು ಕೇಳಿದರಂತೆ. ಅವನು ಇಷ್ಟೊತನಕ ಇಲ್ಲೆಯಿದ್ದ. ಈಗ ಕುಂಕುಮ, ಬಳೆ ಹಾಕಿಕೊಂಡು ಎಲ್ಲೊ ಹೋದ ಅಂತ ಹೇಳ್ಯಾರೆ. ಇದನ್ನ ಕೇಳಿದ ತಕ್ಷಣ ಮಾವ ಕೋಪ ಮಾಡಿಕೊಂಡು ದಾರ್‍ಯಾಗೆಲ್ಲ ಹುಡುಕುತ್ತ ಜನರನ್ನು ಕೇಳಿಕೊಂಡು ಬಂದಿದ್ದಾರೆ. ಆಗ ಪಿಕ್ಚರ್‌ಗೆ ಹೋಗ್ಯಾನ ಅಂತ ಗೊತ್ತಾಗ್ಯೆತಿ. ಟಾಕೀಸ್‌ನ ಒಳಗಡೆ ಬಂದು ಹುಡುಕುತ್ತಿದ್ದಾನೆ. ಅದು ನನಗೆ ಕಾಣುತ್ತಿದೆ. ನಾನು ಬಾಲ್ಕನಿಯಲ್ಲಿ ಕುಳಿತಿದ್ದೆ. ಸಿನಿಮಾದ ಬೆಳಕಿನಲ್ಲಿ ಮಾವ ಕಾಣಿಸಿದ. ಕೆಳಗೆ ಕುಳಿತವರನ್ನ ಕೇಳಿ ಕೇಳಿ ಸಾಲು ಸಾಲು ಹುಡುಕುತ್ತಿದ್ದ. ನನ್ನನ್ನೇ ಹುಡುಕುತ್ತಿದ್ದಾನೆ. ಅವರಿಗೆ ಕೋಪ ಬಂದಿದೆ ಅಂತ ಅವರ ಹುಡುಕಾಟದಿಂದ ಗೊತ್ತಾಯ್ತು. ಅದನ್ನು ನೋಡಿ ನನಗೆ ಭಯ ಆರಂಭವಾವಾಯ್ತು. 'ತಾರಾ ಹೊ ತಾರಾ' ಹಾಡು ಬಂದಿದೆ. ಇತ್ತ ಹಾಡು ನೋಡಲಿಕ್ಕೆ ಆಗುತ್ತಿಲ್ಲ. ಎದ್ದು ಬರುವುದಕ್ಕೂ ಮನಸ್ಸು ಬರುತ್ತಿಲ್ಲ. ಮಾವನ ಹುಡುಕಾಟವನ್ನು ನೋಡಿ ಕುಳಿತುಕೊಳ್ಳುವ ಧೈರ್ಯವಂತೂ ಬರಲೇಯಿಲ್ಲ. ಬಡ ಬಡ ಕೆಳಗೆ ಇಳಿದು ಮನೆಗೆ ಓಡಿಹೋಗಿ ದೊಡ್ಡದೊಂದು ದುಪ್ಪಡಿ ತಗೊಂಡು, ತುಂಬಾ ಹೊದಕೊಂಡು ಮನೆಯ ಮೂಲೆಯಲ್ಲಿ ಮಲಗಿಬಿಟ್ಟೆ. ಸಿನಿಮಾದವರು ಈಗ ಕೆಳಗಿಳುದು ಓಡಿಹೋದ ಅಂತ ಮಾವನಿಗೆ ಹೇಳಿರಬೇಕು. ಆತನಿಗೆ ಎಷ್ಟು ಸಿಟ್ಟು ಬಂದಿತ್ತೇನೊ? ಮನೆಗೆ ಬರುವಾಗ್ಲೆ ದಾರಿಯಲ್ಲಿ ಸಿಕ್ಕ ಬಡಗಿಯನ್ನು ಇಡಕೊಂಡು ಬಂದಿದ್ದ. ಮನೆಗೆ ಬಂದವರೆ ನನ್ನನ್ನು ಮಾತನಾಡಿಸದೇ, ಎಬ್ಬಿಸದೇ, ಆ ಬಡಗಿ ತಗೊಂಡು ದಬದಬ ದನಕ್ಕ ಹೊಡೆದಂಗ ಹೊಡೆಯಕತ್ತಿದ್ರು. ನಾನು ಚೀರಿಕೊಂಡ್ರೂ ಬಿಟ್ಟಿರಲಿಲ್ಲ. ಆಗ ರಾತ್ರಿ ಸುಮಾರು ಹನ್ನೊಂದಾಗಿತ್ತು. ಜನರೆಲ್ಲ ಮಕ್ಕೊಂಡಿದ್ರು. ಮಾವ ಕದ ಮುಚ್ಚಿಕೊಂಡು ಇಳುಗಿ ಬ್ಯಾರೆ ಹಾಕಿಕೊಂಡಿದ್ದ. ಆ ಹೊಡೆತವನ್ನು ನೆನಸಿಕೊಂಡರೆ ಈಗಲೂ ನಡುಕ ಶುರುವಾಗತ್ಯೆತಿ. ಅವತ್ತು ಉಚ್ಚೆ ಹೊಯ್ಯಕೊಂಡು ಜೋರಾಗಿ ಕಿರುಚಾಡಿದೆ, ಅರಚಾಡಿದೆ. ಆ ಅರಚಾಟವನ್ನು ಕೇಳಿಸಿಕೊಂಡ ಓಣಿಜನ ಮಂಜುನ ಅವರ ಮಾವ ಸಾಯಿಸಿಬಿಡ್ತಾನ ಅಂತ ಕದ ಬಡಿದು ಬಡಿದು ಕದ ತೆಗಿಸಿ

ಮಾವನ ಹೊಡೆತಗಳಿಂದ ಬಿಡಿಸಿದ್ರು. ಆ ಹೊಡೆತಗಳು ನನ್ನ ಶತ್ರುಗೂ ಬೇಡ. ಮಾವನಿಂದ ಹೊಡೆತಗಳನ್ನು ತಪ್ಪಿಸಿದ ಜನಕ್ಕೆ ನನಗೆ ಗೊತ್ತಿಲ್ಲದಂತೆ ಮನದಲ್ಲೇ ಕೈಮುಗಿದಿದ್ದೆ. ಆ ಘಟನೆ ನಡೆದ ಮರುದಿವಸ ಮಾವನಿಗೆ ಏನು ಅನಿಸಿತೋ ನನಗೆ ಗೊತ್ತಿಲ್ಲ. ನೀನು ನನಗೆ ಬಗ್ಗುವುದಿಲ್ಲ ಅಂತ ಹೇಳಿ ದಾವಣಗೆರೆಯಲ್ಲಿದ್ದ ಅಪ್ಪನ ಹತ್ತಿರ ತಂದುಬಿಟ್ರು. ಅಪ್ಪ, ಅವ್ವ, ಮಾವ ಕುಳಿತು ಆ ರಾತ್ರಿ ಏನೇನೂ ಮಾತನಾಡಿ ಕೊಂಡ್ರು. ನನಗೆ ಅವರ ಚರ್ಚೆಯನ್ನು ಕೇಳಿಸಿಕೊಳ್ಳುವ ತಾಳ್ಮೆ, ಕೇಳಿಸಿಕೊಳ್ಳಲೇಬೇಕು ಅನ್ನುವ ಕುತೂಹಲ ಇರಲಿಲ್ಲ.

## ನನ್ನ ಭಾವನೆಗಳ ಜತೆ ಗುದ್ದಾಡಿ ಸುಸ್ತಾಗಿದ್ರು

ಮಾವ ದಾವಣಗೆರೆಗೆ ಕರೆದುಕೊಂಡು ಹೋಗಿ ಅಪ್ಪ ಅವ್ವನ ಜೊತೆ ಮಾತನಾಡಿದ ಮ್ಯಾಲೆ ಮನೆಯ ವಾತಾವರಣದಲ್ಲಿ ನನ್ನನ್ನು ನೋಡುವುದರಲ್ಲಿ ಅನೇಕ ಬದಲಾವಣೆ ಗಳಾದವು. ದೇವರತ್ತಿರ, ಪೂಜಾರಿಗಳತ್ತಿರ, ಹೇಳಿಕೆ ಹೇಳುವವರ ಹತ್ತಿರ ನನ್ನ ಬಗ್ಗೆ ಕೇಳಿಸಿ ನೋಡಿದ್ರು. ಅವರೆಲ್ಲ ನಿಮ್ಮ ಮಗನಿಗೆ ದೈವಿಶಕ್ತಿ ಐತಿ. ಆತನನ್ನು ದೇವತೆಗೆ ಮುಡುಪಾಗಿಟ್ಟುಬಿಡಿ. ನಿಮಗೂ ಒಳ್ಳೆಯದಾಗುತ್ತೆ ಅಂತ ಹೇಳಿದ್ರು. ಮನೆಯವರೂ ಇದನ್ನು ಒಪ್ಪಿಕೊಂಡ್ರು. ಹಿಂಗ ಒಪ್ಪಿಕೊಳ್ಳುವಿಕೆಗೆ ಅನೇಕ ಕಾರಣಗಳಿದ್ದವು. ಆ ವೇಳೆಗಾಗಲೇ ನನ್ನ ಭಾವನೆಗಳ ಜೊತೆ ಸಾಕಷ್ಟು ಬಾರಿ ಗುದ್ದಾಡಿ ಗುದ್ದಾಡಿ ಸುಸ್ತಾಗಿದ್ದರು. ಸುಮಾರು ನಾಲ್ಕು ವರ್ಷದ ಈ ಹೋರಾಟದಲ್ಲಿ ಅವರು ಒಂದಿಷ್ಟು ಗೆಲುವು ಕಾಣಲೇಯಿಲ್ಲ. ಆ ಹೋರಾಟದಲ್ಲಿ ನನ್ನ ದೇಹ ಮತ್ತು ಭಾವನೆ ಗೆಲುವು ಸಾಧಿಸಿತೇ ಹೊರತು ಅವರ ಹಠತನ ಮತ್ತು ನನ್ನನ್ನು ಗಂಡಸಾಗಿ ಉಳಿಸಿಕೊಳ್ಳಬೇಕೆನ್ನುವ ಕಾಳಜಿಯಲ್ಲ. ಅದು ಅಲ್ಲದೆ ನನಗೆ ಹಿಂಸೆ ಕೊಡುವುದು ಸಹ ಅವರಿಗೆ ಹಿಂಸೆಯಾಗಿ ಬಿಟ್ಟಿತ್ತು. ಆ ವೇಳೆಗಾಗಲೇ ಹಿಂಸೆ ಕೊಡುವ ಮನಸ್ಥಿತಿಯನ್ನು ಕಳೆದುಕೊಂಡು ಬಿಟ್ಟಿದ್ದರು. ಮಾವ ಗಾಂದೆಮ್ಮ ಜೋಗತಿಯ ವಿಷಯದಲ್ಲೂ ನಮ್ಮಮ್ಮನ ಅಪ್ಪ ಅಂದರೆ ಅಜ್ಜನು ಸಹ ಸೋಲನ್ನು ಅನುಭವಿಸಿ ಶರಣಾಗಿದ್ದನಂತೆ. ಕೊನೆಗೆ ಗಾಂದೆಮ್ಮನಂತೆ ಇವನು ಅಂದುಕೊಂಡುಬಿಟ್ಟರು. ಮಾವನಂತೂ ನನಗೆ ಸಹಾಯ ಮಾಡಲಿಲ್ಲ. ಹೋಗ್ಲಿ ನನ್ನನ್ನು ಅರ್ಥ ಮಾಡಿಕೊಳ್ಳಲಿಲ್ಲ. ಆತನ ಜೀವನದ ಘಟನೆಗಳು ನನ್ನನು ಕಾಪಾಡಿದವಲ್ಲ ಅಷ್ಟು ಸಾಕು ಅಂತ ಅಂದುಕೊಂಡೆ. ಅಲ್ಲದೆ ಆಗ ನಾವು ತುಂಬಾ ಬಡತನದ ಸ್ಥಿತಿಯಲ್ಲಿದ್ದೆವು. ಅವ್ವ-ಅಪ್ಪ ಬಹಳ ಕಷ್ಟಗಳನ್ನು ಅನುಭವಿಸುತ್ತಿದ್ದರು. ನಮ್ಮ ಕಷ್ಟಕ್ಕೆ ದೈವಿಶಕ್ತಿಯ ಕಾಟವೂ ಕಾರಣ ಇರಬಹುದು. ಈತನಿಗೆ ತೊಂದರೆ ಕೊಡುತ್ತಿರುವುದರಿಂದಲೇ ನಮ್ಮನ್ನು ಆ ದೇವತೆ ಈ ರೀತಿಯಾಗಿ ಕಾಡುತ್ತಿರಬಹುದು ಅಂತ ಅಂದುಕೊಂಡ್ರು. ಈತನನ್ನು ಆಕೆಗೆ ಅರ್ಪಿಸಿದರೆ ಒಳ್ಳೆಯದಾಗಬಹುದು ಅನ್ನುವ ನಂಬಿಕೆಯಿಂದ ದೇವರನ್ನು ಕಟ್ಟಿಸುವ ನಿರ್ಧಾರಕ್ಕೆ ಬಂದರು. ಅವರ ನಂಬಿಕೆಗಿಂತ ನನಗೆ ನನ್ನ ಸ್ವಾತಂತ್ರ್ಯ ಮುಖ್ಯವಾಗಿತ್ತು.

ಅದೇ ವಾರದ 'ಶುಕ್ರವಾರ'ದಂದು ಹುಲಿಗೆಮ್ಮನ ದೀಕ್ಷೆ ಕೊಡಿಸಬೇಕು ಅಂತ ನಿರ್ಧಾರ ಮಾಡಿದರು. ಗುರುವಾರನೇ ಅದರ ಸಿದ್ಧತೆ ನಡೆದಿತ್ತು. ನನಗೆ ಒಂದು ಬಗೆಯ ಖುಷಿ ಮತ್ತೊಂದು ಬಗೆಯ ದುಃಖವಾಗುತ್ತಿತ್ತು. ನಾನು ನಾಳೆ ನನ್ನ ದೇಹ ಬಯಸುವ, ನನ್ನ ಮನಸ್ಸು ತುಡಿಯುತ್ತಿರುವ ಜಾಗಕ್ಕೆ ಹೋಗುತ್ತಿದ್ದೇನೆ. ಮನೆಯವರು ಮತ್ತು ಜನರು ಕೊಡುವ ಹಿಂಸೆಗಳಿಂದ ಮುಕ್ತಿ ಪಡೆಯುತ್ತಿದ್ದೇನೆ. ನನ್ನ ದೇಹ ಬಯಸುವ ಬಟ್ಟೆಯನ್ನು ಸ್ವತಂತ್ರವಾಗಿ ತೊಡಬಹುದು ಎನ್ನುವ ಆಸೆ ಚಿಗುರುತ್ತಿತ್ತು. ಇತ್ತ ಅವ್ವ-ಅಪ್ಪ ಅಳುತ್ತಿದ್ದರು. ಅವರ ಸಂಕಟ ದುಃಖ ತರುತ್ತಿತ್ತು. ವಿಶೇಷವಾಗಿ ಅವ್ವ ನೋವು ಪಡುತ್ತಿದ್ದ ರೀತಿಯಂತೂ ನನ್ನನ್ನು ಕೊಲ್ಲುತ್ತಿತ್ತು. ಹೆತ್ತಕರುಳು ಗೋಳಾಡುತ್ತಿತ್ತು. ನನಗೂ ಅವ್ವನ ಸಂಕಟ ಅರ್ಥವಾಗುತ್ತಿತ್ತು. ಆದ್ರೆ ಅವರ ನಿರೀಕ್ಷೆಗೆ ತಕ್ಕಂತೆ ಹೊಂದಿಕೊಳ್ಳುವ ಮನಸ್ಥಿತಿಯಂತೂ ನನಗಿರಲಿಲ್ಲ. ಆ ವೇಳೆಗಾಗಲೇ ನನ್ನ ಮನಸ್ಸು ಮತ್ತು ದೇಹ ಅದನ್ನೆಲ್ಲ ಮೀರಿ ನಿಂತಿತ್ತು. ಹಂಗಾಗಿ ಅವರ ಸಂಕಟವನ್ನು ಅರ್ಥ ಮಾಡಿಕೊಂಡರೂ ಅದಕ್ಕೆ ಸ್ಪಂಧಿಸುವುದರಲ್ಲಿ ಶಕ್ತಿಹೀನ ನಾನು ಅನ್ನುವುದು ಗ್ಯಾರಂಟಿಯಾಗಿತ್ತು. ಅದಕ್ಕೆ ಅಮ್ಮನಿಗೆ ಏನೋ ಒಂದೆರಡು ಮಾತು ಹೇಳಬೇಕು ಅಂತ ಅನ್ನಿಸಿತು. ಆಗ ಅಮ್ಮ ತೊಡೆಯ ಮೇಲೆ ಮಲಗಿ ನನಗೆ ನಿನ್ನ ದುಃಖ, ಸಂಕಟ ಅರ್ಥವಾಗುತ್ತಿದೆಯಮ್ಮ. ನಾನಾಗಿಯೇ ನಿಮಗೆ ತೊಂದರೆ ಕೊಡುತ್ತಿಲ್ಲ. ನನ್ನ ದೇಹ ನಿಮಗೆ ತೊಂದರೆ ಕೊಡುತ್ತಿದೆ. ಈ ನನ್ನ ದೇಹ ಮತ್ತು ಮನಸ್ಸಿನ ವಿರುದ್ಧ ನಡೆಯುವುದಕ್ಕೆ ನನ್ನಿಂದಾಗುತ್ತಿಲ್ಲ. ನಾನು ದೇಹದ ವಿರುದ್ಧ ಹೋರಾಡಿ ಸಹ ನಿಮ್ಮಂತೆ ಸೋತಿದ್ದೇನೆ. ಹಂಗಾಗಿ ನನ್ನನು ಕ್ಷಮಿಸಿಬಿಡಮ್ಮ ಎಂದು ಕೈಮುಗಿದು ಕೇಳಿಕೊಂಡೆ. ಆಗ ಅಮ್ಮ ನನ್ನ ತಲೆ ಮೇಲೆತ್ತಿಕೊಂಡು ಇಲ್ಲ ಮಗನೆ, ನಿನ್ನ ಮೇಲೆ ಕೋಪ ನಮಗಿಲ್ಲ. ಆ ದೇವತೆ ಹುಲಿಗೆಮ್ಮ ಇಂತಹ ಸ್ಥಿತಿಯನ್ನು ನಿನಗೆ ತಂದಿದ್ದಾಳೆಯಲ್ಲ. ಆ ದೇವತೆಗೆ ನನ್ನ ಕಷ್ಟ ಅರ್ಥವಾಗಲಿಲ್ಲವೆ? ಆಕೆಗೆ ನನ್ನ ಗೋಳು ಕೇಳುವುದಿಲ್ಲವೆ? ಆಕಿ ಹೆಣ್ಣಲ್ಲವೆ? ಹೆಣ್ಣು ದೇವತೆಯಾಗಿ ಹೆಣ್ಣಿನ ಸಂಕಟ ಅರ್ಥವಾಗುತ್ತಿಲ್ಲವೆ? ನನ್ನಿಂದ ಕಿತ್ತುಕೊಂಡು ಆಕೆಯ ಹೊಟ್ಟೆಯಲ್ಲಿ, ಮಡಿಲಲ್ಲಿ ಹಾಕಿಕೊಳ್ಳುತ್ತಿದ್ದಾಳೆಯಲ್ಲ ಇದು ಯಾವ ನ್ಯಾಯ? ಎಂದು ಅತ್ತಳು. ಒಂದಿಷ್ಟು ಹೊತ್ತು ಅತ್ತು ಕೊನೆಗೆ ಆ ದೇವತೆ ಇಚ್ಚೆಯಂತೆ ನಾವು ನಡೆಯಬೇಕೆಂದು ಹೇಳಿ ನನ್ನನ್ನು ಸಮಾಧಾನಪಡಿಸಿದಳು. ಅಮ್ಮನ ತಾಳ್ಮೆ ದೊಡ್ಡದಲ್ಲವೆ. ಅವತ್ತು ಆ ದೊಡ್ಡಗುಣಕ್ಕೆ ಧನ್ಯತೆ ಹೇಳಿದ್ದೆ.

### ನನ್ನ ತಾಳಿ ನಾನೇ ಕಟ್ಟಿಕೊಂಡೆ

ಇವತ್ತಿನ ಹೊಸಪೇಟೆ ತಾಲೂಕು ಹುಲಿಗಿ ಗ್ರಾಮದ ಸುಪ್ರಸಿದ್ಧ ಹುಲಿಗೆಮ್ಮ ದೇವಸ್ಥಾನದಲ್ಲಿ ನಾನು 'ಜೋಗತಿ ದೀಕ್ಷೆ' ತೆಗೆದುಕೊಂಡೆ. ನಾನು ಜೋಗತಿಯಾದ ಕಾಲದಲ್ಲಿ ಪೂಜಾರಿಗಳೇ ಜೋಗತಿ ದೀಕ್ಷೆ ಕೊಡುತ್ತಿದ್ದರು. ಈಗ ಆ ಪದ್ಧತಿಯನ್ನು

ನಿಲ್ಲಿಸಿದ್ದಾರೆ. ಅವರು ನಿಲ್ಲಿಸಿದ್ದಾರೆ ಅನ್ನುವುದಕ್ಕಿಂತ ಸರ್ಕಾರ ಅಂತಹ ಪದ್ಧತಿಯನ್ನು ನಿಲ್ಲಿಸಬೇಕೆಂದು ಹೇಳಿದೆ. ಹುಲಿಗಿಯಲ್ಲಿ ಮಾತ್ರವಲ್ಲ ಸೌದತ್ತಿ ಮುಂತಾದ ದೇವಸ್ಥಾನಗಳಲ್ಲೂ ಸಹ ನಿಲ್ಲಿಸಿದ್ದಾರೆ. ಪೂಜಾರಿಗಳು ಕೊಡುತ್ತಿದ್ದ ಜೋಗತಿ ದೀಕ್ಷೆ ನಿಲ್ಲಿಸಿದ ನಂತರ ಯಾರಾದ್ರೂ ಜೋಗತಿಯರಾದ್ರೆ ಅಂತವರು ಹಿರಿಯ ಜೋಗತಿಯರ ಸಮ್ಮುಖದಲ್ಲಿ ಜೋಗತಿ ದೀಕ್ಷೆ ತಗೊಂತಾರೆ. ಈ ಪದ್ಧತಿ ಪೂಜಾರಿಗಳು ಮುತ್ತುಕಟ್ಟುವ ಪದ್ಧತಿಯಷ್ಟು ಮಾನ್ಯತೆ ಪಡೆಯುತ್ತಿಲ್ಲ. ಇತ್ತೀಚೆಗೆ ಅಷ್ಟಕ್ಕೂ ದೇಹದಲ್ಲಿ ನನ್ನಂತಾದವರು ಯಾರು ಜೋಗತಿಯರಾಗುವುದಕ್ಕೆ ಇಷ್ಟಪಡುತ್ತಿಲ್ಲ. ಅಲ್ಲದೆ ಜೋಗತಿಯರಾಗದೆ ಇರುವವರಲ್ಲಿ ಕೆಲವರು ಅನೇಕ ಅನೈತಿಕ ಚಟುವಟಿಕೆಗಳನ್ನು ಮಾಡುವುದಕ್ಕೆ ಕಾರಣವಾಗಿದ್ದಾರೆ. ನೀವೇ ಪತ್ರಿಕೆಗಳಲ್ಲಿ ಗಮನಿಸಿದ್ದೀರಲ್ಲವೆ? ದೈವಿಸ್ವರೂಪ ಜೋಗತಿಯರು ಅನೈತಿಕ ಕೆಲಸ ಮಾಡುವುದು ಕಡಿಮೆ. ಅವರಲ್ಲಿ ಭಯ, ಭಕ್ತಿ, ನೀತಿ ಜನರ ಅಭಿಮಾನ, ಪ್ರೀತಿ ಕಾಡುತ್ತಿರುತ್ತವೆ. ನನಗೆ ಹುಲಿಗೆಮ್ಮನ ಪೂಜಾರಿಗಳೇ ದೀಕ್ಷೆ ನೀಡಿದ್ದರು. ಆ ಸಂದರ್ಭದಲ್ಲಿ ಅನೇಕ ಆಚರಣೆಗಳನ್ನು ಮಾಡುವ ಸಂಪ್ರದಾಯ ಜೋಗತಿ ಸಂಸ್ಕೃತಿಯಲ್ಲಿದೆ. ಆ ಆಚರಣೆಗಾಗಿ ಐದುಜನ ಹಿರಿಯ ಜೋಗತಿಯನ್ನು ಕರೆಯಿಸಿರುತ್ತಾರೆ. ಅವರ ಸಮ್ಮುಖದಲ್ಲಿ ಅವತ್ತು ದೇವಾಲಯದ ಮುಂಭಾಗದಲ್ಲಿ ಹರಿಯುವ ತುಂಗಭದ್ರಾ ಹೊಳೆಯಲ್ಲಿ ಸ್ನಾನ ಮಾಡಬೇಕು. ನಾನು ಸ್ನಾನ ಮಾಡಿದ್ದೆ. ಸ್ನಾನ ಮಾಡಿ ಹೊರಬಂದಾಗ ಹಿರಿಯ ಜೋಗತಿಯರು ಉಡುದಾರ ಹರಯಬೇಕೆನ್ನುವ ಪಾರಂಪರಿಕ ಸಂಪ್ರದಾಯವಿದೆ. ನನ್ನ ಉಡುದಾರವನ್ನು ಸೋದರಮಾವ 'ಗಾಂದೆಮ್ಮ ಜೋಗತಿ' ಹರಿದಿದ್ದರು. ಯಾರು ಉಡುದಾರ ಹರಿಯುತ್ತಾರೋ ಅವರು ನಮಗೆ ತಾಯಿ ಇದ್ದಂತೆ. ಅವರನ್ನು ಅಮ್ಮನೆಂದು ಕರೆಯಬೇಕು ಎನ್ನುವ ಪಾರಂಪರಿಕ ಪದ್ಧತಿ ನಮ್ಮಲ್ಲಿದೆ. ನಾನು ಮಾವನನ್ನು ಯಾವತ್ತೂ ಅಮ್ಮನೆಂದು ಕರೆಯಲಿಲ್ಲ. ಆದ್ರೆ ಅವರು ಸತ್ತ ದಿವಸ ವರ್ಷಕ್ಕೊಮ್ಮೆ ಅವರ ಹೆಸರಿನಲ್ಲಿ ಸೀರೆ, ಜಾಕೇಟು ಏರಿಸ್ತೀನಿ. ಹಿಂಗ ಮಾಡುವುದರ ಮುಖಾಂತರ ಅಮ್ಮನ ಜನ್ಮಕ್ಕೆ ಶಾಂತಿ ಸಿಗಲೆಂದು ದೇವರಲ್ಲಿ ವರ್ಷಕ್ಕೊಮ್ಮೆ ಬೇಡಿಕೊಂಡು ಬಂದೀನಿ. ಇದನ್ನ ನನ್ನ ಜೀವ ಇರೋತನಕ ಮಾಡಬೇಕು ಅನ್ನೋ ಆಸೆ ನನ್ನಲ್ಲಿದೆ.

ಉಡುದಾರ ಹರಿದಮ್ಯಾಗ ದೇವಸ್ಥಾನದಲ್ಲಿ ಕೂಡಿಸಿ ಕೆಲವು ಆಚರಣೆಗಳನ್ನು ಮಾಡುತ್ತಾರೆ. ಆಮೇಲೆ ನಾವು ಹುಲಿಗೆಮ್ಮ ದೇವತೆಯ ಆಶೀರ್ವಾದ ಪಡೆದುಕೊಳ್ಳಬೇಕು. ಆಗ ನಾನು ಬಾಳ ಭಕ್ತಿಪೂರ್ವಕವಾಗಿ ಆ ದೇವತೆಯಲ್ಲಿ ನನ್ನ ಈ ಸ್ಥಿತಿಯನ್ನು ನೋಡಿ ಅಳುತ್ತಿರುವ ನನ್ನ ಹೆತ್ತಮ್ಮನ್ನು ಸಮಾಧಾನಪಡಿಸುವಂತೆ ಬೇಡಿಕೊಂಡಿದ್ದೆ. ನನ್ನ ಹೆತ್ತು-ಹೊತ್ತು ಬೆಳೆಯಿಸಿ ನಿನಗೆ ಅರ್ಪಿಸಿರುವ ಆ ತಾಯಿಯನ್ನು ಇವತ್ತಿನಿಂದ ನನ್ನ ತಾಯಿಯಾದ ನೀನು ಕಾಪಾಡು ಎಂದು ಕೇಳಿಕೊಂಡಿದ್ದೆ. ಆಗಂತೂ ನನ್ನ ಕಣ್ಣಲ್ಲಿ ನೀರು ಬರುತ್ತಿದ್ದವು. ಆ ನಂತರ ಹಿರಿಯ ಜೋಗತಿಯರು ಪೂಜಾರಿ

ಮನೆಗೆ ಕರಕ್ಕೊಂಡೋದ್ರು. ಅಲ್ಲಿ ಸೀರೆ ಉಡಿಸಿ, ಉಡಕ್ಕಿ ಹಾಕಿದ್ರು. ಪೂಜಾರಿನೇ ಮುತ್ತು ಕಟ್ಟಿದ್ರು. ಅದಾದಮ್ಯಾಲೆ ಇದು ಹುಲಿಗೆಮ್ಮನ ತಾಳಿ. ಈ ತಾಳಿಯನ್ನು ನೀವೇ ಕಟ್ಟಿಕೊಳ್ಳಿ ಅಂತ ನಮ್ಮ ಕೈಗೆ ಕೊಟ್ರು. ಆಗ ನನ್ನ ತಾಳಿಯನ್ನು ನಾನೇ ಕಟ್ಟಿಕೊಂಡೆ. ಆ ಸಂದರ್ಭ ಜೋಗತಿಯರ ಲೆಕ್ಕದಲ್ಲಿ ಮದುವೆ ಇದ್ದಂಗೆ. ಈ ಆಚರಣೆಯಲ್ಲಿ ಮನೆಯವರು ಭಾಗಿಯಾಗಿರಲೇಬೇಕು. ಅವತ್ತು ಬಿಳಿಸೀರೆ, ಬಿಳಿ ಜಾಕೇಟು, ಬಿಳಿ ಪೇಟಿಕೋಟು, ಅರಿಶಿಣ, ಕುಂಕುಮ ಕೊಟ್ಟು ಬಳೆ ಹಾಕಿಸಿದ್ರು. ಆಗಂತು ನನ್ನೆತ್ತವ್ವನ ಗೋಳಾಟವನ್ನು ನಾನೇಳಲಾರೆ.

ದೇವರ ಕಟ್ಟಿಸಿಕೊಂಡು ಕುಕ್ಕವಾಡಕ್ಕೆ ಕರಕ್ಕೊಂಡೋದ್ರು. ಅಲ್ಲಿಂದಲೇ ಆರಂಭವಾಯ್ತು ನನ್ನ ಇನ್ನೊಂದು ರೀತಿಯ ನೋವು. ಆಗಂತೂ ಅನೇಕ ಕಷ್ಟಗಳನ್ನು ಅನುಭವಿಸಿದೆ. ಅಪ್ಪ ಅಂತು ಬಾಳ ಹಿಂಸೆ, ನೋವು ಕೊಟ್ಟರು. ನಾನು ಹೊರಗಡೆ ನಿಂತುಕೊಂಡಿದ್ರೆ ನೀನು ಇಲ್ಲೇನು ಮಾಡ್ತೀಯ? ಒಳಗಡೆ ಹೋಗು ಅಂತಿದ್ರು. ಅಪ್ಪ ಬೈದ್ರು ಅಂತ ಒಳಗಡೆ ಹೋದ್ರೆ ಇಲ್ಲೇನು ಕೆಲಸ ನಿನಗೆ? ಹೆಂಗಸರಂಗ ಯಾವಾಗ್ಲೂ ಒಳಗಡೆ ಇರ್ತೀಯಾ ಹೊರಗೋಗು ಅಂತಿದ್ರು. ಇದ್ಯಾವುದು ಬೇಡ ಅಂತ ನನ್ನ ಪಾಡಿಗೆ ನಾನು ಸುಮ್ಮನೆ ಕೂತುಕೊಂಡ್ರೆ ಯಾಕೆ ಸುಮ್ಮನೆ ಕುಳಿತುಕೊಂಡಿಯಾ? ಏನಾದ್ರು ಕೆಲಸ ಮಾಡು ಅಂತಿದ್ರು. ಯಾರಾದ್ರಾತ್ತಿರ ಮಾತನಾಡು ಅಂತಿದ್ರು. ಅಪ್ಪ ಹಿಂಗಂದ್ರು ಅಂತ ಯಾರ ಜೊತೆಗಾದ್ರು ತಲೆ ಬಾಚಿಕೊಂಡು ಕೂತುಕೊಂಡ್ರೆ ಅದಕ್ಕೂ ಬೈಯ್ಯುತ್ತಿದ್ರು. ನೀರಿಗೆ ಅಂತ ಹೋಗಿ ಹುಡುಗರ ಜೊತೆ ಮಾತನಾಡಿಕೊಂತ ನೀರು ತಂದ್ರೆ ಆ ಹುಡುಗರ ಹತ್ತಿರ ನಿನಗೇನು ಕೆಲಸ ಅಂತ, ಹೆಣ್ಣುಮಕ್ಕಳ ಜತೆ ಮಾತನಾಡಿದ್ರೆ ಹೆಣ್ಣುಮಕ್ಕಳ ಜೊತೆ ನಿಂದೇನು ಕೆಲಸ ಅಂತ ಬೈಯ್ತಿದ್ರು. ಒಮ್ಮೊಮ್ಮೆಯಂತೂ ಹೊಡೆಯಾಕೆ ಬರುತ್ತಿದ್ರು. ಆದ್ರೆ ದೇವರು ಕಟ್ಟಿಸಿಕೊಂಡವನೆ ಅನ್ನೋ ಕಾರಣಕ್ಕೆ ಹೊಡೆತಿರಲಿಲ್ಲ. ಹಿಂಗ ಎಲ್ಲೋದ್ರು, ಏನು ಮಾಡಿದ್ರೂ ಅಪ್ಪ ನನ್ನನ್ನು ಸೇರುತ್ತಿರಲಿಲ್ಲ. ಆಗಂತೂ ಮನಸಿಗೆ ತುಂಬಾ ನೋವಾಯ್ತು. ಆ ನೋವು ಆತ್ಮಹತ್ಯೆ ಮಾಡಿಕೊಳ್ಳಬೇಕು ಎನ್ನುವ ನಿರ್ಧಾರಕ್ಕೆ ಬಂದು ನಿಂತಿತ್ತು.

ನನ್ನ ಜೀವನ ಅನ್ನುವುದು ಸಮುದ್ರದ ಗಿಡ ಇದ್ದಾಂಗ. ಈ ಗಿಡವನ್ನು ಯಾರೂ ಬೆಳಸಂಗಿಲ್ಲ ಒಂದು ವೇಳೆ ಬೆಳೆದ್ರು ಇದರ ನೆರಳಿಗೆ ಯಾರು ಬರೋದಿಲ್ಲ. ಸೀರೆಯುಟ್ಟು ಈಗಿನ್ನು ಇಪ್ಪತ್ತೊಂದು ದಿವಸ ಆಗೈತಿ. ನನ್ನ ಮನೆಯಲ್ಲೇ ನನ್ನ ಹೆತ್ತವರೇ ಸೆರ್ತಾಯಿಲ್ಲ ಅಂದ್ರೆ ಹೊರಗಿನ ಜನ ಯಾರು ಸೇರ್ತಾರೆ! ನನ್ನನ್ನು ಇಷ್ಟಪಡುವವರು ಯಾರು? ನನ್ನ ದೇಹವೇ ಉಂಟುಮಾಡಿದ ಆರೇಳು ವರ್ಷಗಳ ನೋವಿಗಿಂತ ಈ ಆರೇಳು ದಿನದ ನೋವು ದೊಡ್ಡದಾಗಿ ಬಿಟ್ಟಿದೆಯಲ್ಲ ಅನ್ನುವ ಭಯ ಕಾಡುವುದಕ್ಕೆ ಆರಂಭವಾಯ್ತು. ಆಗ ನಾನು ಬದುಕಿರಲೇಬಾರದು ಅಂತ ನಿರ್ಧಾರ ಮಾಡಿದೆ. ದಾವಣಗೆರೆಗೆ ಹೋಗಿ ವಿಷ ತಂದೆ. ರಾತ್ರಿ ಊಟ ಮಾಡಿ, ವಿಷ ಕುಡಿದು ಬಾಯಿಗೆ

ಬಟ್ಟೆ ತುರಿಕಿಕೊಂಡು ಒಂದು ಕೋಣೆಯಲ್ಲಿ ಮಲಗಿಬಿಟ್ಟೆ. ವಿಷ ಕುಡಿದೀನಿ, ಎಲ್ಲಿ ಯಾವಾಗ ವಾಂತಿಯಾಗತ್ತೈತೇನು? ಆ ಶಬ್ದ ಕೇಳಿ ಮನಿಯಾಗಿನ ಜನ ನನ್ನತ್ತಿರ ಬಂದುಬಿಡ್ತಾರೆ. ಏನಾಗೈತಿ ಅಂತ ಕೇಳಿ ಆಸ್ಪತ್ರೆಗಾಕಿ ನನ್ನನ್ನು ಬದುಕಿಸಿಬಿಡ್ತಾರೆ. ಹಿಂಗಾಗಿ ಬದುಕಿದ್ರ ಮತ್ತಷ್ಟು ನೋವು ಅನುಭವಿಸಬೇಕಾಗುತ್ತೆ. ನಾನಿನ್ನು ಬದುಕಲೇ ಬಾರದು ಅಂತ ಬಾಯಿಯಲ್ಲಿ ಹಳೆಹರುಬಿ ತುರುಕಿಕೊಂಡು ಮಲಗಿಬಿಟ್ಟೆ. ವಿಷ ಕುಡಿದ ಸ್ವಲ್ಪ ಹೊತ್ತಿನಮ್ಯಾಗ ಸಂಕಟ ಸುರುವಾಯ್ತು. ಆಗ ಪ್ರಜ್ಞೆ ತಪ್ಪಿತು. ಈ ಹಂತ ತಲುಪುವವರೆಗೆ ಮಾತ್ರ ಎಚ್ಚರವಿದ್ದೆ. ಆ ಸಂಕಟ ತಾಳಲಾರದೆ ನನಗೆ ಗೊತ್ತಿಲ್ಲದಂತೆ ಒದ್ದಾಡಿದೀನಿ. ಬಾಯಿಯಾಗ ಇಟ್ಟುಕೊಂಡ ಬಟ್ಟೆ ಯಾವಾಗ ಹೊರಗೆ ಬಂದೈತೊ ಗೊತ್ತಿಲ್ಲ. ಆಗ ಜೋರಾಗಿ ವಾಂತಿ ಮಾಡಿಕೊಂಡೀನಿ. ಆ ಶಬ್ದಕ್ಕ ಮನೆಯವರು ಎದ್ದು ನನ್ನ ಹತ್ತಿರ ಬಂದ್ರು. ನಾನೇನು ಮಾತನಾಡಲಿಲ್ಲ. ಮಾತನಾಡುವ ಸ್ಥಿತಿಯಲ್ಲಿ ನಾನಿರಲಿಲ್ಲ. ನನ್ನ ಸಂಕಟ ನನಗೆ. ಆಗ ರಾತ್ರಿ ಏನಾದ್ರು ತಿಂದಿರ್‍ತಾನೆ ಅದಕ್ಕೆ ವಾಂತಿ ಆಗಾಕತ್ತೈತಿ ಅಂತ ಅವರಷ್ಟಿಗೆ ಅವರೇ ಮಾತನಾಡಿಕೊಂಡ್ರು. ಆ ಮಾತು ಕೇಳಿತಾದ್ರು ಅದಕ್ಕೆ ಉತ್ತರವಾಗಿ ನಾನೇನು ಹೇಳಲಿಲ್ಲ. ಅವರೆದುರಿಗೆ ಮತ್ತೊಮ್ಮೆ ವಾಂತಿಯಾಯ್ತು. ಆಗ ಅಮ್ಮ ನನ್ನ ಕೈಯಲ್ಲಿ ಹಳೆ ಹರುಬಿ ಕೊಟ್ಟರು. ಬಾಯಿ ಒರೆಸಿಕೊಂಡೆ ಅವ್ವ ವಾಂತಿ ಮಾಡಿದ್ದನ್ನು ಬಳಿದ್ಲು. ನಾನು ಆ ಹರಬಿಯನ್ನು ಎಸೆಯೋಣ ಅಂತ ಹೊರಗಡೆ ಹೋದೆ. ಬಟ್ಟೆ ಎಸೆದು ಮನೆ ಒಳಗಡೆ ಬರಲಿಕ್ಕೆ ಆಗಲಿಲ್ಲ. ಹೊಟ್ಟೆಯಲ್ಲಿ ಅಷ್ಟೊಂದು ಸಂಕಟವಾಗುತಿತ್ತು. ತಲೆ ತಿರುಗುತಿತ್ತು. ಹಾಗಾಗಿ ನಾನು ಅಲ್ಲೆ ಮಲಗಿಕೊಂಡುಬಿಟ್ಟೆ.

ಆಗ ಚಿಗಟೇರಿ ಆಸ್ಪತ್ರೆಗೆ ಕರಕೊಂಡೋಗಿ ತೋರಿಸಿದ್ದಾರೆ. ವಿಷಯ ತಿಳಿದಿದೆ. ಆಗಂತೂ ನನಗೆ ಹದಿನೈದು ದಿವಸ ಪ್ರಜ್ಞೆ ಇರಲಿಲ್ಲ. ಆ ಹದಿನೈದು ದಿನ ನನ್ನ ಅವ್ವ ನನ್ನ ಜೊತೆಗಿದ್ರು. ಹದಿನೈದು ದಿವಸದ ನಂತರ ಪ್ರಜ್ಞೆ ಬಂತು. ಅವತ್ತೇ ನನ್ನೊಬ್ಬಳನ್ನು ಆಸ್ಪತ್ರೆಯಲ್ಲಿ ಬಿಟ್ಟು ಹೋದ್ರು. ನಾನು ಒಂದು ತಿಂಗಳು ಆಸ್ಪತ್ರೆಯಲ್ಲಿದ್ರೂ ಯಾರೂ ತಿರುಗಿ ನೋಡಲಿಲ್ಲ. ಆಗಂತೂ ಈ ಜೀವನವೇ ಬೇಡವೆನಿಸಿತು. ಆ ಹುಲಿಗೆಮ್ಮ ದೇವಿ ಇಂತಹ ಸ್ಥಿತಿಯನ್ನು ಅನುಭವಿಸುವುದಕ್ಕಾಗಿಯೇ ಈ ರೀತಿ ಮಾಡಿದ್ದಾಳೆಯೇ? ನನ್ನನ್ನು ಬದುಕಿಸಿದ್ದಾಳೆಯೇ? ಎನ್ನುವ ನೋವು ದುಃಖವಾಗುತ್ತಿತ್ತು. ಆದರೆ ಯಾಕೋ ಏನೋ ಅವತ್ತು ಇನ್ಮುಂದೆ ಸಾಯುವ ಪ್ರಯತ್ನ ಮಾಡಲೇಬಾರದು. ಅವರಿಗಿಂತ ಚೆನ್ನಾಗಿ ಬದುಕಿ ತೋರಿಸಬೇಕು ಎನ್ನವ ತೀರ್ಮಾನ ಮಾಡಿದೆ. ಆ ತೀರ್ಮಾನವೇ ಈ ಹಂತಕ್ಕೆ ಬರುವುದಕ್ಕೆ ಕಾರಣವಾಯ್ತು ಅಂತ ಅನ್ನಿಸುತ್ತಿದೆ.

**ರೋಗಿಗಳ ಮುಂದೆ ಹಾಡಿ, ಕುಣಿದು ಹೊಟ್ಟೆ ತುಂಬಿಸಿಕೊಂಡೆ**

ಆಸ್ಪತ್ರೆಯಲ್ಲಿ ಮನೆಯವರೆಲ್ಲ ಬಿಟ್ಟು ಹೋದಮ್ಯಾಲೆ ಅಲ್ಲಿನ ಬದುಕು ಕಷ್ಟವಾಯ್ತು. ಮನೆಯವರು ಹಿಂಗ ಮಾಡಿಹೋದ ಮರುದಿನನೇ ಆಸ್ಪತ್ರೆ ಬಿಟ್ಟು ಹೋಗಿಬಿಡೋನಾ

ಅಂತ ಹೊರಟೆ. ಆಗ ಡಾಕ್ಟರ್ ಈಗ ನೀನು ಹೋಗಲೇಬೇಡ. ನೀವಿನ್ನು ಆರೋಗ್ಯ ವಾಗಿಲ್ಲ. ನಿಮ್ಮ ಜೊತೆ ನಾವಿದ್ದೇವೆ. ಭಯಪಡುವ ಅಗತ್ಯವಿಲ್ಲ. ಇನ್ನೊಂದಿಷ್ಟು ದಿನ ಟ್ರೀಟ್‌ಮೆಂಟ್ ತಗೊಂಡ್ಹೋಗಿ ಅಂತ ಹೇಳಿದ್ರು. ಹಂಗಾಗಿಯೇ ಅಲ್ಲೇ ಉಳಿದೆ. ಅಲ್ಲೇ ಉಳಿದ ಕಾರಣಕ್ಕಾಗಿಯೇ ಇರುವಷ್ಟು ದಿನಗಳ ಕಾಲ ಅಲ್ಲೇ ಬದುಕನ್ನು ಕಟ್ಟಿಕೊಳ್ಳಬೇಕಾಯಿತು. ಅದಕ್ಕಾಗಿಯೇ ಡಾಕ್ಟರ್ ಹೊರಗಡೆ ಹೋದಮೇಲೆ ನರ್ಸ್‌ಗಳು, ಪೇಶೆಂಟ್‌ಗಳ, ಪೇಶೆಂಟ್ ನೋಡಿಕೊಳ್ಳುವುದಕ್ಕೆ ಬಂದ ಜನರ ಮುಂದೆ ನನಗೆ ಗೊತ್ತಿರುವ ಹಾಡುಗಳನ್ನು ಹಾಡಿ, ಕುಣಿಯುತ್ತಿದ್ದೆ. ಹಿಂಗ ಕುಣಿದು-ಕುಣಿದು ಜನರ ಪ್ರೀತಿ ಗೆದ್ದು ಹೊಟ್ಟೆ ತುಂಬಿಸಿಕೊಂಡೆ. ಕೆಲವರು ಮನೆಗಿಂದ ಕಟ್ಟಿಕೊಂಡು ಬಂದ ಬುತ್ತಿಯಲ್ಲೇ ನನಗೂ ಕೊಟ್ಟು ಉಣ್ಣುತ್ತಿದ್ದರು. ಇನ್ನೂ ಕೆಲವರು ಹೋಟೆಲ್‌ಗೆ ಕರಕೊಂಡ್ಹೋಗಿ ಟೀ ಕುಡಿಸುತ್ತಿದ್ದರು. ಮತ್ತೆ ಕೆಲವರು ತಮಗೆ ತಿಳಿದಷ್ಟು ರೊಕ್ಕ ಕೊಡುತ್ತಿದ್ದರು. ಹಳ್ಳಿಯಿಂದ ಬಂದ ಜನ ರೊಕ್ಕ ಕೊಡುತ್ತಿದ್ದು ಕಡಿಮೆ. ನರ್ಸ್‌ಗಳು, ಸಿಟಿಜನ ರೊಕ್ಕ ಕೊಡುತ್ತಿದ್ದರು. ಹಿಂಗ ಮಾಡಿ ಸ್ವಲ್ಪ ರೊಕ್ಕ ಕೂಡಿಟ್ಟುಕೊಂಡೆ. ಬಂದ ರೊಕ್ಕದಾಗ ಖರ್ಚು ಮಾಡಿ ಎಂಟು ಹತ್ತು ರೂಪಾಯಿ ಉಳಿತು. ಆ ರೊಕ್ಕದಲ್ಲಿ ಕುಕ್ಕವಾಡದಲ್ಲಿರುವ ಮನೆಗೆ ಬಂದೆ. ನಾಲ್ಕು ವಾರದ ನಂತರದ ನಾನು ನನ್ನ ಮನೆಗೋಗಿದ್ದು. ಶುಕ್ರವಾರ ಮನೆಬಿಟ್ಟಿದ್ದೆ ಮತ್ತೆ ಶುಕ್ರವಾರಕ್ಕೆ ಒಂದು ದಿವಸ ಮುಂಚೆ ಗುರುವಾರ ಮನೆ ಸೇರಿದ್ದೆ. ಆಗ ನನ್ನನ್ನು ಯಾರು ಮಾತನಾಡಿಸಲಿಲ್ಲ. ಅಲ್ಲಿ ಹೇಗಿದ್ದೆ, ಈಗ ಆರೋಗ್ಯವಾಗಿದಿಯಾ? ಹೇಗೆ ಬಂದೆ? ಅಂತ ಕೇಳಲಿಲ್ಲ. ಆಗಂತೂ ಮನೆಗೆ ಯಾಕಾದ್ರು ಬಂದೆ. ಆಸ್ಪತ್ರೆ ದೇವಾಲಯದಂತಿತ್ತು. ಅಂತಹ ಜಾಗವನ್ನು ಯಾಕಾದ್ರಿ ಬಿಟ್ಟುಬಂದೆ ಅಂತ ಅನ್ನಿಸಿಬಿಟ್ಟಿತು.

ಮರುದಿನ ನಮ್ಮಪ್ಪ ದಾವಣಗೆರೆಗೆ ಹೋಗಿ ಒಂದು ಸೀರೆ ಜಾಕೀಟು ತಂದ್ರು. ಜೋಗತಿಯರಲ್ಲಿ ದೇವರು ಕಟ್ಟಿ ಐದುವಾರ ಆದಮೇಲೆ 'ತಿಂಗಳ ಪೂಜೆ' ಮಾಡಬೇಕು ಎನ್ನುವ ಸಂಪ್ರದಾಯ ಇದೆ. ಆದ್ರೆ ನಾನೇನು ಈ ಪೂಜೆ ಮಾಡಿ ಅಂತ ಮನೆಯವರ್ನ್ನ ಕೇಳಿರಲಿಲ್ಲ. ಯಾಕಂದ್ರೆ ಈ ಆಚರಣೆ ಮಾಡಬೇಕು ಅಂದ್ರೆ ದೇವರು ಕಟ್ಟಿಕೊಂಡ ನಂತರದ ಐದುವಾರ ಉರಾಡಬೇಕು. ಆ ಉರಾಟದಿಂದ ಬಂದ ಕಾಳುಗಳನ್ನು ಸಂಗ್ರಹಿಸಿ ಅದರಿಂದಲೇ ಅಡುಗೆ ಮಾಡಿ, ಐದು ಜನ ಜೋಗತಿಯರನ್ನು ಕರೆಯಿಸಿ 'ಉಡಿ ತುಂಬಿ', ಪಡ್ಲೀಗಿ ತುಂಬಿಸಿ ಅನ್ನ ನೈವೇದ್ಯ ಮಾಡಬೇಕು ಎನ್ನುವ ಪದ್ಧತಿಯಿದೆ. ಆದ್ರೆ ನಾನು ಊರಾಡಿರಲಿಲ್ಲ. ಉರಾಡಬೇಕಾದ ಅಂದ್ರೆ ಭಿಕ್ಷೆ ಬೇಡಬೇಕಾದ ಕಾಲವನ್ನೆಲ್ಲ ಆಸ್ಪತ್ರೆಯಲ್ಲಿ ಕಳೆದಿದ್ದೆ. ಆದ್ರೂ ಅಪ್ಪ ಆ ಕಾರ್ಯಕ್ರಮವನ್ನು ಮಾಡುವುದಕ್ಕೆ ಸಿದ್ಧರಾದ್ರು. ಆಗ ಸಂತೋಷವಾಗಿತ್ತು. ನನ್ನನ್ನು ಮಾತನಾಡಿಸದೇ ಇದ್ರು ಪರವಾಗಿಲ್ಲ, ನನಗೆ ಸಂಬಂಧಿಸಿದ ಕಾರ್ಯಕ್ರಮ ಮಾಡ್ತಾರಲ್ಲ ಅಂತ ಖುಷಿಯಾಗಿತ್ತು. ಆದ್ರೆ ಆ ಖುಷಿ ಬಹಳ ಹೊತ್ತು ಇರಲಿಲ್ಲ. ಈ ಆಚರಣೆಯ ದಿನವೇ ತಂದೆ-ತಾಯಿಯಿಂದ,

ಮನೆಯವರಿಂದ ದೂರ ಮಾಡಿತು. ಅಂದ್ರೆ ನಮ್ಮ ಮನೆ ಹತ್ತಿರ ಹಾಲುಸ್ವಾಮಿ ಮಠದಲ್ಲಿ ಆ ಪೂಜೆ ಮಾಡುತ್ತಿದ್ವಿ. ಜನರೆಲ್ಲ ಸೇರಿದ್ರು. ಆವಾಗ ನಮ್ಮಪ್ಪ ಜನರ ಮುಂದೆ ಆಡಿದ ಮಾತುಗಳು ನನ್ನ ಜೀವನವನ್ನೇ ಬದಲಾಯಿಸಿದವು. ಅವತ್ತಾಡಿದ ಮಾತುಗಳಂದ್ರ "ನೋಡ್ರಿ ನನ್ನ ಮಗ ಜೋಗಮ್ಮ ಆಗಿದ್ದಾನೆ. ಸಾಯಕಂತಲೇ ವಿಷಕುಡಿದ ಸಾಯಲಿಲ್ಲ. ತಿಂಗಳುಗಟ್ಟಲೆ ಆಸ್ಪತ್ರೆಯಲ್ಲಿದ್ದು ಇವತ್ತು ಮನೆಗೆ ಬಂದವನೆ. ಗಂಡಸಾದ್ರೆ ಮದುವೆ ಮಾಡಿ ಬೇರೆ ಮನೆಯಲ್ಲಿ ಇಡ್ತಿದ್ದೆ. ಹೆಂಗಸಾದ್ರೆ ಮದುವೆ ಮಾಡಿ ಗಂಡನ ಮನೆಗೆ ಕಳಿಸ್ತಿದ್ದೆ. ಕುರುಡನೊ, ಕುಂಟನೋ ಆಗಿದ್ರೆ ಒಂದು ಮೂಲೆಯಲ್ಲಿ ಕುಂದ್ರಿಸಿ ಅನ್ನ ಹಾಕುತ್ತಿದ್ದೆ. ಇವನು ಇದಾವುದು ಅಲ್ಲ. ಎಲ್ಲದನ್ನು ಮೀರಿದ್ದಾನೆ. ಎಲ್ಲದಕ್ಕೂ ತಪ್ಪಿದವನಾಗಿದ್ದಾನೆ. ಕುರುಡನೂ ಅಲ್ಲ, ಕುಂಟನೂ ಅಲ್ಲ, ಹೆಣ್ಣು ಅಲ್ಲ. ಗಂಡು ಅಲ್ಲ. ಇವನ್ಯಾವ ಜಾತಿಗೆ ಸೇರದ ಗಂಡುಜೋಗತಿಯಾಗಿದ್ದಾನೆ. ಆ ಜೋಗತಿಯರು ಯಂಗೆ ಜೀವನ ಮಾಡ್ತಾವರೆ ಹಂಗೆ ಜೀವನ ಮಾಡ್ಲಿ" ಅಂತ ಹೇಳಿ ಜನರೆದುರೇ ನನ್ನನ್ನು ನನ್ನ ತಂದೆ ಖುದ್ದಾಗಿ ಮನೆಯಿಂದ ಹೊರಗಾಕಿದ್ರು. ಅಲ್ಲಿಂದ ನನ್ನ ಅಲೆಮಾರಿ ಜೀವನ ಆರಂಭವಾಯ್ತು.

ಆಗಂತು ನಾನೆಲ್ಲಿಗೆ ಹೋಗಬೇಕು ಎನ್ನುವ ದಾರಿ ಕಾಣಲೇಯಿಲ್ಲ. ದೇವಸ್ಥಾನದಲ್ಲಿ ಸುಮ್ಮನೆ ಕುಳಿತುಬಿಟ್ಟೆ. ನನ್ನ ಮನದಲ್ಲಿ ದುಃಖ ತುಂಬಿಕೊಂಡಿತ್ತು. ಜೋರಾಗಿ ಅತ್ತುಬಿಡಬೇಕು ಎನ್ನವು ಮನಸ್ಥಿತಿ ಇತ್ತು. ಆದ್ರೆ ಅಳುವ ಪ್ರಯತ್ನ ಮಾಡಲಿಲ್ಲ. ಅತ್ತರೆ ಅಲ್ಲಿ ಸೇರಿದ ಜನರೆಲ್ಲ ನನ್ನ ಬಗ್ಗೆ ಕೆಟ್ಟದಾಗಿ ಮಾತನಾಡಿಕೊಂತಾರೆ. ಇದರಲ್ಲಿ ನನ್ನ ಮತ್ತು ಮನೆತನದ ಮರ್ಯಾದೆಯ ಪ್ರಶ್ನೆ ಇದೆ ಎನ್ನುವ ಕಾರಣಕ್ಕಾಗಿಯೇ ಕಷ್ಟಪಟ್ಟು ಅಳು ನುಂಗಿದೆ. ಅವತ್ತು ಅಳು ನುಂಗಿದ್ದು ಬದುಕುವ ಧೈರ್ಯವನ್ನು ತಂದುಕೊಟ್ಟಿತು. ಆಗ ಇವರನ್ನು ಬಿಟ್ಟು ಎಲ್ಲಾದ್ರು ಹೋಗಿಬಿಡೋಣ ಅಂತ ನಿರ್ಧಾರ ಮಾಡಿದೆ. ಆಗ ಆಸ್ಪತ್ರೆಯಲ್ಲಿ ಪರಿಚಯವಾದ ಶ್ರೀಮತಿ ರಾಧಮ್ಮ ತಕ್ಷಣ ನೆನಪಿಗೆ ಬಂದಳು. ಆಸ್ಪತ್ರೆಯಲ್ಲಿ ಅಪ್ಪ ನನ್ನನ್ನು ಬಿಟ್ಟು ಹೋದಾಗ ಆಕೆ ಅವ್ವನಂತೆ ನನಗೆ ಧೈರ್ಯ ತುಂಬಿದ್ದಳು. ಮಗಳಂತೆ ಪ್ರೀತಿಸಿದ್ದಳು. ಹಂಗಾಗಿಯೇ ಆಕೆ ಆ ಸಂದರ್ಭದಲ್ಲಿ ನೆನಪಿಗೆ ಬಂದಳು. ದೇವಸ್ಥಾನದಿಂದ ಮನೆಗೋಗಿ ಆಕೆಯ ವಿಳಾಸವನ್ನು ಬರೆದಿಟ್ಟುಕೊಂಡಿದ್ದ ಚೀಟಿಯನ್ನು ಹುಡುಕಿಕೊಂಡು ಬಟ್ಟೆ, ಪಡ್ಲಿಗಿ ತಗೊಂಡು ತಂದೆ-ತಾಯಿ, ಬಂದು-ಬಳಗದವರನ್ನು ಬಿಟ್ಟು ಹೊರಗಡೆ ಬಂದುಬಿಟ್ಟೆ. ಅವರನ್ನು ಹಿಂದಕ್ಕೆ ತಿರುಗಿ ನೋಡಲಿಲ್ಲ. ನಾನು ಮನೆಬಿಟ್ಟ ದಿವಸ ನನ್ನತ್ತಿರ ಕೇವಲ ಎರಡೇ ಎರಡು ಸೀರೆ ಇದ್ವು. ಅಂದರೆ ಮುತ್ತು ಕಟ್ಟಿಸಿದ ದಿನ ತಂದಿದ್ದ ಒಂದು ಬಿಳಿಸೀರೆ, ಮತ್ತೆ 'ತಿಂಗಳ ಪೂಜೆ' ದಿವಸ ಅಪ್ಪ ಒಂದು ಕಾಟನ್ ಸೀರೆ ತಂದಿದ್ದ. ಆ ಸೀರೆ ನನಗೆ ಆಗ್ತಿರಲಿಲ್ಲ. ಯಾಕಂದ್ರ ಆ ಸೀರೆ ಗಿಡ್ಡಕ್ಕಿತ್ತು. ನಾನು ಎತ್ತರವಿದೀನಿ. ಆದ್ರೂ ಅದನ್ನೇ ಉಟಕೊಂಡು ಅಮ್ಮನಿಗೆ ತೋರಿಸಿದೆ. ಆಗ 'ನೀನು ಉಡಿಯಕ್ಕಿ ಹಾಕಿಕೊಂಡು

ಆಮೇಲೆ ನನಗೆ ಕೊಡು, ನಾನು ಬ್ಯಾರೆ ಸೀರೆ ಕೊಡ್ತೀನಿ ಅಂತ ಒಂದು ಹಳೆಸೀರೆ ಕೊಟ್ಟಿದ್ರು. ಆ ಎರಡು ಸೀರೆಷ್ಯಾಗೆ ಎಷ್ಟೋ ತಿಂಗಳು ಜೀವನ ಮಾಡೀನಿ. ಇವತ್ತು ನನ್ನ ಹತ್ತಿರ ಕಡಿಮೆ ಅಂದ್ರೆ ಐವತ್ತು ಕಾಟನ್ ಸೀರೆ ಅದಾವು. ಎಲ್ಲ ತರಹದ ಸೀರೆ ಸೇರಿದ್ರೆ ಸುಮಾರು ಎಂಬತ್ತು ಆಗಬಹುದು.

## ದೇವಾಲಯದ ಬಂಡೆ ಒರೆಸಿ ಜೀವನ ಮಾಡಿದೆ

ರಾಧಮ್ಮನ ಮನೆಗೋಗಿ ನಮ್ಮ ಮನೆಯಲ್ಲಿ ನಡೆದ ಘಟನೆಯ ವಿಷಯವನ್ನು ಹೇಳಿದೆ. ಆಕಿ ನನ್ನ ಅಪ್ಪ ಅವ್ವನನ್ನು ಬೈದಳು. ನನ್ನನ್ನು ಸಮಾಧಾನಪಡಿಸಿ ತಮ್ಮ ಮನೆ ಹತ್ತಿರವೇ ಇದ್ದ ದೇವಸ್ಥಾನದತ್ತಿರ ಕರೆದುಕೊಂಡು ಹೋದಳು. ದೇವರಿಗೆ ನಮಸ್ಕರಿಸಿ ಆ ದೇವಾಲಯದಲ್ಲಿ ಕುಳಿತುಕೊಂಡೆವು. ಆಗ ದೇವಾಲಯದಲ್ಲಿ ಪೂಜೆ ಮಾಡುತ್ತಿದ್ದ ಅಜ್ಜಿಯನ್ನು ರಾಧಮ್ಮ ಪರಿಚಯಿಸಿದಳು. ದೇವರನ್ನು ಪೂಜೆ ಮಾಡುವುದೇ ಆ ಅಜ್ಜಿಯ ಕೆಲಸವಾಗಿತ್ತು. ರಾಧಮ್ಮ ಈ ಮಂಜಮ್ಮ ನಿನ್ನ ಕೆಲಸಕ್ಕೆ ಸಹಾಯವಾಗುತ್ತಾನೆ ಎಂದಾಗ ಅಜ್ಜಿ ಒಪ್ಪಿಕೊಂಡಿದ್ದಳು. ನಾನು ಅಜ್ಜಿ ಹೇಳಿದ ಕೆಲಸಗಳನ್ನು ಪ್ರೀತಿಯಿಂದ ಮಾಡುತ್ತಿದ್ದೆ. ದೇವರ ಪೂಜಾ ಸಾಮಗ್ರಿಗಳನ್ನು ತೊಳೆಯುತ್ತಿದ್ದೆ. ದೇವಾಲಯದ ಸುತ್ತ ಕಸ ಬಳಿದು ನೆಲ ಒರೆಸುತ್ತಿದ್ದೆ. ಒಮ್ಮೊಮ್ಮೆ ಅಜ್ಜಿಯ ಬಟ್ಟೆಗಳನ್ನು ತೊಳೆದು ಕೊಡುತ್ತಿದ್ದೆ. ಅಜ್ಜಿಗೆ ಅಂತ ಮನೆಯಿಂದ ದೇವಸ್ಥಾನಕ್ಕೆ ದಿನಾಲು ಬುತ್ತಿ ಬರುತ್ತಿತ್ತು. ಅದರಲ್ಲಿ ನನಗೂ ಊಟ ಕೊಡುತ್ತಿದ್ದಳು. ದೇವರ ಪೂಜೆಗೆ ಬಂದ ಹಣ್ಣು, ಹಂಪಲು, ಕೊಬ್ಬರಿ ತೆಗೆದಿಟ್ಟು ತಿನ್ನು ಅಂತ ಕೊಡುತ್ತಿದ್ದಳು. ಈ ಪ್ರೀತಿ ಬಾಳದಿನ ಇರಲಿಲ್ಲ. ಹಿಂಗ ಸುಮಾರು ಒಂದು ತಿಂಗಳು ಕಳೆದಿರಬಹುದು. ಇದ್ದಕ್ಕಿದ್ದಂತೆ ಅಜ್ಜಿ ನನ್ನ ಮ್ಯಾಲ ಬೇಸರಗೊಂಡಳು. ಯಾಕೆ ಅಂತ ಹೇಳಲಿಲ್ಲ. ನನಗೂ ಗೊತ್ತಾಗಲಿಲ್ಲ. ಕಾರಣವಿಲ್ಲದೆ ದಿನಾಲು ಹಗಲು ರಾತ್ರಿ ಬೈಯುತ್ತಿದ್ದಾಳೆ ಅಂತ ಗೊತ್ತಾಗುತ್ತಿತ್ತು. ಊಟ ಮಾಡುವಾಗ್ಲೆ ಅಷ್ಟೆ ಊಟ ಕೊಡುತ್ತಿರಲಿಲ್ಲ. ಕೊಡುವುದಿರಲಿ ಬಾ ಅಂತ ಕರೆಯುತ್ತಿರಲಿಲ್ಲ. ಕೆಲಸ ಹೇಳುತ್ತಿರಲಿಲ್ಲ. ಮಾತನಾಡಿಸಿದ್ರೆ ಮಾತನಾಡುತ್ತಿರಲಿಲ್ಲ. ಎರಡು ದಿನ ಕಳೆದೆ. ಆಗ ಅಳು ಬಂತು. ದಿನ ಅತ್ತು ಅತ್ತು ಸುಮ್ಮನಾಗಿಬಿಡುತ್ತಿದ್ದೆ. ಹಿಂಗ ದೇವಾಲಯಕ್ಕೆ ಬಂದ ಜನ ಕೊಟ್ಟ ಪ್ರಸಾದ ತಿನ್ನುತ್ತ ಹತ್ತು-ಹನ್ನೆರಡು ದಿನ ಕಳೆದೆ. ಸಂಕಟ ತಾಳಲಾರದೆ ರಾಧಮ್ಮನ ಹತ್ತಿರ ಹೋಗಿ ಅತ್ತುಬಿಟ್ಟೆ. ಆಕೆ ನನ್ನನ್ನು ಸಮಾಧಾನಪಡಿಸಿ ಊಟ ಹಾಕಿದಳು. ಮನೆಯಲ್ಲಿರಿಸಿಕೊಂಡು ಮರುದಿನ ದಾವಣಗೆರೆಯ ಜಾಲಿನಗರದಲ್ಲಿದ್ದ ತನ್ನ ತಂಗಿಯ ಮನೆಗೆ ಕರೆದುಕೊಂಡೋಗಿ ಆಕೆಗೆ ನನ್ನನ್ನು ಪರಿಚಯಿಸಿದಳು. ಅವರ ತಂಗಿಯ ಮನೆಯ ಹತ್ತಿರದಲ್ಲಿಯೇ ತಿಂಗಳಿಗೆ ಐವತ್ತು ರೂಪಾಯಿಯಂತೆ ಬಾಡಿಗೆ ಮನೆ ಕೊಡಿಸಿದಳು. ತನ್ನ ಮನೆಯಲ್ಲಿದ್ದ ಒಂದಿಷ್ಟು ಪಾತ್ರೆ ಸಾಮಾನುಗಳನ್ನು ಕೊಟ್ಟು ನಿನ್ನ ಜೊತೆಗೆ ನಾವಿದ್ದೇವೆ ನೀನು ಯಾವುದಕ್ಕೂ ಅಂಜಬೇಡ ಅಂತ ಹೇಳಿ ಧೈರ್ಯ ತುಂಬಿದಳು. ಆಕೆಯ ಗುಣ

ದೊಡ್ಡದು. ಅಲ್ಲಿಂದ ನನ್ನ ಸ್ವತಂತ್ರ ಜೀವನ ಆರಂಭವಾಯ್ತು. ಇಂತಹ ಜೀವನಕ್ಕೆ ಕಾರಣವಾದ ರಾಧಮ್ಮಳನ್ನು ಜೀವನಪೂರ್ತಿ ಮರೆಯಂಗಿಲ್ಲ.

**ಭಿಕ್ಷೆಬೇಡಿ ಮನೆ ಬಾಡಿಗೆ ಕಟ್ಟುತ್ತಿದ್ದೆ**

ಬಾಡಿಗೆ ಮನೆ ಮಾಡಿಕೊಂಡ ಮ್ಯಾಗ ಒಂಟಿಯಾದೆ. ಆಗ ನನ್ನ ಬದುಕನ್ನು ನಾನು ಮಾಡಿಕೊಳ್ಳಲೇಬೇಕಾದ ಅನಿವಾರ್ಯ ಸ್ಥಿತಿ ಬಂತು. ಆಗ ಪಡ್ಲೀಗಿ ತಗೊಂಡು ಭಿಕ್ಷಾಟನೆ ಮಾಡುವುದಕ್ಕೆ ಸುರುಮಾಡಿದೆ. ನಾನು ಮಾಡಬಹುದಾದ ಕೆಲಸ ಅಥವಾ ಮಾಡಲೇಬೇಕಾದ ಕೆಲಸ ಅದಾಗಿತ್ತು. ಹಂಗಾಗಿ ಶುಕ್ರವಾರ, ಮಂಗಳವಾರ ಪಡ್ಲೀಗಿ ತಗೊಂಡು ಊರಾಡುತ್ತಿದ್ದೆ. ಅದರಿಂದ ವಾರಕ್ಕೆ ಏಳೆಂಟು ಕೇಜಿ ಅಕ್ಕಿ ಸಿಗ್ತಾಯಿದ್ವು. ಅದರಲ್ಲಿ ಊಟಕ್ಕೆ ಬೇಕಾದಷ್ಟು ತಕ್ಕೊಂಡು ಉಳಿದವ್ನ ಎರಡು ರೂಪಾಯಿಗೆ ಕೇಜಿಯಂಗ ಮಾರಿ ತಿಂಗಳುಗಟ್ಟಲೆ ಆ ಅಂಗಡಿಯಲ್ಲೇ ರೊಕ್ಕ ಬಿಡುತ್ತಿದ್ದೆ. ಭಾನುವಾರ ಪ್ಯಾಟಿತುಂಬಾ ಪಡ್ಲೀಗಿ ತಗೋಂಡು ಭಿಕ್ಷಾಟನೆ ಮಾಡುತ್ತಿದ್ದೆ. ಹಿಂಗ ಮಾಡೋದ್ರಿಂದ ರೊಕ್ಕಾ, ಅಕ್ಕಿ, ತರಕಾರಿ, ಮೆಣಸಿನಕಾಯಿ ಸಿಗೋದು. ಬಂದ ರೊಕ್ಕದಿಂದ ಎಣ್ಣೆ, ಬೆಲ್ಲ, ಟೀಪುಡಿ, ಸೋಪು ತಗೊಂಡು ಜೀವನ ಮಾಡುತ್ತಿದ್ದೆ. ಹಿಂಗ ಜೀವನ ಮಾಡಿ ಕೂಡಿಟ್ಟ ರೊಕ್ಕಾದಾಗ ತಿಂಗಳ ಬಾಡಿಗೆ ಕಟ್ಟುತ್ತಿದ್ದೆ.

ಒಂದು ದಿವಸ ಸಂತೆಯಲ್ಲಿ ಭಿಕ್ಷೆ ಬೇಡುತ್ತಿರುವಾಗ ಬಯಲಿನಲ್ಲಿ ಸಾಕಷ್ಟು ಜನ ಸೇರಿದ್ರು. ಯಾಕೆ ಅಷ್ಟೊಂದು ಜನರಿದ್ದಾರೆ. ಅಲ್ಲಿಗೆ ಹೋದ್ರೆ ಒಳ್ಳೆ ಕಲೆಕ್ಷನ್ ಆಗಬಹುದು ಅಂತ ಹೋದೆ. ಆದರೆ ಅಲ್ಲಿ ನೃತ್ಯ ನಡೆಯುತ್ತಿತ್ತು. ಸಣ್ಣ ಹುಡುಗ ಜೋಗತಿ ಆಗಿದ್ದ. ಆತ ತಲೆಮ್ಯಾಲೆ ಕೊಡ ಹೊತ್ತು ಕುಣಿಯುತ್ತಿದ್ದ. ಅವರಪ್ಪ ಹಾಡು ಹೇಳುತ್ತಿದ್ದ. ಜನರು ಆ ಕುಣಿತಕ್ಕೆ ಆಕರ್ಷಿತರಾಗಿ ರೊಕ್ಕ ಹಾಕುತ್ತಿದ್ರು. ನಾನು ಸಹ ಕಲೆಕ್ಷನ್ ಆದ ರೊಕ್ಕದಲ್ಲಿ ಒಂದು ರೂಪಾಯಿ ಹಾಕಿದ್ದೆ. ಆ ಹುಡುಗನ ಕುಣಿತ ಅಷ್ಟು ಚೆಂದ ಇತ್ತು. ನನಗೂ ಕುಣಿಯಬೇಕು ಅನ್ನುವ ಆಸೆಯಾಯ್ತು. ಸಣ್ಣ ಹುಡುಗ, ದೇವರು ಹೊತ್ತುಕೊಂಡು ಡ್ಯಾನ್ಸ್ ಮಾಡ್ತಾವನೆ. ನಾನು ಸೀರೆ ಉಟ್ಟುಕೊಂಡಿದ್ದೇನೆ. ಸಾಯಬೇಕು ಅಂತ ವಿಷಕುಡಿದು ಬದುಕಿದ್ದೇನೆ. ತಂದೆ-ತಾಯಿ ಮನೆಯಿಂದ ಹೊರಗಡೆ ಹಾಕಿದ್ದಾರೆ. ಬಂಧುಗಳು ಯಾರು ಸೇರುತ್ತಿಲ್ಲ. ಜನರಿಂದ ಅವಮಾನಿತನಾಗಿದ್ದೇನೆ. ನನ್ನ ಜೀವನ ಇಷ್ಟು ಕೆಟ್ಟ ಅಗೈತಿ ಅಂದಮ್ಯಾಲೆ ಈ ಕಲೆಯನ್ನು ಯಾಕೆ ಕಲಿಯಬಾರ್ದು ಅಂದುಕೊಂಡೆ. ಮಾಹಿತಿ ಪಡೆದುಕೊಂಡರಾಯ್ತು ಅಂತ ಕುಣಿತ ಮುಗಿಯುವ ತನಕ ಅಲ್ಲಿಯೇ ಇದ್ದೆ. ಕುಣಿತ ಮುಗಿತು. ಸೇರಿದ್ದ ಜನರು ಹೋದ್ರು. ನಾನಾಗ ಆ ಯಜಮಾನನತ್ತಿರ ಹೋಗಿ 'ಅಪ್ಪಾಜಿ' ಅಂದೆ. ಅವರಿಗೆ ಆಶ್ಚರ್ಯವಾಯ್ತು. ಒಮ್ಮೆ ಗಾಬರಿಯಿಂದ ದಿಟ್ಟಿಸಿ ನನ್ನನ್ನು ನೋಡಿ ಏನಮ್ಮ ಅಂದ್ರು. ನಿಮ್ಮ ಮಗ ಕುಣಿತನಲ್ಲ ಹಂಗೆ ನಾನು ಕುಣಿಯಬೇಕು ಅನ್ನುವ ಆಸೆ ಐತಿ, ಕಲಿಸಿ ಕೊಡ್ತೀರಾ ಅಂದೆ. ಅದಕ್ಕ ನನ್ನನ್ನು ಪಕ್ಕಕ್ಕೆ

ಕುಂದ್ರಿಸಿಕೊಂಡು ಮಾತನಾಡಿದ್ರು. ನನ್ನ ಬಗ್ಗೆ ಕೇಳಿದ್ರು. ನಾನು ಜೀವನದಲ್ಲಿ ನಡೆದಿರುವುದನ್ನೆಲ್ಲ ಹೇಳ್ದೆ. ಅವರಿಗೆ ನನ್ನ ಕಷ್ಟ ಅರ್ಥವಾಯ್ತು. ಅಯ್ಯೋ ಪಾಪ ಅಂತ ಹೇಳಿ ಕಲಿಸಿಕೊಡುವುದಕ್ಕೂ ಒಪ್ಪಿಕೊಂಡ್ರು. ನಾಳೆ ನಮ್ಮ ಮನೆಗೆ ಬಾ ಅಂತ ಹೇಳಿ ವಿಳಾಸ ಬರೆದುಕೊಟ್ಟೋದ್ರು.

ಬಸಪ್ಪ ಅವರು ಹೇಳಿದಂತೆ ಮರುದಿನ ಸಾಯಂಕಾಲವೇ ಅವರ ಮನೆಗೆ ಹೋದೆ. ಕೊಟ್ಟ ಮಾತಿನಂತೆ ನನಗೆ ತರಬೇತಿ ಕೊಟ್ಟರು. ಅವರು ನನಗೆ ಕುಣಿತವನ್ನು ಕಲಿಸಿಕೊಟ್ಟ ವಿಧಾನ ಬಹಳ ಚೆನ್ನಾಗಿತ್ತು. ಕೆಲವೊಂದು ಸಲ ಈಗಲೂ ನಾನು ಆ ವಿಧಾನವನ್ನು ಅನುಸರಿಸುತ್ತಿದ್ದೇನೆ. ಮೊದಲ ದಿನ ಒಂದು ತಂಬಿಗೆಯಲ್ಲಿ ನೀರು ತುಂಬಿ ನನ್ನ ತಲೆಮ್ಯಾಲೆ ಇಟ್ಟು, ನನ್ನ ಮಗ ಕುಣಿದಂಗ ಕುಣಿ ಅಂತ ಹೇಳಿದ್ರು. ಅವರ ಮಗನೂ ಕೊಡ ಹೊತ್ತಿರಲಿಲ್ಲ. ಅವರಪ್ಪನ ಹಾಡುಗಾರಿಕೆಗೆ ತಕ್ಕಂತೆ ಕುಣಿಯುತ್ತಿದ್ದ. ನಾನು ಆ ಹುಡುಗನನ್ನು ನೋಡಿ ಕುಣಿಯುತ್ತಿದ್ದೆ. ನಾನು ತಪ್ಪು ಮಾಡಿದಾಗ ಬಸಪ್ಪನೇ ಬಂದು ಹೇಳಿಕೊಡುತ್ತಿದ್ದ. ನಾನು ಆತನಿಂದ ಒಮ್ಮೆ ಹೇಳಿಕೊಟ್ಟಿದ್ದನ್ನು ಮತ್ತೊಮ್ಮೆ ಹೇಳಿಸಿ ಕೊಳ್ಳುತ್ತಿರಲಿಲ್ಲ. ಹೇಳಿಸಿಕೊಳ್ಳದಂತೆ ಕಲಿಯಬೇಕು ಅನ್ನುವ ನಿರ್ಧಾರ ಮಾಡಿದ್ದೆ. ಒಂದು ವಾರ ಇದೇ ರೀತಿ ಕುಣಿಸಿದ್ರು. ಹೇಳಿಕೊಟ್ಟಿರುವುದನ್ನೆಲ್ಲ ಕುಣಿದು ತೋರಿಸಿಬಿಟ್ಟೆ. ಆ ಮೇಲೆ ದೇವರು ಕಟ್ಟಿದ ತುಂಬಿದ ಕೊಡ ಕೊಟ್ಟು ಕುಣಿಸಿದ್ರು. ಯಾಕಂದ್ರ ದೇವರು ಕಟ್ಟಿದ ಕೊಡಕ್ಕೆ ಜೋಗತಿ ಸಂಪ್ರದಾಯದಲ್ಲಿ ಭಾರಿ ಗೌರವ ಇದೆ. ಆಕಸ್ಮಾತ್ ಆ ಕೊಡ ತಲೆಮ್ಯಾಲಿಂದ ಕೆಳಗೆ ಬಿದ್ದರೆ ಅಪಶಕುನ, ದೇವತೆಗೆ ಅವಮಾನ ಮಾಡಿದಂಗ ಎನ್ನುವ ನಂಬಿಕೆ ಇದೆ. ಅದಕ್ಕೆ ಕೊಡ ಹೊತ್ತು ಕುಣಿತದ ರೂಢಿ ಇಲ್ಲದವರಿಗೆ ದೇವರು ಕಟ್ಟಿದ ಕೊಡ ಕೊಡಂಗಿಲ್ಲ. ನಾನು ಅಷ್ಟೆ ತರಬೇತಿಗೆ ಬಂದವರು ಕೊಡಹೊತ್ತು ಕುಣಿಯುವುದನ್ನು ಗ್ಯಾರಂಟಿ ಮಾಡಿಕೊಂಡು ದೇವರು ಕಟ್ಟಿದ ಕೊಡ ಕೊಡುತ್ತೇನೆ. ನಾನಷ್ಟೆ ಅಲ್ಲ ಎಲ್ಲ ಜೋಗತಿಯರು ಈ ಕ್ರಮವನ್ನು ಅನುಸರಿಸುತ್ತಾರೆ. ನಾನು ತುಂಬಿದ ಕೊಡ ಹೊತ್ತು ಚೆನ್ನಾಗಿ ಕುಣಿಯುವುದನ್ನು ನೋಡಿ ದೇವರ ಕಟ್ಟಿದ ಕೊಡ ಹೊತ್ತು ಕುಣಿಸಿದ್ರು. ಅಲ್ಲೂ ಚೆನ್ನಾಗಿ ಕುಣಿದೆ. ಅದೇ ಮೊದಲಬಾರಿಗೆ ನಾನು ದೇವರ ಕೊಡ ಹೊತ್ತಿದ್ದು. ಅವತ್ತು ಬಹಳ ಖುಷಿಯಾಗಿತ್ತು. ಇದನ್ನ ನೋಡಿ ನಾಳೆಯಿಂದ ನಮ್ಮ ಜೊತೆ ಭಿಕ್ಷಾಟನೆಗೆ ಬಾ ಅಂತ ಹೇಳಿದ್ರು. ಆಗಂತೂ ಬಾಳ ಖುಷಿಯಾಗಿತ್ತು. ಅವತ್ತು ಒಂಟಿತನದ ಭಿಕ್ಷಾಟನೆಗೆ ಕೊನೆಯಾಯಿತು ಅಂದುಕೊಂಡೆ. ನನ್ನ ತಲೆಮ್ಯಾಲೆ ಇರುವ ಈ ದೇವತೆಯೇ ಈ ಕಲೆಯನ್ನು ಕಲಿಸಿದ್ದಾಳೆ ಎಂದು ಆಕೆಗೆ ಭಕ್ತಿಯಿಂದ ಕೈ ಮುಗಿದಿದ್ದೆ. ಆಕೆಯನ್ನು ಹೊತ್ತು ಕುಣಿದು ಕುಣಿದು ಸಂತೋಷ ಪಟ್ಟಿದ್ದೆ.

## ಲಕ್ಷಾಂತರ ಜನರ ಪ್ರೀತಿಯನ್ನು ಕಾಣಿಕೆಯಾಗಿ ಕೊಟ್ಟ ಮಹಾನ್ ಕಲಾವಿದ

ಬಸಪ್ಪ ಈ ನನ್ನ ಜೋಗತಿ ಕಲೆಯ ಮೊದಲ ಗುರು. ಆತನ ಜೊತೆಗೂಡಿ ಭಿಕ್ಷಾಟನೆ ಮಾಡುವುದಕ್ಕೆ ಆರಂಭಿಸಿದೆ. ಹಲವಾರು ಊರುಗಳಲ್ಲಿ, ಸಂತೆಗಳಲ್ಲಿ,

ಸಿನಿಮಾ ಥಿಯಟೇರ್ ಮುಂಭಾಗದಲ್ಲಿ, ಸರ್ಕಲ್‌ಗಳಲ್ಲಿ, ಬಸ್‌ಸ್ಟ್ಯಾಂಡ್‌ಗಳಲ್ಲಿ, ಜಾತ್ರೆಗಳಲ್ಲಿ ಹಿಂಗ್ ಜನ ಎಲ್ಲೆಲ್ಲಿ ಸೇರ್‍ತಾರೋ ಅಲ್ಲಲ್ಲಿ ಜೋಗತಿ ನೃತ್ಯ ಮಾಡಿದೆ. ಆಗ ಕಲೆ ಮಾಡುತ್ತ ಭಿಕ್ಷೆ ಬೇಡುತ್ತಲೇ ತಿಂಗಳುಗಟ್ಟಲೆ ಊರೂರುಗಳನ್ನು ಅಲೆಯುತ್ತಿದ್ವಿ. ಇವತ್ತಿನ ರಾಣೆಬೆನ್ನೂರು, ಬ್ಯಾಡಗಿ, ಹಾವೇರಿ ತಾಲೂಕುಗಳ ಹಳ್ಳಿಗಳ ಜನ ನಮ್ಮ ಕುಣಿತವನ್ನು ಬಾಳ ಇಷ್ಟಪಡುತ್ತಿದ್ರು. ಮೆಣಸಿನಕಾಯಿ ಸುಗ್ಗಿಯಾಗಂತೂ ಈ ಕಡೆ(ಹಾವೇರಿ ಜಿಲ್ಲೆ) ಬರುತ್ತಿದ್ವಿ. ಒಂದೂರಿನಿಂದ ಇನ್ನೊಂದೂರಿಗೆ ಹೋಗುವಾಗ ನಾವು ಬಸ್ ಅಥವಾ ಬೇರಾವುದೇ ಇತರೆ ವಾಹನಗಳಲ್ಲಿ ಮತ್ತು ದಾರಿಗಳಲ್ಲಿ ಪ್ರಯಾಣ ಮಾಡುತ್ತಿರಲಿಲ್ಲ. ಬದಲಾಗಿ ಹೊಲಗಳ ಪ್ಯಾರಿ ಹಿಡಕೊಂಡು ಒಂದೂರಿಂದ ಇನ್ನೊಂದೂರಿಗೆ ಹೋಗುತ್ತಿದ್ವಿ. ಆವಾಗ ಹೊಲಗಳಲ್ಲಿ ಕೆಲಸ ಮಾಡುತ್ತಿದ್ದ ಸಾಕಷ್ಟು ಜನ ಸಿಗುತ್ತಿದ್ದರು. ಅವರ ಹತ್ತಿರ ಕುಣಿತ, ಆಟ ಮಾಡುತ್ತಿದ್ವಿ.

ಆಗಂತು ಹೊಲಗಳಲ್ಲಿ ಮೆಣಸಿನಕಾಯಿ ಬಿಡಿಸೋರು ಜಗ್ಗಿ ಸಿಗೋರು. ಅವರತ್ತಿರ ಸುಮಾರು ಅರ್ಧಗಂಟೆ ಕುಣಿದ್ರೆ ಸಾಕು ಒಂದಿಷ್ಟು ಹಣ್ಣಗಾಯಿ ಕೊಡುತ್ತಿದ್ರು. ಒಂದೊಂದು ದಿವಸ ಬರೆ ಮೆಣಸಿನಕಾಯಿ ಹೊಲಗಳಲ್ಲಿ ಕುಣಿಯುತ್ತಿದ್ವಿ. ಅವನ್ನೆಲ್ಲ ತಂದು ನಾವು ಉಳಿದುಕೊಳ್ಳುತ್ತಿದ್ದ ದೇವಾಲಯಗಳಲ್ಲಿ, ಶಾಲೆಗಳಲ್ಲಿ ರಾತ್ರಿ ಹೊತ್ತು ಒಣಗಾಕಿ ಮುಂಜಾನೆ ಆಟ ಮಾಡುವುದಕ್ಕೆ ಹೋಗುವಾಗ ಒಂದು ಹರುಬಿಯಲ್ಲಿ ಕಟ್ಟಿಟ್ಟು ಹೋಗುತ್ತಿದ್ವಿ. ಹಿಂಗ ಭಿಕ್ಷೆ ಮಾಡಿ ವಾರ–ಹದಿನೈದು ದಿನಕ್ಕೆ ಎರಡೆರಡು ಚೀಲ ಒಣಮೆಣಸಿನಕಾಯಿ ತಗೊಂಡು ಬಂದ್ವಿ. ಅಂತಹ ಜೋಗತಿ ಕಲೆಯ ಅಭಿಮಾನಿ ಗಳು, ಭಕ್ತರು ಈ ಕಡೆ(ಹಾವೇರಿ ಜಿಲ್ಲೆ) ಇದ್ರು.

ಇಷ್ಟೆಲ್ಲ ಮೆಣಸಿನಕಾಯಿ ಬಂದ್ರು ಬಸಪ್ಪ ನನಗೆ ಅಂತ ಒಂದಿಡಿ ಮೆಣಸಿನಕಾಯಿ ಕೊಡಲಿಲ್ಲ. ಹಿಡಿ ಯಾಕೆ ಪಡ್ಲಿಗಿ ಪೂಜೆಗೆ ಅಂತ ಐದು ಮೆಣಸಿನಕಾಯಿ ಕೊಟ್ಟಿಲ್ಲ ನನಗೆ. ಒಂದು ಸರದಿಗೆ ಇನ್ನೂರು, ಇನ್ನೂರಿಪ್ಪತ್ತು ರೊಕ್ಕ ಬಂದ್ರೂ ೫೦ ಪೈಸೆ ಕೊಡ್ತಿರಲಿಲ್ಲ. ಬೆಳಗ್ಗೆಯಿಂದ ಸಂಜೆಯವರೆಗೂ ಕುಣಿದ್ರು ಸಾಕು ಅಂತಿರಲಿಲ್ಲ. ನನಗಾಗಿಯೇ ಇದು ಅಂತ ಏನೂ ಕೊಡ್ತಾನೆಯಿರಲಿಲ್ಲ. ತಿಂಡಿ, ಊಟ, ಚಹಾ ಮಾತ್ರ ಕೊಡಿಸುತ್ತಿದ್ರು. ಅದರಲ್ಲೂ ತಾರತಮ್ಯ ಮಾಡುತ್ತಿದ್ರು. ಆದರೆ ಅವರು ಕೊಡಿಸಿದಷ್ಟೆ ನಾನು ತಿನ್ನಬೇಕಾಗಿತ್ತು. ನಾನೇನು ಕೇಳುವಂತಿರಲಿಲ್ಲ. ಹೊಟೇಲ್‌ಗಳಲ್ಲಿ ಅವರು ಒಳಗೆ ಕುಂತುಕೊಂಡು ಟಿಫಿನ್ ತಿಂದ್ರೆ. ಊಟ ಮಾಡಿದ್ರೆ, ನಾನು ಹೊರಗಡೆ ನಿಂತುಕೊಂಡು ಊಟ ಮಾಡಬೇಕಿತ್ತು. ನೀನು ಒಳಗಡೆ ಬಂದು, ನಮ್ಮ ಜೊತೆ ಕುಂತುಕೊಂಡು ತಿನ್ನು ಅಂತ ಯಾವತ್ತೂ ಕರೆಯಲೇಯಿಲ್ಲ. ಆದ್ರು ಆ ನೋವನ್ನು ಅವರತ್ತಿರ ನಾನ್ಯಾವತ್ತೂ ಹೇಳಿಕೊಳ್ಳಲಿಲ್ಲ. ನನ್ನ ನೋವನ್ನು ಕುಣಿತ ಕಲಿಯುವುದರಲ್ಲಿ, ಕಲೆ ಕಲಿಯುವುದರಲ್ಲಿ ಮರೆಯುತ್ತಿದ್ದೆ. ಕಲೆ ಕಲಿಯುತ್ತಿದ್ದೆನಲ್ಲ ಅಷ್ಟು ಸಾಕು ಎಂದುಕೊಳ್ಳುತ್ತಿದ್ದೆ. ಬಸಪ್ಪನವರು ನನಗೆ ಇಷ್ಟೆಲ್ಲ ನೋವು ಕೊಟ್ರು, ನನ್ನನ್ನು ದೂರ

ಇಟ್ಟಿದ್ರು ಅಂತ ನಿಮ್ಮತ್ತಿರ ಹೇಳುತ್ತಿದ್ದೇನೆ. ಅವರನ್ನು ಬೈಯುತ್ತಿದ್ದೇನೆ. ನನ್ನ ಮಾತುಗಳನ್ನು ಕೇಳಿದ ನಿಮಗೆಲ್ಲ ಆತ ಒಂದಿಷ್ಟು ಕರುಣೆ ಇಲ್ಲದ ಮನುಷ್ಯನಾಗಿದ್ದ ಅಂತ ಅನ್ನಿಸುತ್ತಿದೆ. ನನ್ನ ಬಗ್ಗೆ ನಿಮಗೆ ಅಯ್ಯೋ ಅನಿಸುತ್ತಿದೆ. ಆದ್ರೆ ತಾನು ಪ್ರೀತಿ ಕೊಡದೆ ಇರಬಹುದು. ನಾನು ನಿಮ್ಮೆಲ್ಲರೆದುರಿಗೆ ನಿಲ್ಲುವಂತಹ ಶಕ್ತಿ ಕೊಟ್ಟಿದ್ದಾನೆ. ಆತ ಕಲೆ ಕಲಿಸದಿದ್ದರೆ ನಾನು ಸಾಮಾನ್ಯ ಜೋಗತಿಯಂತೆ ಬದುಕುತ್ತಿದ್ದೆ ಏನೋ? ಲಕ್ಷಾಂತರ ಜನರ ಪ್ರೀತಿಯನ್ನು ಪಡೆಯುವ, ಅವರ ಪ್ರೀತಿಯನ್ನು ಗೆಲ್ಲುವ ಕಲೆಯನ್ನು ಕಲಿಸಿದ್ದಾನೆ. ಬದುಕುವ ಜ್ಞಾನವನ್ನು ಕೊಟ್ಟಿದ್ದಾನೆ. ಮಾನ್ಯ ಕುಲಪತಿಯವರಂತಹ ದೊಡ್ಡ ದೊಡ್ಡ ವ್ಯಕ್ತಿಗಳ ಜೊತೆಗೆ ಕುಂದ್ರುವಂತಹ ಅವಕಾಶ ಮಾಡಿಕೊಟ್ಟಿದ್ದಾನೆ. ಇಂತಹ ಜ್ಞಾನವನ್ನು ಕೊಟ್ಟ ಆತನಿಗೆ ನನ್ನ ಪೂಜ್ಯನೀಯ ನಮಸ್ಕಾರಗಳು. ಇವತ್ತು ನಾನು ಈ ಜೋಗತಿ ಕುಣಿತ ಆರಂಭ ಮಾಡುವ ಮುಂಚೆ ಆ ಗುರುವಿಗೊಮ್ಮೆ ನಮಸ್ಕಾರಗಳನ್ನು ಅರ್ಪಿಸಿ ಹೆಜ್ಜೆ ಹಾಕುವುದಕ್ಕೆ ಆರಂಭಿಸುತ್ತೇನೆ. ಅಂತಹ ಗುರುವಿಗೆ ಮತ್ತೊಮ್ಮೆ ನಮಸ್ಕಾರಗಳು.

## ಸೀರೆ ಉಟಕೊಂಡ ಗಂಡಸಿನ ಮೇಲೆ ಗುಂಪು ಅತ್ಯಾಚಾರ ಮಾಡಿದ್ರು

ಮನೆ ಬಾಡಿಗೆ ಹಣ ಕೊಡಬೇಕಾಗಿತ್ತು. ಅದಕ್ಕಾಗಿಯೇ ಕುಕ್ಕುವಾಡದ ಅಂಗಡಿಯೊಂದರಲ್ಲಿ ಅಕ್ಕಿ ಮಾರಿ ಅಲ್ಲಿಯೇ ರೊಕ್ಕ ಬಿಟ್ಟಿದ್ದೆ. ಆ ರೊಕ್ಕ ತಂದರಾಯ್ತು ಅಂತ ಸಿಟಿಗೆ ಹೋದೆ. ಅವತ್ತು ಹೊತ್ತಾಗಿತ್ತು. ಮನೆ ಮುಟ್ಟುವದ್ರೊಳಗೆ ಹೊತ್ತಾಗತ್ತೈತಿ ಅಂತ ಅವರಸದಲ್ಲಿ ರೊಕ್ಕ ಇಸಕೊಂಡು ಬಸ್ಸು ಹತ್ತಿದೆ. ಬಸ್ಸಲ್ಲಿರುವಾಗ ವಿದ್ಯಾರ್ಥಿ ಭವನದತ್ತಿರ ಇಳಿದು ಜಾಲಿನಗರಕ್ಕೆ ಕಾಲೇಜಿನ ಒಳಗಡೆಯಿಂದ ನಡೆದೋದ್ರೆ ಹತ್ತಿರ ಆಗತ್ತೈತಿ ಅನ್ನುವ ಆಲೋಚನೆ ನನ್ನ ಮನಸಲ್ಲಿ ಬಂತು. ಅದ್ಯಾವ ಕೆಟ್ಟ ಗಳಿಗೆಯಲ್ಲಿ ಆ ಆಲೋಚನೆ ಬಂತೋ ಗೊತ್ತಿಲ್ಲ. ಅದರಂತೆ ವಿದ್ಯಾರ್ಥಿ ಭವನದತ್ತಿರ ಇಳಿದೆ. ಅವತ್ತು ನನ್ನ ಹತ್ತಿರ ಸುಮಾರು ಎಂಟು-ಹತ್ತು ಕೇಜಿ ಅಕ್ಕಿ ಇದ್ವು, ಎಪ್ಪತ್ತು ರೂಪಾಯಿ ರೊಕ್ಕ ಇತ್ತು. ತಲೆಮ್ಯಾಲೆ ಅಕ್ಕಿಗಂಟು ಇಟ್ಟುಕೊಂಡು, ಕೈಯಲ್ಲಿ ಪಡ್ಲೀಗಿ ಇಡಕೊಂಡು ಅವಸರದಿಂದ ಹೊಂಟಿದ್ದೆ. ಕಾಲೇಜಿನ ಕಾಂಪೌಂಡ್ ಒಳಗಡೆ ನಾಲ್ಕು ಜನ ಬಂದು ನನ್ನನ್ನು ಅಡ್ಡಗಟ್ಟಿದ್ರು. ಅವರು ನನ್ನ ಮೇಲೆ ಮಾಡಿದ ರೀತಿಯನ್ನು ಇವತ್ತು ಹೇಳಿಕೊಳ್ಳುವುದಕ್ಕೆ ಅಸಹ್ಯ ಅನ್ನಿಸುತ್ತಿದೆ. ಅಂತಹ ವಿಕೃತತನದ ವರ್ತನೆಗೆ ಬಲಿಯಾದೆ ಅಂತ ಈಗಲೂ ದುಃಖವಾಗುತ್ತಿದೆ. ಅವತ್ತು ಅಡ್ಡಗಟ್ಟಿದವರೆಲ್ಲರೂ ಕುಡಿದಿದ್ರು. ಏನನ್ನು ಕೇಳದೆ ಏಕಾಏಕಿ ನನ್ನ ಸೀರೆ ಸೆರಗು ಹಿಡಿದು ಎಳೆದಾಡಿದ್ರು. ಜಾಕೇಟು ಹರಿದಾಕಿದ್ರು. ನಾನು ಕಿರುಚಾಡಿದೆ. ತಪ್ಪಿಸಿಕೊಂಡು ಒಂದು ಎಂಟತ್ತು ಹೆಜ್ಜೆ ಓಡಿಹೋದ್ರು ಬಿಡಲಿಲ್ಲ. ನಾನು ಒಬ್ಬಳೆ ಅವರು ನಾಲ್ಕುಜನ. ನಾಲ್ಕು ದಿಕ್ಕಿನಲ್ಲಿ ನಿಂತುಕೊಂಡಿದ್ದರು. ಓಡಿಹೋದಾಗ ಬೆನ್ನಟ್ಟಿ ಓಡಿಬಂದು ಹಿಡಕೊಂಡ್ರು. ಇವತ್ತು ಆ ಸ್ಥಳ ಸಿಟಿ ಆದಂಗೆ ಆಗ್ಯೆತಿ. ಅವತ್ತು ಲೈಟು ಏನು ಇರಲಿಲ್ಲ. ಜನ ಓಡಾಡುವುದು ಕಮ್ಮಿಯಿತ್ತು. ನಾನು ಕೂಗಾಡಿಕೊಂಡ್ರು ಬಿಡಿಸೋರು ಯಾರು ದಿಕ್ಕಿರಲಿಲ್ಲ. ನನ್ನ ಹತ್ತಿರ ಇದ್ದ ಎಪ್ಪತ್ತು

ರೂಪಾಯಿ ಕಿತ್ತುಕೊಂಡ್ರು. ಆ ಎಳೆದಾಟಕ್ಕೆ ಪಡ್ಲೀಗಿ ಒಂದು ಕಡೆ, ಸಾಮಾನು ಒಂದು ಕಡೆಗೆ ಬಿದ್ದಿದ್ದವು. ಅಕ್ಕಿಯಂತೂ ಚೆಲ್ಲಾಪಿಲ್ಲಿಯಾಗಿದ್ದು, ಆ ಸ್ಥಿತಿಯನ್ನು ನೆನಸಿಕೊಳ್ಳಲೇಬಾರದು. ಅಷ್ಟಕ್ಕೂ ಗಂಡು ನಾನು, ಹೆಣ್ಣಿನ ವೇಷದಲ್ಲಿದ್ದೇನಷ್ಟೆ. ಆ ವೇಷವನ್ನು ನೋಡಿಯೇ ನನಗೆ ಅಷ್ಟು ಹಿಂಸೆ ಕೊಟ್ಟರು ಆ ಗಂಡಸರು. ಅವರ ಕೈಗೆ ಅಷ್ಟೊತ್ತಿನಲ್ಲಿ ನಿಜವಾದ ಹೆಣ್ಣು ಸಿಕ್ಕಿದ್ರೆ ಎಷ್ಟು ಕಷ್ಟಪಡುತ್ತಿದ್ದು. ಎಷ್ಟು ನೋವು ಅನುಭವಿಸುತ್ತಿದ್ದು. ಯಾವ ಹಿಂಸೆಗೆ ಒಳಗಾಗುತ್ತಿದ್ದು ಅಂತ ನೆನಸಿಕೊಂಡು ಈಗಲೂ ಮೈ ಜುಂ ಅನ್ನುತ್ತದೆ. ಪೇಪರ್‌ಗಳಲ್ಲಿ, ಟಿ.ವಿ.ಗಳಲ್ಲಿ ಇಂತಹ ಸನ್ನಿವೇಷಗಳು ಬಂದ್ರೆ, ಹೆಣ್ಣಿನ ಮೇಲೆ ಅತ್ಯಾಚಾರ ನಡೆದ ಸನ್ನಿವೇಷಗಳನ್ನು ನೋಡಿದಾಗೆಲ್ಲ, ಸುದ್ದಿವಾಹಿನಿಗಳಲ್ಲಿ ಘಟನೆಗಳನ್ನು ನೋಡಿದಾಗಲೆಲ್ಲ ಆ ಘಟನೆ ನೆನಪಾಗತ್ತೈತಿ. ಅದನ್ನು ಜೀವನಪೂರ್ತಿ ಮರೆಯುವುದಕ್ಕೆ ಸಾಧ್ಯವಿಲ್ಲ. ಅಂತಹ ನೋವನ್ನು ನಾನೊಬ್ಬನೇ ಅನುಭವಿಸಿದ್ದೇನೆ. ಇದನ್ನು ಹೇಳಿಕೊಳ್ಳುವುದಕ್ಕೂ ಅವತ್ತು ನನ್ನ ಜೊತೆ ಯಾರು ಇರಲಿಲ್ಲ. ಮನೆಯಲ್ಲಿ ಕೂತುಕೊಂಡು ರಾತ್ರಿಯೆಲ್ಲ ಅತ್ತಿದ್ದೆ. ಇವತ್ತು ನನ್ನ ಕುಟುಂಬ ನನ್ನ ಹತ್ತಿರ ಇದ್ದಿದ್ದರೆ ಹಿಂಗ ಸಂಕಟಪಡುವ ಸ್ಥಿತಿ ಬರುತ್ತಿರಲಿಲ್ಲವೇನೋ? ಹೋಗ್ಲಿ ನಡೆದ ಘಟನೆಯನ್ನು ಹೇಳಿಕೊಂಡ್ರೆ ಸುಮ್ಮನಾದ್ರು ಇರಿಸುತ್ತಿದ್ರು, ಸಮಾಧಾನ ಹೇಳತ್ತಿದ್ರು. ಇವತ್ತು ಅಂತವರ್‍ಯಾರು ನನ್ನ ಜೊತೆಗಿಲ್ಲ ಅಂತ ಗೋಳಾಡಿ ಅತ್ತಿದ್ದೆ. ನಾನಿನ್ನು ಬದುಕಬಾರದು ಎನ್ನುವ ನೋವು ಆಯ್ತು. ಏನಾದ್ರು ಮಾಡಿಕೊಂಡು ಸತ್ತುಬಿಡೋಣ ಅಂತ ಅನ್ನಿಸುತ್ತಿತ್ತು. ಆದ್ರೆ ಸಾವಿಗಾಗಿ ಪ್ರಯತ್ನಿಸಿ ಬದುಕಿ ಕೆಲವೇ ತಿಂಗಳಾಗಿವೆ. ಸಾಯುವುದಕ್ಕೆ ಹೋಗಿ ಸತ್ತರೆ ಜೀವ್ನ ಮುಗಿದೋಯ್ತು. ಆಕಸ್ಮಾತ್ ಬದುಕಿದ್ರೆ ಆಗ ಅನುಭವಿಸುವ ನೋವು ಯಾರಿಗೆ ಬೇಡ. ಈ ನೋವು ಅನುಭವಿಸಬಹುದು ಆ ನೋವನ್ನು ಕಲ್ಪನೆ ಮಾಡಿಕೊಳ್ಳುವುದಕ್ಕೂ ಸಾಧ್ಯವಿಲ್ಲ ಅಂತ ಹೆದರಿ ಆಗಿರುವ ನೋವನ್ನು ಅನುಭವಿಸಿದೆ.

ಮನೆ ಬಾಡಿಗೆ ಕೊಡಬೇಕಾಗಿದ್ದ ದುಡ್ಡು ಕಿತ್ತುಕೊಂಡ್ರು. ಮನೆ ಯಜಮಾನನಿಗೆ ನನ್ನ ಹತ್ತಿರ ದುಡ್ಡಿಲ್ಲ ಅಂತ ಸುಳ್ಳು ಹೇಳುವುದಕ್ಕೆ ನನ್ನಿಂದಾಗಲಿಲ್ಲ. ಅದಕ್ಕೆ ನಡೆದ ಘಟನೆಯನ್ನು ಮನೆ ಯಜಮಾನನತ್ತಿರ ಹೇಳಿದೆ. ಅವರು ಒಳ್ಳೆಯವರಿದ್ದರು. ಈ ತಿಂಗಳ ಮನೆ ಬಾಡಿಗೆ ಬೇಡ ಅಂದರು. ಆದ್ರೆ ನನ್ನ ಮನಸ್ಸು ಒಪ್ಪಲಿಲ್ಲ. ಮುಂದಿನ ತಿಂಗಳ ಎರಡು ತಿಂಗಳ ಬಾಡಿಗೆ ಕೊಟ್ಟೆ. ಈ ಘಟನೆ ಶನಿವಾರ ಸಾಯಂಕಾಲ ನಡೆದಿತ್ತು. ಭಾನುವಾರ ದಾವಣಗೆರೆ ಸಂತೆ ಇತ್ತು. ಆ ಸಂತೆಯಲ್ಲಿ ಹಳೆಬಟ್ಟೆ ಮಾರುವವರ ಹತ್ತಿರ ಹೋಗಿ ಪಡ್ಲಿಗಿಯಲ್ಲಿಟ್ಟಿದ್ದ ಏಳು ರೂಪಾಯಿ ಕೊಟ್ಟು ಒಂದು ಸೀರೆ ತಗೊಂಡೆ.

ಹಿಂಗಾದ ಸ್ವಲ್ಪ ದಿನದ ಮ್ಯಾಗ ಹೊಸಪೇಟೆ ತಾಲೂಕಿನ ಹುಲಿಗಿ ಗ್ರಾಮದ ಹುಲಿಗೆಮ್ಮನ ಜಾತ್ರೆಗೆ ಹೋದೆ. ಆ ಕಾಲದಲ್ಲಿ ಜಾತ್ರೆ ದಿನಗಳಲ್ಲಿ ಒಂದು ತಿಂಗಳು ಇರುತ್ತಿದ್ವಿ. ನಾನು ಹುಲಿಗಿ ಹತ್ತಿರ ಹಿರೆಬಗನಾಳ ಗ್ರಾಮದಲ್ಲಿದ್ದ ಕಾಳವ್ವ ಜೋಗತಿ ಜೊತೆಗೆ ಇರುತ್ತಿದ್ದೆ. ಆಕಿ ಇವತ್ತಿಲ್ಲ. ಆಕೆಯ ಹುಟ್ಟು ಹೆಸರು ಬಸವರಾಜ ಅಂತ.

ಕೆಂಪಗೆ ಬಾಳ ಚೆಂದ ಇದ್ಲು. ನಾನು ಆಕಿ ಮನೆಯಲ್ಲಿರುತ್ತಿದ್ದೆ. ಆಕಿ ಮತ್ತು ಆಕಿ ಗುಂಪಿನವರ ಜೊತೆ ಸೇರಿ ಜಾತ್ರೆಯಲ್ಲಿ ಭಿಕ್ಷೆ ಮಾಡುತ್ತಿದ್ವಿ. ಹಿಂಗ ಭಿಕ್ಷೆ ಮಾಡುತ್ತಿರುವಾಗ ಒಮ್ಮೆ 'ಹೇ ಶೆಟ್ರು ಮಂಜು' ಎನ್ನುವ ಕೂಗು ಕೇಳಿತು. ಯಾರು ಅಂತ ಹಿಂತಿರುಗಿ ನೋಡಿದ್ರೆ, ಆಗ ಕಾಣಿಸಿದ್ರು ನಮ್ಮ ಮಾವ. ಆತ ದೊಡ್ಡಮ್ಮನ ಬಳಗಕ್ಕೆ ಸೇರಿದವರು. ಹೊಸಪೇಟೆ ತಾಲೂಕು ಚಿಲಕನಟ್ಟಿ ಗ್ರಾಮದವರು. ಅವರು ಕಂಡಿದ್ದು ನನಗೆ ಬಾಳ ಸಂತೋಷವಾಗಿತ್ತು. ಮನೆ ಬಿಟ್ಟು ಹೋದ ನಂತರ ನನ್ನವರು ಅಂತ ಯಾರು ಕಾಣಿಸಿರಲಿಲ್ಲ. ಹತ್ತಿರ ಓಡಿಹೋಗಿ ಮಾತನಾಡಿಸಿದೆ. ಅವರು ಏನು ಜೋಗತಿಯಾಗಿಲ್ಲ ಅಂದ್ರು. ನಾನೇನು ಆಗಿದ್ದು ಅಲ್ಲವಲ್ಲ ಮಾವ. ದೇಹ ಮತ್ತು ಮನಸು ಹಾಗೂ ದೇವರ ಇಚ್ಛೆಯಂತೆ ಆಗಿರುವೆ ಅಂದೆ. ಸ್ವಲ್ಪ ಹೊತ್ತಿನ ಮಾತುಕತೆ ನಂತರ ತಮ್ಮ ಊರಿಗೆ ಕರೆದ್ರು. ನನಗೊಂದು ಸೀರೆ ಕೊಡಿಸಿದ್ರೆ ಮಾತ್ರ ಬರ್ತೀನಿ ಅಂತ ಹೇಳಿದೆ. ಏನು ದೊಡ್ಡದು ಕೆಳತೀಯ ಕೊಡಿಸುತ್ತೇನೆ ಬಾ ಅಂತ ಹೇಳಿ ಹೋದ್ರು. ಒಂದು ತಿಂಗಳು ಜಾತ್ರೆಯಲ್ಲಿ ಕಾಲ ಕಳೆದು ಮಾವ ಸೀರೆ ಕೊಡಿಸುತ್ತಾನೆ. ಅಲ್ಲಿ ಒಂದೆರಡು ದಿನ ಇದ್ದು ಸೀರೆ ಉಟಕೊಂಡು ದಾವಣಗೇರೆಗೆ ಹೋದ್ರಾಯ್ತು ಅಂತ ಚಿಲಕನಟ್ಟಿಗೆ ಹೋದೆ. ಆ ಊರಲ್ಲಿ ಒಂದು ದಿನ ಅಲ್ಲ ಒಂದು ವಾರ ಕಳೆದ್ರೂ, ಮಾವ ಸೀರೆ ತರಲೇಯಿಲ್ಲ. ಅವರು ಹೋಗು ಅನ್ನಲಿಲ್ಲ. ನಾನು ಹೋಗ್ತೀನಿ ಅಂತ ಕೇಳಲಿಲ್ಲ. ಉಣ್ಣುವುದು ಕಟ್ಟೆಮ್ಯಾಲೆ ಕೊಡುವುದು ಮಾಡುತ್ತಿದ್ದೆ. ಹಿಂಗ ಕುಂತು ಕುಂತು ತಿಂಗಳು ಕಳೆದೋಯ್ತು. ಒಂದು ದಿವಸ ಅಲ್ಲಿ ಭಜನೆ ಕಾರ್ಯಕ್ರಮ ನಡೆದಿತ್ತು. ನಾನು ಸಹ ಅಲ್ಲಿಗೆ ಹೋಗಿದ್ದೆ. ಜನರೆಲ್ಲ ನೀವು ಹಾಡಿ ಎಂದರು. ಆಗ ಮಟ್ಟಿಕಲ್ಲು ಬಸಪ್ಪನಿಂದ ಕಲಿತ ಎರಡು ಹಾಡುಗಳನ್ನು ಹಾಡಿದೆ. ಅಂದರೆ ಮೊದಲು;

ಹುಟ್ಟಿ ಬಂದೆ ಯಲ್ಲಮ್ಮನಾಗಿ
ನಿನ್ನ ಮದುವೆಯ ಮಾಡಿ
ಕೊಟ್ಟಾರವ್ವ ಜಮಾದಗ್ನಿಗೆ

ನಿಮ್ಮ ತಂದೆ ರೇಣುಕರಾಜ
ನಿಮ್ಮ ತಾಯಿ ಬೋಗವತಿ
ಅವರೊಟ್ಟೆಯಲ್ಲಿ ಹಾಕಿ
ತೂಗ್ಯಾರ ತೊಟ್ಟಿಲಲ್ಲಿ

ಎನ್ನುವ ಹಾಡನ್ನು ಹಾಡಿದೆ. ಜೋಗತಿಯರಲ್ಲಿ ಜನಪ್ರಿಯ ಹಾಡು ಇದು. ಎಲ್ಲಾ ಜೋಗತಿಯರು ಈ ಹಾಡನ್ನು ಹಾಡುತ್ತಾರೆ. ಕಾಳವ್ವ ಜೋಗತಿಯಂತೂ ಬಹಳ ಚೆನ್ನಾಗಿ ಹಾಡುತ್ತಾಳೆ. ಈ ಹಾಡನ್ನು ಹಾಡಿದ ನಂತರ;

ಅಕ್ಕ ಕೇಳೆ ಕರೆ ಹುಲಿಗೆಮ್ಮ
ಚಿಕ್ಕ ಬಾಲರಾಡಿದ ಮಾತು

ಬಾಲನ್ನ ಮಾಡಿ ಸಲುವನ್ನಮ್ಮ
ಹೊನ್ನದ ಹುಲಿಗೆಮ್ಮ

ಎನ್ನುವ ಹಾಡನ್ನು ಹಾಡಿದೆ. ನಂತರ ಆತ (ಬಸಪ್ಪ) ಬಹಳ ಇಷ್ಟಪಟ್ಟು ಜನಪ್ರಿಯ ಕಾರ್ಯಕ್ರಮಗಳಲ್ಲಿ ಹಾಡುತ್ತಿದ್ದ;

ನಿಲ್ಲೆ ಇಂದ್ರಮ್ಮ ಶುಭವಾಣಿ ನಿನ್ನತ್ತಿರ
ಕರೆದೆ ಓಡಿ ಓಡಿ ಬಾರಮ್ಮ
ಬಡವರ ಬಡ್ಡಿ, ಸಾಲ ಮನ್ನ ಮಾಡಿಸಿದೆಮ್ಮ
ಗಂಡ ಸತ್ತ ಹೆಂಗಸರಿಗೆಲ್ಲ ಸಂಬಳ ಮಾಡಿದೆಮ್ಮ...

ಎನ್ನುವ ಹಾಡನ್ನು ಹಾಡಿದೆ. ಜನ ಸಂತೋಷದಿಂದ ಚಪ್ಪಾಳೆ ಹಾಕಿದ್ದರು. ಜನರೆಲ್ಲ ಚೆನ್ನಾಗಿ ಹಾಡುತ್ತಾಳೆಂದು ಮಾತನಾಡಿಕೊಂಡ್ರು. ಅದಕ್ಕೆ ಭಜನೆಯವರನ್ನು ಕರಕೊಂಡು ಯಲ್ಲಮ್ಮನ ಕಥೆ ಹೇಳುವುದಕ್ಕೆ ಸುರುಮಾಡಿದೆ. ಕಥೆ ಮಾಡುವಾಗ ಆಟದ ನಡು ನಡುವೆ ತಲೆಮ್ಯಾಲೆ ತುಂಬಿದ ಚಂಬಿಗೆ ಇಟ್ಟುಕೊಂಡು ಕುಣಿಯುತ್ತಿದ್ದೆ. ಇದನ್ನು ನೋಡಿ ಭಜನೆಯವರು ಸಣ್ಣದೊಂದು ಕೊಡ, ಅದಕ್ಕೊಂದು ತೆಂಗಿನಕಾಯಿ, ಕುಪ್ಪಸದ ಕಣ ತಂದುಕೊಟ್ರು. ನಾನು ಕೊಡವನ್ನು ಅಲಂಕಾರ ಮಾಡಿದೆ. ತೆಂಗಿನಕಾಯಿ ಯನ್ನೇ ದೇವರಮೂರ್ತಿ ಮಾಡಿಕೊಂಡೆ. ಯಾಕಂದ್ರ ಅವತ್ತು ನನ್ನಿಂದ ಕೊಡ ತೆಗೆದುಕೊಳ್ಳುವಷ್ಟು ದುಡ್ಡಿರಲಿಲ್ಲ. ಇನ್ನೂ ಯಲ್ಲಮ್ಮನ ಮೂರ್ತಿ ಮಾಡಿಸಿ ಕೊಳ್ಳುವುದಂತೂ ದೂರದ ಮಾತು. ಇವತ್ತು ನನ್ನತ್ತಿರ ಇರುವ ಕೊಡ ಮತ್ತು ಯಲ್ಲಮ್ಮನ ಮೂರ್ತಿಯನ್ನು ಮಾವ ಗಾಂದೆಮ್ಮ ಜೋಗತಿ ಕೊಟ್ಟಿರುವಂತಹದ್ದು. ಅವತ್ತು ತೆಂಗಿನಕಾಯಿ ಇದ್ದ ಕೊಡಹೊತ್ತು ಕುಣಿದೆ. ಇದನ್ನು ನೋಡಿದ ಜನರು ಕಾಳು-ಕಡಿ, ತರಕಾರಿ, ಅಕ್ಕಿ, ಬ್ಯಾಳಿ, ರೊಕ್ಕ ಕೊಟ್ಟರು. ನಾಲ್ಕೈದು ದಿನ ಊರಿನ ಬೇರೆ ಬೇರೆ ಓಣಿಯಲ್ಲಿ ಕಾರ್ಯಕ್ರಮ ಮಾಡಿದೆ. ಭಿಕ್ಷೆ ಬಂತು. ರೊಕ್ಕವನ್ನು ಬಿಟ್ಟು ಎಲ್ಲದನ್ನು ಮಾವನ ಮನೆಗೆ ತಂದು ಹಾಕುತ್ತಿದ್ದೆ. ಒಂದಿಷ್ಟು ದಿನ ಕಳೆದಾದಮ್ಯಾಲೆ ಸುತ್ತಮುತ್ತ ಹಳ್ಳಿಗಳಿಗೂ ಹೋದೆ. ಅಲ್ಲಿ ಸಾಕಷ್ಟು ಭಿಕ್ಷೆ ಬಂತು. ಅದನ್ನೆಲ್ಲ ಆ ಮಾವನ ಮನೆಗೆ ತಂದು ಹಾಕಿದೆ. ರೊಕ್ಕ ಮಾತ್ರ ನಾನಿಟ್ಟುಕೊಂಡು, ಕೂಡಿಟ್ಟು ಸೀರೆ, ಜಾಕೆಟ್ ತಗೊಂಡೆ. ಮಾವನಂತೂ ಸೀರೆ ಕೊಡಿಸಲಿಲ್ಲ. ಆತನ ಮನೆ ಯಲ್ಲಿದ್ದುಕೊಂಡು ತಗೊಂಡೆಲ್ಲ ಅಂತ ಖುಷಿಯಾಗಿದ್ದೆ.

ಹಿಂಗ ಜೀವನ ನಡೆದಿತ್ತು. ಯಾಕೆ ಅಂತ ಹೇಳದೆ ಕೇಳದೆ ಮಾವನ ಮನೆಯವರು ನನ್ನ ಮೇಲೆ ಕೋಪಗೊಂಡರು. ನನ್ನ ಮೇಲೆ ಜನ ಸಿಟ್ಟು ಆಗುವುದು, ನನ್ನನ್ನು ಸಮ್ಮ-ಸುಮ್ಮನೆ ಬಯ್ಯುವುದು, ನನ್ನ ಮೇಲೆ ಬೇಸರ ಮಾಡಿಕೊಳ್ಳುವುದು, ಕಾರಣಗಳಿಲ್ಲದೆ ಇದ್ದಕ್ಕಿದ್ದಂತೆ ದೂರ ಮಾಡುವುದು ನನಗೇನು ಹೊಸದಾಗಿರಲಿಲ್ಲ. ನನ್ನ ಜೀವನ ಕಂಡು ಅಪ್ಪ ಅಮ್ಮನೇ ನನ್ನ ಮ್ಯಾಲೆ ಬೇಸರಗೊಂಡಿದ್ದರು. ಇನ್ನೂ ಬೇರೆಯವರು

ಬೇಸರಗೊಳ್ಳದೇ ಇರುತ್ತಾರೆಯೇ? ಅನ್ನುವ ನಿಜ ಸ್ಥಿತಿ ಗೊತ್ತಾಗಿತ್ತು. ಆದ್ರು ಅಕ್ಕ–ಮಾವನ ನಡತೆ ಕಂಡು ಬೇಸರವಾಗಿತ್ತು. ಹಿಂಗ ಮೂರು ದಿನ ಕಳೆದವು. ಆ ಮೂರು ದಿನ ಬ್ಯಾರೆ ಊಟ ಮಾಡಿರಲಿಲ್ಲ. ಅವರು ಕರೆಯುತ್ತಿರಲಿಲ್ಲ. ನಾನು ಹೋಗಿ ಊಟ ಮಾಡುತ್ತಿರಲಿಲ್ಲ. ಒಂದಿ ದಿವಸ ಬಸ್‌ಸ್ಟ್ಯಾಂಡಿನ ಹತ್ತಿರ ಹೋಗಿ ಕುಳಿತುಕೊಂಡೆ. ಅಲ್ಲಿದ್ದ ಹುಡುಗರು ಚುಡಾಯಿಸುವುದಕ್ಕೆ ಸುರುಮಾಡಿದ್ರು. ಹುಡುಗರ ಅಂತಹ ವರ್ತನೆ ಕಂಡ್ರೆ ನನಗಾಗುತ್ತಿರಲಿಲ್ಲ. ಈಗಲೂ ಅಷ್ಟೆ. ಜಾತ್ರೆ, ಸಂತೆಗಳಲ್ಲಿ ನಮ್ಮನ್ನು ಚುಡಾಯಿಸಿ, ಕೆಟ್ಟದಾಗಿ ಮಾತನಾಡಿ ಎಷ್ಟೋ ಜನ ನನ್ನಿಂದ ಒದೆ ತಿಂದಿದ್ದಾರೆ. ಯಾಕಂದ್ರ ನಾನು ಗಂಡಾದ್ರು ಕೇವಲ ಗಂಡುಮಾತ್ರವಲ್ಲ. ಹೆಣ್ಣಿನ ವೇಷ ಹಾಕಿರುವ ಗಂಡು. ಹೆಣ್ಣು ಹೆಣ್ಣು ತರನೇ ಜೀವನ ಮಾಡಬೇಕು ಅನ್ನುವ ಭಾವನೆ ನನ್ನದು. ಅಲ್ಲದೆ ನಾನೇದ್ರೂ ತಪ್ಪು ಮಾಡಿದ್ರೆ ಜನ ಹೆಣ್ಣನ್ನು ಕೆಟ್ಟದೃಷ್ಟಿಯಿಂದ ನೋಡ್ತಾರೆ ಅನ್ನುವ ಮನೋಭಾವನೆ ನನ್ನದು. ಜೋಗತಿಯಾದ ಆರಂಭದ ದಿನದಿಂದಲೂ ಈ ಭಾವನೆ ಐತಿ. ಇವತ್ತಿಗೂ ಅದನ್ನು ಪಾಲಿಸಿಕೊಂಡು ಬಂದೀನಿ. ಅವತ್ತು ಬಸ್‌ಸ್ಟ್ಯಾಂಡಿನಲ್ಲಿ ನಾನೊಬ್ಬಳೇ ಕೂತಿರುವುದನ್ನು ನೋಡಿ ಹುಡುಗರು ಚುಡಾಯಿಸಿದ್ರು. ಅವರನ್ನು ಬೈಯುವ, ತಿಳುವಳಿಕೆ ಹೇಳುವ, ಹಂಗಂತ ಚುಡಾಯಿಸಿಕೊಳ್ಳುವ ಮನಸ್ಥಿತಿ ನನ್ನದಿರಲಿಲ್ಲ. ಸ್ವಲ್ಪಹೊತ್ತಿನ ನಂತರ ಆ ಹುಡುಗರ ವರ್ತನೆ ಹೆಚ್ಚಾಯ್ತು. ಅದಕ್ಕೆ ಬಸ್‌ಸ್ಟ್ಯಾಂಡಿನತ್ತಿರ ಶ್ರೀ ಸೂಳೆಕಲ್ಲು ವಿರುಪಣ್ಣ ಅವರ ಮನೆಯತ್ತಿರ ಹೋದೆ. ಅಲ್ಲಿಗೆ ಯಾವುದೇ ಪುಂಗಚೇಷ್ಟೆಯ ಹುಡುಗರು ಬರುತ್ತಿರಲಿಲ್ಲ. ಅವರು ಅಂತವರನ್ನು ಸಹಿಸುತ್ತಿರಲಿಲ್ಲ. ಅದು ನನಗೆ ಮುಂಚಿತವಾಗಿ ಗೊತ್ತಿತ್ತು. ಈ ಸಂದರ್ಭದಲ್ಲಿ ಸೂಕ್ತವಾದ ಜಾಗ ಎಂದುಕೊಂಡು ನಾನಲ್ಲಿಗೆ ಹೋದೆ. ಅಲ್ಲಿ ನಡೆದಿದ್ದೆ ಬೇರೆ. ಅವರು ತಮ್ಮ ಹಳೆಮನೆ ಪಕ್ಕದಲ್ಲಿ ಹೊಸಮನೆ ಕಟ್ಟಿಸಿದ್ರು. ಅವತ್ತೇ ಆ ಮನೆಯ ಗೃಹಪ್ರವೇಶ ಕಾರ್ಯಕ್ರಮ ಇತ್ತು. ಆಗ ನನ್ನನ್ನು ಊಟಕ್ಕೆ ಕರೆದ್ರು. ನಾನು ಏನು ಮಾತನಾಡದೆ ಹೋಗಿ ಊಟಕ್ಕೆ ಕುಳಿತೆ. ಹೊಟ್ಟೆಯೊಳಗಿನ ಹಸಿವಿನ ಸಂಕಟ ತಡಮಾಡದಿರುವ, ಬೇಡವೆನ್ನುವ ಮಾತುಗಳನ್ನು ನಿಲ್ಲಿಸಿತ್ತು. ಆಗ ಅವರ ಮಗನನ್ನು ಮತ್ತು ನನ್ನನ್ನು ಜೊತೆಯಲ್ಲಿ ಕೂಡಿಸಿ ಊಟ ಹಾಕಿದ್ರು. ಅವರ ಆ ಪ್ರೀತಿಯನ್ನು ನೋಡಿ ಅತ್ತುಬಿಟ್ಟೆ. ನನಗೆ ಗೊತ್ತಿಲ್ಲದಂತೆ ಅತ್ತಿರೋದು. ನನಗಾಗಿದ್ದ ಹಸಿವು, ಅಲ್ಲದೆ ಯಾರು ದಿಕ್ಕುದೆಸೆ ಇಲ್ಲದಿರುವ ಊರಲ್ಲಿ ಅಕ್ಕ--ಮಾವ ಸಿಟ್ಟಾಗಿದ್ರು. ಸಂಬಂಧ ಇಲ್ಲದವರು ಆ ಪ್ರೀತಿ ತೋರಿಸಿದ್ರು.

ಹಿಂಗ ಅಳುವುದನ್ನು ನೋಡಿ ಅವರೆಲ್ಲ ಗಾಬರಿಯಾಗಿ ಯಾಕೆ? ಅಂತ ಕೇಳಿದ್ರು. ಆಗ ನಡೆದ ಘಟನೆಯನ್ನು ಹೇಳಿದೆ. ಅದಕ್ಕೆ "ನೋಡು ಮಂಜಮ್ಮ ನೀನು ನಮ್ಮೂರಲ್ಲಿ ಇರೋತನಕ ಅಳಬೇಡ. ನಿನಗೆ ಹೊಟ್ಟೆ ಹಸಿದರೆ ನಮ್ಮ ಮನೆಗೆ ಬಾ. ನಮ್ಮ ಮನೆಯಲ್ಲಿದ್ದ ಒಂದು ರೊಟ್ಟಿಯಲ್ಲಿ ನಾನರ್ಧ, ನೀನರ್ಧ ತಿನ್ನೋಣ. ನಮಗಿರುವ

ನಾಲ್ಕು ಜನ ಗಂಡುಮಕ್ಕಳಲ್ಲಿ ನಿನ್ನನ್ನು ಸೇರಿಸಿಕೊಂಡು ಐದುಜನ, ನಮಗಿರೋದು ಒಬ್ಬ ಮಗಳಲ್ಲ ಇಬ್ಬರು ಹೆಣ್ಣುಮಕ್ಕಳು ಅಂತ ಅಂದುಕೊಂತೀವಿ" ಅಂತ ಮನೆಯ ಒಡತಿ ಶ್ರೀಮತಿ ಸುಶೀಲಮ್ಮ ಹೇಳಿದ್ಲು. ಆ ಮಾತುಗಳನ್ನು ಕೇಳಿ ಮತ್ತಷ್ಟು ದುಃಖ ಹೆಚ್ಚಾಯ್ತು. ತಮ್ಮ ಮನೆಮಕ್ಕಳಲ್ಲಿ ನನ್ನನ್ನು ಸೇರಿಸಿಕೊಂಡ್ರು. ಅದೆಲ್ಲಕ್ಕಿಂತ ಹೆಚ್ಚಾಗಿ ಮಗನಾಗಿ ಮತ್ತು ಮಗಳಾಗಿ, ಗಂಡಾಗಿಯೂ, ಹೆಣ್ಣಾಗಿಯೂ ನನ್ನನ್ನು ಸ್ವೀಕಾರ ಮಾಡಿಕೊಂಡ್ರು. ನನ್ನಲ್ಲಿರುವ ಹೆಣ್ಣು ಮತ್ತು ಗಂಡಿನ ಸ್ಥಾನವನ್ನು ನನಗೆ ಕೊಟ್ಟರು. ನನ್ನನ್ನು ಚೆನ್ನಾಗಿ ಅರ್ಥ ಮಾಡಿಕೊಂಡು ಹೇಳಿರುವ ಮಾತಿದು ಅಂದುಕೊಂಡಿರುವೆ. ಇದನ್ನು ನನ್ನ ಅಪ್ಪ-ಅವ್ವ, ಬಂಧು-ಬಳಗದವರು ಅರ್ಥ ಮಾಡಿಕೊಳ್ಳಲಿಲ್ಲ. ದೇವರು ಅಂತಹ ಬುದ್ಧಿ ಅವರಿಗೆ ಕೊಡಲಿಲ್ಲವೇನೋ! ಅಂತ ಅನ್ನಿಸುತ್ತಿದೆ. ಅದು ನನ್ನ ಸಮಸ್ಯೆಯಲ್ಲ ಅವರ ತಿಳುವಳಿಕೆಯ ಕೊರತೆ. ಶ್ರೀಮತಿ ಸುಶೀಲಮ್ಮ ೧೯೮೦ರಲ್ಲಿ ಈ ಮಾತುಗಳನ್ನು ಹೇಳಿದ್ದಳು. ನನ್ನಲ್ಲಿರುವ ಹೆಣ್ಣುತನವನ್ನು ಮತ್ತು ನನ್ನ ದೇಹ ರಚನೆಯಲ್ಲಿರುವ ಗಂಡುತನವನ್ನು ಗುರುತಿಸಿ, ಅರ್ಥ ಮಾಡಿಕೊಂಡು ಮಗನಾಗಿ, ಮಗಳಾಗಿ ಪ್ರೀತಿಸಿದರು. ಅಂತಹ ಪ್ರೀತಿಯನ್ನು ನಾನು ಬಯಸುತ್ತೇನೆ. ನಾನು ಅಷ್ಟೆ ಅಲ್ಲ ನನ್ನಂತಾಗಿರುವವರೂ ಸಹ ಈ ಪ್ರೀತಿಯನ್ನೇ ಬಯಸುತ್ತಾರೆ ಅನ್ನುವುದು ನನ್ನ ಬಲವಾದ ಭಾವನೆ. ಗಂಡುಜೋಗತಿಯನ್ನು ಮುಟ್ಟುವುದಕ್ಕೆ ಅಷ್ಟೆ ಏಕೆ ಮಾತನಾಡಿ ಸುವುದಕ್ಕೂ ಹಿಂಜರಿಯುತ್ತಿದ್ದ ಕಾಲವದು. ಇವತ್ತು ಅಂತಹ ಮನೋಭಾವನೆ ಕಡಿಮೆಯಾಗಿದೆ. ಸುಪ್ರೀಂಕೋರ್ಟ್ 'ತೃತೀಯಲಿಂಗಿ'ಗಳನ್ನು ಮನುಷ್ಯರೆಂದು ನೋಡಬೇಕೆಂದು ಹೇಳಿದೆ. ಇದು ಮಹತ್ವವಾದ ತೀರ್ಪು. ಇದು ಮಂಗಳಮುಖಿಯರ, ತೃತೀಯಲಿಂಗಿಗಳ ಹೋರಾಟಕ್ಕೆ ಸಿಕ್ಕ ಜಯವಾಗಿದೆ. ನಾನು ಈ ಹೋರಾಟದಲ್ಲಿ ಭಾಗಿಯಾಗಿಲ್ಲ. ಟಿ.ವಿ.ಯಲ್ಲಿ ಬರುವ ಸುದ್ದಿಗಳನ್ನು ನೋಡಿ ಸಂತೋಷಪಟ್ಟಿರುವೆ. ಇಂತಹ ಸಂತೋಷವನ್ನು ಆ ಕಾಲದಲ್ಲಿ ಶ್ರೀಮತಿ ಸುಶೀಲಮ್ಮನಿಂದ ಅನುಭವಿಸಿದ್ದೆ. ಹಾಗಾಗಿ ಆ ಮಹಿಳೆಗೆ ಧನ್ಯವಾದಗಳು. ಆ ಸಂದರ್ಭದಲ್ಲಿ ಅವರಿಗೆ ಬಹಳ ಬಡತನವಿತ್ತು. ಇವತ್ತು ಶ್ರೀಮಂತರಾಗಿದ್ದಾರೆ. ಇವತ್ತು ಅವರ ಮಕ್ಕಳು ಒಳ್ಳೊಳ್ಳೆ ನೌಕರಿಯಲ್ಲಿದ್ದಾರೆ. ಆದರು ಅವರು ನನ್ನನ್ನು ನೋಡಿಕೊಳ್ಳುವುದರಲ್ಲಿ ಬದಲಾಗಿಲ್ಲ. ನಾನು ಅಷ್ಟೆ, ಮನೆ ಮಗನಾಗಿ, ಮನೆ ಮಗಳಾಗಿ ನಡೆದುಕೊಳ್ಳುತ್ತಿರುವೆ. ಎಲ್ಲರೂ ಇಂತಹ ಪ್ರೀತಿಯನ್ನು ಕೊಟ್ಟರೆ ನಮ್ಮನ್ನು ಮನುಷ್ಯರೆಂದು ಭಾವಿಸಿದರೆ ಪ್ರತ್ಯೇಕ ಕಾನೂನುಗಳು ಯಾಕೆ ಬೇಕು?

ನೋಡಿ ದೇವರು ಕೆಲವು ಸಾರಿ ಸಂಬಂಧಗಳನ್ನು ಗಟ್ಟಿಮಾಡುತ್ತಾ, ಬೆಳೆಸುತ್ತಾ ಹೋಗುತ್ತಾನೆ. ಒಮ್ಮೊಮ್ಮೆ ಸಂಬಂಧಗಳನ್ನು ಕಳೆದುಬಿಡುತ್ತಾನೆ. ಅದಕ್ಕೆ ದೇವರನ್ನು ಹಿರಿಯರು "ನೀನೊಬ್ಬ ಆಟಗಾರ" ಅನ್ನೋದು. ಅವತ್ತಿಗಿಂತ ಮೂರು ದಿನ ಮುಂಚೆ ಅಕ್ಕ-ಮಾವನ ಸಂಬಂಧ ಕಳೆದುಕೊಂಡಿದ್ದೆ. ಆದ್ರೆ ಶ್ರೀಮತಿ ಸುಶೀಲಮ್ಮನವರ

ಕುಟುಂಬದಲ್ಲಿ ನನ್ನನ್ನು ಹಾಕಿಕೊಂಡರು. ಅಪ್ಪ ಹೊರಗಡೆ ಹಾಕಿದಾಗ ಶ್ರೀಮತಿ ರಾಧಮ್ಮ ತಾಯಿಯಾದಳು. ಇದೊಂದು ಜೀವನದ ವಿಚಿತ್ರ ಆಟ ಅಲ್ಲವೆ? ಹಿಂಗ ನಡೆದಿದ್ದು ಅಲ್ಲದೆ ಅವರ ಮನೆಗೆ ಫಾರೆಸ್ಟ್ ಡಿಪಾರ್ಟ್‌ಮೆಂಟ್ನಲ್ಲಿ ಕೆಲಸ ಮಾಡುತ್ತಿದ್ದ ಅಧಿಕಾರಿ ಬಂದಿದ್ರು. ಅವರು ನನ್ನ ಕಥೆ ಕೇಳಿ ನನ್ನ ಜೀವನಕ್ಕೆ ಆಸರೆಯಾದ್ರು. ನಮ್ಮ ಮಕ್ಕಳಿಗೆ ಟ್ಯೂಷನ್ ಹೇಳಕೊಂತ ನಮ್ಮ ಮನೆಯಲ್ಲಿ ಇರುವಂತೆ ಬನ್ನಿ ಅಂತ ಹೇಳಿ ಕರಕೊಂಡೋದ್ರು. ತಮಗಾಗಿ ಕೊಟ್ಟಿದ್ದ ಕ್ವಟ್ರಸ್‌ನಲ್ಲಿ ಒಂದು ರೂಂ ಕೊಟ್ರು. ಆ ಮನೆಯ ಅಕ್ಕ ಟೈಲರಿಂಗ್ ಮಾಡ್ತಾ ಇದ್ಲು. ನನಗೂ ಟೈಲರಿಂಗ್ ಕಲಿಸಿದ್ಲು. ಇವತ್ತು ನನ್ನ ಬಟ್ಟೆಗಳನ್ನು ನಾನು ಹೊಲಿದುಕೊಂತಿದಿನಿ. ನಾನಾಗ ಟ್ಯೂಷನ್ ಕ್ಲಾಸ್ ಸಹ ಆರಂಭಿಸಿದೆ. ಒಂದನೆ ತರಗತಿಯಿಂದ ಏಳನೆ ತರಗತಿಯವರೆಗೆ ಟ್ಯೂಷನ್ ಹೇಳುತ್ತಿದ್ದೆ. ಆಗ ಜೀವನ ಸ್ವಲ್ಪ ನೆಮ್ಮದಿ ಅನ್ನಿಸಿತ್ತು. ನಾನು ಓದುವುದಕ್ಕೆ ನನ್ನ ದೇಹ, ಮನಸ್ಸು ಬಿಡಲಿಲ್ಲ. ಓದುವ ಮಕ್ಕಳಿಗಾದ್ರು ವಿದ್ಯೆ ಕಲಿಸಿಕೊಡುತ್ತಿರುವೆಯಲ್ಲ ಅಂತ ಬಹಳ ಖುಷಿಯಾಗಿದ್ದೆ. ಹಿಂಗಾಗಿ ಎರಡು ತಿಂಗಳಾಗಿರಬಹುದು. ಅವರಿಗೆ ದಿಢೀರನೆ ವರ್ಗಾವಣೆ ಆಯ್ತು. ಆಗ ನಾನು ಆ ಮನೆಯನ್ನು ಬಿಡಬೇಕಾಯ್ತು. ಹೊಸದಾಗಿ ಬಂದ ಅಧಿಕಾರಿಗಳು ತಮ್ಮ ಸರಕಾರಿ ಮನೆಯಲ್ಲಿ ನಮ್ಮಂತವರನ್ನು ಯಾರು ಇಟ್ಟುಕೊಂತಾರೆ? ಹಂಗಾಗಿ ತಿಂಗಳಿಗೆ ನಲವತ್ತು ರೂಪಾಯಿಯಂಗೆ ಮನೆ ಬಾಡಿಗೆ ತಗೊಂಡೆ. ಅಲ್ಲಿಂದ ಭಿನ್ನವಾದ ಜೀವನ ಆರಂಭವಾಯ್ತು.

## ಕೆಟ್ಟ ಜೀವ್ನ ಐತಿ ಅಂತ ದಿನಕ್ಕೊಂದು ಆಟ ಸಿಗ್ತವಾ...?

ಬೇರೆ ಮನೆ ಮಾಡಿಕೊಂಡಮ್ಯಾಗ ಟ್ಯೂಷನ್ ಮಾಡಲಿಕ್ಕೆ ಆಗಲಿಲ್ಲ. ಆಗ ನನಗೆ ಗೊತ್ತಿದ್ದು ಕಥೆ ಮಾಡೋದು ಮಾತ್ರ. ಕಥೆ ಮಾಡುವುದಕ್ಕೆ ಆರಂಭಿಸಿದ ಸುತ್ತಮುತ್ತಲಿನ ಹಳ್ಳಿಗಳಿಗೆ ಹೋಗುತ್ತಿದ್ದೆ. ಹಳ್ಳಿಗಳಲ್ಲಿ ಪ್ರತಿದಿನ ಯಾರು ನಮ್ಮ ಪ್ರದರ್ಶನದ ಕಥೆ ಕೇಳ್ತಾರೆ. ಆಗ ಅದು ಕಷ್ಟವಾಯ್ತು. ನಮ್ಮ ಜೀವ್ನ ಕೆಟ್ಟೈತಿ ಅಂತ ದಿನಕ್ಕೊಂದು ಆಟ ಸಿಗ್ತಾವಾ? ಇಲ್ಲ ಒಂದೊಂದು ದಿವಸ ಆಟಕ್ಕೆ ಅವಕಾಶ ಸಿಗಲೇ ಇಲ್ಲ. ಆಗ ಜೀವ್ನ ನಡೆಸುವುದು ಕಷ್ಟವಾಯ್ತು. ಜೀವ್ನಕ್ಕೆ ಏನಾದ್ರೊಂದು ಆಸರೆ ಮಾಡಿಕೊಳ್ಳೋಣ ಅಂತ ಇಡ್ಲಿ ಮಾಡಿ ಮಾರಾಟ ಮಾಡುವುದಕ್ಕೆ ಆರಂಭಿಸಿದೆ. ಬೆಳಗ್ಗೆ ಐದು ಗಂಟೆಗೆ ಎದ್ದು ಒಂದುವರೆ ಕೇಜಿ ಹಿಟ್ಟಿನಲ್ಲಿ ಇಡ್ಲಿ ಮಾಡಿಕೊಂಡು, ಪುಟ್ಟಿಯಲ್ಲಿ ಹಾಕಿಕೊಂಡು, ಟಿಫಿನ್ ಬಾಕ್ಸ್‌ನಲ್ಲಿ ಚಟ್ನಿ ತುಂಬಿಕೊಂಡು ಮಾರಾಟಕ್ಕೆ ಊರಲ್ಲಿ ಹೋಗ್ತಾಯಿದ್ದೆ. ಸ್ವಲ್ಪ ಹೊತ್ತಿನಲ್ಲೇ ಎಲ್ಲ ಇಡ್ಲಿ ಖರ್ಚಾಗಿ ಬಿಡೋವು. ಆಗ ನನಗೆ 'ಇಡ್ಲಿ ಜೋಗ್ತೆಮ್ಮ' ಅಂತ ಹೆಸರು ಬಿತ್ತು. ಇಡ್ಲಿ ಮಾರುವಾಗ ಓಣಿ ಓಣಿಗೆ ಹೋಗ್ತಾಯಿದ್ದೆ. ಆಗ ಮಕ್ಕಳು, ಪೋಷಕರು ಟ್ಯೂಷನ್ ಹೇಳಿಕೊಡಿ ಎಂದು ಕೇಳಿಕೊಂಡರು. ಸಾಯಂಕಾಲ ಟ್ಯೂಷನ್ ಶುರುಮಾಡಿದೆ. ಇಪ್ಪತ್ತು ಹುಡುಗರು ಬರ್ತಾಯಿದ್ದವು. ಹಿಂಗ ಒಂದು ವರ್ಷ ಕಳೆದಿರಬಹುದು. ಅಷ್ಟೊತ್ತಿಗಾಗಲೇ ಊರಜನ ಬಾಳ ಆತ್ಮೀಯರಾಗಿದ್ರು.

ಗ್ರಾಮದ ಸಾಂಸ್ಕೃತಿಕ ಕಾರ್ಯಕ್ರಮದಲ್ಲೂ ಭಾಗವಹಿಸುತ್ತಿದ್ದೆ. ಒಂದು ದಿವಸ ನಾಲ್ಕೈದು ಜನ ನನ್ನತ್ತಿರ ಬಂದು "ನೀವೊಬ್ಬರೆ ಕಥೆ ಮಾಡಿದ್ರೆ ಚೆನ್ನಾಗಿರುವುದಿಲ್ಲ. ಪಕ್ಕದ ಗೊಲ್ಲರಹಳ್ಳಿ ಯಲ್ಲಿ ಸೋಮಕ್ಕ ಜೋಗತಿ ಅಂತ ಇದ್ದಾರೆ. ಅವರೂ ನಿನ್ನಂಗೆ ಕಥೆ ಮಾಡ್ತಾರೆ. ಅವರ ಜೊತೆ ಆಟ ಮಾಡಿದ್ರೆ ಚೆನ್ನಾಗಾಗುತ್ತೈತಿ. ಆಕೆಯನ್ನು ನಾವು ಒಂದು ದಿವಸ ಇಲ್ಲಿಗೆ ಕರೆಯಿಸುತ್ತೇವೆ. ನಮ್ಮೂರಲ್ಲೇ ಒಂದು ಕಥೆ ಮಾಡ್ರಿ" ಅಂತ ಹೇಳಿದ್ರು. ನಾನು ಒಪ್ಪಿಕೊಂಡೆ. ಊರ ಜನರು ನನ್ನಮೇಲೆ ಇಟ್ಟ ಕಾಳಜಿಯದು. ಹಂಗಾಗಿ ಬೇಡ ಅನ್ನಲಿಲ್ಲ. ನನ್ನ ಕಲಾ ಬೆಳವಣಿಗೆಯಲ್ಲಿ ಆ ಊರಿನವರ ಕಾಣಿಕೆ ದೊಡ್ಡದು. ಕಲೆಯ ಆರಂಭಿಕ ದಿನದಲ್ಲಿ ಪ್ರೋತ್ಸಾಹಿಸಿದರು. ಮನೆಮಗನಂತೆ, ಮಗಳಂತೆ ಕಂಡ ಗ್ರಾಮವದು. ಆ ಗ್ರಾಮಸ್ಥರಿಗೂ ಧನ್ಯವಾದಗಳು.

ಅವರು ಹೇಳಿದಂತೆ ಒಂದು ದಿವಸ ಸೋಮಕ್ಕ ಜೋಗತಿಯನ್ನು ಕರೆತಂದ್ರು. ಜೋಗತಿ ಕಲೆಯಲ್ಲಿ ಪರಿಣಿತಳು ಆಕೆ. ಗುರು ಕಾಳವ್ವ ಜೋಗತಿಯತ್ತಿರ ತರಬೇತಿ ತಗೊಂಡು, ಆಕೆ ಜೊತೆಗೂಡಿ ಸಾವಿರಾರು ಪ್ರದರ್ಶನ ಮಾಡಿದ್ದಳು. ಹಂಗಾಗಿ ನನ್ನ ಜೊತೆ ಚೆನ್ನಾಗಿ ಹೊಂದಿಕೊಂಡು, ನನಗೆ ತಿಳುವಳಿಕೆ ಹೇಳುತ್ತಲೇ ಆಟ ಮಾಡಿದ್ಲು. ಜನ ಬಹಳ ಖುಷಿಪಟ್ರು. ಚೆನ್ನಾಗಿ ಕಲೆಕ್ಷನ್ ಆಯ್ತು. ನಾನು ಹಾಡುವುದನ್ನು, ಕುಣಿಯುವುದನ್ನು ನೋಡಿದ ಸೋಮಕ್ಕ ಕಾಳವ್ವ ಜೋಗತಿಯತ್ತಿರ ಹೇಳಿದ್ದಾಳೆ. ಆಗ ಅವರಿಬ್ಬರು ಸೇರಿ ನನ್ನ ಹುಡುಕಿಕೊಂಡು ಬಂದ್ರು. ಅದಕ್ಕಿಂತ ಮುಂಚೆ ಕಾಳವ್ವ ಜೋಗತಿಯನ್ನು ನೋಡಿದ್ದೆ, ಆದ್ರೆ ಪರಿಚಯವಿರಲಿಲ್ಲ. ನಾನು ಜೋಗತಿಯಾದ ದಿನ ಮಾವ ಗಾಂದೆಮ್ಮ ಅವರು ಕಾಳವ್ವ ಜೋಗತಿಯನ್ನ ಕರಕೊಂಡು ಬಂದಿದ್ದ. ಆಕೆಗೆ ನನ್ನನ್ನು ಪರಿಚಯಿಸಿ ನಿನ್ನಂಗ ನಾಟಕ ಮಾಡುವುದನ್ನು ಮಂಜುಗೂ ಕಲಿಸು ಅಂತ ಹೇಳಿದ್ದ. ಆಕೆಯು ಸಹ ಒಪ್ಪಿಕೊಂಡಿದ್ದಳು. ಆದ್ರೆ ನಾನು ಮತ್ತ್ಯಾವತ್ತು ಕಾಳವ್ವನನ್ನು ಭೇಟಿಯಾಗಿರಲಿಲ್ಲ. ಅದು ಅಲ್ಲದೆ ಕಾಳವ್ವನ ಬಗ್ಗೆ ಜೋಗತಿಯರಲ್ಲಿ ಅನೇಕ ಕಥೆಗಳಿದ್ದವು. ಆಕೆ ಒಳ್ಳೆಯಕ್ಕಲ್ಲ. ದೊಡ್ಡ ಮಾಟಗಾರ್ತಿ, ಆಕೆಯತ್ತಿರ ಹೋದ ಜೋಗ್ತಿಯರಿಗೆ ಮಾಟ ಮಾಡಿಸುತ್ತಾಳೆ. ಮತ್ತೆ ವಾಪಸ್ ಕಳುಹಿಸುವುದೇ ಇಲ್ಲ. ತನ್ನಲ್ಲಿ ತನ್ನ ಚಾಕರಿಗಾಗಿ ಇಟ್ಟುಕೊಂಡು ಬಿಡುತ್ತಾಳೆ. ಆಕೆ ಜೊತಿಗೆ ಹೋದವರ್‍ಯಾರು ಉದ್ಧಾರಾಗಿಲ್ಲ. ಹಂಗಾಗಿ ನೀನು ಹೋಗಲೇಬೇಡ ಅಂತ ಹಚ್ಚಿಕೊಟ್ರು. ಇದನ್ನೇ ನಂಬಿದ ನಾನು ಆಕಿತಾಕ ಹೋಗಲೇಯಿಲ್ಲ. ಆದ್ರು ಸೋಮವ್ವ ಚಿಲಕನಟ್ಟಿಗೆ ಕಾಳವ್ವನ ಕರಕೊಂಡು ಬಂದ್ಲು. ಬಂದಾಕಿ ನಮ್ಮ ಮಾವನ ಮನೆ ಹತ್ತಿರ ಬರಲಿಲ್ಲ. ಹೋಟೆಲ್‌ನಾಗ ಕುಂತಾಳ ಬಾ ಅಂತ ಸೋಮಕ್ಕ ಮನೆಗೆ ಬಂದು ಕರೆದ್ಲು. ನಾನು ಒಲ್ಲೆ ಒಲ್ಲೆ ಅಂದೆ. ಆದ್ರೂ ಬಿಡಲಿಲ್ಲ. ಹಠ ಮಾಡಿ ಕರಕೊಂಡೋದ್ಲು. ದಾರಿ ತುಂಬ ಏನೇನೋ ಆಲೋಚನೆಗಳು ಬಂದಿದ್ದವು. ತಂದೆ-ತಾಯಿಯಿಂದ, ಮನೆಯವರಿಂದ ಸಿಗದಿರುವ ಪ್ರೀತಿ ಆ ಊರಲ್ಲಿ ಸಿಕ್ಕೈತಿ. ನನ್ನನ್ನು ಎಲ್ಲಮ್ಮ, ಹುಲಿಗೆಮ್ಮ 'ದೇವಿ' ಅಂತ ಅಂದು

ಕೊಂಡಿದ್ದಾರೆ. ಮನೆಗೆ ಕರಕೊಂಡೋಗಿ ಪಾದ ಪೂಜೆ ಮಾಡಿ, ಕರೆಕಂಬಳಿ ಗದ್ದುಗೆ ಹಾಕಿ ಕುಂದ್ರಿಸಿ ಪೂಜೆ ಮಾಡುತ್ತಿದ್ದಾರೆ. ಇಷ್ಟೊಂದು ಗೌರವ ಯಾರಿಂದಲೂ ಯಾವ ಊರಲ್ಲೂ ಸಿಕ್ಕಿಲ್ಲ. ಕಾಳವ್ವ ಈ ಊರನ್ನು ಬಿಡಿಸಿ ಓಡಿಸಿ ಎಲ್ಲಿಗೆ ಕಳುಹಿಸಿಬಿಡ್ತಾಳೆ, ಹೊಡೆದು ಬಡಿದು ಊರು ಬಿಟ್ಟು ಓಡಿಸಿ ಬಿಡ್ತಾರೋ ಎನ್ನುವ ಭಯ ಬಂದಿತ್ತು. ಆ ಭಯದಲ್ಲಿ ಹೋಗಿ ಆಕಿ ಮುಂದೆ ನಿಂತುಕೊಂಡೆ. ನಮಸ್ಕಾರನೂ ಮಾಡಲಿಲ್ಲ. ಹಿರೆ ಜೋಗತಿಯರು ಕಂಡಾಗ ನಮಸ್ಕಾರ ಮಾಡಬೇಕು ಅನ್ನುವ ಸಂಪ್ರದಾಯ ಜೋಗತಿಯರಲ್ಲಿದೆ. ಆಕಿ ಕಂಡಾಗ ಹೆದರಿಕೆ ಆಯ್ತು ಹೊರತು ಬೇರೆ ಆಲೋಚನೆ ಬರಲಿಲ್ಲ.

ನಾನು ದೂರ ನಿಂತಿದ್ದೆ. ಹತ್ತಿರ ಬಾ ಅಂತ ಕರೆದು ಡ್ಯಾನ್ಸ್ ಚೆಂದ ಮಾಡ್ತಿಯಂತಲ್ಲ ಮಾಡು ನೋಡೋಣ ಅಂತ ಹೇಳಿ;

ಗಾವಾರಾಜ ನೀನು ಮಂಚಕ ಮಲಗಿದವನು
ಬಹುಸುಂದರ ತಾನಿರುತಿಹನು.....
ತನ್ನನೆ ರಾಗವನು ಮನ ತನ್ನನೆ ಪಾಡಿತೇ
ಕರುಣೆ ಕಾಲವೇನೆ ಇದು ವರನ ಕುರಿತು ಮನವಿ

ಎನ್ನುವ ಹಾಡನ್ನು ಹಾಡಿದಳು. ಮನಸಿಲ್ಲದ ಮನಸಲ್ಲಿ ಹಾಡಿಗೆ ನೃತ್ಯ ಮಾಡಿದೆ. ಅದನ್ನೇ ನೋಡಿ ಚೆನ್ನಾಗಿ ಮಾಡ್ತಿಯಾ, ನೀನು ನಮ್ಮ ಜೊತೆಗೆ ಬಂದುಬಿಡು. ಇಷ್ಟರಲ್ಲೆ ಪಕ್ಕದ 'ಹಾರನಾಳ' ಗ್ರಾಮದಲ್ಲಿ ಯಲ್ಲಮ್ಮನ ನಾಟಕ ಮಾಡ್ತಿವಿ. ನೀನು ಒಂದು ಪಾತ್ರ ಮಾಡು. ಅಲ್ಲಿಯತನಕ ನಮ್ಮ ಹತ್ತಿರ ಬಂದು ತರಬೇತಿ ತಗೋಬೇಕು ಅಂತ ಹೇಳಿ ಹೋದ್ಲು. ಆಗಂತೂ ಈಕಿ ಏನ ಮಾಡಿಬಿಡ್ತಾಳೆ. ಈ ಊರು ಜನ ಯಾಕಾದ್ರು ಸೋಮವ್ವ ಪರಿಚಯ ಮಾಡಿಸಿದ್ರು ಅಂತ ಬೈಕೊಂತ ಮನೆಗೆ ಹೋಗಿ ಕುಂತುಕೊಂಡೆ. ಊಟ ಮಾಡುವಂಗೆ ಆಗವಲ್ಲದು. ಅವತ್ತಂತೂ ನಿದ್ದೆ ಬರಲಿಲ್ಲ. ಆದ್ರೂ ಮರುದಿನ ಆಕಿ ಹತ್ತಿರ ಹೋದೆ. ಕಾಳವ್ವನ ಬಗ್ಗೆ ಭಯವಿದ್ದರೂ ಊರಿನ ಜನರು ಇಟ್ಟಿದ್ದ ಪ್ರೀತಿಗಾಗಿ ಅಲ್ಲಿಗೆ ಹೋದೆ. ಆದ್ರೆ ಜೋಗ್ತಿಯರು ಹೇಳಿದಕ್ಕಿಂತ ಭಿನ್ನವಾದ ಗುಣಗಳು ಮತ್ತು ಜೀವ್ನ ಕಾಳವ್ವನಲ್ಲಿ ಕಾಣಿಸಿತು. ಪ್ರೀತಿಯಿಂದಲೇ ಕಲೆ ಕಲಿಸಿದಳು. ಇವತ್ತು ಕಲಾವಿದೆಯಾಗಿ ಬೆಳೆಯುವುದಕ್ಕೆ ಕಾಳವ್ವ ಜೋಗತಿ ಕಾರಣ. ಅಂತಹ ಜೋಗತಿ ನನಗೆ ಗುರುವಾಗಿ ಸಿಕ್ಕಿದ್ದು ನನ್ನ ಜನ್ಮದ ಪುಣ್ಯ.

### ಗಂಡು ಜೋಗತಿಯರ ನಾಟಕ ತಂಡವೆಂದರೆ ನಮ್ಮದೊಂದೆ

ಗಂಡುಜೋಗತಿಯರು, ಮಂಗಳಮುಖಿಯರು ನಾವು ಇತರರಿಗಿಂತ ಕಮ್ಮಿಯಲ್ಲ ಅಂತ ಇವತ್ತು ಅನೇಕ ಕೆಲಸಗಳನ್ನು ಮಾಡಿ ತೋರಿಸಿದ್ದಾರೆ ಮತ್ತು ತೋರಿಸುತ್ತಿದ್ದಾರೆ. ಇದು ಒಳ್ಳೆಯ ಬೆಳವಣಿಗೆ. ನಾವು ಇತರೆ ಕಲಾವಿದರಿಗಿಂತ ಕಮ್ಮಿಯಿಲ್ಲ ಅನ್ನುವುದನ್ನು ತೋರಿಸಬೇಕು ಅಂತ ನಮಗೆಲ್ಲ ಕಾಳವ್ವ ಜೋಗತಿ ಅವತ್ತೇ ಹೇಳುತ್ತಿದ್ದರು. ಅದಕ್ಕಾಗಿಯೇ

ಯಲ್ಲಮ್ಮನ ನಾಟಕವನ್ನು ಮಾಡುತ್ತಿದ್ವಿ. ಆ ಕಾಲದಲ್ಲಿ ಗಂಡುಜೋಗತಿಯರು ನಾಟಕ ಮಾಡ್ತಾಯಿದ್ದ ತಂಡವೇಂದ್ರೆ ನಮ್ಮದೊಂದೆ. ಆ ತಂಡದ ನಾಯಕರು ಕಾಳವ್ವ ಜೋಗತಿ. ನಮ್ಮ ತಂಡದಿಂದ ಶ್ರೀ ರೇಣುಕ ಯಲ್ಲಮ್ಮ, ಬಡವಿ ಲಕ್ಕಮ್ಮ ಎನ್ನುವ ನಾಟಕಗಳನ್ನು ಮಾಡುತ್ತಿದ್ವಿ. ಆ ನಾಟಕಗಳಲ್ಲಿ ಬರುವ ಗಂಡು ಮತ್ತು ಹೆಣ್ಣು ಪಾತ್ರಗಳನ್ನೂ ನಾವೇ ಮಾಡುತ್ತಿದ್ವಿ. ಅಲ್ಲಿ ಗಂಡು ಹೆಣ್ಣಾಗಿ, ಹೆಣ್ಣು ಗಂಡಾಗಿ ನಟಿಸುವ ಅವಕಾಶಗಳು ಸಿಗುತ್ತಿದ್ವು. ಆ ಪಾತ್ರಗಳು ನಮ್ಮಂಗೆ ಗಂಡು ಹೆಣ್ಣಾಗಿ, ಹೆಣ್ಣು ಗಂಡಾಗಿ ಕಾಣಿಸಿ ಕೊಳ್ಳುವಂಥವು. ಹಂಗಾಗಿ ಆ ನಾಟಕದಲ್ಲಿ ಬರುವ ಪಾತ್ರಗಳನ್ನು ಅನುಭವಿಸುತ್ತಿದ್ದೆವು. ನಾನಂತೂ ಒಂದೇ ನಾಟಕದಲ್ಲಿ ಐದಾರು ಪಾತ್ರಗಳನ್ನು ಮಾಡುತ್ತಿದ್ದೆ. ಕಾಳವ್ವ ಜೀವಂತವಾಗಿರುವ ತನಕ ನಾನು ಶ್ರೀ ರೇಣುಕ ಯಲ್ಲಮ್ಮನ ನಾಟಕದಲ್ಲಿ ಕಾಮಧೇನು, ಗೌಡಶಾನಿ, ಗಂಗಮ್ಮ ಮತ್ತು ನಾಗೇಂದ್ರನ ಪಾತ್ರಗಳನ್ನು ಮಾಡುತ್ತಿದ್ದೆ. ಇದು ಅಲ್ಲದೆ ನಾಟಕದ ನಡುನಡುವೆ ಡ್ಯಾನ್ಸ್ ಮಾಡುತ್ತಿದ್ದೆ.

ಅಂದರೆ ಪರಶುರಾಮ ಹುಟ್ಟುವ ತನಕ ನಾಟಕದ ನಡುನಡುವೆ ನೃತ್ಯ ಮಾಡುತ್ತಿದ್ದೆ. ನಮ್ಮ ಆಸಕ್ತಿಗಾಗಿ ಅಥವಾ ನಾಟಕದ ವೈಶಿಷ್ಟ್ಯತೆಗಾಗಿ ನೃತ್ಯ ಮಾಡುತ್ತಿರಲಿಲ್ಲ. ನಮ್ಮ ತಂಡದ ಹೊಟ್ಟೆಪಾಡಿಗಾಗಿ ನೃತ್ಯ ಮಾಡುತ್ತಿದ್ದೆ. ಆವಾಗ ೨೦೦ ರೂಪಾಯಿಗೆ ಒಂದು ನಾಟಕ ಮಾಡುತ್ತಿದ್ದೆವು. ಆ ನಾಟಕ ಮಾಡುತ್ತಿರುವಾಗ ನಾಟಕದ ನಡುನಡುವೆ ಚೂಡಿದಾರ ಹಾಕಿಕೊಂಡು ನೃತ್ಯ ಮಾಡುತ್ತಿದ್ದೆ. ಒಮ್ಮೊಮ್ಮೆ ಹಳೆ ಚಿತ್ರಗೀತೆ ಹಾಕಿಕೊಂಡು ಕುಣಿಯುತ್ತಿದ್ದೆ. ಹಿಂಗ ಮಾಡುವುದರಿಂದ ನಾಟಕಕ್ಕೆ ನಮ್ಮ ಸಂಪ್ರದಾಯಕ್ಕೆ ಅನ್ಯಾಯ ಮಾಡುತ್ತಿದ್ದೇವೆ ಅಂತ ದುಃಖವಾಗುತ್ತಿತ್ತು. ಕಲೆಗೆ ಅವಮಾನ ಮಾಡುತ್ತಿದ್ದೇವೆ ಅಂತ ಅನ್ನಿಸುತ್ತಿತ್ತು. ಆದರೂ ಹೊಟ್ಟೆಪಾಡಿನ ಅನಿವಾರ್ಯತೆಗಾಗಿ ಹಿಂಗ ಮಾಡುತ್ತಿದ್ದೆವು. ಡ್ಯಾನ್ಸ್ ಮಾಡಿದ್ರೆ ನೋಡುಗರು ಸ್ವಲ್ಪ ದುಡ್ಡು ಹಾಕುತ್ತಿದ್ದರು. ಕೆಲವರು ಒಂದು ರೂಪಾಯಿ, ಎರಡು ರೂಪಾಯಿ ನೋಟುಗಳನ್ನು ಜೋಡಿಸಿ ಸರ ಮಾಡಿ ನಮ್ಮ ಕೊರಳಿಗೆ ಹಾಕುತ್ತಿದ್ದರು. ಆ ಕಾಲದಲ್ಲಿ ಐದು ರೂಪಾಯಿ ಕೊಟ್ಟವನು ದೊಡ್ಡವನು. ಯಾರಾದ್ರು ಐದು ರೂಪಾಯಿ ಕೊಟ್ಟುಬಿಟ್ಟರೆ ಸಾಕು ಅವತ್ತು ನಮ್ಮ ತಂಡಕ್ಕೆಲ್ಲ ಖುಷಿಯಾಗಿಬಿಡೋದು. ಇವತ್ತು ೫೦೦ ರೂಪಾಯಿ ಕೊಟ್ಟರೂ ಆ ಖುಷಿ ಆಗೊಂಗಿಲ್ಲ. ೫೦೦ ರೂಪಾಯಿ ನೋಟು ನೋಡಿದಾಗೆಲ್ಲ ೧೯೯೦ರಲ್ಲಿ ಎಚ್.ಎಲ್. ನಾಗೇಗೌಡರು ಬೆಂಗಳೂರಿನಲ್ಲಿ ಮಾಡಿದ ಕಾರ್ಯಕ್ರಮ ನೆನಪಿಗೆ ಬರುತ್ತದೆ. ಯಾಕಂದ್ರೆ ಆ ಕಾರ್ಯಕ್ರಮದಲ್ಲಿ ನಾನು ನೃತ್ಯ ಮಾಡುವಾಗ ನಾಗೇಗೌಡರು ೧೦ ರೂಪಾಯಿಯನ್ನು ಇಟ್ಟಿದ್ರು. ಅಬ್ಬಾ ಹತ್ತು ರೂಪಾಯಿಯಲ್ಲ ಅಂತ ಬಹಳ ಖುಷಿಯಿಂದ ನೃತ್ಯ ಮಾಡುತ್ತ ಕಚ್ಚಿಕೊಂಡೆ. ಅಲ್ಲದೆ ಬಾಳ ಅದ್ಭುತವಾದ ನೃತ್ಯ ಮಾಡಿದ್ದೆ. ಇದನ್ನು ನೋಡಿದ 'ಶ್ರೀಮತಿ ಚಿಂದೋಡಿ ಲೀಲಾ' ಅವರು ೫೦೦ ರೂಪಾಯಿ ನೋಟು ಕಚ್ಚಿಕೊಳ್ಳಲಿ ಅಂತ ಇಟ್ಟಿದ್ರು. ನಾವು ೫೦೦ ರೂಪಾಯಿ ನೋಟು ನೋಡಿದ್ದೆ ಅದೇ ಮೊದಲು.

ಇದೇನಪ್ಪ ಇಷ್ಟು ದೊಡ್ಡದೈತಿ. ಇದು ಯಾವ ನೋಟು ಖೋಟಾ ನೋಟಾ ಅಂತ ಅನ್ನಿಸಿತ್ತು. ಅವತ್ತು ನಮ್ಮಲ್ಲಿ ಕಾರ್ಯಕ್ರಮಕ್ಕಿಂತ ಆ ಐದುನೂರು ನೋಟಿನದೇ ಹೆಚ್ಚು ಚರ್ಚೆಯಾಗಿತ್ತು.

ಬಡವಿ ಲಕ್ಕಮ್ಮನ ನಾಟಕದಲ್ಲಿ ಕಾಳವ್ವ ದೇವಿ(ಹುಲಿಗೆಮ್ಮ) ಪಾತ್ರವನ್ನು ಮಾಡಿದರೆ ನಾನು ಲಕ್ಕಮ್ಮನ ಪಾತ್ರವನ್ನು ಮಾಡುತ್ತಿದ್ದೆ. ಆ ನಾಟಕದಲ್ಲಿ ಲಕ್ಕಮ್ಮನಿಗೆ ಹದಿನಾಲ್ಕು ಜನ ಮಕ್ಕಳು. ನನ್ನ ಅವ್ವನಿಗೂ ಬಾಳಮಂದಿ ಮಕ್ಕಳು ಹುಟ್ಟಿದ್ದರು. ಅದಕ್ಕೆ ಆ ಪಾತ್ರವನ್ನು ಬಹಳ ಇಷ್ಟಪಟ್ಟು ಮಾಡುತ್ತಿದ್ದೆ. ಆ ಪಾತ್ರ ಮಾಡುವಾಗಲೆಲ್ಲ ಅವ್ವನ ಜೀವನ ನೆನಪಿಗೆ ಬರುತ್ತಿತ್ತು. ಆ ಪಾತ್ರದ ಮೂಲಕ ನಾನು ಅವ್ವನ ಜೀವನವನ್ನು ಅನುಭವಿಸುತ್ತಿದ್ದೇನೆ ಅನ್ನುವ ಭಾವನೆ ಬರುತ್ತಿತ್ತು. ಕಾಳವ್ವ ಸತ್ತ ನಂತರ ರೇಣುಕ ಯಲ್ಲಮ್ಮ, ಅಗಸಗಿತ್ತಿ ಮಾಳಮ್ಮ, ಕೊರವಂಜಿ ಪಾತ್ರಗಳನ್ನು ಮಾಡುತ್ತಿರುವೆ. ಈ ಪಾತ್ರಗಳಿಗಿಂತ ನನಗೆ ಗೌಡಶಾನಿ ಹಾಗೂ ಪರಶುರಾಮನ ಪಾತ್ರಗಳು ಬಹಳ ಇಷ್ಟವಾಗುತ್ತವೆ. ಆ ಪಾತ್ರಗಳನ್ನು ಮಾಡಿದಾಗ ಆಗುವಷ್ಟು ಖುಷಿ ಈ ಪಾತ್ರಗಳಲ್ಲಿ ಆಗುವುದಿಲ್ಲ. ಗೌಡಶಾನಿ ಪಾತ್ರವನ್ನಂತೂ ಬಹಳ ಚೆನ್ನಾಗಿ ಮಾಡಿದ್ದೇನೆ. ನಾಟಕದ ಆರಂಭದಲ್ಲಿ ಅಹಂಕಾರದಿಂದ ಮೆರೆಯುವ, ಅರ್ಧ ನಾಟಕದ ನಂತರ ರೇಣುಕ ಯಲ್ಲಮ್ಮನ ಶಾಪಕ್ಕೆ ಒಳಗಾಗಿ ಕಡುಬಡತನವನ್ನು ಅನುಭವಿಸುವ ಪಾತ್ರವದು. ಈ ಎರಡು ಸಂದರ್ಭಗಳನ್ನು ಇಷ್ಟಪಟ್ಟು ಮಾಡುತ್ತಿದ್ದೆ. ಗೌಡಶಾನಿಯ ಸೊಕ್ಕಿನ ಅಭಿನಯವನ್ನು ನೋಡುತ್ತಿದ್ದಾಗ ಒಮ್ಮೆ ನಾಟಕ ನೋಡಿದ ನೋಡುಗರು 'ಎಷ್ಟು ಉರಿತೀದಿ ಉರಿಯಲೇ ಮುಂದೆ ಬರುತ್ತದೆ ನಿನಗೆ ಗೋಳು' ಅಂತ ಅನ್ನುತ್ತಿದ್ದ ಮಾತುಗಳನ್ನು ಕೇಳಿಸಿಕೊಂಡಿರುವೆ. ಗೌಡಶಾನಿ ಬಡವಿಯಾದ ಸಂದರ್ಭದಲ್ಲೂ ಅಷ್ಟೇ ಚೆನ್ನಾಗಿ ಮಾಡಿರುವೆ. ನಾನು ಮೊದಲೇ ಅಳುಬುರುಕಿ. ಕಷ್ಟಗಳಿಗೆ ಬೇಗ ಅತ್ತುಬಿಡುವೆ. ನಾಟಕಗಳಲ್ಲಿ ಅಷ್ಟೆ, ಕಷ್ಟಗಳಿಗಾಗಿ ಬೇಗ ಅತ್ತುಬಿಡುವೆ. ಗೌಡಶಾನಿಗೆ ಬಡತನ ಬಂದಾಗಂತೂ ಪ್ರತಿ ನಾಟಕದಲ್ಲೂ ಅತ್ತಿರುವೆ. ನನ್ನ ಅಳುವನ್ನು ನೋಡಿ ಹೆಂಗಸರು ಅಲ್ಲ, ಗಂಡಸರೇ ಅತ್ತಿದ್ದಾರೆ. ಸೊಕ್ಕಿನಿಂದ ಉರಿದ ಗೌಡಶಾನಿ ಪಾತ್ರವನ್ನು ಆ ಅಳುವಿನಲ್ಲಿ ಮರೆಯಿಸಿಬಿಡುತ್ತಿದ್ದೆ. ಹಂಗಾಗಿ ಆ ಪಾತ್ರ ನನಗೆ ಬಾರಿ ಹೆಸರು ತಂದುಕೊಟ್ಟಿದೆ. ಪರಶುರಾಮನ ಪಾತ್ರವನ್ನು ಮಾಡಿದ ಅನುಭವ ಇದಕ್ಕಿಂತ ಭಿನ್ನ. ನಾನು ಜೀವನದಲ್ಲಂತೂ ಗಂಡಸಾಗಿ ಬದುಕಲಿಲ್ಲ. ಈ ಪಾತ್ರದಲ್ಲಾದ್ರೂ ಗಂಡಸಾಗಿ ಕಾಣಿಸಿಕೊಳ್ಳುವೆಯಲ್ಲ ಅಂತ ಅಂದುಕೊಂಡು ಮಾಡುತ್ತಿದ್ದೆ. ಈಗ 'ಮೋಹಿನಿ ಬಸ್ಮಾಸುರ' ನಾಟಕವನ್ನು ಮಾಡುತ್ತಿದ್ದೇವೆ. ನಮ್ಮ ತಂಡಕ್ಕೆ ಬಹಳ ಹೆಸರು ತಂದುಕೊಟ್ಟ ನಾಟಕವದು. ಆ ನಾಟಕದಲ್ಲಿ ಬಸ್ಮಾಸುರ ಪಾತ್ರವನ್ನು ಮಾಡುತ್ತಿರುವೆ. ಆ ಪಾತ್ರದ ಅಭಿನಯವನ್ನು ನೋಡಿದ ಜನರಲ್ಲಿ ಕೆಲವರು ನೀನು ಎನ್.ಟಿ.ಆರ್. ತರ

ಅಭಿನಯಿಸುತ್ತಿರುವೆ, ಇನ್ನು ಕೆಲವರು ಡಾ. ರಾಜಕುಮಾರ್, ಮತ್ತೆ ಕೆಲವರು ವಜ್ರಮುನಿಯವರ ಅಭಿನಯವನ್ನು ನಿನ್ನಲ್ಲಿ ಕಾಣುತ್ತೇವೆ ಎಂದು ಹೇಳಿದ್ದಾರೆ.

ಮೋಹಿನಿ ಬಸ್ಮಾಸುರ ರಚನೆ ಮಾಡಿರುವಂತಹದು. ಶ್ರೀ ಯಲ್ಲಮ್ಮ ನಾಟಕ ಬಾಯಿಂದ ಬಾಯಿಗೆ ಹರಿದುಬಂದಿರುವಂತಹದ್ದು. ನಾನು ಕಾಳವ್ವ ಜೋಗತಿಯಿಂದ ಕಲಿತೆ. ಅವರು ತಮ್ಮ ಗುರು 'ಯಲ್ಲಪ್ಪ ಜೋಗತಿಯ'ವರಿಂದ ಕಲಿತಿದ್ದಾರೆ. ಯಲ್ಲಪ್ಪ ಬಳ್ಳಾರಿ ಜಿಲ್ಲೆ ಸೊಂಡೂರು ತಾಲೂಕು ಚೋರನೂರು ಗ್ರಾಮದವರು. ಇವರು ಅವರ ಗುರುವಿನತ್ತಿರ ಕಲಿತಿದ್ದರೆಂದು ಕಾಳವ್ವ ಹೇಳುತ್ತಿದ್ದಳು. ನಾನು ಕಾಳವ್ವನ ಒತ್ತಾಯದಿಂದಾಗಿ ಈ ಕ್ಷೇತ್ರಕ್ಕೆ ಬಂದವಳು ಅಥವಾ ಮುಖಕ್ಕೆ ಬಣ್ಣ ಹಚ್ಚಿಕೊಂಡವಳು. ನನ್ನ ಮುಖಕ್ಕೆ ಮೊದಲು ಬಣ್ಣ ಹಚ್ಚಿದವರು ಬಸವಲಿಂಗಮ್ಮ ಜೋಗತಿ. ಅವರು ಲಿಂಗಾಯತ ಸಮುದಾಯಕ್ಕೆ ಸೇರಿದವರು. ದೊಡ್ಡ ಮನೆತನದವರು. ಶ್ರೀಮಂತರು. ಪರಶುರಾಮನ ಪಾತ್ರವಂತೂ ಬಹಳ ಅದ್ಭುತವಾಗಿ ಮಾಡುತ್ತಿದ್ದರು. ಅಂತವರ ಗರಡಿಯಲ್ಲಿ ನಾನು ಪಳಗಿರುವೆ. ಹಂಗಾಗಿ ಇಂತಹ ಅಭಿನಯ ಕರಗತವಾಗಿದೆ. ಅಲ್ಲದೆ ಗುರು ಕಾಳವ್ವ ಜೋಗತಿ ಮತ್ತು ಅಂತಹ ಹಿರಿಯ ಕಲಾವಿದರ ಆಶೀರ್ವಾದ ನನ್ನ ಮೇಲಿದೆ. ಕಾಳವ್ವ ಜೋಗತಿಯನ್ನಂತೂ ನಾನು ಯಾವ ಕಾಲಕ್ಕೂ ಮರೆಯಂಗಿಲ್ಲ. ನಾನೇನಾದ್ರೂ ಈ ಜೋಗತಿ ಕಲೆಯಲ್ಲಿ ಹೆಸರು ಮಾಡಿರುವೆ ಅಂದ್ರೆ ಅದು ಅವರ ಆಶೀರ್ವಾದದಿಂದ. ಅವತ್ತು ಕಾಳವ್ವ ನನ್ನನ್ನು ಈ ಕ್ಷೇತ್ರಕ್ಕೆ ಕರೆತರದಿದ್ರೆ ನಾನೆಲ್ಲಿರುತ್ತಿದ್ದೆ ಅಂತ ನನಗೆ ಗೊತ್ತಿಲ್ಲ. ಎಲ್ಲರಂತೆ ಸಾಮಾನ್ಯ ಜೋಗತಿಯಾಗಿರುತ್ತಿದ್ದೆ ಅಷ್ಟೆ ಅಂತ ಹೇಳಬಹುದು.

## ಅಭಿಮಾನಿಗಳ ಚಪ್ಪಾಳೆಗಳು ನನಗೆ ಪ್ರಶಸ್ತಿ ತಂದವು

ಅವತ್ತು ಜೋಗತಿ ನೃತ್ಯ ಕಲಿಯುವಾಗ ನನಗೆ ಇದು ಕಲೆ ಅಂತ ಗೊತ್ತಿರಲಿಲ್ಲ. ಚಿಕ್ಕ ಹುಡುಗ ಅದರಲ್ಲೂ ಮುತ್ತು ಕಟ್ಟಿಸಿಕೊಂಡಿರುವ, ಜಡೆ ಬಂದಿರುವ ಹುಡುಗ ಕುಣಿಯುತ್ತಿದ್ದಾನೆ. ಸಣ್ಣ ಹುಡುಗನೇ ಕುಣಿಯುತ್ತಿದ್ದಾನೆ ಅಂದ್ರೆ ನಾನ್ಯಾಕೆ ಕಲಿಯಬಾರದು ಅಂತ ಕಲಿತೆ, ಕಲೆ ಅಂತ ಕಲಿಯದೆ ಹೊಟ್ಟೆಪಾಡಿಗಾಗಿ ಕಲಿತೆ. ಇದು ಕಲೆ ಅಂತ ಗೊತ್ತಾಗಿದ್ದು ತುಂಬಾ ತಡವಾಗಿ. ೧೯೮೫ರಲ್ಲಿ ಹರಪನಹಳ್ಳಿಯ ಕುಸುಮ ಚಿತ್ರಮಂದಿರದ ಹತ್ತಿರ ಬೀದಿಯಲ್ಲಿ ಕಾಳವ್ವ ಜೋಗತಿಯ ಜೊತೆ ಕುಣಿಯುತ್ತಿದ್ದೆ. ಅಲ್ಲೇ ಡ್ಯೂಟಿ ಮಾಡುತ್ತಿದ್ದ ಪಿ.ಎಸ್.ಐ. ಅವರು ನಮ್ಮ ಹತ್ತಿರ ಬಂದ್ರು. ನನಗೆ ಭಯವಾಯ್ತು. ನೃತ್ಯ ಮಾಡುವುದನ್ನೇ ನಿಲ್ಲಿಸಿಬಿಟ್ಟೆ. ಕಾಳವ್ವ ನಿಲ್ಲಿಸಬೇಡ ಕುಣಿ ಅಂತ ಹೇಳಿ ಹಾಡು ಹಾಡಿದಳು. ಅವರು ನಮ್ಮತ್ತಿರ ಬರುವುದನ್ನು ನೋಡುತ್ತಲೇ ಭಯದಿಂದ ಕುಣಿಯುತ್ತಿದ್ದೆ. ನಮ್ಮ ಹತ್ತಿರ ಬಂದು ನೀವು ವೇದಿಕೆ ಮೇಲೆ ಕಾರ್ಯಕ್ರಮ ಕೊಡುತ್ತೀರಾ? ನಾವು ಅದಕ್ಕೆ ವ್ಯವಸ್ಥೆ ಮಾಡುತ್ತೇವೆ ಅಂತ ಕೇಳಿದರು. ಕಾಳವ್ವ ತಕ್ಷಣ ಒಪ್ಪಿಕೊಂಡಳು. ಅದಕ್ಕೆ ನನಗೆ ಮತ್ತಷ್ಟು ಭಯ ಸುರುವಾಯ್ತು. ನನಗ್ಯಾಕೊ ಪೋಲಿಸರೆಂದರೆ ಚಿಕ್ಕ

ಹುಡುಗ ಇದ್ದಾಗಿನಿಂದಲೂ ಭಯ. ದಾರಿಯಲ್ಲಿ ಯಾರಾದ್ರೂ ಪೋಲಿಸ್ ಕಂಡ್ರೆ ಅಮ್ಮನ ಸೆರಗಿನಲ್ಲಿ ಬಚ್ಚಿಟ್ಟುಕೊಂಡು ಹೋಗುತ್ತಿದ್ದೆ. ಇಪ್ಪತ್ತೆರಡು ವರ್ಷವಾದ್ರು ಆ ಭಯ ಹೋಗಿರಲಿಲ್ಲ. ಕಾಳವ್ವ ಬ್ಯಾರೆ ಕಾರ್ಯಕ್ರಮ ಕೊಡುವುದಕ್ಕೆ ಒಪ್ಪಿಕೊಂಡುಬಿಟ್ಟಳು. ಆಗ ಕಾಳವ್ವನ ಹತ್ತಿರ ಹೋಗಿ ಭಯದಿಂದಲೇ ವೇದಿಕೆ ಅಂದ್ರೆ ಏನು? ನಾವು ಎಲ್ಲಿ ಕಾರ್ಯಕ್ರಮ ಕೊಡಬೇಕು ಅಂದೆ. "ಅದೆ ಸ್ಟೇಜ್ ಅಂತಾರಲ್ಲ ಅದನ್ನ ಈ ಜನ ವೇದಿಕೆ ಅಂತಾರೆ" ಅಂತ ಹೇಳಿದಳು. ಆಗ ನನಗೆ ಸ್ಟೇಜ್ ಅನ್ನೋದು ಗೊತ್ತಿತ್ತು, ವೇದಿಕೆ ಅನ್ನೋದು ಗೊತ್ತಿರಲಿಲ್ಲ.

ಅವತ್ತು ಸಾಯಂಕಾಲ ವೇದಿಕೆಗೆ ಹೋದ್ವಿ. ವೇದಿಕೆ ಸುತ್ತಲೂ ಪೋಲಿಸರು ಇದ್ರು. ನಾನು ಮತ್ತೆ ಹೆದರಿದೆ. ಕಾರ್ಯಕ್ರಮ ಕೊಡುವುದಿಲ್ಲ ಅಂತ ಕಾಳವ್ವನತ್ತಿರ ಹೇಳಿದೆ. ಆಕಿ ನನಗೆ ಧೈರ್ಯ ತುಂಬಿದಳು. ಭಯದಲ್ಲೇ ಚೆನ್ನಾಗಿ ನೃತ್ಯ ಮಾಡಿದೆ. ಆ ಪೋಲಿಸರು ಮತ್ತು ನೆರೆದ ಜನರೆಲ್ಲ ಚಪ್ಪಾಳೆ ಹಾಕಿದ್ರು. ಕಾರ್ಯಕ್ರಮ ಮುಗಿದ ನಂತರನೂ ಪೋಲಿಸರು ಬಂದು ನನ್ನನ್ನು ಮಾತನಾಡಿಸಿದ್ರು. ಅವತ್ತು ಇದೊಂದು ಕಲೆ. ಈ ಕಲೆಗೆ ಗೌರವ ಇದೆ. ಈ ಕಲೆಯನ್ನು ಮಾಡುವವರಿಗೆ ಗೌರವ ಇದೆ ಅಂತ ಗೊತ್ತಾಯ್ತು. ಆದ್ರೆ ಈ ಕಲೆಗೆ ದೈವಶಕ್ತಿ ಇದೆ ಅನ್ನುದನ್ನು ನಾನ್ಯಾವತ್ತು ಮರೆತಿಲ್ಲ. ಹಾಗಾಗಿ ಈ ಕಲೆಯನ್ನು ಕೇವಲ ಕಲೆಯಾಗಿ ನೋಡಿಲ್ಲ. ದೈವವೆಂದು ಆರಾಧಿಸುತ್ತಾ ಬಂದಿದ್ದೇನೆ. ಈ ಕಲಾಕ್ಷೇತ್ರಕ್ಕೆ ಬರುವವರೂ ಸಹ ದೈವವೆಂದು ತಿಳಿಯಬೇಕು ಅಂತ ನಾನು ಬಯಸುತ್ತೇನೆ.

ಇವತ್ತು ಹವ್ಯಾಸಕ್ಕಾಗಿ ಕಲಿಯುತ್ತಿರುವ ಯುವಕರಲ್ಲಿ ಈ ಭಾವನೆ ಕಾಣುತ್ತಿಲ್ಲ. ಅವರಲ್ಲಿ ನನ್ನ ಭಾವನೆಯನ್ನು ಅಥವಾ ಗಂಡುಜೋಗತಿಯರ ಭಾವನೆಯನ್ನು ಹುಡುಕುವುದು ಎಷ್ಟು ಸರಿ ಅಂತ ನನಗೆ ಗೊತ್ತಿಲ್ಲ. ಆದ್ರೆ ಅವರ ಕೆಲವು ಸಂಗತಿಗಳು, ವರ್ತನೆಗಳು ನನ್ನ ಮನಸಿಗೆ ನೋವು ತಂದಿವೆ. ಸಂಕಟವನ್ನುಂಟುಮಾಡಿವೆ. ಉದಾಹರಣೆಗೆ ಶ್ರೀ ಸಂಕಣ್ಣನವರು ಒಂದು ಬೀದಿನಾಟಕ ತಂಡವನ್ನು ಕಟ್ಟಿದ್ದಾರೆ. ಅವರು ಈ ಕಲೆಯನ್ನು ಕಲಿತು ಮಾಡುತ್ತಿದ್ದಾರೆ. ಅವರಿಗೆ ನಾನೇ ಕಲಿಸಿರುವೆ. ಈ ನೃತ್ಯಕ್ಕಾಗಿ ಹಲವು ವಾದ್ಯಗಳನ್ನು ಬಳಸುತ್ತಿದ್ದಾರೆ. ಹಾರ್ಮೋನಿಯಂ, ತಬಲ, ಹಲಗೆ, ಚೌಡಕಿ ಬಳಸುತ್ತಾರೆ. ಚೌಡಿಕೆಯನ್ನು ಕ್ರಮಬದ್ಧವಾಗಿ ನುಡಿಸುವ ಜೋಗಪ್ಪನನ್ನು ತಮ್ಮ ತಂಡದಲ್ಲಿ ಇರಿಸಿಕೊಂಡಿದ್ದಾರೆ. ಅವರ ಪ್ರದರ್ಶನ ಆಡಂಬರವಂತೂ ವಿಚಿತ್ರ. ವೇದಿಕೆಗೆ ಬರುವಾಗ ಉದೋ... ಉದೋ... ಅಂತ ಚೀರಾಡುತ್ತಾರೆ. ಮೈಮೇಲೆಲ್ಲ ಭಂಡಾರ/ಉಗ್ಯಾಡುತ್ತಾರೆ. ನಮಗೆ ಮತ್ತೆ ಅವರಿಗೆ ವ್ಯತ್ಯಾಸಗಳು ಆರಂಭವಾಗುವುದು ಇಲ್ಲೇ. ಮುತ್ತು ಕಟ್ಟಿಸಿಕೊಂಡ ನಾವು ಭಂಡಾರವನ್ನು ಬಂಗಾರವೆಂದು ತಿಳಿದು ಕೊಳ್ಳುತ್ತೇವೆ. ಒಂಚೂರು ನೆಲಕ್ಕೆ ಚೆಲ್ಲುವುದಿಲ್ಲ. ದೇವರಿಗೆ ಅರ್ಪಿಸುವಾಗ ಸೌದತ್ತಿಯಲ್ಲಿ ನೆಲಕ್ಕೆ ಬೀಳುತ್ತದೆಯಾದ್ರು ಅದು ಆಚರಣೆಯ ಸಂದರ್ಭದಲ್ಲಿ ಮಾತ್ರ. ಆಗ ಚೆಲ್ಲುವುದಕ್ಕೆ ಒಂದು ಅರ್ಥವಿದೆ. ನೃತ್ಯ ಮಾಡುವಾಗ ಭಂಡಾರ ಮತ್ತು ಬೇವಿನಸೊಪ್ಪನ್ನು ಹುಗ್ಯಾಡಿ

ತುಳಿಯುತ್ತಾರೆ. 'ಕಲೆಯನ್ನು ದೈವವೆಂದು ಕಲೆಯನ್ನು ಕೇವಲ ಕಲೆ' ಎಂದು ಸ್ವೀಕರಿಸಿಕೊಂಡವರ ನಡುವೆ ಇರುವ ವ್ಯತ್ಯಾಸ ಅಂದರೆ ಇದೆ.

ಆದರೂ ಅವಕಾಶದ ವಿಷಯಕ್ಕೆ ಬಂದಾಗ ನಮಗಿಂತ ಹೆಚ್ಚು ಅವಕಾಶಗಳು ಅವರಿಗೆ ಸಿಕ್ಕಿವೆ, ಇನ್ನು ಮುಂದೆಯೂ ಸಹ ಸಿಗುತ್ತವೆ ಎನ್ನುವ ಸತ್ಯ ನಮಗೆ ಗೊತ್ತಿದೆ. ಅವರು ದೆಹಲಿ, ಮಹಾರಾಷ್ಟ್ರ ಮುಂತಾದ ಕಡೆಗೆಲ್ಲ ಹೋಗಿ ಕಾರ್ಯಕ್ರಮ ಕೊಟ್ಟು ಬಂದಿದ್ದಾರೆ. ಈ ಕಲೆಗಾಗಿ ಜೀವನವನ್ನೇ ಮುಡುಪಾಗಿಟ್ಟು, ಹಲವು ಕಷ್ಟಗಳನ್ನು ಅನುಭವಿಸಿ ತಲೆಮಾರಿನಿಂದ ತಲೆಮಾರಿಗೆ ಕಾಪಾಡಿಕೊಂಡು ಬಂದ ಈ ಕಲೆಯೇ ಜೀವನ ಎಂದುಕೊಂಡಿರುವ ನಮಗೆ ಒಂದು ವರ್ಷದಿಂದ ಒಂದು ಕಾರ್ಯಕ್ರಮವಿಲ್ಲ. ಅವರು ದೊಡ್ಡ ದೊಡ್ಡ ವೇದಿಕೆಯಲ್ಲಿ ಕಾರ್ಯಕ್ರಮ ಮಾಡುತ್ತಿದ್ದಾರೆ. ನಾನು ಹೊಟ್ಟೆಕಿಚ್ಚಿನಿಂದ ಈ ಮಾತನ್ನು ಹೇಳುತ್ತಿಲ್ಲ. ಕಲೆಗಾಗಿಯೇ ಜೀವನವನ್ನೇ ಮುಡುಪಾಗಿಟ್ಟ ನಮ್ಮಂತವರಿಗೂ ಅವಕಾಶಗಳನ್ನು ಕೊಡಲಿ ಅಂತ ಕೇಳುತ್ತಿದ್ದೇನೆ ಅಷ್ಟೆ. ಜನ ಈ ರೀತಿ ಮಾಡುವುದರಿಂದ ಒಂದು ಕಡೆ ನೋವಾದ್ರೆ ಇನ್ನೊಂದು ಕಡೆ ಖುಷಿ ಆಗುತ್ತಿದೆ. ಏಕೆಂದರೆ ನನ್ನ ಸಮುದಾಯದ ಈ ಕಲೆಯನ್ನು ಯಾರು ಇಷ್ಟಪಡುತ್ತಿಲ್ಲ. ಇವತ್ತು ಈ ಕಲೆಯನ್ನು ನಂಬಿ ಜೀವನ ನಡೆಸುವುದು ಕಷ್ಟವಾಗಿದೆ. ಈ ಕಲೆಗೆ ಬನ್ನಿ ಅಂತ ಯಾರನ್ನಾದ್ರು ಕರೆದ್ರೆ ನನ್ನನ್ನೇ ಉದಾಹರಣೆಯಾಗಿ ಕೊಡುತ್ತಾರೆ. 'ನೀನು ನಾಟಕ, ನೃತ್ಯ ಮಾಡಿದೆ ಪ್ರಶಸ್ತಿಗಳನ್ನು ತಗೊಂಡೆ. ಏನು ಗಳಿಸಿದಿ' ಅಂತ ಕೇಳುತ್ತಾರೆ. ಅವರು ಕೇಳುವುದು ನಿಜ, ನಾನು ಹಣ ಗಳಿಸಲಿಲ್ಲ. ಬದಲಾಗಿ ಜನ ಗಳಿಸಿರುವೆ. ನಾನು ಎಲ್ಲಿಗಾದ್ರೂ ಹೋದ್ರೆ ಮಂಜಮ್ಮ ನಮಸ್ಕಾರ, ಬಾ ಕುಳಿತುಕೋ ಅಂತಾರೆ. ಆ ಪ್ರೀತಿಗಿಂತ ದೊಡ್ಡದು ಬೇಕೆ? ನಾನು ಈಗ ನೃತ್ಯ ಮಾಡುವಾಗ ನನ್ನ ನೃತ್ಯದ ಭಂಗಿಗಳನ್ನು ನೋಡಿ ನೀವು ಚಪ್ಪಾಳೆ ಹಾಕಿದಿರಲ್ಲ ಅದು ನನಗೆ ಕೋಟಿ ರೂಪಾಯಿಗೆ ಸಮಾನ.

ಆ ಚಪ್ಪಾಳೆಗಳೇ ಇವತ್ತು ಹಲವು ಪ್ರಶಸ್ತಿಗಳನ್ನು ತಂದುಕೊಟ್ಟಿವೆ. ನಾನು ಗಳಿಸಿದ ಹಣ ಈ ಪ್ರಶಸ್ತಿಗಳನ್ನು ತಂದು ಕೊಟ್ಟಿಲ್ಲ. ನನಗೆ ಅಲ್ಲ ಯಾರಿಗೂ ಹಣ ಪ್ರಶಸ್ತಿ ತರಲಾರವು. ಆದ್ರೂ ನನ್ನ ಸಮುದಾಯ ಈ ಕಲೆಯತ್ತ ಬರುವುದಕ್ಕೆ ಹಿಂದು–ಮುಂದು ನೋಡುತ್ತಿದೆ. ಅಂತಹ ಸ್ಥಿತಿಯಲ್ಲಿರುವಾಗಿ ೧೦ ಪೈಸೆಯಷ್ಟಾದ್ರೂ ಆ ಹುಡುಗರು ಉಳಿಸುತ್ತಿದ್ದಾರೆ ಅಂತ ಖುಷಿಯಾಗುತ್ತಿದೆ. ಹಂಗಾದ್ರೂ ಈ ಕಲೆ ಉಳಿಯಲಿ ಎನ್ನುವ ಸ್ವಾರ್ಥ ನನ್ನಲ್ಲಿದೆ. ಆದರೆ ಅಂತಹ ಆಡಂಬರದ ಕಲೆಗೆ ದೀರ್ಘಕಾಲದ ಭವಿಷ್ಯವಿಲ್ಲ ಎನ್ನುವ ಆತಂಕ ಕಾಡುತ್ತಿದೆ.

### ಭಿಕ್ಷೆಗೆ ಹೋಗುವುದನ್ನೇ ಕೈಬಿಟ್ಟು ಬಿಟ್ಟೆ

ನಾನೀಗ ಈ ಕಲೆಯನ್ನು ಬಿಟ್ಟು ಬೇರೆ ಏನನ್ನು ಮಾಡುವುದಿಲ್ಲ. ಹಿಂದೆ ಭಿಕ್ಷೆಗೆ ಹೋಗುತ್ತಿದ್ದೆ. ಇವತ್ತು ಭಿಕ್ಷೆಗೆ ಹೋಗುತ್ತಿಲ್ಲ. ಕಲೆಗೂ ಅವಕಾಶಗಳು ಕಡಿಮೆ. ಯಾವಾಗ ಕರ್ನಾಟಕ ಮತ್ತು ಯಕ್ಷಗಾನ ನಾಟಕ ಅಕಾಡೆಮಿ ಪ್ರಶಸ್ತಿ ಸಿಕ್ಕಿತೋ ಆವಾಗ ನನಗೆ

ಪರಿಚಯವಿದ್ದ ಹುಡುಗರು ನೀನು ಹೆಸರು ಮಾಡಿದ ಕಲಾವಿದೆ. ನೀನು ಹಿಂಗೆಲ್ಲ ರಸ್ತೆಯಲ್ಲಿ, ಸಂತೆಯಲ್ಲಿ ಭಿಕ್ಷೆಗೆ ನಿಂತುಕೊಳ್ಳುವುದು ಒಳ್ಳೆಯದಲ್ಲ. ನಿನಗ ನಿನ್ನದೇಯಾದ ಹೆಸರಿದೆ. ಹಂಗಾಗಿ ಭಿಕ್ಷೆ ಬೇಡುವುದನ್ನು ಬಿಟ್ಟುಬಿಡು. ನಾವು ನಮ್ಮಿಂದಾಗುವಷ್ಟು ಸಹಾಯ ಮಾಡುತ್ತೇವೆ ಅಂದ್ರು. ಅದು ಅಲ್ಲದೆ ವಯಸ್ಸು ಆಯ್ತು, ಭಿಕ್ಷೆ ಬೇಡುವುದನ್ನು ನಿಲ್ಲಿಸಿದ್ದೇನೆ. ಜೀವನಕ್ಕಾಗಿ ಕೇವಲ ಕಾರ್ಯಕ್ರಮಗಳನ್ನು ನಂಬಿದ್ದೇನೆ. ನಿಜ ಹೇಳಬೇಕೆಂದರೆ ನನ್ನ ಜೊತೆಗಿರುವ ಹಿರಿಯ ಕಲಾವಿದರು, ಸಹ ಕಲಾವಿದರು ನನ್ನ ಅಕ್ಕ-ತಂಗಿಯರು, ನನ್ನ ಮಕ್ಕಳು ಭಿಕ್ಷಾಟನೆಗೆ ಹೋಗುತ್ತಿದ್ದಾರೆ. ಹೊಸಪೇಟೆ, ಹಗರಿಬೊಮ್ಮನಹಳ್ಳಿ, ಕೂಡ್ಲಿಗಿ ಮತ್ತು ಸೊಂಡೂರು ತಾಲೂಕಿನ ಹಳ್ಳಿಗಳಲ್ಲಿ ಚೌಡಿಕೆ, ಶೃತಿ, ಪಡ್ಲಿಗಿ ತಗೆದುಕೊಂಡೋಗಿ ಮನೆ, ಮನೆಗಳಲ್ಲಿ, ಅಂಗಡಿಗಳಲ್ಲಿ ಭಿಕ್ಷೆ ಬೇಡುತ್ತಾರೆ. ಭಿಕ್ಷೆಗಾಗಿಯೇ ಸಂತೆ-ಸಂತೆಗಳನ್ನು ಹುಡುಕಿಕೊಂಡು ಹೋಗುತ್ತಾರೆ. ಕಲೆಕ್ಷನ್ ಮಾಡಿಕೊಂಡು ನನ್ನ ಹತ್ತಿರ ಬಂದಾಗ ನೂರು, ಇನ್ನೂರು ರೊಕ್ಕ, ತರಕಾರಿ, ಕಾಳು-ಕಡಿ ತಂದುಕೊಡುತ್ತಾರೆ. ರೇಷನ್‌ಕಾರ್ಡ್ ಇದೆ. ಅಲ್ಲಿ ಅಕ್ಕಿ ಸಿಗುತ್ತದೆ. ಹಿಂಗ ಜೀವನ ಸಾಧಾರಣವಾಗಿ ನಡೆದಿದೆ. ಹೆಚ್ಚಿನಮಟ್ಟಿಗೆ ಏನು ಇಲ್ಲ. ನಾನು ರೇಷ್ಮೆಸೀರೆ ತಗೊಂಡೆ, ನಾನು ಒಡವೆ ತಗೊಂಡೆ, ನಾನು ಒಳ್ಳೊಳ್ಳೆ ಅಡುಗೆ ಮಾಡಿಕೊಂಡು ಊಟ ಮಾಡಿದೆ ಅನ್ನುವಂತಿಲ್ಲ. ಅನ್ನ, ಸಾರು, ಮುದ್ದೆ ಚಟ್ನಿಗೆ ಬಡತನವಿಲ್ಲ. ನಾನು ದುಡಿದು ದುಡ್ಡು ಗಳಿಸಲಿಲ್ಲ. ನನ್ನ ಜೊತೆಗಿದ್ದವರಲ್ಲಿ ಕೆಲವರು ಬಂಗಾರ, ಬೆಳ್ಳಿ ತಗೊಂಡ್ರು. ನಾನು ಅದಾವುದು ತಗೊಲಿಲ್ಲ, ನಾನೇನಾದ್ರು ಗಳಿಸಿದ್ದು ಅಂದರೆ ಜನರ ಪ್ರೀತಿ. ಮಾನ್ಯ ಕುಲಪತಿಗಳ ಜೊತೆಗೆ ಕುಳಿತುಕೊಳ್ಳುವ ಅವಕಾಶವನ್ನು ಗಳಿಸಿಕೊಂಡಿದ್ದೇನಷ್ಟೆ. ಇದಕ್ಕಿಂತ ದೊಡ್ಡ ಆಸ್ತಿ ಮತ್ತೊಂದಿಲ್ಲ ಅಂದುಕೊಂಡಿರುವೆ. ಅಭಿಮಾನಿಗಳೇ, ಕಲಾಸಕ್ತರೇ ದೇವರು ಅನ್ನುವ ಮಾತುಗಳನ್ನು ಕೇಳಿದ್ದೇನೆ. ಅದು ನಿಜವಾಗಿರುವಂತಹದ್ದು. ಈ ಕಲಾವಿದರು ನಮ್ಮ ಕಲೆಯನ್ನು ಮೆಚ್ಚಿಕೊಂಡಿರುವುದಕ್ಕೆ ಸಾಕಷ್ಟು ಅವಕಾಶಗಳು ಸಿಕ್ಕವು. ಗೌರವಗಳು, ಸನ್ಮಾನಗಳು, ಪ್ರಶಸ್ತಿಗಳು ಸಿಕ್ಕಿವೆ ಎನ್ನುವ ಸತ್ಯ ನನಗೆ ಗೊತ್ತಿದೆ.

### ಅವ್ವ ಎದೆ ಬಡಕೊಂಡ ಬಡಕೊಂಡ ಅಳುತ್ತಿದ್ದಳು

ಈ ಕಲೆ ನನ್ನ ಜೀವನದಲ್ಲಿ ಹಲವು ದುಃಖ ಮತ್ತು ಸಂತೋಷಗಳನ್ನು ಕೊಟ್ಟಿದೆ. ಅವುಗಳಲ್ಲಿ ದುಃಖವೇ ಹೆಚ್ಚು. ಅಂತಹ ದುಃಖದ ಸಂಗತಿಗಳಲ್ಲಿ ಒಂದೆರಡನ್ನು ನಿಮಗೆ ಹೇಳಲೇಬೇಕು. ನಾನು ಕಾಳವ್ವನ ಜೊತೆ ಹರಪನಹಳ್ಳಿಯಲ್ಲಿ ನಾಟಕ ಮಾಡುತ್ತಿದ್ದೆ. ವಾರಕ್ಕೆ ಕನಿಷ್ಠ ನಾಲ್ಕೈದು ಕಾರ್ಯಕ್ರಮಗಳಂತೆ ಆರು ತಿಂಗಳು ಅಲ್ಲಿ ನಾಟಕ ಮಾಡಿದ್ದೇವೆ. ಆ ಊರಿನಲ್ಲಿ ನನಗೆ ಪರಿಚಯ ಇರುವವರೆಲ್ಲ ನನ್ನನ್ನು 'ಪರಶುರಾಮ'ನೆಂದು, ಕಾಳವ್ವನನ್ನು 'ಯಲ್ಲಮ್ಮ'ನೆಂದು ಕರೆಯುತ್ತಾರೆ. ಈ ಪಾತ್ರಗಳಲ್ಲಿ ಗುರು-ಶಿಷ್ಯರಾದ ನಾವು. ಆ ರೀತಿ ಹೆಸರು ಮಾಡಿದ್ದೆವು. ಆ ಸಂತೋಷದಲ್ಲಿ ಕಾಳವ್ವ ಒಮ್ಮೆ

ನಿಮ್ಮ ಅಪ್ಪ ಮತ್ತು ಅವ್ವನನ್ನು ಕರೆಯಿಸು. ಅವರು ಸಹ ನಾಟಕ ನೋಡಲಿ, ನಿನ್ನ ಅಭಿನಯವನ್ನು ನೋಡಿ ಖುಷಿಪಡಲಿ ಅಂದ್ರು. ದಾವಣಗೆರೆಗೆ ಹರಪನಹಳ್ಳಿ ಹತ್ತಿರ ಇರುವ ಕಾರಣ ಅವ್ವನನ್ನು ಕರೆದೆ. ಅವರು ಬಂದಳು. ಅವತ್ತು ಅವ್ವನಿಗೆ ಜೋಗತಿ ತಂಡದಿಂದ ಸನ್ಮಾನ ಮಾಡಲಾಯಿತು. ಬಹಳ ಖುಷಿಯಿಂದ ಸನ್ಮಾನವನ್ನು ಸ್ವೀಕರಿಸಿದಳು. ನಾಟಕ ನೋಡುವುದಕ್ಕಂತ ಅವ್ವ ಮುಂದೆ ಕುಳಿತಿದ್ದಳು. ದಿನಾಲು ಪರಶುರಾಮನ ಪಾತ್ರವನ್ನು ಮಾಡುತ್ತಿದ್ದಂತೆ ಅವತ್ತು ಸಹ ಪರಶುರಾಮನ ಪಾತ್ರ ಮಾಡಿದ್ದೆ. ಅವ್ವ ನನ್ನ ಕಲಾಭಿವ್ಯಕ್ತಿಯನ್ನು ನೋಡುತ್ತಿದ್ದಾರೆ ಎನ್ನುವ ಸಂತೋಷವಿತ್ತು. ಪ್ರತಿದಿನಕ್ಕಿಂತಲೂ ಚೆನ್ನಾಗಿ ಅಭಿನಯಿಸಿದೆ. ಪಾತ್ರಕ್ಕಾಗಿ ಹಾಕಿಕೊಂಡ ಮೀಸೆ, ಪಾತ್ರದಲ್ಲಿ ಮೂಡಿಬಂದ ಆ ಪೌರುಷ, ಆ ವೇಷವನ್ನು ನೋಡಿ ನನ್ನವ್ವ ಎದೆ ಬಡಕೊಂಡು ಬಡಕೊಂಡು ಅಳುತ್ತಿದ್ದಳು. ಆ ಯಲ್ಲಮ್ಮ ದೇವಿಗೆ ನನ್ನ ಮಗನನ್ನು ನಿನಗಾಗಿಯೇ ನಾನು ಹಡೆದಿದ್ನ. ನಿನಗೆ ನನ್ನಿಂದ ಇಂತಹ ಮಗನನ್ನು ಕಿತ್ತುಕೊಳ್ಳುವುದಕ್ಕಾದ್ರು ನಿನಗೆ ಹ್ಯಾಂಗ್ ಮನಸ್ಸು ಬಂತು. ಕರುಣೆ ಇಲ್ಲದಾಕಿ ನೀನು. ನೀನು ನನ್ನ ಮಗನ್ನ ಕಿತ್ತುಕೊಳ್ಳದಿದ್ದರೆ ಈಗ(ನಾಟಕದಲ್ಲಿ) ಪರಸುರಾಮನಂಗ ಹಾರ್‍ಯಾಡುತ್ತಿದ್ದನಲ್ಲ ಹಂಗೆ ಇರುತ್ತಿದ್ದ. ಅಂತ ಗೋಳಾಡಿ ಗೋಳಾಡಿ ಅಳುತ್ತಿದ್ದಳು. ಎದೆ ಎದೆ ಹೊಡಕೊಂತ್ತಿದ್ದರು. ಜನರೆಲ್ಲ ನನ್ನನ್ನು ನೋಡಿದಕ್ಕಿಂತ ಹೆಚ್ಚಾಗಿ ಅವ್ವನನ್ನು ನೋಡಿದ್ದರು. ಪಾಪ ತಾಯಿ ಕರುಳು ಸಂಕಟಪಡುತ್ತಿದೆ ಅಂತ ಕರುಣೆ ವ್ಯಕ್ತಪಡಿಸಿದ್ದರು. ಅವ್ವನ ಸಂಕಟ ನೋಡಿ ನನಗೆ ದುಃಖವಾಯ್ತು. ಆದರೆ ಆ ಸಂಕಟವನ್ನು ಇಲ್ಲದಂಗ ಮಾಡುವ ಶಕ್ತಿ ನನಗಿರಲಿಲ್ಲ. ಈಗಲೂ ಇಲ್ಲ. ಅವತ್ತೆ ಸತ್ಯವನ್ನೂ ಅರಿತು ನಾಟಕದಲ್ಲಿ ತೊಡಗಿಕೊಂಡೆ.

ಇನ್ನೊಂದು ವಿಷಯವನ್ನು ಹೇಳಲೇಬೇಕು. ಯಾಕಂದ್ರ ನಮ್ಮನ್ನು ಮನೆಯವರು ಹೆಂಗೆ ನೋಡ್ತಾರೆ ಅನ್ನುವುದಕ್ಕೆ ಈ ಘಟನೆ ದೊಡ್ಡ ಉದಾಹರಣೆ. ನಮ್ಮಣ್ಣ ಮದುವೆ ಆಗುವುದಕ್ಕಾಗಿ ಹುಡುಗಿ ನೋಡುವುದಕ್ಕೆ ಹೋಗಿದ್ದ. ಆ ಹುಡುಗಿ ಮನೆಯವರು ಅಣ್ಣ ತಮ್ಮಂದಿರು ಏನು ಮಾಡುತ್ತಾರೆಂದು ಸಹಜವಾಗಿ ವಿಚಾರಿಸಿದ್ದಾರೆ. ನನ್ನ ಒಬ್ಬ ತಮ್ಮ ಜೋಗತಿ ಆಗ್ಯಾನೆ ಅಂತ ಇರುವ ಸತ್ಯವನ್ನು ಅವರತ್ತಿರ ಹೇಳಬಹುದಿತ್ತು. ಹೇಳುವುದು ಅಷ್ಟು ಸುಲಭವಾಗಿಲ್ಲ ಅಂತ ನನಗೆ ಗೊತ್ತಿದೆ. ಅವರು ಸಹೋದರನ ಪ್ರೀತಿಗಾಗಿ ನಿಜಸಂಗತಿಯನ್ನು ತಿಳಿಸಿ ಹೇಳುವುದಕ್ಕೆ ಅವಕಾಶ ಇತ್ತು. ಅದನ್ನು ಅವರತ್ತಿರ ಮುಚ್ಚಿಟ್ಟು ಬಂದಿದ್ದಾನೆ. ನಾನಾಗ ಚಿಲಕನಟ್ಟಿಯಲ್ಲಿದ್ದೆ. ಅಲ್ಲಿಗೆ ಬಂದ ಆತ 'ನಾನು ಮದುವೆ ಆಗುವ ಹುಡುಗಿಯ ಮನೆಯಲ್ಲಿ ನೀನು ಜೋಗತಿ ಆಗಿದ್ದು ಹೇಳಿಲ್ಲ, ನೀನು ಮದುವೆಗೆ ಬರ್ತಿಯಾ? ಏನು ಮಾಡ್ತೀಯ? ನೋಡು' ಅಂದ. ಈ ಮಾತಿನ ಅರ್ಥ ಏನು ಅಂದ್ರೆ ನೀನು ಜೋಗಮ್ಮ ಆಗಿರುವುದು ಅವರಿಗೆ ಹೇಳಿಲ್ಲ. ದಯವಿಟ್ಟು ನೀನು ನನ್ನ ಮದುವೆಗೆ ಬರಬೇಡ ಅಂದಂಗೆ ಅಲ್ವ ಅಂದೆ. ಆಗ ಆತ ಹೌದು, ನಮ್ಮ ವೈಶ್ಯ ಸಮಾಜದಲ್ಲಿ ತಮ್ಮ ಜೋಗಮ್ಮ ಅಗ್ಯಾನೆ ಅಂದ್ರೆ ಯಾರು ಕನ್ಯೆ ಕೊಡುವುದಿಲ್ಲ.

ಅದಕ್ಕ ಹಂಗ ಹೇಳೀನಿ. ನೀನು ಬರಬೇಡ ಅಂತ ನೇರವಾಗಿ ಹೇಳಿ ಹೋದ. ಅವತ್ತಂತೂ ನನಗಾದ ದುಃಖ ಅಷ್ಟಿಷ್ಟಲ್ಲ. ಈ ಜೀವನವೇ ಬೇಡ ಅನ್ನಿಸಿತು. ಮನೆಯಲ್ಲಿ ನಡೆಯುವ ಶುಭಕಾರ್ಯದಲ್ಲಿ ನಿರಾಕರಿಸುತ್ತರಲ್ಲ. ಜನ ನಮ್ಮನ್ನು ಮಂಗಳಮುಖಿಯರೆಂದು ಕೆಲವು ಶುಭಕಾರ್ಯಗಳಲ್ಲಿ ಶುಭ ಸಂಕೇತವೆಂದು ಗ್ರಹಿಸಿ ಪೂಜಿಸುತ್ತಾರೆ. ವಂಶದ ವಿಷಯಕ್ಕೆ ಬಂದಾಗ ನಿರಾಕರಿಸಿಬಿಡುತ್ತಾರೆ. ಮನೆಯವರೇ ನಮ್ಮನ್ನು ಅಶುಭರನ್ನಾಗಿ ನೋಡುತ್ತಿದ್ದಾರೆ. ಅಂತಹ ನೋವಿನ ಸಂಗತಿಗಳು ಜೀವನವನ್ನು ಗಟ್ಟಿಮಾಡಿದವು.

ಆಗ ಮನೆಯವರು ಮತ್ತು ಜನರು ಹಂಗಲ್ಲ ಉರಿಸಿಕೊಂಡು ತಿಂದ್ರು. ಸ್ವಲ್ಪ ವರ್ಷವಾದ ನಂತರ ಪ್ರತಿಭಾವಂತ ಕಲಾವಿದ ಅಂತ ನನ್ನ ಬಗ್ಗೆ ಪತ್ರಿಕೆಗಳಲ್ಲಿ ಬಂತು, ಪ್ರಶಸ್ತಿಗಳ ಮೇಲೆ ಪ್ರಶಸ್ತಿಗಳು ಬಂದ್ವು, 'ಬದುಕು ಜಟಕಾ ಬಂಡಿ' ಕಾರ್ಯಕ್ರಮ ಬಂತು. ಇದನ್ನು ನೋಡಿದ ನಂತರ ನನ್ನ ಅಣ್ಣ ಮತ್ತು ಬಳಗದವರು ಎಲ್ಲರು ಫೋನ್ ಮಾಡುತ್ತಾರೆ. ಮನೆಗೆ ಕರೆಯುತ್ತಾರೆ. ನಾನು ಹೋಗುವುದಿಲ್ಲ. ಹೋಗಬಾರದು ಅಂತ ನಿರ್ಧಾರ ಮಾಡಿರುವೆ. ಏಕೆಂದರೆ ಅವತ್ತು ನಾನೇನಾದ್ರು ಕಂಡ್ರೆ ಮುಖ ಮುಚ್ಚಿಕೊಂಡು ತಿರುಗಿಸಿಕೊಂಡು ಹೋಗುತ್ತಿದ್ರು. ಹಬ್ಬ-ಶುಭ ಕಾರ್ಯಕ್ರಮಗಳಿಗಂತೂ ಕರೆಯುತ್ತಿರಲಿಲ್ಲ. ಯಾವುದಕ್ಕೂ ಸೇರಿಸಿಕೊಳ್ಳಲಾರದ ಕುಟುಂಬ ಇಂದು ಕೀರ್ತಿ ಬಂದಾಗ ಬಾ ಅಂತ ಕರೆಯುತ್ತಿದೆ. ಆ ಕುಟುಂಬಕ್ಕೆ ಅವತ್ತು ಬೇಡವಾದವನು ಇವತ್ತು ಬೇಕಾಗಿದ್ದೇನೆ. ಅವತ್ತು ಅವಮಾನ ತರುವವನು ಇವತ್ತು ಗೌರವ ತರುವವ ನಾಗಿದ್ದೇನೆ. ಅಂದ್ರೆ ಕುಟುಂಬದಲ್ಲಿ ಇಂತಹ ಮನಸ್ಥಿತಿ ಬರುವುದಕ್ಕೆ ಕಾರಣವಾಗಿದ್ದು ಈ ಜೋಗತಿ ಸಮುದಾಯ. ಈ ಸಮುದಾಯ ಅವತ್ತು ಕಾಲದಲ್ಲಿ ಕೈ ಹಿಡಿದು ಬೆಳೆಸಿದೆ, ಸಾಕಿದೆ. ಹಂಗಾಗಿ ಈ ಸಮುದಾಯವನ್ನು ನಾನೆಂದು ಬಿಟ್ಟು ಹೋಗಬಾರದು ಅಂತ ಅಂದುಕ್ಕೊಂಡು ನಾನೆಲ್ಲಿಗೂ ಹೋಗಿಲ್ಲ.

## ಗುರುವನ್ನೇ ಹೊಡೆದು ಸಂಕಟ ಅನುಭವಿಸಿದ್ದೆ

ಕಾಳವ್ವ ಜೋಗತಿ ಈ ನನ್ನ ಜೋಗತಿ ಕಲೆಯ ಎರಡನೇ ಗುರು. ಮೊದಲ ಗುರು ಬಸಪ್ಪನ ಜೊತೆ ಬಹಳ ಅಂದ್ರೆ ಆರೇಳು ತಿಂಗಳು ಕಾಲ ಕಳೆದಿರಬಹುದು. ಕಾಳವ್ವ ಜೋಗತಿಯ ಜೊತೆ ಅರ್ಧಜೀವನವನ್ನೇ ಕಳೆದಿರುವೆ. ಕಷ್ಟ-ಸುಖಗಳನ್ನು ಹಂಚಿಕೊಂಡಿರುವೆ. ಅವರ ಕಷ್ಟ-ಸುಖದಲ್ಲಿ ಭಾಗಿಯಾಗಿರುವೆ. ಅವರು ಅಷ್ಟೆ ಹಂಗಾಗಿ ಅವರು ಕೇವಲ ಗುರು ಮಾತ್ರ ಆಗಿರಲಿಲ್ಲ, ತಾಯಿಯೂ ಆಗಿದ್ರು. ಅವರೊಂದಿಗೆ ವೈಮನಸ್ಸು ಬಂದಿರುವುದು ಬಹಳ ಕಡಿಮೆ. ಅಕಸ್ಮಾತ್ ಅಂತಹ ಸಂದರ್ಭ ಬಂತೆಂದರೆ ಸಾಕು ನಾನೇ ಹೊಂದಿಕೊಂಡುಬಿಡುತ್ತಿದ್ದೆ. ಏಕೆಂದರೆ ಅವರು ನನ್ನ ಬಹಳ ಹಚ್ಚಿಕೊಂಡಿದ್ರು. ನೀನು ಕಲಾವಿದೆಯಾಗಿ ಬೆಳೆತೀಯ ಅಂತ ಹೇಳಿ ನಟನೆಗಳನ್ನು ಮತ್ತು ತಮಗೆ ಅವರ ಗುರು ಹೇಳಿಕೊಟ್ಟಿದ್ದ ಕಥೆಗಳನ್ನು ಹೇಳಿಕೊಡುತ್ತಿದ್ರು. ಅಂತಹ

ನಂಬಿಗೆ ಇಟ್ಟುಕೊಂಡಿದ್ದ ಗುರುವನ್ನು ನಾನೊಮ್ಮೆ ಹೊಡೆದುಬಿಟ್ಟಿದ್ದೆ. ಒಮ್ಮೆ ನಾಟಕ ಮಾಡುವುದಕ್ಕಾಗಿಯೇ ಬಳ್ಳಾರಿ ಜಿಲ್ಲೆ ಕುಡುತಿನಿ ಗ್ರಾಮಕ್ಕೆ ಹೋಗಿದ್ವಿ. ಅವತ್ತು ನನ್ನ ಜೊತೆ ಅಸಭ್ಯವಾಗಿ ವರ್ತಿಸಿದರು. ಅಶ್ಲೀಲ ನುಡಿಗಳನ್ನಾಡಿದ್ರು. ನನ್ನ ಕೊರಳಲ್ಲಿರುವ ತಾಳಿಯನ್ನು ಕಿತ್ತುಹಾಕಿದ್ರು. ಆಗ ನನಗೆ ಸಿಟ್ಟು ಬಂತು. ಆ ಸಿಟ್ಟಿನಲ್ಲಿ ಕಪಾಳಕ್ಕೆ ಹೊಡೆದುಬಿಟ್ಟೆ. ಅವರು ನನಗೆ ಏನು ಅನ್ನಲಿಲ್ಲ. ಜೊತೆಗಿದ್ದ ಜೋಗತಿಯರು ಸಹ ಮೌನವಾಗಿಬಿಟ್ಟರು. ನನಗೂ ಏನು ತಿಳಿಯದೆ ಆತಂಕಿತನಾಗಿ ಅವರಂತೆ ಮೌನವಾಗಿಬಿಟ್ಟೆ. ನಮ್ಮ ಭಾಗದಲ್ಲಿ ಅವತ್ತಿನ ದಿನಗಳಲ್ಲಿ ಕಾಳವ್ವ ಜೋಗತಿಗೆ ದೊಡ್ಡ ಗೌರವ ಇತ್ತು. ಸುತ್ತಮುತ್ತಲಿನ ರಂಗಕಲಾವಿದರೂ ಸಹ ಆಕೆಯ ಬಗ್ಗೆ, ಆಕೆಯ ಕಲೆಯ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದರು. ಹಳ್ಳಿಗಳಲ್ಲಂತೂ ಆಕಿಯದೇಯಾದ ದೊಡ್ಡ ಅಭಿಮಾನ ಬಳಗವಿತ್ತು. ಆಕೆಯ ತಂಡದಲ್ಲಿ ಕೆಲಸ ಮಾಡುವುದೇ ಒಂದು ಗೌರವ. ನನಗೂ ಇದೆಲ್ಲ ಗೊತ್ತಿದ್ರು ಬಂದ ಸಿಟ್ಟಿನಲ್ಲಿ ನನಗೆ ಗೊತ್ತಿಲ್ಲದಂತೆ ಹೊಡೆದಿದ್ದೆ. ಇದಾಗಿ ಸ್ವಲ್ಪ ಹೊತ್ತಿನ ನಂತರ ಬಟ್ಟೆ–ಬರಿ ತಗೊಂಡು ನಾಟಕ ಬ್ಯಾಡ ಏನು ಬ್ಯಾಡ ಅಂತ ಹೊರಟುಬಿಟ್ಟಳು. ಕಾಳವ್ವ ಹೊರಟ ಸುದ್ದಿ ಊರಿನ ಜನಕ್ಕೂ ತಿಳಿಯಿತು. ಆಗ ಊರಿನ ಜನ ಕಾಳವ್ವನನ್ನು ತಡೆದು "ನೀವು ನೀವೇ ಜಗಳ ಮಾಡೀರಿ. ನಮ್ಮ ಊರಿನವರೇನು ನಿಮ್ಮ ಜೊತೆ ಜಗಳ ಮಾಡಿಲ್ಲ. ಹಂಗಾಗಿ ಊರಿನ ಜನರ ಬಗ್ಗೆ ಅಥವಾ ಊರಿನ ಬಗ್ಗೆ ತಪ್ಪು ತಿಳಿದುಕೊಳ್ಳುವ ಸಂಗತಿಯೇ ಬರುವುದಿಲ್ಲ. ನೀವು ನಾಟಕ ಮಾಡುತ್ತೇವೆ ಅಂತ ನಮಗೆ ಮಾತು ಕೊಟ್ಟೀರಿ. ಮಾತು ಕೊಟ್ಟಂತೆ ನಾಟಕ ಮುಗಿಸಿಕೊಟ್ಟು ಹೋಗಿ. ಇದರಲ್ಲಿ ನಮ್ಮೂರಿನ ಮರ್ಯಾದೆ ಐತಿ. ಜಾತ್ರೆಗಾಗಿ ಹತ್ತಾರು ಊರುಗಳಿಂದ ಜನ ಬಂದಿದ್ದಾರೆ. ಅವರ ಮುಂದೆ ನಮ್ಮ ಊರಿನ ಮಾನ ತೆಗೆಯಬೇಡ್ರಿ" ಅಂತ ಹೇಳಿದ್ರು. ಆ ಊರಿನ ಜನರಿಗೆ ಬೆಲೆ ಕೊಟ್ಟು ಕಾಳವ್ವ ಉಳಿದುಕೊಂಡ್ರು. ಆಗ ಒಂದಿಷ್ಟು ಸಮಾಧಾನವಾಯಿತಾದ್ರು ನನ್ನ ಮನಸಿನೊಳಗಡೆ ಇದ್ದ ನೋವು, ಸಿಟ್ಟು ಕಮ್ಮಿಯಾಗಿರಲಿಲ್ಲ. ಹಂಗಂತ ಆ ನೋವನ್ನು ಹೊರಹಾಕುವ ಪರಿಸ್ಥಿತಿಯಲ್ಲೂ ನಾನಿರಲಿಲ್ಲ. ಏಕೆಂದರೆ ಆ ರಾತ್ರಿ ನಾಟಕ ಆಡಬೇಕಿತ್ತು. ಕಾಳವ್ವ ಯಲ್ಲಮ್ಮನ ಪಾತ್ರ ಮಾಡಿದರೆ ನಾನು ಪರಶುರಾಮನ ಪಾತ್ರ ಮಾಡುತ್ತಿದ್ದೆ. ಎಲ್ಲೆ ಹೋದ್ರು ನಮ್ಮಿಬ್ಬರ ಮೇಲೆ ನಾಟಕ ನಿಂತಿರುತ್ತಿತ್ತು. ಆಕಿ ನನ್ನ ಜೊತೆ ಮಾತನಾಡದಿದ್ರೆ ನಾಟಕ ಚೆನ್ನಾಗಾಗುವುದಿಲ್ಲ ಎನ್ನುವ ಸತ್ಯನೂ ಗೊತ್ತಿತ್ತು. ಹಂಗಾಗಿ ಒಳಗೊಳಗೆ ಸಂಕಟ ಅನುಭವಿಸುತ್ತಿದ್ದೆ. ನಮ್ಮ ತಂಡದಲ್ಲಂತೂ ಮೌನ ಆವರಿಸಿತ್ತು. ಇದನ್ನು ಅರಿತ ಸೋಮಕ್ಕ ಜೋಗತಿ 'ಸ್ವಲ್ಪ ಹೊತ್ತು ಜಾತ್ರೆಯಲ್ಲಿ ತಿರುಗಾಡಿಕೊಂಡು ಬರೋಣ' ಬನ್ನಿ ಅಂತ ಎಲ್ಲರನ್ನು ಕರೆದಳು. ಕಾಳವ್ವ ಆಕಿಯ ಮಾತಿಗೆ ಇಲ್ಲ ಅಂತಿರಲಿಲ್ಲ. ಮೌನವಾಗಿ ಕಾಳವ್ವ ಜಾತ್ರೆಗೆ ಹೊರಟಳು. ಆಕೆಯ ಹಿಂದೆ ಎಲ್ಲ ಜೋಗತಿಯರು ಹೊರಟರು. ನಾನು ಸಹ ಅವರ ಜೊತೆ ಹೊರಟೆ. ಹೋಗುವಾಗ ದಾರಿಯಲ್ಲಿ

ಜ್ಯೂಸ್ ಅಂಗಡಿ ಕಾಣಿಸಿತು. ಅಲ್ಲಿ ಎಲ್ಲ ಜೋಗತಿಯರನ್ನು ನಿಲ್ಲಿಸಿ 'ಅವ್ವ ಜ್ಯೂಸ್ ಕುಡಿಯೋಣ ಬಾರವ್ವ ಅಂತ' ಕಾಳವ್ವನನ್ನು ಕರೆದೆ. ಆಗ ಆಕೆ ನಗುತ್ತಲೇ 'ನಡಿಯಪ್ಪ ಶೆಟ್ಟಿ, ಹೊಡೆಯುವಾಗ ಅವ್ವ ಇರಲಿಲ್ಲ. ಹೊಡೆದ ಇಷ್ಟೊತ್ತಿನ ತನಕ ಇಲ್ಲದ ಅವ್ವ ಈಗ ಬಂದ್ಲೇನು ನಿನಗೆ' ಅಂತ ಹೇಳಿ ಜ್ಯೂಸ್ ಕುಡಿದು ನನ್ನನ್ನು ಸಮಾಧಾನ ಪಡಿಸಿದಳು. ಕಾಳವ್ವನಲ್ಲಿದ್ದ ಒಳ್ಳೆಯ ಗುಣ ಅಂದ್ರೆ ಆಕಿ ತಪ್ಪು ಮಾಡಿದಾಗ ಸೋತು ಬಿಡುತ್ತಿದ್ದಳು. ಅವತ್ತು ಸಹ ಸೋತಿದ್ದಳು. ಆಕಿ ಸೋತಿದ್ದಕ್ಕೆ ನಾಟಕ ಚೆನ್ನಾಗಾಯ್ತು. ನಮ್ಮ ತಂಡಕ್ಕೆ ಒಳ್ಳೆಯ ಹೆಸರು ಬಂತು. ನನ್ನ ಆತಂಕ ಮಾಯವಾಗಿತ್ತು.

ಆದ್ರೆ ಮರುದಿನ ನಾನು ತಪ್ಪು ಮಾಡಿದೆ. ಅಂದರೆ ಇನ್ನುಮುಂದೆ ನನ್ನನ್ನು ಯಾವುದಕ್ಕೂ ಕರೆಯಬೇಡಿ. ನಾನು ಕುಣಿತಕ್ಕೂ ಬರುವುದಿಲ್ಲ. ನಾಟಕಕ್ಕೂ ಬರುವುದಿಲ್ಲ. ನಿಮ್ಮ ತಂಡವನ್ನೇ ಸೇರುವುದಿಲ್ಲ ಅಂತ ಹೇಳಿ ತಂಡದಿಂದ ಹೊರಬಂದೆ. ಮನಸ್ಸಿಗೆ ನೋವಾಗಿದ್ದ ಕಾರಣ ಸ್ವಲ್ಪದಿನ ಅವ್ವ-ಅಪ್ಪನತ್ತಿರ ಇದ್ರಾಯ್ತು ಅಂತ ಕಲ್ಲುಕಂಬಕ್ಕೆ ಹೋದೆ. ಅಲ್ಲೇ ಇಪ್ಪತ್ತು ದಿನ ಕಳೆದೋಯ್ತು. ನಾನೂ ಆ ಕಡೆ(ಕಾಳವ್ವ ಜೋಗತಿ ಹತ್ತಿರ) ಹೋಗಲಿಲ್ಲ. ನಾವು ರಾಣೆಬೆನ್ನೂರಿನಲ್ಲಿ ಸತತವಾಗಿ ಐದುವರ್ಷ ನಾಟಕ ಮಾಡಿದ್ವಿ. ಆರನೇ ವರ್ಷನೂ ನಮ್ಮನ್ನು ಕರೆಯುವುದಕ್ಕಾಗಿ ಆ ಊರಿನವರು ಕಾಳವ್ವನತ್ತಿರ ಬಂದಿದ್ದರಂತೆ. ಆಗ ಕಾಳವ್ವ ನಿಂಗಮ್ಮ ಜೋಗತಿ "ನೀನು ಹೋಗಿ ಮಂಜಮ್ಮನನ್ನು ಕರೆದುಕೊಂಡು ಬಾ" ಅಂತ ಕಲ್ಲುಕಂಬಕ್ಕೆ ಕಳುಹಿಸಿದ್ದಳು. ನಮ್ಮ ತಂಡದಲ್ಲಿದ್ದ ಹಿರಿಯ ಜೋಗತಿ ಆಕಿ. ಕೊಟ್ಟೂರಿನತ್ತಿರದ ಗಜಾಪುರ ಗ್ರಾಮದವರು. ಅವರತ್ತಿರನೂ ನಾನು ನಿಮ್ಮ ತಂಡಕ್ಕೆ ಬರುವುದಿಲ್ಲವೆಂದು ಹಠಮಾಡಿದೆ. ಆಗ ಅಪ್ಪ-ಅವ್ವ ನನ್ನನ್ನು ಕರೆದು 'ಹೋಗು, ಅಷ್ಟು ದೊಡ್ಡ ಯಜಮಾನರು ನಮ್ಮ ಮನೆತನಕ ಬಂದಿದ್ದಾರೆ. ನೀನು ಹೋಗದಿದ್ದರೆ ಅವರಿಗೆ ಮರ್ಯಾದೆ ಕೊಟ್ಟಂತಾಗುವುದಿಲ್ಲ. ಹೋಗಿ ನಾಟಕ ಮಾಡಿಕೊಂಡು ಬಾ' ಅಂತ ಹೇಳಿದ್ರು. ಅಪ್ಪ-ಅವ್ವನ ಮಾತಿಗೆ ಬೆಲೆ ಕೊಟ್ಟು ರಾಣೆಬೆನ್ನೂರಿನಲ್ಲಿ ನಾಟಕ ಮಾಡಿದೆ. ಮನಸ್ಸು ಹೊಡೆದೋಗಿದ್ರು ನಾಟಕ ಚೆನ್ನಾಗಾಯ್ತು. ಊರಿಗೆ ಹೊರಡುವಾಗ ಕಾಳವ್ವ ನೀನು ನಮ್ಮ ಜೊತೆ ಬಂದುಬಿಡು. ಆಗಿದ್ದು ಆಯ್ತು ಅಂತ ಕರೆದ್ಲು. ಆದರೆ ನಾನು ಅವರ ಜೊತೆ ಹೋಗಲಿಲ್ಲ. ಕಲ್ಲುಕಂಬಕ್ಕೂ ಬರಲಿಲ್ಲ.

ಆ ಜಾತ್ರೆಯಲ್ಲಿ ಸಿಕ್ಕ ಹಗರಿಬೊಮ್ಮನಹಳ್ಳಿ ತಾಲೂಕಿನ ಗೆದ್ದೆಕೆರೆ ಗ್ರಾಮದ ಚಂದ್ರಮ್ಮ ಜೋಗತಿ ಮತ್ತು ಧನ್‌ಸಿಂಗ್ ಜೋಗತಿ ಎನ್ನುವವರ ಜೊತೆ ಸೇರಿಕೊಂಡೆ. ಧನ್‌ಸಿಂಗ್ ಜೋಗತಿ ಲಮಾಣಿ ಸಮುದಾಯಕ್ಕೆ ಸೇರಿದವರು. ಅವರು ಹೆಸರು ಬದಲಾಯಿಸಿ ಕೊಂಡಿರಲಿಲ್ಲ. ಅವರಿಬ್ಬರೂ ಕಲಾವಿದರಲ್ಲ. ಜೀವನಕ್ಕಾಗಿ ಭಿಕ್ಷಾಟಣೆಯನ್ನು ಮಾತ್ರ ಮಾಡುತ್ತಿದ್ದರು. ಎದ್ದೆದ್ದರೇ ಹಳ್ಳಿಗಳಿಗೆ ಹೋಗಿ ಬಿಡೋರು. ರಾತ್ರಿ ಎಷ್ಟೊತ್ತಿಗೆ ತಿರುಗಿ ಬರುತ್ತಿದ್ದರೂ ಅಂತ ಅವರಿಗೆ ಗೊತ್ತಿರುತ್ತಿರಲಿಲ್ಲ. ದಿನಾಲು ಸ್ನಾನ, ಪೂಜೆ

ಮಾಡಬೇಕೆಂದುಕೊಳ್ಳುತ್ತಿರಲಿಲ್ಲ. ಆದರೆ ನಾನು ಸ್ನಾನ ಮಾಡಿ ಪೂಜೆ ಮಾಡಿಯೇ ಹೊರಗಡೆ ಹೋಗಬೇಕು ಎನ್ನುವ ಸಂಪ್ರದಾಯವನ್ನು ಬೆಳೆಸಿಕೊಂಡಿದ್ದೆ. ಹಂಗಾಗಿ ನನಗೂ ಅವರಿಗೂ ಹೊಂದಾಣಿಕೆ ಆಗುತ್ತಿರಲ್ಲ. ಭಿಕ್ಷೆಗೆ ಅವರೊಂದೂರಿಗೆ ಹೋದ್ರೆ ನಾನೊಂದೂರಿಗೆ ಹೋಗುತ್ತಿದ್ದೆ. ಸಾಯಂಕಾಲ ಹೊತ್ತು ಮುಳುಗೊದ್ರೊಳಗೆ ಮನೆ ಸೇರುತ್ತಿದ್ದೆ. ಅವರು ಪ್ರತಿದಿನ ಮನೆಗೆ ಬರುತ್ತಿರಲಿಲ್ಲ. ಯಾವುದಾದರೊಂದು ಹಳ್ಳಿಯ ಗುಡಿ–ಗುಂಡಾರಗಳಲ್ಲಿ ಉಳಿದುಕೊಂಡುಬಿಡೋರು. ಅದು ಅಲ್ಲದೆ ಅವರಿಗೆ ಕುಡಿತದಂತಹ ಕೆಲವು ಚಟಗಳಿದ್ದವು. ಹಂಗಾಗಿ ನನ್ನ ಹತ್ತಿರ ಇದ್ದ ದುಡ್ಡು ಕಿತ್ತಿಕೊಂಡ್ರು. ಭಿಕ್ಷೆ ಮಾಡಿಕೊಂಡು ಬಂದು ಕೂಡಿಟ್ಟ ಕಾಳು–ಕಡಿಗಳನ್ನು ಮಾರಿಕೊಂಡು ತಿಂದ್ರು. ನಾನು ಕಿರಾಣಿ ತಗೊಂತ್ತಿದ್ದ ಅಂಗಡಿಯಲ್ಲೂ ನನ್ನ ಹೆಸರಿನಲ್ಲಿ ಸಾಲ ಮಾಡಿದ್ರು. ರೇಷನ್ ತರುವುದಕ್ಕಾಗಿಯೇ ೨೦೦ ರೂಪಾಯಿಗೆ ಬೆಂಡಾಲಿ ಒತ್ತೆಯಿಟ್ಟೆ. ಅವಗಂತೂ ಉಡುವುದಕ್ಕೆ ಬಟ್ಟೆ, ಉಣ್ಣುವುದಕ್ಕೆ ಅನ್ನ ಇರಲಾರದ ಸ್ಥಿತಿಯನ್ನು ಅನುಭವಿಸಿದೆ. ಎರಡು ತಿಂಗಳು ಮನೆ ಬಾಡಿಗೆ ಕೊಟ್ಟಿರಲಿಲ್ಲ. ಅವರತ್ತಿರ ಬಾಡಿಗೆ ಕೇಳಿದ್ರೆ ನಾವೇನು ಇಲ್ಲಿ ಇರಲ್ಲ, ನೀನೇ ಇರ್ತಿದಿ ಅಂದುಬಿಡೋರು. ಅದೆಲ್ಲ ಗೊತ್ತಿದ್ರು ಅವರನ್ನು ಬಿಟ್ಟು ಒಂಟಿ ಜೀವನ ಆರಂಭಿಸುವ ಸ್ಥಿತಿಯಲ್ಲಿ ನಾನಿರಲಿಲ್ಲ. ಕಾಳವ್ವನತ್ತಿರ ವಾಪಾಸು ಹೋಗುವ ಮನಸ್ಥಿತಿಯಲ್ಲಿರಲಿಲ್ಲ. ಆವಾಗ ಗುರುವಿನ ಕಪಾಳಕ್ಕೆ ಹೊಡೆದಿದ್ದಕ್ಕೆ ಇವತ್ತು ಈ ಸ್ಥಿತಿ ಬಂದಿದೆ ಅನ್ನುವ ಸತ್ಯ ಗೊತ್ತಾಯ್ತು. ಇದು ನನ್ನ ತಪ್ಪು ತಿಳುವಳಿಕೆ ಅಂದುಕೊಂಡರೂ ಪರವಾಗಿಲ್ಲ ಅವತ್ತಿನಿಂದ ಈತನಕ ಗುರು, ಗುರು ಹೇಳಿದ ಮಾತು, ಗುರು ಕೊಟ್ಟ ತಿಳುವಳಿಕೆಯನ್ನು ನಿರಾಕರಣೆ ಮಾಡಿಲ್ಲ. ಮಾಡಲೂಬಾರದು ಅನ್ನುವುದು ನನ್ನ ಅನುಭವ.

### ಗುರು ಮಾಡಿಟ್ಟ ಅಡುಗೆ ಉಣ್ಣುತ್ತಿರುವೆ

ಇಂತಹ ಕಷ್ಟದಲ್ಲೇ ಹಗರಿಬೊಮ್ಮನಹಳ್ಳಿಯ ಜೋಗತಿಯರ ಜೊತೆಗೆ ಆರುತಿಂಗಳ ಕಾಲ ಕಳೆದೆ. ಬದುಕಿಗಾಗಿ, ಹೊಟ್ಟೆಪಾಡಿಗಾಗಿ 'ಭಿಕ್ಷೆ' ಕೆಲಸವನ್ನು ಬಿಟ್ಟಿರಲಿಲ್ಲ. ಆ ಕಾಲದಲ್ಲಿ ಹೊಳೆದಂಡೆಗೆ 'ಅಲಸಂದಿ' ಸುಗ್ಗಿಗೆ ಹೋಗುವುದು ನಮ್ಮ ಜೋಗತಿಯರಿಗೆ ದೊಡ್ಡ ಲಾಭದ ವಿಷಯವಾಗಿತ್ತು. ಅಲಸಂದಿ ಸುಗ್ಗಿಯಲ್ಲಿ ರೈತರ ರಾಶಿಗಳಿಗೆ ನಮ್ಮ ಸೀರೆ ಸೆರಗಾಕಿ ನಮಗೆ ಬೇಕಾದಷ್ಟು ಅಲಸಂದಿ ತಗೊಂಡ್ರು ಅವರು ಬೇಡ ಅನ್ನುತ್ತಿರಲಿಲ್ಲ. ಆಗಿನ ಕಾಲದಲ್ಲೇ ಅಲಸಂದಿ ಹನ್ನೆರಡು ರೂಪಾಯಿಗೆ ಕೆ.ಜಿ. ಯಾಗಿತ್ತು. ರೈತರಲ್ಲಿ ನಮ್ಮ ಬಗ್ಗೆ ಅಂತಹ ನಂಬಿಕೆ ಇತ್ತು. ಈಗ ಕಡಿಮೆ ಆಗೈತಿ. ಒಂದು ದಿವಸ ನಾವು ಮೂವರು ಜೋಗತಿಯರು ಅಲಸಂದಿ ಸುಗ್ಗಿಗಾಗಿ ತಂಬ್ರಳ್ಳಿಗೆ ಹೋಗಿದ್ದೆ. ಕಾಳವ್ವ ಜೋಗತಿ ತಂಡದವರೂ ಅಲ್ಲಿಗೆ ಬಂದಿದ್ದರು. ಅವರು ನನ್ನ ನೋಡಿದ್ರು. ಆಗ ನನ್ನ ಜೊತೆಗಿದ್ದ ಜೋಗತಿಯರಿಗೆ ಏನಾಯ್ತು ಅಂತ ಗೊತ್ತಿಲ್ಲ. ನನ್ನನ್ನು ಬಿಟ್ಟು ಹೊರಟೋಗಿ ಬಿಟ್ರು. ಇತ್ತ ಕಾಳವ್ವ ಜೋಗತಿಯೂ ಕರೆಯಲಿಲ್ಲ. ಆಗ ನಾನು ಒಂಟಿಯಾದೆ.

ಅವತ್ತಂತು ಬಹಳ ದುಃಖವಾಯ್ತು. ನಾನು ತಂದೆ, ತಾಯಿ, ಮನೆ ಬಿಟ್ಟುಬಂದ ದಿವಸ ಅಷ್ಟು ಸಂಕಟಪಟ್ಟಿರಲಿಲ್ಲ. ಅವತ್ತು ಅಷ್ಟು ಸಂಕಟಪಟ್ಟಿದ್ದೆ. ಆ ಸಂಕಟದಲ್ಲೇ ಭಿಕ್ಷೆ ಬೇಡಿದ್ದೆ. ತುಂಗಾಭದ್ರ ನದಿ ಹಿಂಬಯಲಿನಲ್ಲಿ ಅಲೆದಾಡಿದ್ದೆ. ಎಲ್ಲಿ ಕುಂತ್ರೂ ಸಮಾಧಾನವಾಗಿರಲಿಲ್ಲ. ಹಂಗಂತ ಭಿಕ್ಷೆ ಬೇಡದೇ ಸುಮ್ಮನೆ ಇರಂಗಿರಲಿಲ್ಲ. ಸಾಲಗಳು ಹೆಚ್ಚಾಗಿದ್ದವು. ಭಿಕ್ಷೆ ಮುಗಿಸಿಕೊಂಡು ಊರಿಗೆ ಹೋಗೋಣ ಅಂತ ಸಾಯಂಕಾಲ ತಂಬ್ರಳ್ಳಿ ಬಸ್‌ಸ್ಟ್ಯಾಂಡ್‌ಗೆ ಬಂದೆ. ಅಲ್ಲಿ ಕಾಳವ್ವ ಜೋಗತಿ ಮತ್ತು ಅವರ ತಂಡದವರು ಇದ್ದರು. ನಾನು ಬಹಳ ಸುಸ್ತಾಗಿರುವೆ, ದುಖಃ ಪಡುತ್ತಿರುವೆ. ಅಂತ ನನ್ನ ಮುಖದಲ್ಲಿ ಕಾಣಿಸುತ್ತಿತ್ತು. ನಾನು ದುಃಖಪಡುವಾಗ ನನ್ನ ಮಸುಡಿ ಹೆಂಗ ಆಗಿರತ್ತೈತಿ ಅಂತ ಅವರಿಗೆ ಗೊತ್ತಿತ್ತು. ಆದ್ರು ನನ್ನನ್ನು ಕರೆಯಲಿಲ್ಲ. ಆಗ ಸೋಮಕ್ಕ ಜೋಗತಿ 'ಅವತ್ತು ಆ ಹುಡುಗಿ ನಿನ್ನ ಮಾತು ಕೇಳಿ, ನಮ್ಮನ್ನು ನಂಬಿ ಚಿಲಕನಟ್ಟಿ ಬಿಟ್ಟು ಬಂದಿದ್ದಾಳೆ. ನಾವೇ ಹಿಂಗ ಮಾಡಿದ್ರೆ ಎಲ್ಲಿಗೆ ಹೋಗಬೇಕು. ಅದು ತಿಳಿದೋ ತಿಳಿದೇನೋ ತಪ್ಪು ಮಾಡ್ಯೆತಿ. ಈಗ ಒಂಟಿಯಾಗ್ಯೆತಿ. ನಮ್ಮ ಜೊತೆ ಕರಕೊಂಡು ಹೋಗೋಣ' ಅಂದಳಂತೆ. ಅದಕ್ಕೆ ಕಾಳವ್ವ 'ಇಲ್ಲ ಆಕಿ ಪೆಟ್ಟಿಗೆ ಬಿಳಬೇಕು. ನೋವು ಅನುಭವಿಸಬೇಕು. ಕಷ್ಟ ಬಂದ್ರೆ ಜೀವ್ನ ಅಂದ್ರ ಏನು ಅಂತ ಗೊತ್ತಾಗತ್ತೈತಿ. ಆಗ ದೊಡ್ಡವರು–ಸಣ್ಣವರು, ಅಪ್ಪ–ಅವ್ವ, ಗುರು ಎಲ್ಲರೂ ನೆನಪಿಗೆ ಬರುತ್ತಾರೆ, ಅವರ ಮಹತ್ವ ತಿಳಿತ್ತೈತಿ' ಅಂತ ಹೇಳಿ ಎಲ್ಲರನ್ನು ಕರಕೊಂಡು ಹೋದಳಂತೆ. ಆದರೆ ಅವತ್ತು ರಾತ್ರಿ 'ಸೋಮಕ್ಕ ನೀನು ಹೇಳಿದ ಮಾತು ನಾನು ಕೇಳಲಿಲ್ಲ. ಆಕಿ(ಮಂಜಮ್ಮ) ಮನೆಗೆ ಬಂದಾಳೊ ಇಲ್ಲೊ! ಅಂತ ಕಾಳವ್ವ ಕೊರಗಿದ್ದಳಂತೆ. ಹಾಗಂತ ನಾನು ಕಾಳವ್ವ ಜೋಗತಿ ತಂಡವನ್ನು ಸೇರಿದಮ್ಯಾಗ ನನ್ನತ್ತಿರ ಹೇಳಿದ್ದಳು.

ಹಿಂಗಾದ ಮರುದಿವಸ ಹರಪನಹಳ್ಳಿ ಸಂತೆಗೆ ಭಿಕ್ಷೆಗೆ ಹೋಗಿದ್ದೆ. ಅಲ್ಲಿಗೆ ಕಾಳವ್ವ ಜೋಗತಿಯ ತಂಡ ಬಂದಿತ್ತು. ನನ್ನನ್ನು ನೋಡಿದ ಕಾಳವ್ವ ಖುದ್ದು ಬಾ ಅಂತ ಕರೆದು ನನಗೆ ತಿಳುವಳಿಕೆ ಹೇಳಿದ್ದಳು. ಅಲ್ಲದೆ ಸೋಮಕ್ಕ ಜೋಗತಿಯನ್ನು ನನ್ನ ಜೊತೆ ಮಾಡಿ ಗೊಲ್ಲರಹಳ್ಳಿಯಲ್ಲಿ ಮನೆ ಮಾಡಿ ಇರಿಸಿದ್ದಳು. ಅವತ್ತು ಅಕಿ ಆ ಊರಲ್ಲಿ ಇರಿಸಿದ್ದಕ್ಕೆ ಇವತ್ತು ಮನೆ ಸಿಕ್ಕಿದೆ. ಓಟಿಂಗ್ ಕಾರ್ಡ್ ಸಿಕ್ಕಿತು. ಇದೆಲ್ಲಕ್ಕಿಂತ ಹೆಚ್ಚಾಗಿ ನನ್ನನ್ನು ಕಲಾವಿದೆಯನ್ನಾಗಿ ಮಾಡಿದಳು. ಇವತ್ತು ನಾನೇನಾದ್ರು ಕಲಾಸೇವೆ ಅಥವಾ ಕಲೆಯಲ್ಲಿ ಬೆಳೆದಿದ್ರೆ ಆಕಿ ಆಶೀರ್ವಾದದಿಂದ ಮಾತ್ರ, ಆಕಿ ಅವತ್ತು ಈ ಕ್ಷೇತ್ರದಲ್ಲಿ ಕಲಾಸೇವೆ ಸಲ್ಲಿಸಿದ್ದಕ್ಕಾಗಿಯೇ ನನಗೆ ದೊಡ್ಡದೊಡ್ಡ ಅವಕಾಶಗಳು ಸಿಗುತ್ತಿವೆ. ಅವು ಗುರುವಿಗೆ ಸಿಗಬೇಕಾದ ಅವಕಾಶಗಳು. ಇವತ್ತು ಅವರು ಇದ್ದಿದ್ದರೆ ಅವರಿಗೆ ಎಷ್ಟು ಪ್ರಶಸ್ತಿಗಳು ಸಿಗತ್ತಿದ್ವೇನೊ? ಆ ಯಲ್ಲಮ್ಮನೇ ಬಲ್ಲಳು. ಆಕಿದು ಅದ್ಭುತ ಕಂಠವಿತ್ತು. ಎಷ್ಟೋ ಸಾವಿರ ಸಾವಿರ ನಾಟಕ ಮಾಡಿದ್ದಾಳೆ. ಒಂದೊಂದು ಊರಿನಾಗ ಒಂದು ದಿನ ತಪ್ಪದಂತೆ ನಾಲ್ಕೈದು ಸಲ ನಾಟಕ ಮಾಡಿದ್ದಾಳೆ. ಹಳ್ಳಿಯವರು

ಇವತ್ತು ಒಂದು ಓಣಿಯಲ್ಲಿ ಆಡಿಸಿದ್ರೆ ನಾಳೆ ಮತ್ತೊಂದೋಣಿಯಲ್ಲಿ ನಾಟಕ ಮಾಡಿಸುತ್ತಿದ್ರು. ಆಕಿ ಯಲ್ಲಮ್ಮ ಪಾತ್ರ ಮಾಡುತ್ತಿದ್ದಳು. ಆಕಿ ಜೊತೆ ಕನಿಷ್ಠ ೨೫ ಜನ ಪರಶುರಾಮನ ಪಾತ್ರ ಮಾಡಿದ್ದಾರೆ. ಆಕಿ ಧ್ವನಿ ಮುಂದೆ ವಾದ್ಯಗಳೇ ಸೋತು ಬಿಡುತ್ತಿದ್ದವು. ಅಂದ್ರೆ ಆಕಿ ಹಾಡುತ್ತಿದ್ದಾಗ ದೂರದ ಜನಕ್ಕೆ ವಾದ್ಯಗಳ ಸದ್ದು ಕೇಳಿಸುತ್ತಿರಲಿಲ್ಲವಂತೆ. ವಲಕಳ್ಳಿ(ಇವತ್ತು ಆ ಊರನ್ನು ಕೊಂಡಾಪುರ ಎನ್ನುತ್ತಾರೆ)ಯಲ್ಲಿ ನಾಟಕ ಮಾಡಿದ್ರೆ ಮಲ್ಲಾಪುರ ಗ್ರಾಮದವರು ವಲಕಳ್ಳಿಗೆ ನಾಟಕ ನೋಡುವುದಕ್ಕೆ ಬರುತ್ತಿದ್ದ(ಗ್ರಾಮದ ದೂರ ಒಂದುವರೆ ಕಿ.ಮೀ). ಅಂತ ಕಂಠವಿತ್ತು ಅವರದು. ಹಾಡುಗಳನ್ನಂತು ಲೀಲಾಜಾಲವಾಗಿ ಹಾಡುತ್ತಿದ್ದಳು. ಹಿಂಗ ಕಥೆ, ನಾಟಕಗಳನ್ನು ಮಾಡಿ ಜೋಗತಿಯರಿಗೆ ಒಂದು ಸ್ಥಾನವನ್ನು ಹುಟ್ಟುಹಾಕಿ ಹೋಗಿದ್ದಾಳೆ. ಈ ನಾಟಕಕ್ಕೆ ಅಭಿಮಾನಿಗಳನ್ನು ತಂದುಕೊಟ್ಟಿದ್ದಾಳೆ. ಇವತ್ತು ನಾವು ಕುಂತು ಊಟ ಮಾಡುತ್ತಿದ್ದೇವೆ ಅಷ್ಟೆ. ಇವತ್ತು ನಾವು ಊಟ ಮಾಡುತ್ತಿರುವುದೆಲ್ಲ ಆಕಿ ಮಾಡಿಟ್ಟ ಅಡುಗೆ. ನಮಗಾಗಿಯೇ ಕಟ್ಟಿಟ್ಟು ಹೋದ ಬುತ್ತಿ ಇದು. ಅದನ್ನ ನಾನು ತಿನ್ನುತ್ತಿದ್ದೇನೆ. ಆದ್ರೆ ಆಕಿ ಕನಸನ್ನು ಜೀವಂತಗೊಳಿಸುತ್ತಿದ್ದೇನೆ ಎನ್ನುವ ಸಮಾಧಾನವಿದೆ. ಈ ಮಾತನ್ನು ನಾನು ಹೇಳುವುದಕ್ಕಿಂತ ಹೆಚ್ಚಾಗಿ ಜನರು ಹೇಳಬೇಕು. ಆಕಿ ಹುಟ್ಟುಹಾಕಿದ ತಂಡದಲ್ಲಿ ದುಡಿಯುತ್ತ, ಜೋಗತಿ ನೃತ್ಯವನ್ನು ಮಾಡುತ್ತ ಒಳ್ಳೆಯ ಕೆಲಸವನ್ನು ಮಾಡಿ ಜೀವನವನ್ನು ಮಾಡುತ್ತಿದ್ದೇನೆ.

**ನಮ್ಮ ಜೊತೆ ನಾಟಕ ಮಾಡಿದರೆ ಅಪಶಕುನವಂತ !**

ಈಗ ಸರಕಾರ ನಮ್ಮನ್ನು 'ಮಂಗಳಮುಖಿ'ಯರು ಅಂತ ಕರೆದಿದೆ. ನನ್ನ ದೃಷ್ಟಿಯಲ್ಲಿ ಅದು ಒಳ್ಳೆಯ ಹೆಸರು. ಆ ಹೆಸರು ಬಳಕೆಗೆ ಬಂದ ನಂತರ ನಮ್ಮ ಬದುಕು ಸಹ ಮಂಗಳವಾಗುತ್ತ ಬಂತು. ಸಮಾಜದಲ್ಲಿ ನಮ್ಮನ್ನು ನೋಡುವ ಭಾವನೆ ಸ್ವಲ್ಪ ಮಟ್ಟಿಗೆ ಬದಲಾಯಿತು. ಕಲಾ ಅವಕಾಶಗಳು ಹೆಚ್ಚಾದವು. ಮರಿಯಮ್ಮನಹಳ್ಳಿಯ ರಂಗ ಕಲಾವಿದೆಯರು 'ಸರಕಾರವೇ ಇವರನ್ನು(ಜೋಗತಿಯರನ್ನು ಮತ್ತು ತೃತೀಯ ಲಿಂಗಿಗಳನ್ನು) ಮಂಗಳಮುಖಿಯರು ಅಂತ ಗುರುತಿಸಿದೆ. ಇವರನ್ನು ಕರಕೊಂಡು ನಾವ್ಯಾಕ ನಾಟಕ ಮಾಡಬಾರದು' ಅಂತ ಅವರ ಜೊತೆ ನಮ್ಮನ್ನು ಕರಕೊಂಡು ನಾಟಕ ಮಾಡಿದ್ರು. 'ಮೋಹಿನಿ ಬಸ್ಮಾಸುರ' ಎನ್ನುವ ನಾಟಕದಲ್ಲಿ ನಾನು ಬಸ್ಮಾಸುರನಾಗಿ, ಗೌರಮ್ಮ ಜೋಗತಿ ದೇವೇಂದ್ರನಾಗಿ, ರಾಮವ್ವ ಜೋಗತಿ ಬ್ರಹ್ಮದೇವನಾಗಿ ಪಾತ್ರ ಮಾಡಿದ್ದೇವೆ. ಶ್ರೀಮತಿ ಇಳಕಲ್ಲು ಉಮಾರಾಣಿ ಮತ್ತು ಶ್ರೀಮತಿ ನಾಗರತ್ನಮ್ಮ ನಮ್ಮ ಜೊತೆ ಪಾತ್ರ ಮಾಡಿದ್ದರು. ಇಂತಹ ಬೆಳವಣಿಗೆಗೆ ನಾಗರತ್ನಮ್ಮನೇ ಪ್ರಮುಖ ಕಾರಣ. ಅವತ್ತಂತೂ ನಮಗೆಲ್ಲ ಬಹಳ ಸಂತೋಷವಾಗಿತ್ತು. ಯಾಕೆಂದರೆ ಗೊಲ್ಲರಹಳ್ಳಿಯಲ್ಲಿ ಪ್ರತಿವರ್ಷ ದೇವಿಯ ಜಾತ್ರೆ ನಡೆಯುತ್ತದೆ. ಆ ಜಾತ್ರೆಯಲ್ಲಿ ದೇವಿ ನಾಟಕ ಮಾಡುವ ಪರಂಪರೆ ಇದೆ. ಆ ನಾಟಕದಲ್ಲಿ ನಾನು ಪಾತ್ರ ಮಾಡಬೇಕೆನ್ನುವ ಆಸೆಯಾಗಿತ್ತು.

ಹಂಗಾಗಿ ಒಮ್ಮೆ ಊರಿನ ಜನರನ್ನು ಕೇಳಿದೆ. ಊರಿನ ಜನರು ಸಹ ಒಪ್ಪಿದರು. ನನ್ನ ಹತ್ತಿರ ನಾಟಕಕ್ಕೆ ಕೊಡುವುದಕ್ಕೆ ಹಣವಿಲ್ಲ ಅಂತ ಹೇಳಿದೆ. ಆಗ ಊರಿನ ಜನ 'ಮಂಜಮ್ಮ ಪಾತ್ರ ಮಾಡುತ್ತಾಳೆ ಅಂದ್ರೆ ನಾನು ದುಡ್ಡು ಕೊಡುವೆ, ನಾನು ದುಡ್ಡು ಕೊಡುವೆ ಅಂತ ನಾಲ್ಕೈದು ಜನ ಮುಂದೆ ಬಂದ್ರು. ಮಂಜಮ್ಮನಿಗೆ ಕಿರೀಟವಿಟ್ಟು ಹತ್ತು ಕೈ ಇಟ್ಟುಬಿಟ್ಟರೆ ದೇವಿ ಆದಂಗೆ ಆಗಿಬಿಡುತ್ತಾಳೆ. ಅಂತಹ ಸನ್ನಿವೇಷವನ್ನು ನೋಡಿ ನಾವು ಖುಷಿಪಡಬೇಕು' ಅಂತ ಅಂದ್ರು. ಆವಾಗಂತು ನನಗಾದ ಸಂತೋಷ ವನ್ನು ಹೇಳಲಿಕ್ಕೆ ಆಗದು.

ಆ ಹುಮ್ಮಸ್ಸಿನಲ್ಲೇ ಡೈಲಾಗ್‌ಗಳನ್ನು ಕಂಠಪಾಠ ಮಾಡುವುದಕ್ಕೆ ಆರಂಭಿಸಿದೆ. ಭಿಕ್ಷೆಗೆ ಹೋದ್ರು ಚೌಡಿಕೆಯಲ್ಲಿ ನಾಟಕದ ಬುಕ್ ಇಟ್ಟುಕೊಂಡು ಹೋಗಿ ಸಮಯ ಸಿಕ್ಕಾಗೆಲ್ಲ ಕಂಠಪಾಠ ಮಾಡಿದೆ. ಸಂತೆಗಳಲ್ಲೂ ಕಂಠಪಾಠ ಮಾಡುತ್ತಿದ್ದೆ. ಅಷ್ಟು ಹುಮ್ಮಸ್ಸಿನಿಂದ ಕಲಿತೆ. ಜಾತ್ರೆ ಹತ್ತಿರ ಬರುತ್ತಿದ್ದಂಗೆ ನಾಲ್ಕೈದು ಜನ ಗ್ರಾಮದ ಹಿರಿಯರು ನನ್ನ ಹತ್ತಿರ ಬಂದು ಗಂಡುಜೋಗಮ್ಮರು ನಮ್ಮ ನಾಟಕದಲ್ಲಿ ಪಾತ್ರ ಮಾಡುವುದು ಬೇಡವೆಂದರು. ಅದಕ್ಕೆ ನಾನು ಯಾಕೆ ಅಂತ ಕೇಳಿದೆ. ಆಗ "ಗಂಡುಜೋಗಮ್ಮರ ಜೊತೆ ನಾಟಕ ಮಾಡಿದ್ರೆ ಅಪಶಕುನ. ಅದು ಅಲ್ಲದೆ ಪಕ್ಕದ ಹಳ್ಳಿಯವರು ನಿಮ್ಮ ಊರಿನಲ್ಲಿ ಗಂಡಸರು ಯಾರು ಇಲ್ವ, ಗಂಡುಜೋಗತಿಯರಿಂದ ಪಾತ್ರ ಮಾಡಿಸುತ್ತಿರಲ್ಲ, ನೀವೇನು ಗಂಡುಮಕ್ಕಳಲ್ಲವೇನು? ಅಂತ ಕೇಳುತ್ತಿದ್ದಾರೆ. ಹಂಗಾಗಿ ಊರಿನ ಹುಡುಗರು ನೀವು ಪಾತ್ರ ಮಾಡುವುದು ಬೇಡವೇ ಬೇಡ ಅನ್ನುತ್ತಿದ್ದಾರೆ. ಆದ್ದರಿಂದ ನೀನು ಪಾತ್ರ ಮಾಡುವುದು ಬೇಡ" ಅಂದ್ರು. ಅವತ್ತು ನನಗೆ ಬಹಳ ಅವಮಾನವಾಯ್ತು. ಇದ್ದೂರಲ್ಲಿ ಇಂತಹ ಅವಮಾನವನ್ನು ನಾನ್ಯಾವತ್ತೂ ಅನುಭವಿಸಿರಲಿಲ್ಲ. ಹಂಗಾಗಿ ಬಾರಿ ದುಃಖಪಟ್ಟಿದ್ದೆ. ನನಗೆ ಗೊತ್ತಿರುವ, ನನ್ನ ಸುತ್ತಮುತ್ತಲಿನ ಜನ, ನಾನು ನಂಬಿದ ಜನರೇ ಅವಮಾನ ಮಾಡಿದ್ರು, ಇನ್ನು ಬೇರೆ ಊರಿನವರು ಅವಮಾನ ಮಾಡದೆ ಇರುತ್ತಾರೆಯೇ? ಅಂತ ಅನ್ನಿಸುತ್ತಿತ್ತು. ಆ ಘಟನೆ ನಡೆದ ಎರಡು ದಿನ ಮನೆಯಿಂದ ಹೊರಗಡೆ ಬಂದಿರಲೇಯಿಲ್ಲ. ಊರಿನವರ ಜೊತೆ ಮಾತನಾಡುವುದಕ್ಕೂ ನನಗೆ ಅವಮಾನ ಆಗುತಿತ್ತು. ಭಯ ಆಗುತಿತ್ತು. ಯಾರಾದ್ರು ಏನಾದ್ರು ಅಂತಾರೆ ಅನ್ನುವ ಭಯವದು. ಆ ಘಟನೆ ನಡೆದ ಸುಮಾರು ಎರಡು ವರ್ಷ ಊರಿನ ಯಾವುದೇ ಕಾರ್ಯಕ್ರಮಗಳಿಗೆ ಹೋಗಿರಲಿಲ್ಲ. 'ಯಾರಾದ್ರು ನೀನು ಗಂಡುಜೋಗತಿ, ಕಾರ್ಯಕ್ರಮದಲ್ಲಿ ಭಾಗವಹಿಸುವುದು ಬೇಡ' ಅಂತ ಅಂದುಬಿಟ್ರೆ ಎನ್ನುವ ಭಯ ಕಾಡುತಿತ್ತು. ಅದಕ್ಕೆ ಯಾವ ಕಾರ್ಯಕ್ರಮಕ್ಕೂ ಹೋಗಲಿಲ್ಲ. ನನ್ನಲ್ಲಿದ್ದ ಅಂತಹ ಭಯವನ್ನು ದೂರ ಮಾಡಿದವರು ಮರಿಯಮ್ಮನಹಳ್ಳಿಯ ಶ್ರೀಮತಿ ನಾಗರತ್ನಮ್ಮ ಮತ್ತು ಅವರ ತಂಡದವರು. ನಮ್ಮ ಊರಿನಲ್ಲಿ ಆದ ಅವಮಾನವನ್ನು, ಕಳೆದುಕೊಂಡ ಸಂತೋಷವನ್ನು, ಅವಕಾಶವನ್ನು ನನಗೆ ಕೊಟ್ಟರು. ಯಾರು ನಾಟಕ ಮಾಡಬೇಡ

ಅಂದಿದ್ದಾರೋ ಅವರ ಕೈಗಳಿಂದಲೇ ಚಪ್ಪಾಳೆಯ ಗೌರವ ಸಿಕ್ಕಿತ್ತು ನನಗೆ. ಇದು ಜೋಗತಿಯರಿಗೆ ಸಿಕ್ಕ ಗೌರವ ಅಂದುಕೊಂಡಿರುವೆ. ಈಗ ಸಮಾಜ ಬದಲಾಗಿದೆ. ನಮ್ಮನ್ನು ಸಹ ಚೆನ್ನಾಗಿ ಮಾತನಾಡಿಸುತ್ತಿದ್ದಾರೆ. ಮಹಿಳಾ ಕಲಾವಿದರು ನಮ್ಮನ್ನು ಸೇರಿಸಿಕೊಂಡು ನಾಟಕ ಮಾಡುತ್ತಿರುವುದೇ ಇದಕ್ಕೆ ಸಾಕ್ಷಿ.

**ಏಡ್ಸ್ ಬಗ್ಗೆ ಹೇಳ್ತಿಯಲ್ಲ ನಿನಗೇನು ಮಾನ–ಮರ್ಯಾದೆ ಇಲ್ಲೇನು?**

ಹಲವಾರು ಕಡೆ ಹಲವಾರು ಯೋಜನೆಗಳ ಜನಜಾಗೃತಿ ಕಾರ್ಯಕ್ರಮಗಳನ್ನು ಮಾಡಿದ್ದೇವೆ. ಆ ಎಲ್ಲಾ ಯೋಜನೆಗಳಲ್ಲೂ ಭಿನ್ನವಾದ ಅನುಭವಗಳಾಗಿವೆ. ಏಡ್ಸ್ ಜಾಗೃತಿ ಕಾರ್ಯಕ್ರಮದ ಅನುಭವವಂತೂ ಭಿನ್ನ. ಅದನ್ನು ಯಾವತ್ತು ಮರೆಯುವಂತಿಲ್ಲ. ಒಮ್ಮೆ ಹಗರಿಬೊಮ್ಮನಹಳ್ಳಿ ತಾಲೂಕಿನ ಹಳ್ಳಿಗಳಲ್ಲಿ ಏಡ್ಸ್ ಜಾಗೃತಿ ಕಾರ್ಯಕ್ರಮವನ್ನು ಮಾಡುತ್ತಿದ್ದೆವು. ಇದಕ್ಕಾಗಿ ಊರ ನಡುವೆ ಇರುವ ಬಯಲು ಜಾಗನ್ನು, ಅರಳಿಕಟ್ಟೆಗಳನ್ನು ಆಯ್ಕೆ ಮಾಡಿಕೊಂಡು ಕಾರ್ಯಕ್ರಮ ನೀಡಬೇಕು ಎನ್ನುವುದು ಈ ಯೋಜನೆಯ ನಿಯಮವಾಗಿತ್ತು. ಕಾರ್ಯಕ್ರಮವನ್ನು ಆರಂಭಿಸುವ ಶೈಲಿ ಇಂತಿತ್ತು. ಮೊದಲು ಹಾಡುಗಳನ್ನು ಹಾಡುತ್ತಿದ್ದೆವು. ಆಗ ಜನ ಸೇರುತ್ತಿದ್ದರು. ಜನ ಸೇರಿದ ನಂತರ ಈಗ ಏಡ್ಸ್ ರೋಗ ಹೆಚ್ಚಾಗುತ್ತಿದೆ. ಇದೊಂದು ಮಾರಕ ರೋಗ. ಇಡಿ ಮನುಕುಲವನ್ನು ನಾಶ ಮಾಡುವ ಶಕ್ತಿ ಈ ರೋಗಕ್ಕಿದೆ. ಇಂತಹ ರೋಗದಿಂದ ದೂರ ಇರಬೇಕಾಗಿ ರುವುದು ನಮ್ಮೆಲ್ಲರ ಕರ್ತವ್ಯ. ಹಂಗಾಗಿ ಕೆಲವು ಮುಂಜಾಗ್ರತ ಕ್ರಮಗಳನ್ನು ಅನುಸರಿಸಬೇಕು. ಅದಕ್ಕಾಗಿಯೇ ಸರಕಾರ ನಿಮಗೆ ಮಾಹಿತಿ ಕೊಡಿ ಅಂತ ನಮ್ಮನ್ನು ಇಲ್ಲಿಗೆ ಕಳಿಸ್ಯೆತಿ ಅಂತ ಹೇಳಿ, ಕಾಂಡೋಮ್ ಬಳಕೆಯ ಬಗ್ಗೆ ಹೇಳುವುದಕ್ಕೆ ಆರಂಭಿಸುತ್ತಿದ್ದೆವು. ಈ ಕಾಂಡೋಮ್, ಏಡ್ಸ್ ಎನ್ನುವ ಪದಗಳನ್ನು ಕೇಳಿದ ತಕ್ಷಣ ಜನ ಬಯ್ಯುವುದಕ್ಕೆ ಸುರುಮಾಡಿಬಿಡೋರು. 'ಕಾಳವ್ವ ಜೋಗತಿ, ಮಂಜಮ್ಮ ಜೋಗತಿ ಬಂದಾರೆ, ಏನಾದ್ರು ಕಥೆ ಹೇಳ್ತಾರೆ, ನೀತಿ ಮಾತುಗಳನ್ನು ಹೇಳ್ತಾರೆ ಅಂತ ಮನಿಯಾಗಿನ ಕೆಲಸ ಬಿಟ್ಟು ಬಂದೀವಿ. ನೀವು ನೋಡಿದ್ರ ಆ ಹೊಲಸು ಸೂಳೆಮಗನದು ತಂದು ಹೇಳಕತ್ತೀರಿ. ಯಾವನು ನಿಮ್ಮನ್ನು ಇಲ್ಲಿಗೆ ಕಳುಹಿಸಿದ್ದು? ಇಷ್ಟೊಂದು ಜನರ ಮುಂದೆ, ಅದು ಬಯಲಿನಲ್ಲಿ ಅಂತಪುಗಳನ್ನೆಲ್ಲ ಬಾಯಿಬಿಟ್ಟು ಮಾತನಾಡುತ್ತೀರಲ್ಲ. ನಿಮಗೇನು ನಾಚಿಕೆ, ಮಾನ–ಮರ್ಯಾದೆ ಇಲ್ವ? ಕಾಳವ್ವ ನೀನು ಮುದುಕಿ ಆಗಿದಿ. ಒಳ್ಳೆಯ ಕಲಾವಿದೆ ಅಂತ ನಾವೆಲ್ಲ ಮಾತನಾಡಿಕೊಂಡೀವಿ. ಉಳಿದ ಜೋಗತಿಯರಿಗಂತೂ ತಿಳಿಯುವುದಿಲ್ಲ ನಿನಗಾದ್ರು ತಿಳಿಬಾರ್ದ. ಮಕ್ಕಳು–ಮರಿನ ಹಾಳುಮಾಡಕ ಅಂತ ಇಲ್ಲಿಗೆ ಬಂದಿರೇನು? ಹಿಂಗ ಹೊಲಸು ಹೊಲಸೆಲ್ಲ ಹೇಳ್ತಿರಲ್ಲ ಯಲ್ಲಮ್ಮ, ಹುಲಿಗೆಮ್ಮ ಈ ಕೆಲಸ ಮಾಡಿ ಅಂತ ಹೇಳ್ಯಾಳೇನು? ನೀವು ಅದಕ್ಕ ದೀಕ್ಷೆ ತಗೊಂಡಿರೇನು?" ಅಂತ ವಯಸ್ಸಾದ ಗಂಡಸರು, ಹೆಂಗಸರು ಬೈದು ಕಾರ್ಯಕ್ರಮ ನಿಲ್ಲಿಸಿಬಿಡೋರು.

ಇಷ್ಟಕ್ಕೂ ಏಡ್ಸ್ ಬಗ್ಗೆ ಕಾರ್ಯಕ್ರಮ ಕೊಡುವುದಕ್ಕೆ ನಮಗೂ ಆಸಕ್ತಿ ಇರಲಿಲ್ಲ. ಯಾಕಂದ್ರ ನಾವು ಯಾವುದಾದ್ರು ಊರಿಗೆ ಹೋಗಿ ಚೌಡಿಕೆ ನುಡಿಸಿಬಿಟ್ಟರೆ ಸಾಕು, ಯಲ್ಲಮ್ಮ ದೇವಿ, ಹುಲಿಗೆಮ್ಮ ದೇವಿ, ಕಾಳವ್ವ ದೇವಿ ನಮ್ಮ ಮನೆ ಬಾಗಿಲಿಗೆ ಬಂದಿದ್ದಾಳೆ ಅಂತ ಒಳಗಡೆಯಿಂದ ತಂಬಿಗೆ ನೀರು ತಂದು, ನಮ್ಮ ಕಾಲಿಗೆ ಹಾಕಿ, ನಮಸ್ಕಾರ ಮಾಡಿ, ಒಳಗಡೆ ಕರಕೊಂಡೋಗಿ, ಕರೆಕಂಬಳಿ ಹಾಕಿ ಕುಂದ್ರಿಸಿ, ಹಾಡು ಹೇಳಿಸಿ ನಮ್ಮನ್ನೇ ದೈವ ಅಂತ ಪೂಜಿಸುತ್ತಾರೆ. ಅದು ಅಲ್ಲದೆ ಒಂದು ಮೊರ ಅಕ್ಕಿ, ಜೋಳ, ಕಾಳು–ಕಡಿ ಸೀರೆ–ಕುಪ್ಪಸ ಕೊಟ್ಟು ಕಳುಹಿಸುವಂತಹ ಸಮಯದಾಗ ನಾವೆಲ್ಲ ದೇವಸ್ಥಾನ, ಊರಮುಂದೆ ಹೋಗಿ ನಿರೋಧ ಬಳಸಿ ಅಂತ ಹೇಗೆ ಹೇಳುವುದು ಅಂತ ಸಂಕಷ್ಟ ವಾಗಿತ್ತು. ಆದರೂ ಸರಕಾರ ನಮಗೆ ಈ ಕೆಲಸ ಒಪ್ಪಿಸಿದೆ ಅಂತ ಹೇಳಾಕೋದ್ವಿ. ಜನ ನಮ್ಮನ್ನು ಆ ದೃಷ್ಟಿಯಲ್ಲಿ ನೋಡುವುದಕ್ಕೆ ಅಥವಾ ಜನರು ನಮ್ಮಿಂದ ಅಂತಹ ಮಾತುಗಳನ್ನು ಕೇಳುವುದಕ್ಕೆ ಇಷ್ಟಪಡಲಿಲ್ಲ. ನಮಗೂ ಜನರ ವಿರುದ್ಧವಾಗಿ ನಡೆದುಕೊಳ್ಳುವುದಕ್ಕೆ ಇಷ್ಟವಿರಲಿಲ್ಲ. ಹಂಗಾಗಿ 'ಏಡ್ಸ್ ಜನಜಾಗೃತಿ' ಕಾರ್ಯಕ್ರಮವನ್ನು ಕೈಬಿಟ್ಟು, ಹೆರಿಗೆ ಶುಚಿತ್ವ, ಗಂಡಸರು ಸಂತಾನ ನಿಯಂತ್ರಣಕ್ಕಾಗಿ ಅನುಸರಿಸುವ ಕ್ರಮಗಳು, ಋತುಮತಿಯರ ಆರೋಗ್ಯ ಕಾಳಜಿ ಮತ್ತು ಶುಚಿತ್ವ, ಗರ್ಭಿಣಿ ಸ್ತ್ರೀಯರ ಆರೋಗ್ಯ ಸಂರಕ್ಷಣೆ ಕಾರ್ಯಕ್ರಮಗಳನ್ನು ಕೊಟ್ಟೇವಿ. ಇಂತಹ ಕಾರ್ಯಕ್ರಮಗಳಿಗೂ ಜನರಿಂದ ಪ್ರತಿರೋಧ ಬಂದ ಕಾರಣ ಜಾಗೃತಿ ಕಾರ್ಯಕ್ರಮಗಳನ್ನು ಕೈಬಿಟ್ಟಿದ್ದೇವೆ. ಒಳ್ಳೆಯ ಕಾರ್ಯಕ್ರಮಗಳು ಬಂದರೆ ಮಾಡಬೇಕು ಅನ್ನುವ ಆಸೆ ಇದೆ. ಇದು ಕೇವಲ ಆಸೆ ಅಷ್ಟೆ ಅಲ್ಲ ಬದುಕಿನ ಅನಿವಾರ್ಯತೆಯೂ ಹೌದು. ನಮ್ಮ ಜೋಗತಿಯರೆಲ್ಲ ಬದುಕಬೇಕಾಗಿದೆ. ಅದಕ್ಕಾಗಿಯಾದ್ರು ಮಾಡಬೇಕಾಗಿದೆ.

### ನಮ್ಮ ದೇಹವನ್ನು ಜನರು ಇದ್ದಾಗಲೂ, ಸತ್ತಾಗಲೂ ದ್ವೇಷಿಸುತ್ತಾರೆ!

ಜನರ ನಡವಳಿಕೆಗಳಿಂದ ನಮ್ಮ ದೇಹದ ಬಗ್ಗೆ ನಮಗೆ ಪ್ರೀತಿ, ಗೌರವ ಇಲ್ಲದಂತಾಗಿದೆ. ಹಂಗಾಗಿಯೇ ನಾವು ನಮ್ಮ ದೇಹವನ್ನು ಪ್ರೀತಿಸುವುದನ್ನು ಕಡಿಮೆ ಮಾಡುತ್ತೇವೆ. ಆಗ ಅದು ನಮಗೆ ಗೊತ್ತಿಲ್ಲದಂತೆ ಅನಾರೋಗ್ಯಕ್ಕೆ ಒಳಗಾಗುತ್ತದೆ. ಜನರು ನಮ್ಮ ದೇಹವನ್ನು ದ್ವೇಷಿಸಿದ ಅನೇಕ ಉದಾಹರಣೆಗಳು ನಮ್ಮಲ್ಲಿವೆ. ಮರಿಯಮ್ಮನಹಳ್ಳಿಯಲ್ಲಿ 'ತುಪ್ಪದ ಕುಡಿಕೆ ಜೋಗಮ್ಮ' ಅನ್ನುವ ಗಂಡುಜೋಗತಿ ಸತ್ತಿದ್ದಳು. ಆಕೆಯ ಶವಸಂಸ್ಕಾರದ ಬಗ್ಗೆ ಹೇಳುವುದಕ್ಕಿಂತ ಮುಂಚಿತವಾಗಿ ಆಕೆಯ ಜೀವನ ಚರಿತ್ರೆಯ ಬಗ್ಗೆ ಒಂದಿಷ್ಟು ಮಾತುಗಳನ್ನು ಹೇಳಲೇಬೇಕು. ತುಪ್ಪದ ಕುಡಿಕೆ ಜೋಗಮ್ಮನ ಮೂಲ ಹೆಸರು ಶ್ರೀ ಹುಸೇನ್‌ಸಾಬ್. ಆತ ಮುಸ್ಲಿಂ ಧರ್ಮಕ್ಕೆ ಸೇರಿದವ. ಸುಮಾರು ನಲವತ್ತು ಮುಸ್ಲಿಂ ಮನೆಗಳಿದ್ದ ಪ್ಲಾಟ್‌ನಲ್ಲಿ ವಾಸವಾಗಿದ್ದ. ಅತನದು ಒಂದು ಪ್ರತ್ಯೇಕ ಮನೆ ಮತ್ತು ಆ ಮನೆಯ ಪಕ್ಕದಲ್ಲಿ ಖಾಲಿ ಜಾಗವಿತ್ತು. ಆ ಖಾಲಿ

ಜಾಗದಲ್ಲಿ ಯಲ್ಲಮ್ಮನ ದೇವಾಲಯ ಕಟ್ಟಬೇಕೆನ್ನುವ ಆಸೆ ಆತನಿಗಿತ್ತು. ದೇವಾಲಯವನ್ನು ಕಟ್ಟುವುದಕ್ಕಾಗಿ ಹಲವಾರು ಪ್ರಯತ್ನಗಳನ್ನು ಮಾಡಿದ, ಹಣ ಸಂಗ್ರಹಿಸಿ ದೇವಸ್ಥಾನವನ್ನು ಕಟ್ಟುವ ಕಾರ್ಯಕ್ಕೆ ಕೈಹಾಕಿದ. ಆಗ ಮುಸ್ಲಿಂ ಓಣಿಯಲ್ಲಿ ಯಲ್ಲಮ್ಮ ದೇವಾಲಯವನ್ನು ಕಟ್ಟುವಂತಿಲ್ಲ ಎನ್ನುವ ಪ್ರತಿರೋಧಗಳು ಬಂದವು. ಇಲ್ಲಿ ದೇವಾಲಯ ಕಟ್ಟಲೇಬಾರದು ಅಂತ ಆತನ ಹೆಸರಿನಲ್ಲಿದ್ದ ಜಾಗವನ್ನು ಆತನ ಹೆಸರಿನಲ್ಲಿ ಇಲ್ಲದಂತೆ ಮಾಡಿದ್ರು. ಆದರೆ ಆತ ತನ್ನ ಪ್ರಯತ್ನವನ್ನು ಬಿಡಲಿಲ್ಲ. ಕೋರ್ಟಿಗೆ ಹೋಗಿ ಆ ಜಾಗವನ್ನು ತನ್ನ ಹೆಸರಿಗೆ ಮಾಡಿಸಿಕೊಂಡು ಬಂದು ಯಲ್ಲಮ್ಮ ದೇವಸ್ಥಾನವನ್ನು ಕಟ್ಟಿಯೇಬಿಟ್ಟ.

ನೋಡುವುದಕ್ಕಂತೂ ಆತ ಬಹಳ ಸುಂದರವಾಗಿದ್ದ. ಹಳೆಯ ಕಾಲದ ಚಿತ್ರನಟಿಯರು ಆತನ ಸುಂದರತ್ವದ ಮುಂದೆ ನಿಲ್ಲಲಾರರು. ಸೀರೆ ಉಟ್ಟುಕೊಂಡು ಬಹಳ ಚೆಂದ ರೆಡಿಯಾಗುತ್ತಿದ್ದ. 'ನೀನು ಸೀರೆ ಉಟ್ಟುಕೊಂಡ್ರೆ ನಮ್ಮ ಕುಲದಲ್ಲಿ ಹಾಕಿಕೊಳ್ಳುವುದಿಲ್ಲ. ನೀನು ಯಲ್ಲಮ್ಮನಾದ್ರೂ ಪೂಜೆ ಮಾಡು, ದುರುಗಮ್ಮನಾದ್ರು ಪೂಜೆ ಮಾಡು. ಆದರೆ ಸೀರೆ ಮಾತ್ರ ತೊಡಬೇಡ' ಅಂತ ಆತನ ಅಣ್ಣ-ತಮ್ಮಂದಿರು ಹಠ ಮಾಡಿದ್ರು. ಆಗ ತಾನು ಇಷ್ಟಪಡುತ್ತಿದ್ದ ಸೀರೆಯನ್ನು ಕೈಬಿಟ್ಟು ಪಂಜೆಯನ್ನು ಉಟ್ಟುಕೊಳ್ಳುವುದಕ್ಕೆ ಆರಂಭಿಸಿದನಾದ್ರೂ 'ಯಲ್ಲಮ್ಮನ ಕೊಡ' ಹೊರುವುದನ್ನು ಕೈಬಿಡಲಿಲ್ಲ. ಪಂಜೆ ಉಟ್ಟು ದೇವಿ ಕೊಡ ಹೊತ್ತೇ ಭಿಕ್ಷೆ ಬೇಡುತ್ತಿದ್ದ. ನಿತ್ಯ ಯಲ್ಲಮ್ಮನನ್ನು ಪೂಜೆ ಮಾಡುತ್ತಿದ್ದ. ಆ ದೇವಾಲಯವೇ ಆತನಿಗೆ ಮನೆಯಾಗಿತ್ತು. ನೀನ್ಯಾಕ ಸೀರೆ ಹಾಕಿಕೊಳ್ಳುವುದಿಲ್ಲ ಅಂತ ಯಾರಾದ್ರು ಕೇಳಿದ್ರೆ ಬಹಳ ದುಃಖಪಡುತ್ತಿದ್ದ. ಅಂತಹ ವಿಶಿಷ್ಟ ವ್ಯಕ್ತಿತ್ವವುಳ್ಳ ಜೋಗತಿ ಸತ್ತಾಗ ಅವರ ಅಣ್ಣ-ತಮ್ಮಂದಿರು ನಮ್ಮನ್ನು ಹುಡುಕಿಕೊಂಡು ನಮ್ಮ ಮನೆಗೆ ಬಂದು ತೀರಿಕೊಂಡ ಸುದ್ದಿಯನ್ನು ತಿಳಿಸಿದ್ರು. ಅಲ್ಲದೆ ನೀವೆಲ್ಲರೂ ಸೇರಿ ತುಪ್ಪದ ಕುಡಿಕೆ ಜೋಗಮ್ಮನ ಶವಸಂಸ್ಕಾರ ಕಾರ್ಯ ಕ್ರಮಗಳನ್ನು ಮುಗಿಸಿಕೊಡಬೇಕೆಂದು ಕೇಳಿಕೊಂಡರು. ಇವರಿಗೆ ಜೋಗತಿ ಮತ್ತು ಹಿಂದೂ ಸಂಪ್ರದಾಯ ಗೊತ್ತಿಲ್ಲ. ಅದಕ್ಕೆ ಕರೆದಿದ್ದಾರೆ ಅಂತ ತಿಳಿಕೊಂಡು ನಾನು, ಕಾಳವ್ವ ಜೋಗತಿ ಅಲ್ಲಿಗೆ ಹೋದ್ವಿ. ಅಲ್ಲಿಗೆ ಹೋಗಿಂದೆ ನಮ್ಮನ್ನು ಕರೆದಿರುವ ಸತ್ಯ ಗೊತ್ತಾಯ್ತು. ಅಂದರೆ ಹತ್ತಾರು ಜನ ಮುಸ್ಲಿಮರು ನಮ್ಮತ್ತಿರ ಬಂದು "ತುಪ್ಪದ ಕುಡಿಕೆ ಜೋಗಮ್ಮ ದೇವರು ಕಟ್ಟಿಸಿಕೊಂಡಾಳ. ಆಕಿ ಕೊಳ್ಳಾಗ ಯಲ್ಲಮ್ಮ ದೇವರೈತಿ. ಅದು ಹಿಂದು ದೈವ. ಹಂಗಾಗಿ ನಾವ್ಯಾರು ಅ ಹೆಣ ಮುಟ್ಟುವುದಿಲ್ಲ. ನೀವೇ ಏನಾದ್ರು ಮಾಡಿ" ಅಂದರು. ಈ ಮಾತುಗಳನ್ನು ಕೇಳಿದ ನಮಗೆ ಏನು ಮಾಡಬೇಕು ಅಂತ ಗೊತ್ತಾಗಲಿಲ್ಲ. ನಾವೇ ಸುಡುಗಾಡಿಗೆ ಹೊತ್ತುಕೊಂಡು ಹೋಗಬೇಕಂದ್ರ ಸುಡುಗಾಡು ದೂರ ಇತ್ತು. ಅದರಲ್ಲೂ ನಾವಿದ್ದದ್ದೇ ಐದು ಜನ. ಆಗ ಏನು ತಿಳಿಯಲಾರದಂಗಾಯ್ತು. ಇನ್ನೊಂದಿಷ್ಟು ಜೋಗಮ್ಮರಿಗೆ ಹೇಳಿ ಕರೆತಂದರಾಯ್ತು ಅಂತ ನಾನು, ಕಾಳವ್ವ ಮನೆಗೆ ಬಂದ್ವಿ. ನಮ್ಮ ಜೋಗತಿಯರಿಗೆ ಫೋನ್ ಮಾಡಿದಿವಿ.

ಯಾರು ಊರಲ್ಲಿ ಇರಲಿಲ್ಲ. ಅದಕ್ಕೆ ನಾವೆಲ್ಲ ಸೇರಿ ತರಕಾರಿ ಬಂಡಿಯಲ್ಲಿ ಹಾಕಿಕೊಂಡು ಹೋಗಿ ಮಣ್ಣುಮಾಡಿ ಬಂದರಾಯ್ತು ಅಂತ ನಿರ್ಧಾರ ಮಾಡಿ ಅಲ್ಲಿಗೆ ಹೋದ್ವಿ. ಆಗ ಆ ಕುಟುಂಬದವರು ಮತ್ತೆ ನಮ್ಮತ್ತಿರ ಬಂದು 'ತುಪ್ಪದ ಕುಡಿಕೆ ಜೋಗಮ್ಮ ಯಲ್ಲಮ್ಮನ ಫೋಟೋದಿಂದೆ ಹತ್ತುಸಾವಿರ ರೂಪಾಯಿ ಇಟ್ಟಿದ್ಲು. ಅದು ನಮ್ಮತ್ತಿರ ಐತಿ. ಶವಸಂಸ್ಕಾರಕ್ಕೆ ನಿಮಗೇನು ಬೇಕೋ ಅದನ್ನು ತಗೋಳ್ರಿ, ನಾವು ರೊಕ್ಕ ಕೊಡ್ತೀವಿ ಅಂದ್ರು. ಆಗ ಶವಸಂಸ್ಕಾರದ ಆಚರಣೆಗೆ ಬೇಕಾದ ಸೀರೆ, ಜಾಕೇಟು, ಅರಿಶಿಣ, ಕುಂಕುಮ, ಬಳೆ ಮತ್ತು ಉಡಿಅಕ್ಕಿ ತುಂಬುವುದಕ್ಕೆ ಬೇಕಾದ ಸಾಮಾನುಗಳನ್ನು ತಗೊಂಡು ಹೆಣವನ್ನು ನಮ್ಮ ಜೋಗತಿ ಸಂಪ್ರದಾಯದ ಪ್ರಕಾರ ಪೂಜೆ ಮಾಡಿ ತಗೊಂಡೋಗಬೇಕು ಅಂತ ರೆಡಿಯಾದ್ವಿ. ಆಗ ಹಿಂದೂ ಧರ್ಮಕ್ಕೆ ಸೇರಿದ ಗ್ರಾಮದ ಐದಾರು ಜನರು ನನ್ನ ಹತ್ತಿರ ಬಂದು 'ಮಂಜಮ್ಮ ಈ ಹೆಣವನ್ನು ಎಲ್ಲಿಗೆ ತಗೊಂಡೋಗುತ್ತಿಯಾ? ಅಂತ ಕೇಳಿದ್ರು. ಆಗ ನಾನು ಗಾಬರಿಯಾದೆ! ಏನಪ್ಪ ಹಿಂಗ ಕೇಳ್ತಾರಲ್ಲ ಅಂತ ಯೋಚನೆ ಮಾಡಿದೆ. ಅವರಿಗೆ ಉತ್ತರ ಕೊಡಬೇಕಿತ್ತಲ್ಲ ಅದಕ್ಕೆ ಸಹಜವಾಗಿ ರುದ್ರಭೂಮಿಗೆ ಅಂದೆ. ಯಾವ ಧರ್ಮದ ರುದ್ರಭೂಮಿಗೆ ಅಂದರು. ಹಿಂದೂ ಧರ್ಮದ ರುದ್ರಭೂಮಿಗೆ ಅಂದೆ. ಅದಕ್ಕೆ ತುಪ್ಪದ ಕುಡಿಕೆ ಜೋಗಮ್ಮನ ಜನ್ಮನಾಮವೇನು ಅಂತ ಕೇಳಿದ್ರು. ನನಗೆ ಆಗ ಅವರ ಪ್ರಶ್ನೆಗಳ ಹಿಂದಿನ ಉದ್ದೇಶ ತಿಳಿತಾದ್ರು ಶ್ರೀ ಹುಸೇನ್ ಸಾಬ್ ಎನ್ನುವ ಹೆಸರನ್ನು ಹೇಳಿದೆ. ಆಗ ಏನಮ್ಮ ಹಿಂದೂ ಧರ್ಮದಲ್ಲಿ ಹುಸೇನ್‌ಸಾಬ್ ಇರುತ್ತಾನೆಯೇ? ನೀನು ಬುದ್ಧಿ ಎಲ್ಲಿ ಇಟ್ಟಿಯಾ. ಅವರಿಗೇನು ಅವರದೇ ಆದ ಸುಡುಗಾಡು ಇಲ್ಲವೇನು? ಹಿಂದೂ ಧರ್ಮದ ಕಾಡಿಗೆ ಯಾಕೆ ತರುತ್ತೀಯ? ಮುಸ್ಲಿಂ ಧರ್ಮದವರ ಕಾಡಿಗೆ ತಗೊಂಡೋಗು ಅಂದ್ರು. ಈ ಮಾತುಗಳನ್ನು ಕೇಳಿಸಿಕೊಂಡ ಅಲ್ಲಿಯೇ ನಿಂತಿದ್ದ ಮುಸ್ಲಿಮರು ಮತ್ತು ತುಪ್ಪದ ಕುಡಿಕೆ ಜೋಗ್ತೆಮ್ಮನ ಮನೆಯವರು 'ನಮ್ಮ ಕಾಡಿಗೆ ಬೇಡವೇ ಬೇಡ. ನೀವೇನಾದ್ರು ನಮ್ಮ ಕಾಡಿಗೆ ಈ ಹೆಣ ತಗೊಂಡೋದ್ರೆ ಗಲಾಟೆ ಆಗ್ತಾವು ನೋಡಿ' ಅಂದ್ರು. ನಮಗೆ ಧರ್ಮಸಂಕಟ. ಆಗಂತು ಅತ್ತುಬಿಟ್ಟೆ. ಅದೆ ಸುಡುಗಾಡಾಗ ನಾಯಿ ನರಿ ಬಿದ್ದು ಸಾಯ್ತವೆ. ಅವಕ್ಕೆ ಏನು ಕೇಳಂಗಿಲ್ಲ. ಈಗ ಈ ಎರಡು ಧರ್ಮದವರು ಹಿಂಗಂದ್ರ ಆ ಹೆಣವನ್ನು ನಾವು ಎಲ್ಲಿಗೆ ಹಾಕಬೇಕು. ಇವರನ್ನು ಜನ ಇದ್ದಾಗು ಸೇರಲಿಲ್ಲ ಸತ್ತಾಗು ಸೇರಲಿಲ್ಲ. ನಮ್ಮಂಥರು ಈ ಸಮಾಜದಲ್ಲಿ ಹುಟ್ಟುವುದೇ ತಪ್ಪಾ? ನಾವೇನು ಹಿಂಗಾಗುತ್ತೇವೆ ಅಂತ ದೇವರತ್ತಿರ ಕೇಳಿಕೊಂಡು ಬಂದಿವ್ಯಾ? ಹೋಗ್ಲಿ ಹಿಂದೂಗಳು ಮಾತ್ರ ಜೋಗತಿಯರಾಗಬೇಕಾರಿದನ್ನು ಅರ್ಥ ಮಾಡಿಕೊಳ್ಳದೆ ಅಥವಾ ನಮ್ಮಂಗಾಗಬೇಕಾ? ಮುಸ್ಲಿಮರು ಜೋಗಮ್ಮ ಆಗಬಾರದೆ? ದೇಹದಲ್ಲಾಗುವ ಬದಲಾವಣೆ ಅಥವಾ ಈ ಖಾಯಿಲೆ ಧರ್ಮವನ್ನು ಕೇಳಿಕೊಂಡು ಬರುತ್ತದೆಯೇ? ಇಂತಹ ಮಾತುಗಳನ್ನು ಕೇಳಿದ ನನಗೆ ಕೋಪ ಬಂತು. ಆಗ ಈ

ಹೆಣ ನಿಮಗೂ ಬೇಡ, ನಮಗೂ ಬೇಡ ಅಂತೀರಿ. ಹಂಗಾಗಿ ಈ ಹೆಣವನ್ನು ತಗೊಂಡೋಗಿ ಬಸ್‌ಸ್ಟ್ಯಾಂಡ್‌ನಲ್ಲಿ ಹಾಕ್ತೀನಿ. ಅದು ವಾಸನಿ ಬಂದಾಗ ಮುನ್ಸಿಪಾಲ್ಟಿಯವರು ಎಳೆದು ಕಸದ ಗುಂಡಿಗೆ ಹಾಕುತ್ತಾರೆ. ಆಕಿ ಹಣೆಬರಹದಾಗ ಹಂಗಂತ ಬರೆದಿದ್ದರೆ ಅದು ಹಂಗೆ ಆಗ್ಲಿ ಅಂತ ಬಾಯಿ ಜೋರು ಮಾಡಿದೆ. ಇನ್ನೇನು ಈಗ ಮಂಜಮ್ಮ ಜಗಳ ಮಾಡಿಬಿಡುತ್ತಾಳೆ ಅಂತ ಹೇಳಿ ನಮ್ಮ ಜೋಗಮ್ಮರೆಲ್ಲ ಸೇರಿ ನನ್ನ ಸುಮ್ಮನಿರಿಸಿಕೊಂಡು ಮನೆಗೆ ಕರಕೊಂಡು ಬಂದ್ರು.

ಹಿಂಗಾದಮ್ಯಾಗ ಹಿಂದು ಧರ್ಮದವರೆಲ್ಲ ಸೇರಿ ಪಂಚಾಯ್ತಿ ಮಾಡಿ "ಆ ಯಮ್ಮ (ಮಂಜಮ್ಮ) ಯಲ್ಲಮನ ದೇವಸ್ಥಾನ ಕಟ್ಟ್ಯಾಳ. ಮುಸ್ಲಿಂ ಪ್ಲಾಟ್‌ನಲ್ಲಿ ದೇವಾಲಯ ಕಟ್ಟುವುದಕ್ಕಾಗಿಯೇ ಕೋರ್ಟಿಗೆ ಹೋಗಿ ಬಂದಿದ್ದಾಳೆ. ನಮ್ಮ ಹಿಂದೂ ಧರ್ಮದ ಪ್ರಕಾರ ಪೂಜೆ ಮಾಡಿ ಬದುಕಿದ್ದಾಳೆ. ಹಿಂದು ಧರ್ಮವನ್ನು ಪಾಲಿಸಿ ಆರಾಧಿಸಿದ್ದಾಳೆ. ಹಂಗಾಗಿ ಆಕಿ ನಮ್ಮ ಹಿಂದು ಇದ್ದಂಗೆ. ಆಕಿಗೆ ನಾವೇ ಗೌರವ ಕೊಡಬೇಕು. ನಮ್ಮ ಧರ್ಮದವರೇ ಗೌರವ ಕೊಡಬೇಕು. ಇಲ್ಲದಿದ್ದರೆ ನಮ್ಮ ಧರ್ಮಕ್ಕೆ ನಾವೇ ಅಪಮಾನ ಮಾಡಿದಂತೆ. ಆ ಮಂಜಮ್ಮ ಹೇಳಿದ್ದೇ ಸರಿ" ಅಂತ ಮಾತನಾಡಿಕೊಂಡು ಹಿಂದೂಗಳ ಸುಡುಗಾಡಿನಲ್ಲಿ ಶವಸಂಸ್ಕಾರಕ್ಕೆ ಅವಕಾಶ ಕೊಡಬೇಕು ಅಂತ ನಿರ್ಧಾರಕ್ಕೆ ಬಂದು, ನಮ್ಮನ್ನು ಕರೆಯುವುದಕ್ಕಾಗಿ ಅವರೇ ನಮ್ಮತ್ತಿರ ಬಂದ್ರು. ಆ ಯಮ್ಮನನ್ನು ನಮ್ಮ ರುದ್ರಭೂಮಿಯಲ್ಲೇ ಶವಸಂಸ್ಕಾರ ಮಾಡುವುದು ಸರಿ ಅಂತ ಹೇಳಿ ಕರಕೊಂಡೋದ್ರು. ಇದು ಅಲ್ಲದೆ ಶವಸಂಸ್ಕಾರದ ಆಚರಣೆಗಾಗಿ ಬ್ಯಾಂಡಿನವರನ್ನು ಕರೆಯಿಸಿದ್ರು. ಪಟಾಕಿ ತಂದು ಹೊಡೆದ್ರು. ಹೆಣವನ್ನಂತೂ ಹೂವುಗಳಿಂದ ಬಾಳ ಚೆನ್ನಾಗಿ ಶೃಂಗಾರ ಮಾಡಿ ನಮಸ್ಕರಿಸುತ್ತಿದ್ದರು. ಇದ್ದಾಗ ಇಲ್ಲದ ಶೃಂಗಾರ ಸತ್ತಾಗ ತಗೊಂಡು ಏನು ಮಾಡುವುದು ಅಂತ ಅನ್ನಿಸಿತಾದ್ರು ನಮ್ಮ ಹೋರಾಟಕ್ಕೆ ತುಪ್ಪದ ಕುಡಿಕೆ ಜೋಗಮ್ಮನ ಹೆಣಕ್ಕೆ ಇಷ್ಟು ಗೌರವವಾದ್ರು ಸಿಕ್ಕಿದೆಯಲ್ಲ ಅಂತ ಅನ್ನಿಸಿ ಗೌರವಪೂರ್ವಕವಾಗಿ ಶವಸಂಸ್ಕಾರ ಮಾಡಿ ಮುಗಿಸಿದೆವು. ಆದ್ರೆ ನಾವು ಸತ್ತಾಗ ನಮ್ಮ ಹೆಣಕ್ಕೆ ಇದೇ ಸ್ಥಿತಿ ಬರಬಹುದು ಎನ್ನುವ ಆತಂಕ ನಮ್ಮ ಜೋಗತಿಯರಲ್ಲಿ ಕಾಡುತ್ತಿದೆ. ಅವರಿಗೆ ಧರ್ಮದ ಸಮಸ್ಯೆ ಬಂದ್ರೆ ನಮ್ಮ ಹೆಣಕ್ಕೆ ಬೇರೆ ತರದ ಸಮಸ್ಯೆ ಬರಬಹುದು ಎನ್ನುವ ಆತಂಕ ಗಟ್ಟಿಯಾಗಿದೆ.

## ಹೆಣ ಹೊತ್ತುಕೊಳ್ಳಿ ನಮ್ಮ ಹೊಲದಾಗ ಮಣ್ಣು ಮಾಡೋಣ

ಡಣಾಯಕನಕೆರೆ ಗ್ರಾಮದಲ್ಲಿ ಇಮಾಮ್ ಸಾಬ್ ಅನ್ನುವ ಗಂಡು ಜೋಗತಿ ಸತ್ತಾಗಲೂ ಶವಸಂಸ್ಕಾರಕ್ಕೆ ಸಂಬಂಧಿಸಿದಂತೆ ತುಪ್ಪದ ಕುಡಿಕೆ ಜೋಗಮ್ಮನಂತೆ ಸಮಸ್ಯೆಯಾಗಿತ್ತು. ಆಗಂತೂ ಹಿಂದೂ ಮತ್ತು ಮುಸ್ಲಿಮರ ಜೊತೆ ಗುದ್ದಾಡಿ ಸುಸ್ತಾಗಿದ್ದೆ. ನಾನು ಎಷ್ಟೇ ಹೇಳಿದ್ರೂ ಎರಡೂ ಧರ್ಮದವರು ನಮಗೆ ಬೇಡ ನಿಮಗೆ ಬೇಡ ಎನ್ನುವ ವಾದದಿಂದ ಹಿಂದೆ ಸರಿದಿರಲಿಲ್ಲ. ಇದನ್ನು ನೋಡಿದ ಆ ಊರಿನ ಹರಿಜನದ ಹೆಣ್ಣುಮಗಳಾದ ಶ್ರೀಮತಿ ಕುಲಿಗೆಮ್ಮ "ಹೇ ಮಂಜಮ್ಮ ಅವರತ್ತಿರ ಯಾಕೆ ವಾದ

ಮಾಡುತ್ತೀಯಾ? ಹಿಂದು ಧರ್ಮದ ರುದ್ರಭೂಮ್ಯಾಗ ಬ್ಯಾಡ, ಮುಸ್ಲಿಮ್ ಧರ್ಮದ ರುದ್ರಭೂಮ್ಯಾಗ ಬ್ಯಾಡ. ನಮ್ಮ ಗದ್ದಿ ಐತಿ. ಅಲ್ಲಿ ಯಾರನ್ನು ಕೇಳಂಗಿಲ್ಲ. ಹೊತ್ತುಕೊಳ್ಳಿ ಹೋಗೋಣ. ಆಕಿ ಮನುಷ್ಯಳಲ್ಲವೇನು? ದೇವರು ಕಟ್ಟಿಸಿಕೊಂಡಾಳಷ್ಟೆ. ಅದಕ್ಕ ಹೆಣ ಮುಂದಿಟ್ಟುಕೊಂಡು ಹಿಂಗ ವಾದ ಮಾಡೋದು ಸರಿಯಲ್ಲ. ದೇವರು ಕಟ್ಟಿಸಿಕೊಂಡಾಳಂದ್ರ ನಾವು ಆಕೆಯನ್ನು ದೇವ್ರು ಅಂತ ಪೂಜೆ ಮಾಡಬೇಕು. ನೀವು ನಮ್ಮ ಹೊಲದಲ್ಲಿ ಮಣ್ಣುಮಾಡ್ರಿ. ನಾನು ಆಕಿ ಹೆಸರಲ್ಲಿ ಗದ್ದುಗೆ ಕಟ್ಟಿ ಪೂಜೆ ಮಾಡ್ತೀನಿ ಬನ್ನಿ" ಅಂದ್ಲು. ಆವಾಗ ಊರಿನ ಜನರಿಗೆ ಅವಮಾನ ಆದಂತಾಯ್ತು. ಆ ಕಾಲದಲ್ಲಿ ಆಕಿ ಮಾಡಿದ ಪ್ರತಿರೋಧ ದೊಡ್ಡದು. ಇದು ಊರಿನ ಜನಕ್ಕೆ ಪಾಠವಾಯ್ತು. ಅದಕ್ಕ ಊರಿನ ಜನರೆಲ್ಲ ಆಯಮ್ಮನ ಹೊಲದಲ್ಲಿ ಮಣ್ಣು ಮಾಡೋದು ಬೇಡ. ಅದು ನಮ್ಮ ಊರಿನ ಮರ್ಯಾದೆ ಪ್ರಶ್ನೆ ಅಂತ ಹೇಳಿ ಹಿಂದೂ ರುದ್ರಭೂಮಿಯಲ್ಲೇ ಶವಸಂಸ್ಕಾರ ಮಾಡಿಸಿದ್ರು. ಹಿಂಗ ನಮ್ಮ ದೇಹಗಳು ಇದ್ದಾಗಲೂ, ಸತ್ತಾಗಲೂ ಜನರಿಗೆ ಬೇಡವಾಗುತ್ತವೆ. ಹಂಗಾಗಿಯೇ ಇದನ್ನು ಕರ್ಮದ ದೇಹ ಅಂತೀನಿ. ಯಾಕಂದ್ರ ತುಪ್ಪದ ಕುಡಿಕೆ ಜೋಗಮ್ಮ ಜೀವಂತವಾಗಿದ್ದಾಗ ಆಕೆಯನ್ನು ಯಾರು ಮಾತನಾಡಿಸುತ್ತಿರಲಿಲ್ಲ. ಆರೋಗ್ಯ ಸರಿ ಇಲ್ಲದಿದ್ದೂ ಒಂದೊತ್ತು ಊಟ, ಒಂದು ಲೋಟ ನೀರು ಕೊಡುತ್ತಿರಲಿಲ್ಲ. ಆದರೆ ಆಕೆ ಸತ್ತಾಗ ನಾವೆಲ್ಲ ಅವರ ಮನೆಗೆ ಹೋಗೋದ್ರೊಳಗೆ ಆತ ಕಷ್ಟಪಟ್ಟು ದುಡಿದು ಮಾಡಿಟ್ಟ ಸಾಮಾನುಗಳು, ರೊಕ್ಕವನ್ನು ತಗೊಂಡು ತಮ್ಮ ಮನೆಯಲ್ಲಿ ಇಟ್ಟುಕೊಂಡಿದ್ರು. ಆ ಸಾಮಾನುಗಳು ಬೇಕಾದ್ವು. ಆ ದೇಹ ಮಾತ್ರ ಬೇಡವಾಗಿತ್ತು. ಆಕೆ ಮಾಡಿಟ್ಟ ಹಿತ್ತಾಳೆ ಸಾಮಾನುಗಳಿಗೆ, ಆಕೆ ಬಳಸಿದ ಸಾಮಾನುಗಳಿಗೆ ಮೈಲಿಗೆ ಇರಲಿಲ್ಲ, ದೇವರು ಇರಲಿಲ್ಲ, ಧರ್ಮ ಇರಲಿಲ್ಲ. ಆತನ ದೇಹಕ್ಕೆ ಮೈಲಿಗೆ, ಜಾತಿ, ಧರ್ಮ, ದೇವರು ಇತ್ತು. ಇದು ಯಾವ ನ್ಯಾಯ? ಆತ, ಆತನ ದೇಹ ವಸ್ತುಗಳಿಗಿಂತ ಕಡೆಯಾಗಿಬಿಟ್ಟಿತೆ!.

**ಮಾಸಾಶನದ ವಯಸ್ಸು ಇಳಿಸಿದ್ರೆ ಬಾಳ ಒಳ್ಳೆಯದು**

ವಿದ್ಯಾರ್ಥಿಗಳೇ ನಿಮಗೊಂದು ಪ್ರಶ್ನೆ. ನೀವು ಐವತ್ತೆಂಟು ವರ್ಷ ಬಾಳುತ್ತೀರಿ ಎನ್ನುವ ನಂಬಿಕೆ ನಿಮಗಿದೆಯೇ?(ವಿದ್ಯಾರ್ಥಿಗಳಿಂದ ಇಲ್ಲ ಎನ್ನುವ ಉತ್ತರ ಬಂದಿತು). ಇಲ್ಲ ಅನ್ನುವುದಾದ್ರೆ ಶಿಲ ವರ್ಷದವರೆಗೆ ಮಾಸಾಶನವನ್ನೇ ನಂಬಿಕೊಂಡು ಈ ಕ್ಷೇತ್ರದಲ್ಲಿ ದುಡಿಯಬೇಕು. ವಿಶೇಷವಾಗಿ ನಮ್ಮದು ಶ್ರಮದಾಯಕ ಕಲೆ. ಮೂವತ್ತು ನಲವತ್ತು ವರ್ಷದಿಂದ ಈ ಕಲೆ ಮಾಡಿದ ನನಗೀಗ ಐವತ್ತು ವರ್ಷ. ಈಗ ಕುಂತರೆ ಯಪ್ಪಾ ಅಂತೀನಿ. ನಿಂತರೆ ಯಪ್ಪಾ ಅಂತೀನಿ. ಎರಡಕ್ಕೆ ಅಂತ ಹೊರಗಡೆ ಹೋದಾಗ ಗಿಡ ಇರುವ ಜಾಗ ಹುಡುಕಿ, ಆ ಗಿಡ ಹಿಡಕೊಂಡು ಕೂಡಬೇಕು, ಮತ್ತೆ ಆ ಗಿಡ ಹಿಡಕೊಂಡೆ ಎದ್ದೇಳಬೇಕು. ಇವತ್ತು ಅಂತಹ ನೋವನ್ನು ಅನುಭವಿಸುತ್ತೀದ್ದೇನೆ. ನಿಜ ಹೇಳಬೇಕು ಅಂದ್ರೆ ನಾನು ನೋವು ಅನುಭವಿಸುವುದನ್ನು ನೋಡಿದ ಕುಮಾರಿ

ಸಾರಾ ನನ್ನ ಜೊತೆ ಕುಳಿತು ಅತ್ತಿದ್ದಾಳೆ. ನನ್ನ ನೋವು ಏನು ಅಂತ ನನ್ನ ಜೊತೆ ಇದ್ದುಕೊಂಡು ಅರ್ಥ ಮಾಡಿಕೊಂಡಿದ್ದಾಳೆ. ಸರಕಾರದವರು ನಮ್ಮ ನೋವನ್ನು ಅರ್ಥ ಮಾಡಿಕೊಳ್ಳಲಿಲ್ಲ. ಅರ್ಥ ಮಾಡಿಕೊಳ್ಳಬೇಕು ಅಥವಾ ನಾವೆಲ್ಲ ಸೇರಿ ಅರ್ಥ ಮಾಡಿಸಬೇಕು ಎನ್ನುವುದು ನನ್ನ ಆಸೆ. ಇಲ್ಲಿ ಹೇಳಿಕೊಂಡ ನೋವುಗಳನ್ನು ಜಾನಪದ ವಿಶ್ವವಿದ್ಯಾಲಯ ಸರಕಾರದ ಗಮನಕ್ಕೆ ತರಬೇಕು. ಅಕಾಡೆಮಿ ಅಧ್ಯಕ್ಷರ ಸಭೆ–ಸಮಾರಂಭಗಳು ನಡೆಯುವಾಗ ಅಥವಾ ಅವರೆಲ್ಲ ಸೇರಿದಾಗ ಈ ವಿಷಯವನ್ನು ಅವರ ಗಮನಕ್ಕೆ ತರುವುದು ಸೂಕ್ತ ಅಂತ ಮಾನ್ಯ ಕುಲಪತಿಯವರಲ್ಲಿ ವಿನಮ್ರವಾಗಿ ಕೇಳಿಕೊಳ್ಳುತ್ತೇನೆ. ಮಾಸಾಶನದ ವಯಸ್ಸು ಇಳಿಸಿದ್ರೆ ಒಳ್ಳೆಯದು ಅನ್ನುವುದು ನನ್ನ ಆಸೆ. ಮಾಸಾಶನದ ಅರ್ಹತಾ ವರ್ಷವನ್ನು ಕನಿಷ್ಠ ನಲವತ್ತೈದರಿಂದ ನಲವತ್ತೆಂಟಕ್ಕೆ ಇಳಿಸಿದ್ರೆ ಚೆನ್ನಾಗಿರುತ್ತದೆ ಎನ್ನುವುದು ನನ್ನ ಸಲಹೆ. ಏಕೆಂದರೆ ಈಗ ಮಸಾಶನ ಸೌಲಭ್ಯ ವಯಸ್ಸಾದ ನಂತರ ಸಿಗುತ್ತದೆ. ಸರಕಾರದ ಯೋಜನೆಗಳು ಕೆಲವು ಸಾರಿ ಇಂತಹ ಅವ್ಯವಸ್ಥೆಯಿಂದ ಕೂಡಿರುತ್ತವೆ. ಇತ್ತೀಚೆಗೆ ಜಾರಿಗೆ ಬಂದಿರುವ 'ಮನಸ್ವಿನಿ ಮತ್ತು ಮೈತ್ರಿ ಯೋಜನೆ'ಯೂ ಸಹ ಇಂತಹ ಸಮಸ್ಯೆಗಳಿಂದ ಕೂಡಿದೆ. ಆ ಸೌಲಭ್ಯವನ್ನು ಪಡೆಯುವುದಕ್ಕೆ ಕಷ್ಟಪಡುತ್ತಿದ್ದೇನೆ.

**ಅಲೆಮಾರಿಗಳಿಗೆ ಸರಕಾರ ಕೇಳುವ ದಾಖಲೆಗಳು ಇರ್ತಾವ?**

ರಾಜ್ಯ ಸರಕಾರ ಮನಸ್ವಿನಿ ಮತ್ತು ಮೈತ್ರಿ ಯೋಜನೆಯನ್ನು ಜಾರಿಗೆ ತಂದಿದೆ. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಯವರಿಗೆ ಕೃತಜ್ಞತೆಗಳು. ಆದರೆ ಆ ಸೌಲಭ್ಯವನ್ನು ಪಡೆಯುವುದಕ್ಕೆ ಅನುಸರಿಸಬೇಕಾದ ನಿಯಮಗಳ ಬಗ್ಗೆ ಆತಂಕವಿದೆ. ನಮ್ಮನ್ನು ಗುರುತಿಸುವ ಕೆಲಸವನ್ನು ಆಯಾ ಗ್ರಾಮ ಪಂಚಾಯ್ತಿಯ ಲೆಕ್ಕಾಧಿಕಾರಿಗಳಿಗೆ ಕೊಟ್ಟಿದ್ದಾರೆ. ನಾನು ನಮ್ಮ ಗ್ರಾಮ ಪಂಚಾಯ್ತಿಯ ಲೆಕ್ಕಾಧಿಕಾರಿಗಳತ್ತಿರ ಹೋಗಿ ನಮಗೆ ಸೌಲಭ್ಯ ಕೊಡಿ ಅಂತ ಕೇಳಿದೆ. ಆಗ ಅವರು ನಿಮ್ಮದು ಓಟರ್ ಐ.ಡಿ. ಇದೆಯಾ? ರೇಷನ್ ಕಾರ್ಡ್ ಇದೆಯಾ? ನಿಮ್ಮದು ನಿವಾಸಿ ದೃಢೀಕರಣ ಪತ್ರ ಇದೆಯಾ? ಅಂತ ಕೇಳಿದ್ರು. ನಾನು ಇಲ್ಲ ಅಂದಾಗ ನೀವು ಯಾವ ಊರಿನವರು ಅಂತ ಗುರುತಿಸಿ ಯಾವ ಆಧಾರದ ಮೇಲೆ ಸರಕಾರಕ್ಕೆ ನಿಮ್ಮ ಬಗ್ಗೆ ಮಾಹಿತಿ ನೀಡಲಿ, ಆಧಾರಗಳು ಇಲ್ಲ ಅಂದ್ರೆ ಸೌಲಭ್ಯ ಕೊಡುವುದಾದರೆ ಹೇಗೆ? ಅಂತ ನನ್ನನ್ನೇ ಕೇಳಿದ್ರು.

ನಮ್ಮತ್ತಿರ ಇದಾವುದೂ ಇಲ್ಲ. ನಾವಾಗಲಿ, ನಮ್ಮ ಸಮುದಾಯದವರಾಗಲಿ ಒಂದೇ ಕಡೆ ವಾಸ ಮಾಡುವುದು ಕಷ್ಟ. ಈಗಿನ ಪರಿಸ್ಥಿತಿಯಲ್ಲಿ ಹಂಗೆ ವಾಸ ಮಾಡುವುದಕ್ಕೆ ಸಾಧ್ಯವೇ ಇಲ್ಲ. ನಾನು ಮಾತ್ರ ಒಂದೇ ಕಡೆ(ಗೊಲ್ಲರಹಳ್ಳಿಯಲ್ಲಿ) ವಾಸವಾಗಿದ್ದೇನೆ. ನನಗೆ ಅವತ್ತು ಕಾಳವ್ವ ಜೋಗತಿ ಗುರು ಸಿಕ್ಕರು. ಅವರು ನನ್ನ ಅಲೆಮಾರಿತನಕ್ಕೆ ಮೂಗುದಾರ ಹಾಕಿ ಕಟ್ಟಿಹಾಕಿದ್ರು. ಅಂದರೆ ನನ್ನನ್ನು ಎಲ್ಲಿಯೂ ಹೋಗುವುದಕ್ಕೆ ಬಿಡುತ್ತಿರಲಿಲ್ಲ. ಅಲ್ಲದೆ ಜೀವನಕ್ಕೆ ಒಂದಿಷ್ಟು ಆಸರೆಯನ್ನು ಕೊಟ್ಟರು.

ಹಂಗಾಗಿ ನಾನು ಒಂದೇ ಜಾಗದಲ್ಲಿ ಸ್ಥಿರವಾಗಿ ಉಳಿದುಕೊಂಡೆ. ಸ್ಥಿರವಾಗಿ ಉಳಿದುಕೊಂಡಿರುವ ಕಾರಣಕ್ಕಾಗಿಯೇ ನಾನಿರುವ ಗ್ರಾಮದಲ್ಲಿ 'ಆಶ್ರಯ ಯೋಜನೆ'ಯ ಮನೆ ಕೊಟ್ಟಿದ್ದಾರೆ. ಓಟಿಂಗ್ ಕಾರ್ಡ್, ರೇಷನ್‌ಕಾರ್ಡ್ ಕೊಟ್ಟಿದ್ದಾರೆ. ಇವೆಲ್ಲವೂ ಇದಾವೆ ಅನ್ನುವ ಕಾರಣಕ್ಕೆ ವಾಸಸ್ಥಳ ಪ್ರಮಾಣ ಪತ್ರವೂ ಸಿಗುತ್ತದೆ. ನನಗೆ ಎಲ್ಲವೂ ಇವೆ, ಆ ಸೌಲಭ್ಯಕ್ಕೆ ಅರ್ಹಳು ಅಂತ ಹೋಗಿ ಸಂಬಳ ಮಾಡಿಸಿಕೊಂಡುಬಿಟ್ಟರೆ ಉಳಿದವರು ಏನು ಅಂದುಕೊಳ್ಳುತ್ತಾರೆ. ಆಯಮ್ಮನಿಗೆ ಎಲ್ಲವು ಅದಾವು ಹಂಗಾಗಿ ಸಂಬಳ ಮಾಡಿಸಿಕೊಂಡಿದ್ದಾಳೆ. ಇಲ್ಲದವರು ನಾವೇನು ಮಾಡಬೇಕು? ಅಂತ ಉಳಿದವರು ಅಂದುಕೊಳ್ಳುತ್ತಾರೆ ಎನ್ನುವ ಕಾರಣಕ್ಕಾಗಿ ನಾನಿನ್ನು ಅರ್ಜಿ ಹಾಕಿಲ್ಲ.

ಜನ ನಮ್ಮನ್ನು ಗುರುತಿಸುವುದಕ್ಕೆ ಸರಕಾರ ಬೇರೆಯದೇ ಆದ ನಿಯಮಗಳನ್ನು ಜಾರಿಗೆ ತರಬೇಕು. ನಾಟಕೀಯವಾದದ್ದು ಯಾವುದು, ನಿಜವಾದದ್ದು ಯಾವುದು ಅಂತ ಗೊತ್ತಾಗುತ್ತದೆ. ಚಂದ್ರಪ್ಪ ಸೀರೆ ಉಟ್ಟಕೊಂಡ್ರೆ ಕೊಡುವುದಕ್ಕೆ ಆಗುತ್ತ. ಆಗಲ್ಲ. ಏಕೆಂದರೆ ಅವನ ಭಾವನೆಗಳು ಬೇರೆ, ಅವನ ನಡುಗೆ, ಕಣ್ಣುಗಳು, ತುಟಿಗಳು, ಮಾತನಾಡುವ ಮಾತುಗಳು ಬೇರೆ. ಕೇವಲ ಸೀರೆ ಹಾಕಿಕೊಂಡ್ರೆ ನಮ್ಮಂತಾಗಲಾರರು. ಹಂಗಾಗಿ ಬೇರೆಯದೇ ಆದ ನಿಯಮಗಳನ್ನು ಜಾರಿಗೆ ತರಬೇಕು. ನಮ್ಮ ಹೆಸರಿನಲ್ಲಿ ಅನ್ಯಾಯವಾಗುವುದನ್ನು ತಡೆಯುವುದಕ್ಕಾಗಿಯೇ ಸರಕಾರ ಇಂತಹ ನಿಯಮಗಳನ್ನು ಜಾರಿಗೆ ತಂದಿರಬಹುದು. ಆದರೆ ನಮ್ಮ ಸಮುದಾಯದವರನ್ನು ಅರ್ಥ ಮಾಡಿಕೊಂಡು ಯೋಜನೆ ಜಾರಿಗೆ ತಂದರೆ ಇನ್ನೂ ಸೂಕ್ತ ಅಂತ ಅನ್ನಿಸುತ್ತದೆ.

## ವಿಶ್ವವಿದ್ಯಾಲಯದಲ್ಲೂ ನಮ್ಮ ಪರಂಪರೆಯನ್ನು ಮುಂದುವರೆಯಿಸುವವರಿದ್ದಾರೆ...

ಜೋಗತಿ ಕಲೆಯನ್ನು ಉಳಿಸಿ ಬೆಳೆಸಬೇಕು ಅಂತ ಕೇಳಿಕೊಂಡರಾಯ್ತು. ಸಾಧ್ಯವಾದ್ರೆ ಕಲಿಸುವುದಕ್ಕೆ ಅವಕಾಶ ಕೊಟ್ರೆ ಕಲಿಸಿದರಾಯ್ತು ಅಂತ ಮಾನ್ಯ ಕುಲಪತಿಯವರಿಗೆ ಹೇಳೋಣ ಅನ್ನುವ ಮನಸ್ಥಿತಿಯಲ್ಲಿ ವಿಶ್ವವಿದ್ಯಾಲಯಕ್ಕೆ ಬಂದೆ. ಕಾಲಿರಿಸಿ ಸ್ವಲ್ಪ ಹೊತ್ತಿನಲ್ಲೇ ಕೆಲವು ವಿದ್ಯಾರ್ಥಿಗಳು ನನ್ನ ಹತ್ತಿರ ಬಂದ್ರು. ರಜಿಯಾ ಅನ್ನುವ ಹುಡುಗಿ ಮತ್ತು ಎನ್.ಎಂ. ಸಕ್ರಿ, ಹನುಮಂತಪ್ಪ ಬೆಂಗೇರಿ ಮುಂತಾದವರು ಬಂದು 'ನಾವು ಜೋಗತಿ ನೃತ್ಯವನ್ನು ಮಾಡುತ್ತಿದ್ದೇವೆ. ಈಗಾಗಲೇ ನಾಲ್ಕೈದು ಪ್ರದರ್ಶನ ನೀಡಿದ್ದೇವೆ' ಅಂತ ಹೇಳಿದರು. ಆಗ ನಾನು ಸುಮ್ಮನಾದೆ. ಸ್ವಲ್ಪಹೊತ್ತು ಮಾತೇ ಬರಲಿಲ್ಲ. ಅಬ್ಬಾ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದಲ್ಲೂ ನನ್ನ ಸ್ಪರ್ಧಿಗಳಿದ್ದಾರಲ್ಲ! ಅಂತ ಅನ್ನಿಸಿತು. ಸ್ಪರ್ಧೆ ಅನ್ನುವುದನ್ನು ಬೇರೆ ರೀತಿಯಲ್ಲಿ ಅರ್ಥೈಸಿಕೊಳ್ಳಬಾರದು. ಆತ್ಮೀಯವಾಗಿ ಹೇಳಿದೆಯಷ್ಟೆ.

## ಕಲೆ ಉಳಿಯಬೇಕೆನ್ನುವುದು ಸರಕಾರದ ಇಚ್ಛೆ

ಜೋಗತಿ ಕಲೆಯನ್ನು ಉಳಿಸಬೇಕು ಅನ್ನುವುದು ನನ್ನ ಇಚ್ಛೆ, ಸರಕಾರದ ಇಚ್ಛೆಯೂ ಇದಾಗಿದೆ ಎಂದುಕೊಂಡಿರುವೆ. ನಮಗೆ ಕೊಡುತ್ತಿರುವ ಕಾರ್ಯಕ್ರಮಗಳಿಂದ ಈ

ಸತ್ಯ ಗೊತ್ತಾಗುತ್ತಿದೆ. ಅಲ್ಲದೆ 'ಗುರು–ಶಿಷ್ಯ ಪರಂಪರೆ'ಯ ಯೋಜನೆಯಡಿಯಲ್ಲಿ ನನ್ನಿಂದಲೇ ಹತ್ತು ಜನರಿಗೆ ಆರು ತಿಂಗಳು ತರಬೇತಿ ಕೊಡಿಸಿದೆ. ಆ ಸಂದರ್ಭದಲ್ಲಿ ಕಲಿಸುವುದಕ್ಕಾಗಿ ೨೦೦೦ ರೂಪಾಯಿ, ಕಲಿಯುವರಿಗೆ ೫೦೦ ರೂಪಾಯಿ ಕೊಟ್ಟಿದ್ದಾರೆ. ನಾಗಪುರದವರೂ ಸಹ ಗುರು–ಶಿಷ್ಯ ಪರಂಪರೆ ಯೋಜನೆಯಡಿಯಲ್ಲಿ ಆರು ತಿಂಗಳು ನಾಲ್ಕು ಜನರಿಗೆ ಈ ಕಲೆ ಕಲಿಸಿರುವೆ. ಈ ಯೋಜನೆಯಲ್ಲಿ ಕಲಿಸುವವರಿಗೆ(ನನಗೆ) ೫೦೦೦ ರೂಪಾಯಿ, ಕಲಿಯುವವರಿಗೆ ೨೦೦೦ ರೂಪಾಯಿ ಕೊಟ್ಟಿದ್ದಾರೆ. ಇವತ್ತು ನನ್ನೊಂದಿಗೆ ನೃತ್ಯ ಮಾಡಿದ ನಾಲ್ಕು ಜನರು ಆ ಯೋಜನೆಯಲ್ಲಿ ತರಬೇತಿ ಪಡೆದವರು ನಾಲ್ಕೈದು ಜನರು ನೃತ್ಯ ಮಾಡುತ್ತಿರುವಾಗ ನೀವೆಲ್ಲ ಚಪ್ಪಾಳೆ ಹಾಕಿದ್ರಿ. ನಿಮಗೆ ಖುಷಿ ಆಗಿದ್ದಕ್ಕಾಗಿ, ನಮ್ಮ ನೃತ್ಯ ಚೆನ್ನಾಗಿ ಕಾಣಿಸಿರುವುದಕ್ಕಾಗಿ ಚಪ್ಪಾಳೆ ಹಾಕಿದ್ದೀರಿ ಅಂತ ಅಂದುಕೊಂಡಿರುವೆ. ಇವತ್ತು ವೇದಿಕೆ ತುಂಬುವಷ್ಟು ಜೋಗತಿಯರು ಅಭಿನಯಿಸಿದ್ರು. ಹಂಗಾಗಿ ವೇದಿಕೆ ಬಹಳ ಚೆನ್ನಾಗಿ ಕಾಣಿಸಿತು. ಹಿಂದಿನ ದಿನಗಳಲ್ಲಿ ಇವರ್‍ಯಾರು ನೃತ್ಯ ಮಾಡುತ್ತಿರಲಿಲ್ಲ. ಎಂತೆಂಥ ವೇದಿಕೆಯಲ್ಲೂ ನಾನೊಬ್ಬಾಕೆ ನೃತ್ಯ ಮಾಡಿರುವೆ. ಕಾಳವ್ವ ಜೋಗತಿ ಹಾಡುವುದು ನಾನು ನೃತ್ಯ ಮಾಡುವುದು ನಮ್ಮ ಪ್ರದರ್ಶನದ ವಿಧಾನವಾಗಿತ್ತು. ಹಿಂಗೆ ಸಾವಿರಾರು ವೇದಿಕೆಗಳಲ್ಲಿ ಕುಣಿದಿರುವೆ. ಹಂಗ ಕುಣಿದು ಕುಣಿದು ಇವತ್ತು ಮೊಣಕಾಲು ನೋವು ಬಂದಿವೆ. ಮೀನಗಂಟು, ಪಾದವಂತೂ ಭಾರಿ ನೋವು. ಬೆಳಿಗ್ಗೆ ಎದ್ದು ಟಾಯ್‌ಲೆಟ್‌ಗೆ ಹೋಗುವುದೇ ಕಷ್ಟ. ಊರ ಹೊರಗಡೆ ಹೋದಾಗ ಯಾವುದಾದ್ರು ಗಿಡ ಇರುವ ಜಾಗವನ್ನು ನೋಡಿ ಕುಳಿತುಕೊಳ್ಳಬೇಕು. ಏಳುವಾಗ ಆ ಗಿಡ ಇಡಕೊಂಡು ಏಳಬೇಕು. ಅಷ್ಟೊಂದು ಹಿಂಸೆ ಕೊಡುತ್ತಿವೆ ಈ ಕಾಲುಗಳು. ಅದು ಅಲ್ಲದೆ ಆವಾಗ ಒಂದೊಂದು ಕಾಲಿಗೆ ಎರಡೆರಡು ಗೆಜ್ಜೆಸರ ಕಟ್ಟಿಕೊಂಡು ಕುಣಿಯುತ್ತಿದ್ದೆ. ಯಾರಾದ್ರು ನಮಗೆ 'ಇಳೆವು' ಕೊಡುವುದಕ್ಕೆ ಅಂತ ಬಂದಾಗ ಅವರತ್ತಿರ ನಾನು ನಿಮ್ಮೂರಿಗೆ ಬಂದಾಗ ನಾಲ್ಕು ಗೆಜ್ಜೆಸರ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೆ. ಅಲ್ಲಿಗೆ ಹೋದಾಗ ಗೆಜ್ಜೆಸರ ಕೊಟ್ಟರೆ ಖುಷಿ, ಕೊಡದಿದ್ದರೆ ನಿಮ್ಮವು ರಟ್ಟೆಗಡತ್ತರ ಮೀಸೆ ಅದಾವು. ನೀವೇನು ಗಂಡಸರಲ್ಲವೇನು? ಮನಿಯಾಗ ಎತ್ತುಗಳು ಕಟ್ಟಿಲ್ಲವೇನು ಗೆಜ್ಜೆಸರ ತಂದು ಕೊಡಾಕ ನಿಮಗೇನು ದಾಡಿ ಆಗೈತಿ, ತಂದುಕೊಡ್ರಿ ಅಂತ ಬೈಯುತ್ತಿದ್ದೆ. ಎರಡೆರಡು ಗೆಜ್ಜೆಸರ ಕಟ್ಟಿಕೊಂಡು ಕುಣಿಯುವುದಂದ್ರೆ ನನಗೆ ಬಹಳ ಇಷ್ಟ. ನಾನು ಕುಣಿಯುವ ಹೆಜ್ಜೆಗಳಿಂದ ಹೊರಹೊಮ್ಮುವ ನಾದ ವೇದಿಕೆ ತುಂಬಾ ಕೇಳಿಸಬೇಕು ಅನ್ನುವುದೇ ನನ್ನ ಆಸೆಯಾಗಿತ್ತು. ಏಕೆಂದರೆ ಹಾರ್ಮೋನಿಯಂ, ತಬಲಗಳ ನಾದಕ್ಕೆ ತಕ್ಕಂತೆ ನಾನು ಹೆಜ್ಜೆ ಹಾಕುತ್ತೇನೆ. ಇಲ್ಲಿಯ ಹೆಜ್ಜೆಗಳು ಬಾಳ ಚೆಂದ. ಜಾನಪದ, ಪೌರಾಣಿಕ ಮತ್ತು ಆಧುನಿಕ ಲಯಗಳನ್ನು ಬೆರೆಸಿಕೊಂಡಿ ರುವಂಥವುಗಳು. ಆ ನೃತ್ಯದಿಂದ ಬರುವ ಗೆಜ್ಜೆಗಳ ಶಬ್ದದಲ್ಲಿ ನಾನು ಹಲವು ಬಾರಿ ಕಳೆದುಹೋಗಿದ್ದೇನೆ. ನೀವು ನಮ್ಮ ಕಾರ್ಯಕ್ರಮದಲ್ಲಿ ನಮ್ಮ ವಿದ್ಯಾರ್ಥಿಗಳಿಗೆ ಕುಣಿದು ತೋರಿಸಬೇಕು ಅಂತ ಪ್ರೊ. ಸ.ಚಿ. ರಮೇಶ ಅವರು ಇಪ್ಪತ್ತು ದಿನದ ಹಿಂದೆ

ಫೋನ್‌ನಲ್ಲಿ ಹೇಳಿದ್ದರು. ಅದಕ್ಕಾಗಿಯೇ ಬೆಳಿಗ್ಗೆ ಮತ್ತು ಸಾಯಂಕಾಲ ವಾಕ್ ಹೋಗುವುದಕ್ಕೆ ಆರಂಭಿಸಿದೆ. ಆದರೆ ನೃತ್ಯ ತಯಾರಿ ತರಬೇತಿ ಮಾಡಲಿಲ್ಲ. ನಾನು ನೃತ್ಯ ಮಾಡುವುದನ್ನು ಬಿಟ್ಟು ಮುಂದಿನ ತಿಂಗಳು ೨೮ನೇ ತಾರೀಖಿಗೆ ಒಂದು ವರ್ಷ ಆಗುತ್ತದೆ. ಕಾರ್ಯಕ್ರಮಗಳು ಇಲ್ಲದಿರುವುದಕ್ಕೆ ನೃತ್ಯ ಮಾಡಿಲ್ಲ. ಅಲ್ಲದೆ ಭಿಕ್ಷೆಯನ್ನು ನಿಲ್ಲಿಸಿರುವೆ. ಇತ್ತೀಚಿನ ದಿನಗಳಲ್ಲಿ ಈ ಕಲೆಯನ್ನು ಕೇಳುವವರು ಇಲ್ಲದಂತಾಗುತ್ತಿದೆ. ವೇದಿಕೆಗೆ ಸೀಮಿತವಾದ ಕಲೆ ಆಗುತ್ತದೆ.

ಇಂತಹ ಪರಿಸ್ಥಿತಿಯಲ್ಲೂ ಸರಕಾರ ಕಲೆಯನ್ನು ಕಲಿಸುವ ಕಾರ್ಯ ಮಾಡುತ್ತಿರುವುದು ಧೈರ್ಯದ ಸಂಗತಿಯೇ ಸರಿ. ಆ ಯೋಜನೆಯಲ್ಲಿ ಕಲೆ ಕಲಿತವರು ಈಗ ನನ್ನ ಭಾರವನ್ನು ಇಳಿಸಿದ್ದಾರೆ ಮತ್ತು ಈ ನೃತ್ಯಕ್ಕೆ ಮೆರುಗನ್ನು ಕೊಟ್ಟಿದ್ದಾರೆ. ಮುಂದೆಯೂ ಕೊಡುತ್ತಾರೆ ಅನ್ನುವ ಬಲವಾದ ನಂಬಿಕೆ ನನಗಿದೆ. ಅವರಿಗೆ ಒಳ್ಳೆಯ ಬೆಂಬಲ ಸಿಗಬೇಕು ಅಷ್ಟೆ. ಕಲೆ ಕಲಿತವರಿಗೂ ಮತ್ತು ಸರಕಾರದವರಿಗೂ ಧನ್ಯವಾದಗಳು. ಅಲ್ಲದೆ ಈ ಕಾರ್ಯಕ್ರಮಕ್ಕೆ ಕರೆಯಿಸಿ, ಸನ್ಮಾನ ಮಾಡಿ ನನ್ನ ಜೀವನಾನುಭವಗಳನ್ನು ಹೇಳಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿರುವ ಮಾನ್ಯ ಕುಲಪತಿಯವರಿಗೆ, ಮಾನ್ಯ ಕುಲಸಚಿವರಿಗೆ, ಮಾನ್ಯ ಮೌಲ್ಯಮಾಪನ ಕುಲಸಚಿವರು ಮತ್ತು ಈ ಕಾರ್ಯಕ್ರಮ (ವಿಸ್ತರಣೆ ಹಾಗೂ ಸಲಹಾ ಕೇಂದ್ರ)ದ ನಿರ್ದೇಶಕರಿಗೆ, ಹಿರಿಯ ಸಂಶೋಧನಾಧಿಕಾರಿಗಳಿಗೆ ಹಾಗೂ ತಾಳ್ಮೆಯಿಂದ ನನ್ನ ಗೋಳಿನ ಕತೆಯನ್ನು ಕೇಳಿದ ನಿಮ್ಮೆಲ್ಲರಿಗೂ ಮತ್ತೊಮ್ಮೆ ನನ್ನ ನಮಸ್ಕಾರಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುವೆ.

□□

೩

# ಮತ್ತೊಂದಿಷ್ಟು ಮಾತುಕತೆ

## ೧. ಮಂಜಮ್ಮನೊಂದಿಗೆ ಮತ್ತೊಂದಿಷ್ಟು ಮಾತುಗಳು

ಪಟ್ಟಾಂಗದಲ್ಲಿ ಅನಾವರಣ ಮಾಡಿದ ಆತ್ಮಕಥೆಯ ಮುಂದುವರಿಕೆಯ ಭಾಗವಾಗಿ ಮಂಜಮ್ಮ ಜೋಗತಿಯವರನ್ನು ಸಂದರ್ಶನ ಮಾಡಲಾಯಿತು.

➢ **ನಿಮಗೆ ಯಲ್ಲಮ್ಮನ ನಾಟಕದಲ್ಲಿ ಪರಶುರಾಮನ ಪಾತ್ರ ಇಷ್ಟ ಅಂತ ಹೇಳಿದ್ದೀರಿ. ಆದರೆ ಇವತ್ತು ಯಲ್ಲಮ್ಮನ ಪಾತ್ರ ಮಾಡುತ್ತಿರುವಿರಲ್ಲ ಯಾಕೆ?**

ನಿಜ. ನನಗೆ ಪರಶುರಾಮನ ಪಾತ್ರ ಬಹಳ ಇಷ್ಟ. ಆದರೆ ಇವತ್ತು ಆ ಪಾತ್ರವನ್ನು ಮಾಡಲೇಬೇಕೆಂದು ಹಠ ಮಾಡುವ ಸ್ಥಿತಿಯಲ್ಲಿ ನಾನಿಲ್ಲ. ಏಕೆಂದರೆ ಇವತ್ತು ನಮ್ಮ ತಂಡದಲ್ಲಿ ಯಲ್ಲಮ್ಮನ ಪಾತ್ರ ಮಾಡುವುದಕ್ಕೆ ಯಾರು ಮುಂದೆ ಬರುತ್ತಿಲ್ಲ. ಆ ಪಾತ್ರವನ್ನು ಮಾಡುವವರು ಕನಿಷ್ಠ ನಲವತ್ತೈದು ಹಾಡುಗಳನ್ನಾದರೂ ಹಾಡಲೇಬೇಕು. ಅದು ಹೈ ಪಿಚ್‌ನಲ್ಲಿ ಹಾಡಬೇಕು ಎನ್ನುವುದು ನಮ್ಮ ನಾಟಕದ ಸಂಪ್ರದಾಯ. ಕಾಳವ್ವ ಜೋಗತಿ ಹೈ ಪಿಚ್‌ನಲ್ಲಿ ಹಾಡುವ ಸಂಪ್ರದಾಯವನ್ನು ಹಾಕಿ ಹೋಗಿದ್ದಾಳೆ. ಇಲ್ಲಿನ ಜನರೆಲ್ಲ ಕಾಳವ್ವನ ಹಾಡುಗಾರಿಕೆಯನ್ನು ಮನದಲ್ಲಿಟ್ಟುಕೊಂಡು ನಮ್ಮ ಕಲೆಯನ್ನು ಅಳೆಯುತ್ತಿದ್ದಾರೆ. ಹಿರಿಯರಲ್ಲಂತೂ ಇದನ್ನು ಬಿಡಿಸೋದಕ್ಕೆ ಸಾಧ್ಯವಿಲ್ಲ ಎನ್ನುವಷ್ಟರ ಮಟ್ಟಿಗೆ ಗಟ್ಟಿಯಾಗಿದೆ. ನನಗೆ ಈ ಬಗೆಯ ಪ್ರಜ್ಞೆ ಮತ್ತು ಭಯ ಆರಂಭದಿಂದಲೂ ಇದೆ. ಕಾಳವ್ವ 'ಹಾಡುಗಳನ್ನು ಕಲಿಸಿಕೊಡುತ್ತೇನೆ, ನೀನು ಹಾಡು. ನೀನು ಹಾಡದಿದ್ದರೆ ಈ ಪರಂಪರೆ ಇಲ್ಲಿಗೆ ಮುಕ್ತಾಯವಾಗುತ್ತದೆ' ಎನ್ನುವ ಆತಂಕವನ್ನು ವ್ಯಕ್ತಪಡಿಸುತ್ತಲೇ ಹಠ ಮಾಡಿದ್ರು. ಆರಂಭದಲ್ಲಿ ನಾನು ಹಾಡುಗಾರಿಕೆಯನ್ನು ಕಲಿಯುವುದಕ್ಕೆ ಒಪ್ಪಿರಲಿಲ್ಲ. "ನೋಡು ನಾನು ಹಾಡಿದಂತೆ ನೀನು ಹಾಡಬೇಕಾಗಿಲ್ಲ. ಎಲ್ಲರೂ ಒಂದೇ ಸಮನೆ ಊಟ ಮಾಡುತ್ತಾರೇನು? ಅವರವರ ಹೊಟ್ಟೆ ಎಷ್ಟು ಇರುತ್ತದೆಯೋ ಅಷ್ಟು ಉಣ್ಣುತ್ತಾರೆ. ಹಂಗೆ, ನಿನ್ನ ಕಂಠದ ಶಕ್ತಿ ಎಷ್ಟು ಐತೋ ಅಷ್ಟು ಮಾತ್ರ ಹಾಡು" ಅಂತ ಹಠ ಹಿಡಿದಳು. ಆಕೆಯ ಬಲವಾದ ಒತ್ತಾಯ ಮತ್ತು ಕಲಾ ಪ್ರೀತಿಗಾಗಿ ಆಕೆಯಿಂದ ಕಲಿತು ಯಲ್ಲಮ್ಮನ ಪಾತ್ರವನ್ನು ಮಾಡುತ್ತಿರುವೆ. ಈಗಲೂ ಜನರು ಕಾಳಮ್ಮ ಹಾಡಿದಂಗ ಮಂಜಮ್ಮ ಹಾಡುತ್ತಿಲ್ಲ ಅಂತಾರೆ. ಇದು ನನಗೆ ಗೊತ್ತಿರುವ ಸತ್ಯ. ನನಗೆ ಹಾಡುಗಾರಿಕೆ ಅಷ್ಟು ಇಷ್ಟವಿಲ್ಲದ ಕ್ಷೇತ್ರ. ಹಾಡುಗಾರಿಕೆಗಿಂತ ಅಭಿನಯ ಮತ್ತು ನೃತ್ಯ ನನಗಿಷ್ಟ.

ಇದು ಕಾಳವ್ವನಿಗೂ ಗೊತ್ತಿತ್ತು. ಏಕೆಂದರೆ ನಮ್ಮ ನಾಟಕಗಳನ್ನು ನೋಡಿದ ಜನರು 'ಕಾಳವ್ವ ಹಾಡಿದಂಗ ಮಂಜಮ್ಮ ಹಾಡಂಗಿಲ್ಲ. ಮಂಜಮ್ಮ ಅಭಿನಯಿಸಿದಂಗ ಕಾಳವ್ವ ಅಭಿನಯಿಸಂಗಿಲ್ಲ' ಅಂತ ಹೇಳಿರುವುದನ್ನು ಇಬ್ಬರು(ಕಾಳವ್ವ ಮತ್ತು ನಾನು) ಕೇಳಿದ್ದೇವೆ. ಆ ಬಗ್ಗೆ ಕುಳಿತು ಮಾತನಾಡಿದ್ದೇವೆ. ಸತ್ಯ ಗೊತ್ತಿದ್ದು ಈ ಪಾತ್ರವನ್ನೇ ಮಾಡುತ್ತಿರುವುದಕ್ಕೆ ಕಾರಣವೆಂದರೆ ಹಿಂದೆ ಹೇಳಿದಂತೆ ನಮ್ಮ ತಂಡದಲ್ಲಿ ಈ ಪಾತ್ರವನ್ನು ಮಾಡುವವರು ಯಾರು ಇಲ್ಲ. ಹೊಸಬರಂತೂ ಈ ಕ್ಷೇತ್ರಕ್ಕೆ ಬರುತ್ತಿಲ್ಲ. ನಮ್ಮಂತಾದವರು(ಈ ಮಾತು ಕೇವಲ ದೈಹಿಕ ಸ್ಥಿತಿಗೆ ಅನ್ವಯವಾಗುತ್ತದೆ ಹೊರತು ಮಂಜಮ್ಮನ ಜೋಗತಿ ವೃತ್ತಿಗೆ ಅನ್ವಯವಾಗುವುದಿಲ್ಲ) ಬೆಂಗಳೂರು, ಬಾಂಬೆಗೆ ಹೋಗುತ್ತಾರೆ. ಈ ಕ್ಷೇತ್ರಕ್ಕೆ ಬಂದರೆ ಹಣ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವ ಸತ್ಯ ಎಲ್ಲರಿಗೂ ತಿಳಿದಿದೆ. ಜನರಲ್ಲಿ ಆಸ್ತಿ ಮಾಡಬೇಕು, ಹಣ ಮಾಡಬೇಕು ಎನ್ನುವ ಆಸೆ ಹೆಚ್ಚಾದಂತೆ ನಮ್ಮವರಲ್ಲೂ ಅಂತಹ ಆಸೆಗಳು ಹೆಚ್ಚಾಗಿವೆ. ಅದು ಮನುಷ್ಯನ ಸಹಜ ಗುಣವಲ್ಲವೆ? ನಾನು ಇದನ್ನು ಮೀರಿ ಗುರುಗಳ ಆಸೆಯನ್ನು ಈಡೇರಿಸಬೇಕೆಂಬ ಹಠದಿಂದ ಮತ್ತು ಕಲಾಪ್ರೀತಿ, ಗೌರವದಿಂದ ಈ ಕ್ಷೇತ್ರದಲ್ಲಿ ಮುಂದುವರೆಯುತ್ತಿರುವೆ. ನನ್ನ ತಂಡದವರೂ ಸಹ ನನಗೆ ಬೆಂಬಲ ನೀಡುತ್ತಿದ್ದಾರೆ. ಹಾಗಾಗಿ ಅವರಿಗೆ ಎಷ್ಟು ಧನ್ಯವಾದಗಳನ್ನು ಹೇಳಿದರೂ ಸಾಲದು.

➢ **ನೃತ್ಯ ಇಷ್ಟವೆನ್ನುತ್ತಿರುವಿರಿ? ಅದನ್ನು ಪೂರೈಸಿಕೊಳ್ಳುವುದಕ್ಕಾಗಿ ಯಾವುದಾದರು ಯೋಜನೆಗಳನ್ನು ಹಾಕಿಕೊಂಡಿರುವಿರಾ?**

ಇಲ್ಲ. ಯಾವುದೇ ಯೋಜನೆಗಳನ್ನು ಹಾಕಿಕೊಂಡಿಲ್ಲ. ಯೋಜನೆಗಳನ್ನು ಹಾಕಿ ಕೊಳ್ಳುವಷ್ಟು ಆರ್ಥಿಕ ಶಕ್ತಿ ನನ್ನಲ್ಲಿಲ್ಲ. ಯಾರಾದ್ರು ಮದುವೆಗೆ ಕರೆದರೆ ಅವರಿಗೆ 'ಮುಯ್ಯಿ' ಹಾಕುವ ಶಕ್ತಿಯೂ ನನಗಿಲ್ಲ. ಆದರೆ ಕಲಾ ಕನಸುಗಳಿವೆ. ಈ ನನ್ನ ಕನಸುಗಳನ್ನು ಈಡೇರಿಸುವ ಜನರು ನನ್ನ ಜೊತೆಯಲ್ಲಿದ್ದಾರೆ. ಅದು ನನ್ನ ಪುಣ್ಯ. ಈಗಾಗಲೇ ಇಳಕಲ್ಲಿನ ಶ್ರೀಮತಿ ಉಮಾದೇವಿಯಕ್ಕ ನಮ್ಮಿಂದ(ಜೋಗತಿಯರಿಂದ) 'ಮೋಹಿನಿ ಬಸ್ಮಾಸುರ ನಾಟಕ'ವನ್ನು ಮಾಡಿಸುತ್ತಿದ್ದಾಳೆ. ಈಗ ಹತ್ತಾರು ಪ್ರದರ್ಶನ ಗಳಾಗಿವೆ. ಒಳ್ಳೆಯ ಹೆಸರು ಬಂದಿದೆ. ಇದನ್ನು ನೋಡಿದ ಪತ್ರಕರ್ತರು ಜನರಲ್ಲಿ ಅಚ್ಚರಿಗೊಳಿಸಿದೆ ಅಂತ ಪತ್ರಿಕೆಗಳಲ್ಲಿ ಬರೆದಿದ್ದಾರೆ. ಅವರಂದಂತೆ ಅದು ನಿಜವಾಗಲೂ ಅಚ್ಚರಿ ತಂದಿದೆ. ಆ ನಾಟಕದಲ್ಲಿ ನಾನು ಬಸ್ಮಾಸುರ ಪಾತ್ರವನ್ನು ಮಾಡುತ್ತಿರುವೆ. ಅಲ್ಲಿ ನನ್ನ ಅಭಿನಯವನ್ನು ತೋರಿಸುವುದಕ್ಕೆ ಸಾಕಷ್ಟು ಅವಕಾಶ ಸಿಕ್ಕಿದೆ. ಅದನ್ನು ಸಮರ್ಥವಾಗಿ ಬಳಸಿಕೊಳ್ಳುತ್ತಿರುವೆ ಎನ್ನುವ ನಂಬಿಕೆ ನನ್ನದು. ಈ ಪಾತ್ರದ ಅಭಿನಯ ವನ್ನು ನೋಡಿ ಸಾಕಷ್ಟು ಜನ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಇದು ಅಲ್ಲದೆ ಉಮಕ್ಕನ ನಿರ್ದೇಶನದಲ್ಲಿ 'ರಕ್ತರಾತ್ರಿ' ನಾಟಕದ ತರಬೇತಿ ನಡೆದಿದೆ. ಈ ನಾಟಕದಲ್ಲಿ ಭೀಮನ ಪಾತ್ರ ಮಾಡುತ್ತಿರುವೆ. 'ಶ್ರೀಕೃಷ್ಣ ಸಂಧಾನ' ಬಯಲಾಟವನ್ನು ಮಾಡಿಸಬೇಕೆಂದು

ಕೊಂಡಿದ್ದಾರೆ. ಅದಕ್ಕಾಗಿ ಮಾನಸಿಕ ಸಿದ್ಧತೆ ನಡೆಯುತ್ತಿದೆ. ಶ್ರೀಮತಿ ನಾಗರತ್ನಮ್ಮಕ್ಕನೂ ಸಹ ನಮ್ಮ ತಂಡಕ್ಕಾಗಿಯೇ ರಂಗಭೂಮಿಗೆ ಸಂಬಂಧಿಸಿದ ಅನೇಕ ಹೊಸ ಹೊಸ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಈಗಾಗಲೇ ನಮ್ಮೆಲ್ಲರನ್ನು ಸೇರಿಸಿ ಒಂದು ಸುತ್ತಿನ ಮಾತುಕತೆಯನ್ನು ಮುಗಿಸಿದ್ದಾರೆ. ಅವರ ಅನಾರೋಗ್ಯದ ನಿಮಿತ್ತ ಯೋಜನೆಗಳು ನಿಲುಗಡೆಯಾಗಿವೆ. ಅವರ ಆರೋಗ್ಯವನ್ನು ಆದಷ್ಟು ಬೇಗ ಸರಿಪಡಿಸಲೆಂದು ಆ ಯಲ್ಲಮ್ಮನಲ್ಲಿ ಬೇಡಿಕೊಳ್ಳುತ್ತೇನೆ.

ಇದು ಅಲ್ಲದೆ ಮರಿಯಮ್ಮನಹಳ್ಳಿ ಶ್ರೀಮಾರುತಿ ಕಲಾರಂಗದಲ್ಲಿ ನಾನು ಸಕ್ರಿಯ ಸದಸ್ಯಳಾಗಿರುವೆ. ಅವರ ಪ್ರತಿಯೊಂದು ನಾಟಕದಲ್ಲೂ 'ರಾಜನರ್ತಕಿ'ಯಾಗಿ ಕೆಲಸ ಮಾಡುತ್ತಿರುವೆ. ಆ ತಂಡದಲ್ಲಿ ವಯಸ್ಸಾದವರು ಹೆಚ್ಚಾಗಿದ್ದಾರೆ. ಹಾಡು ಹೇಳಿ ಅಭಿನಯಿಸುವುದು ಅವರಿಂದ ಕಷ್ಟವಾಗುತ್ತಿದೆ. ಅವರು ಹಾಡು ಹೇಳಿದಾಗ ನಾನು ಅಭಿನಯಿಸುತ್ತೇನೆ. ವರ್ಷಕ್ಕೆ ಒಂದೆರಡರಂತೆ ಸುಮಾರು ಇಪ್ಪತ್ತೈದಕ್ಕೂ ಹೆಚ್ಚು ಬಾರಿ 'ಬಭ್ರುವಾಹನ ಕಾಳಗ'ದಲ್ಲಿ ಅಭಿನಯಿಸಿರುವೆ. ಜೋಗತಿಯರಿಗೆ ನೃತ್ಯ ತರಬೇತಿ ನೀಡುತ್ತಿರುವೆ. ಈಗಾಗಲೆ ಸರಕಾರದ ಎರಡು ಯೋಜನೆಗಳನ್ನು ಮುಗಿಸಿರುವೆ. ಹಂಗಾಗಿ ಜೋಗತಿ ಕಲೆ ಮತ್ತು ಮರಿಯಮ್ಮನಹಳ್ಳಿಯ ರಂಗನಟರಿಂದಾಗಿ ನೃತ್ಯದ ಅವಕಾಶಗಳು ಸಿಗುತ್ತಿವೆ. ಇವುಗಳಲ್ಲೇ ನೃತ್ಯದ ಆಸೆಯನ್ನು ತೃಪ್ತಿ ಪಡಿಸಿಕೊಳ್ಳುತ್ತಿರುವೆ.

➢ **ಜೋಗತಿ ಕಲೆ ಉಳಿಸಬೇಕೇ? ಹೇಗೆ ಉಳಿಸುವುದಕ್ಕೆ ಸಾಧ್ಯ?**

ನನಗೆ ಸರಕಾರ ಪ್ರಶಸ್ತಿ ಕೊಟ್ಟಿದೆ. ಹಂಗಾಗಿ ಸುಮ್ಮನೆ ಕೂಡಬಾರದು. ಸುಮ್ಮನೆ ಕುಳಿತರೆ ಆ ಪ್ರಶಸ್ತಿಗಳಿಗೆ ಬೆಲೆ ಇರುವುದಿಲ್ಲ. ಅಲ್ಲದೆ ಈ ಕಲೆ ಉಳಿವಿಗಾಗಿ ಅನ್ನುವುದಕ್ಕಿಂತ ಮಂಗಳಮುಖಿಯರ, ಗಂಡುಜೋಗತಿಯರ ಉಳುವಿಗಾಗಿ, ಅಸ್ತಿತ್ವಕ್ಕಾಗಿ ಕೆಲಸ ಮಾಡಬೇಕೆಂದಿರುವೆ. ಇದಕ್ಕಾಗಿ ನಮ್ಮದೇಯಾದ ತಂಡ ಕಟ್ಟಬೇಕು. ಈ ಕ್ಷೇತ್ರಕ್ಕೆ ಹೊಸ ಹೊಸ ತೃತೀಯಲಿಂಗದವರನ್ನು ಕರೆತರಬೇಕು. ಅದಕ್ಕಾಗಿ ಹುಡುಕಾಟ ಮಾಡುತ್ತಿದ್ದೇನೆ. ಬಳ್ಳಾರಿಯಲ್ಲಿ ಓದಿದವರು ಮತ್ತು ಡ್ಯಾನ್ಸ್ ಕಲಿತ ತೃತೀಯ ಲಿಂಗದವರಿದ್ದಾರೆ. ಅವರನ್ನು ಈ ಕಲಾ ಕ್ಷೇತ್ರಕ್ಕೆ ಕರೆತರಬೇಕೆನ್ನುವ ಆಸೆ ನನ್ನಲ್ಲಿದೆ. ಮೊನ್ನೆ ರಾಯಚೂರಿನಲ್ಲಿ ನಾಟಕ ಪ್ರದರ್ಶನಕ್ಕೆ ಹೋದಾಗ 'ಬಳ್ಳಾರಿ ಜಿಲ್ಲೆಯ ಮಂಗಳಮುಖಿಯರಿಂದ ಮೋಹಿನಿ ಬಸ್ಮಾಸುರ ನಾಟಕ ಪ್ರದರ್ಶನ' ಅಂತ ಬ್ಯಾನರ್ ಹಾಕಿದ್ದರು. ನಾವಾಡುವ ಮೋಹಿನಿ ಬಸ್ಮಾಸುರ ನಾಟಕದಲ್ಲಿ ಹನ್ನೆರಡರಿಂದ ಹದಿಮೂರು ಪಾತ್ರಗಳಿವೆ. ಈಗ ಏಳು ಪಾತ್ರಗಳನ್ನು ಮಾತ್ರ ನಾವು(ಗಂಡು ಜೋಗತಿಯರು) ಮಾಡುತ್ತಿದ್ದೇವೆ. ಉಳಿದ ಪಾತ್ರಗಳನ್ನು ಇಳಕಲ್ಲು ಉಮಾರಾಣಿ, ಆದೋನಿ ವೀಣಾ, ಶಿವಕುಮಾರಿ ಮುಂತಾದವರು ಮಾಡುತ್ತಿದ್ದಾರೆ. ವೇದಿಕೆಯ ಬ್ಯಾನರ್ ನೋಡಿದ ಪರಿಚಿತರಲ್ಲಿ ನೀವು ಯಾವಾಗ ಮಂಗಳಮುಖಿಯರಾದ್ರಿ? ಅಂತ ಉಮಕ್ಕನನ್ನು ಛೇಡಿಸಿದ್ರು. ಅದು ಇರಲಿ, ನಮ್ಮದೇಯಾದ(ಗಂಡುಜೋಗತಿಯರದು) ಒಂದು ತಂಡ

ಕಟ್ಟಬೇಕು ಎನ್ನುವ ಆಸೆ ಇದೆ. ಇದು ಕೇವಲ ನನ್ನ ಆಸೆಯಲ್ಲ, ಉಮಕ್ಕನ ಆಸೆಯೂ ಹೌದು. ಹಂಗಾಗಿ ಹದಿನೈದರಿಂದ ಇಪ್ಪತ್ತು ಮಂಗಳಮುಖಿಯರಿರುವ ಒಂದು ತಂಡವನ್ನು ಕಟ್ಟಬೇಕು ಎನ್ನುವ ಯೋಚನೆ ಬಲವಾಗಿದೆ. ಇದಕ್ಕಾಗಿ ಹುಡುಕಾಟ ನಡೆದಿದೆ. ಆಸಕ್ತರನ್ನು ಒಟ್ಟುಗೂಡಿಸಿ ನಾಟಕ ತರಬೇತಿ ನೀಡಿ ಪ್ರದರ್ಶನಕ್ಕೆ ಅನುವು ಮಾಡಿಕೊಡಬೇಕು. ಅವರಿಗೆ ಕಲೆಯಿಂದ ತುತ್ತು ಅನ್ನ ಮತ್ತು ಗೌರವ ಸಿಗುವಂತಾಗ ಬೇಕು. ಬದುಕಿನ ಭದ್ರತೆ ಕೊಡಬೇಕು. ಜೋಗತಿಯರಿಗೆ ಆಧುನಿಕ ತಂತ್ರಜ್ಞಾನದ ತರಬೇತಿ ಕೊಡಿಸಬೇಕೆಂದಿರುವೆ. ನನ್ನನ್ನೇ ತಗೊಳ್ಳಿ ಯಾರಾದ್ರು ಬಂದು ಪತ್ರ ಬರೆಯಿರಿ ಅಂದ್ರೆ ನಾನು ಬರೆಯುವುದಿಲ್ಲ; ಬೇರೆಯವರಿಂದ ಬರೆಸುತ್ತೇನೆ. ಇಂಟರ್‌ನೆಟ್, ಈಮೇಲ್ ಅಂತಾರೆ. ಅವ್ಯಾವು ನನಗೆ ಗೊತ್ತಿಲ್ಲ. ಅಂತಹ ಜ್ಞಾನವಿದ್ದವರನ್ನು ಕರೆಯಿಸಿ ನಮ್ಮ ಸಮುದಾಯದವರಿಗೆ ಈ ಜ್ಞಾನವನ್ನು ಕೊಡಿಸಬೇಕು ಎಂದುಕೊಂಡಿರುವೆ. ಇದಕ್ಕೆ ಡಾ. ಸೋಮೇಶ ಉಪ್ಪಾರ್ ಅವರು ಸಾಥ್ ನೀಡುತ್ತೇನೆಂದು ಭರವಸೆ ಕೊಟ್ಟಿರುವುದು ಮತ್ತಷ್ಟು ಬಲ ತಂದಿದೆ. ಅಲ್ಲದೆ ಎಲ್ಲ ವರ್ಗದ ಜನರು ಇವರ ಕಲೆಯನ್ನು ಇಷ್ಟಪಡಬೇಕು. ಇದಕ್ಕೆ ನಾಟಕವನ್ನು ಆಯ್ಕೆ ಮಾಡಿಕೊಂಡಿದ್ದೇವೆ. ಈ ನಾಟಕದ ಜೊತೆಗೆ ಜೋಗತಿ ಕಲೆಯನ್ನು ಕಲಿಸಬಹುದು. ಆಗ ಜೋಗತಿ ಕಲೆ ಜೀವಂತವಾಗುತ್ತದೆ ಎನ್ನುವ ಭರವಸೆ. ಇದಕ್ಕಾಗಿ ಜೋಗತಿಯರಿಗಾಗಿಯೇ ಪ್ರತ್ಯೇಕವಾದ ರಂಗತರಬೇತಿಯನ್ನು ಆರಂಭಿಸುವ ಅವಶ್ಯಕತೆಯಿದೆ. ಸರಕಾರಕ್ಕೆ ರಂಗ ತರಬೇತಿ ಕೇಂದ್ರ ತೆರೆಯುವುದಕ್ಕಾಗಿ ಅರ್ಜಿ ಕೊಡಬೇಕೆಂದಿರುವೆ. ಜೋಗತಿಯರೆಲ್ಲ ಸೇರಿ ಈ ನಿಟ್ಟಿನಲ್ಲಿ ಕಾರ್ಯ ಮುಂದುವರೆಸುತ್ತಿದ್ದೇವೆ.

➢ **ನೀವು ಯಾವ–ಯಾವ ಕಥೆಗಳನ್ನು ಮಾಡುತ್ತೀರಿ? ಈತನಕ ಯಾವ ಕಥೆಯನ್ನು ಹೆಚ್ಚುಬಾರಿ ಪ್ರದರ್ಶನ ಮಾಡಿದ್ದೀರಿ? ಆ ಕಥೆಗಳಲ್ಲಿ ನಿಮಗೆ ಇಷ್ಟವಾಗುವ ಪಾತ್ರ ಯಾವುದು? ನೀವು ಮಾಡುವ ಪಾತ್ರಗಳಲ್ಲಿ ಜನರು ಯಾವುದನ್ನು ಇಷ್ಟಪಡುತ್ತಾರೆ?**

ರೇಣುಕ ಯಲ್ಲಮ್ಮ, ಬಡವಿ ಲಕ್ಕಮ್ಮ, ಮೋಹಿನಿ ಬಸ್ಮಾಸುರ, ಬಬ್ರುವಾಹನ ಕಾಳಗ, ಗಿರಿಜಾ ಕಲ್ಯಾಣ ಕಥೆಗಳನ್ನು ಮಾಡಿದ್ದೇನೆ. ಈಗ ರಕ್ತರಾತ್ರಿ, ಶ್ರೀಕೃಷ್ಣ ಸಂಧಾನ ನಾಟಕಗಳ ತರಬೇತಿ ನಡೆದಿದೆ. ಇವುಗಳಲ್ಲಿ ಯಲ್ಲಮ್ಮ ನಾಟಕವನ್ನು ಹೆಚ್ಚು ಬಾರಿ ಮಾಡಿದ್ದೇವೆ. ನನ್ನ ತಾಯಿ(ಕಾಳವ್ವ ಜೋಗತಿ) ಇದ್ದಾಗ ಸುಮಾರು ಎರಡು ಸಾವಿರಕ್ಕೂ ಹೆಚ್ಚು ಆಟಗಳನ್ನು ಮಾಡಿದ್ದೇವೆ. ಅವರು ತೀರಿಕೊಂಡ ನಂತರ ಕಡಿಮೆಯಾಗಿದೆ. ಅಂದರೆ ಇಪ್ಪತ್ತೈದು ಆಟಗಳನ್ನು ಮಾಡಿರಬಹುದಷ್ಟೆ. ಹದಿನೈದು–ಇಪ್ಪತ್ತು ವರ್ಷದ ಕೆಳಗೆ ನಮ್ಮ ಕಲೆಗೆ ಬಹಳ ಬೇಡಿಕೆ ಇತ್ತು. ಇವತ್ತು ಆ ಬೇಡಿಕೆಯನ್ನು ಕಲ್ಪನೆ ಮಾಡಿಕೊಳ್ಳುವುದಕ್ಕೂ ಕಷ್ಟವಾಗಿದೆ. ಈ ನಾಟಕವಲ್ಲದೆ ಕಷ್ಟಪಟ್ಟು ಮೋಹಿನಿ ಬಸ್ಮಾಸುರ ನಾಟಕವನ್ನು ಕಲಿತಿದ್ದೇವೆ. ಈಗಾಗಲೇ ಆರು ಪ್ರದರ್ಶನಗಳನ್ನು ಮಾಡಿದ್ದೇವೆ. ಈಗ ಆ ನಾಟಕವನ್ನು ಕೇಳುತ್ತಿಲ್ಲ. ಯಲ್ಲಮ್ಮನ ನಾಟಕಕ್ಕೂ ಬೆಲೆ ಇಲ್ಲದಂತಾಗಿದೆ. ನನಗೆ

ಯಲ್ಲಮ್ಮನ ಕಥೆ ಇಷ್ಟವಾಗುತ್ತದೆ. ಜನರು ಸಹ ಈ ಕಥೆಯನ್ನೇ ಇಷ್ಟಪಡುತ್ತಾರೆ. ಈ ಭಾಗದಲ್ಲಿ ಆಕೆಯ ಆರಾಧಕರು ಹೆಚ್ಚಿರುವುದು ಇದಕ್ಕೆ ಕಾರಣವಾಗಿರಬಹುದು. ಅದು ನಾವು ಆರಾಧನೆ ಮಾಡುವ ದೇವತೆಯ ಕಥೆ ಅನ್ನುವುದಕ್ಕೆ ನಮಗೆ ಇಷ್ಟ ಆಗುತ್ತದೆ. ಮತ್ತೆ ಗೌಡತಿ ಬಡವಿ ಆಗುವುದು, ಮಗ ತಾಯಿಯನ್ನು ಆಟ ಆಡಿಸಿ, ಹಿಂಸೆ ಕೊಟ್ಟು ಸೋಲುವ ಪಾತ್ರಗಳು ಅನೇಕ ರೀತಿಯಲ್ಲಿ ಜೀವನಮೌಲ್ಯಗಳನ್ನು ಹೇಳುತ್ತವೆ. ಅದಕ್ಕೆ ಆ ಕಥೆ ಇಷ್ಟವಾಗುತ್ತದೆ. ನನಗೆ ನಾನಾಡುವ ಎಲ್ಲ ಪಾತ್ರಗಳು ಇಷ್ಟವಾಗುತ್ತವೆ. ಇಷ್ಟಪಡಲೇಬೇಕಾದ ಅನಿವಾರ್ಯತೆ ನನಗಿದೆ. ಅಲ್ಲಿರುವ ಪಾತ್ರಗಳಲ್ಲಿ ನಾನು ಏಳೆಂಟು ಪಾತ್ರಗಳನ್ನು ಮಾಡಿರುವೆ. ಅಲ್ಲದೆ ನಾಟಕ ನಿರ್ದೇಶನ ಮಾಡುವಾಗ ಆ ಎಲ್ಲ ಪಾತ್ರಗಳನ್ನು ಜೋಗತಿಯರಿಗೆ ಅಭಿನಯಿಸಿ ತೋರಿಸಬೇಕು. ಹಿಂದೆ ಹೇಳಿದಂತೆ ನನಗೆ ಮತ್ತು ಜನರಿಗೆ ಪರಶುರಾಮನ ಪಾತ್ರ ಇಷ್ಟವಾಗುತ್ತದೆ.

➢ **ತೃತೀಯಲಿಂಗಿಗಳಲ್ಲಿ ತಾಯಿ–ಮಕ್ಕಳು ಮತ್ತು ಗುರು–ಚೇಲ:ಶಿಷ್ಯರು ಎನ್ನುವ ಪದ್ಧತಿಗಳು ಪ್ರಚಲಿತದಲ್ಲಿವೆ. ಇವುಗಳಲ್ಲಿ ಯಾವುದು ಒಳಿತು?**

ಹೌದು, ಮಂಗಳಮುಖಿಯರಲ್ಲಿ ಈ ಎರಡು ಪದ್ಧತಿಗಳಿವೆ. ಇವುಗಳಲ್ಲಿ ತಾಯಿ–ಮಗಳು ಪದ್ಧತಿ ಪ್ರಾಚೀನವಾದದ್ದು. ಗುರು–ಶಿಷ್ಯ ಪರಂಪರೆ ಇತ್ತೀಚಿನದು. ಇದು ಯಾವಾಗ ಬಳಕೆಗೆ ಬಂತು ಅಂತ ಖಚಿತವಾಗಿ ಹೇಳುವುದಕ್ಕೆ ಆಗುವುದಿಲ್ಲವಾದರೂ ಹೈದ್ರಾಬಾದ್ ನವಾಬನ ಕಾಲದಿಂದ ಬಳಕೆಗೆ ಬಂತು ಎನ್ನುವುದನ್ನು ಕೇಳಿದ್ದೇನೆ. ಈ ಪದ್ಧತಿ ಆತನ ಆಸ್ಥಾನದಲ್ಲಿ ಬಳಕೆಯಲ್ಲಿತ್ತಂತೆ. ಹಂಗಾಗಿ ಇದು ವೃತ್ತಿಗಾಗಿ ಹುಟ್ಟಿರುವಂತಹದು ಎನ್ನಬಹುದು. ಇದನ್ನು ರಾಜಸಂಸ್ಕೃತಿ ಅಂತ ಕರೆಯಬಹುದು. ಗುರು–ಚೇಲ ಅನ್ನುವುದು ಶಾಲೆಯಲ್ಲಿ ನಡೆಯುವ ಶಿಕ್ಷಕ ಮತ್ತು ಮಕ್ಕಳ ಪದ್ಧತಿಗಳಂತೆ. ಗುರು ಶ್ರೇಷ್ಠ, ಚೇಲ ಕನಿಷ್ಟ ಅನ್ನುವುದು ಇಲ್ಲಿ ತಿಳಿದುಬರುತ್ತದೆ. ಗುರು ಹೇಳಿದಂತೆ ಚೇಲ ಕೇಳಬೇಕು. ತಾಯಿ–ಮಗಳು ಪದ್ಧತಿ ನಮ್ಮಲ್ಲಿ(ಜೋಗತಿಯರಲ್ಲಿ) ಬಳಕೆಯಲ್ಲಿದೆ. ತಾಯಿ–ಮಕ್ಕಳು ಅನ್ನುವುದೇ ಮನೆಯ ವಾತಾವರಣವಿದ್ದಂತೆ. ಇಂತಹ ಮನಸ್ಥಿತಿಯನ್ನು ಅಲ್ಲಿ ಕಾಣುವುದಕ್ಕೆ ಸಾಧ್ಯವಿಲ್ಲ. ಇವುಗಳಲ್ಲಿ ಯಾವುದು ಒಳಿತು, ಯಾವುದು ಕೆಡಕು ಅಂತ ಹೇಳುವುದು ಕಷ್ಟ. ಅವರವರಿಗೆ ಅವರವರ ಪದ್ಧತಿಗಳು, ವೃತ್ತಿಗಳು ಶ್ರೇಷ್ಠ. ಆದರೆ ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ತಾಯಿ–ಮಕ್ಕಳ ಪ್ರೀತಿ ದೊಡ್ಡದು ಮತ್ತು ಗೌರವಯುತವಾದದ್ದು ಅಂತ ಹೇಳಬಹುದಲ್ಲವೆ?.

➢ **ಚಲನಚಿತ್ರಗಳಲ್ಲಿ ನಿಮ್ಮನ್ನು ನಿರೂಪಿಸುವುದರ ಬಗ್ಗೆ ಏನಾದ್ರು ಹೇಳುವುದಕ್ಕೆ ಸಾಧ್ಯನಾ?**

ಇವತ್ತು ಸಿನಿಮಾ ಬಹುದೊಡ್ಡ ಮಾಧ್ಯಮ. ಈ ಮಾಧ್ಯಮದಲ್ಲಿ ನಮ್ಮನ್ನು ಬಳಸಿಕೊಳ್ಳುತ್ತಿರುವ ರೀತಿ ಸರಿಯಿಲ್ಲ. ಕಥೆಯ ದೃಷ್ಟಿಯಿಂದ 'ಕಲ್ಪನಾ' ಚಲನಚಿತ್ರ ಒಂದಿಷ್ಟು ಇಷ್ಟವಾಗುತ್ತದೆ. ಚಲನಚಿತ್ರಗಳಲ್ಲಿ ಬಳಕೆಯಾಗುವ ಡೈಲಾಗ್ ವಿಷಯಕ್ಕೆ ಬಂದಾಗ

ಕೋಪ ಬರುತ್ತದೆ. ಚಕ್ಕ ಅಂತಾರೆ, ಹಿಜಿಡಾ ಅಂತಾರೆ, ಮತ್ತೇನೇನೋ ಪದಗಳನ್ನು ಬಳಸಿ ಮಾತನಾಡುತ್ತಾರೆ. ಆ ಶಬ್ದಗಳನ್ನು ಕೇಳಿದಾಗ ಮೈಯೆಲ್ಲ ಉರಿಯುತ್ತಿರುತ್ತದೆ. ಈ ಶ್ರೀ ದರ್ಶನ್ ಮತ್ತು ಶ್ರೀ ದುನಿಯಾ ವಿಜಯ್ ಅವರು ಲೇ ಕೋಜ ನನ್ನಮಗನೆ, ಹಿಜಿಡಾ ನನ್ನ ಮಗನೆ ಅಂತ ವಿಲನ್‌ಗಳನ್ನು ಬಯ್ಯುತ್ತಿರುತ್ತಾರೆ. ಅಂತಹ ದೊಡ್ಡ ಸಂಸ್ಥೆಯಲ್ಲಿ ಕೆಲಸ ಮಾಡುವ ಕಲಾವಿದರೇ ನಮಗೆ ಬೆಲೆ ಕೊಟ್ಟಿಲ್ಲ ಮತ್ತು ಕೊಡುವುದಿಲ್ಲ ಅಂದ್ರೆ ಜನಸಾಮಾನ್ಯರು ಯಾವ ರೀತಿ ಬೆಲೆ ಕೊಡುತ್ತಾರೆ. ನೀವೇ ಹೇಳಿ? ಅವರು ಬಳಸಿದ ಮಾತುಗಳನ್ನೇ ಜನರು ಬಳಸುತ್ತಾರೆಯಲ್ಲವೆ? ಹಂಗಾಗಿ ಚಲನಚಿತ್ರದಂತಹ ಮಾಧ್ಯಮಗಳಲ್ಲಿ ನಮಗೆ ಮರ್ಯಾದೆ ಸಿಗಬೇಕು. ಆಗ ಸಮಾಜದಲ್ಲಿ ನಮಗೆ ಸ್ವಲ್ಪ ಮರ್ಯಾದೆ ಸಿಗಬಹುದು. ಹಂಗಂತ ಎಲ್ಲದೂ ಸಿನಿಮಾದಿಂದಲೇ ಬದಲಾಗುತ್ತದೆ ಎನ್ನುವುದು ಈ ಮಾತಿನ ಅರ್ಥವಲ್ಲ. ನಾನು ಹೇಳಿದಂತೆ ಸ್ವಲ್ಪ ಮರ್ಯಾದೆ ಸಿಗುತ್ತದೆ ಅಷ್ಟೆ. ನಾವು ನಮ್ಮ ನಡವಳಿಕೆಯನ್ನು ಸರಿಯಾಗಿ ಇಟ್ಟುಕೊಂಡ್ರೆ ಅದಕ್ಕಿಂತ ದೊಡ್ಡ ಗೌರವ ಸಿಗುತ್ತದೆ. ಈ ಮಾತು ನಮಗಷ್ಟೆ ಅನ್ವಯಿಸುವುದಿಲ್ಲ ಎಲ್ಲರಿಗೂ ಅನ್ವಯವಾಗುತ್ತದೆ. ಆದರೆ ಚಲನಚಿತ್ರದ ಸಂಭಾಷಣೆಕಾರರು ಹಾಗೂ ನಟರು ಇದನ್ನು ಮತ್ತು ನಮ್ಮನ್ನು ಅರ್ಥ ಮಾಡಿಕೊಳ್ಳಬೇಕು.

ಕೇವಲ ಸಿನಿಮಾದವರಷ್ಟೇ ಅಲ್ಲ ಜನಪ್ರಿಯ ನಾಟಕ ಮಾಧ್ಯಮದವರಿಂದಲೂ ಕೆಲವು ಬಾರಿ ಅನ್ಯಾಯವಾಗುತ್ತದೆ. ಉದಾಹರಣೆಗೆ ನಿನಾಸಂನ ಶ್ರೀ ಗಣೇಶ ಅವರು ರೇವತಿ ಅವರ 'ಬದುಕು ಬಯಲು' ಆತ್ಮಕಥೆಯನ್ನು ನಿರ್ದೇಶಿಸಿ ನಾಟಕ ಪ್ರದರ್ಶನ ಮಾಡುತ್ತಿದ್ದಾರೆ. ಆ ನಾಟಕದಲ್ಲಿ ರೇವತಿಯವರೇ ತಮ್ಮ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ. ಅದಕ್ಕೆ ನನಗೆ ಸಂತೋಷವಿದೆ. ಆದ್ರೆ ಶ್ರೀ ಗಣೇಶ ಅವರು ಮುಖಕ್ಕೆ ಬಣ್ಣ ಹಚ್ಚಿದ ಮೊದಲ ಹಿಜಿಡಾ ಕಲಾವಿದೆ ಎಂದು ಹೇಳಿದ್ದಾರೆ. ಇದು ಸರಿಯಲ್ಲ. ನಾವು ಅನೇಕ ವರ್ಷಗಳಿಂದ ಈ ಕಾಯಕವನ್ನು ಮಾಡಿಕೊಂಡು ಬಂದಿದ್ದೇವೆ. ನನಗೆ ಗೊತ್ತಿದ್ದಂತೆ ಮೊದಲು ಬಣ್ಣ ಹಚ್ಚಿದ 'ಹಿಜಿಡಾ'(ಹೀಗೆ ಕರೆಯುವುದು ತಪ್ಪು) ಅಂದ್ರೆ ನನ್ನ ತಾಯಿ ಕಾಳವ್ವ ಜೋಗತಿ. ಇದನ್ನು ಅರಿತು ಮಾಧ್ಯಮಗಳಿಗೆ ಹೇಳಿಕೆ ಕೊಡಬೇಕು. ಶ್ರೀಮತಿ ನಾಗರತ್ನಮ್ಮ ಅವರು ವಾಚಕರ ವಾಣಿಗೆ ಈ ಬಗ್ಗೆ ಪತ್ರದ ಮೂಲಕ ಬರೆದು ತಿಳಿಸಿದ್ದಾರೆ. ಇದಕ್ಕೆ ನಾಗರತ್ನಮ್ಮ ಅವರಿಗೆ ಧನ್ಯವಾದಗಳು.

### ೨. ಇತರರೊಂದಿಗೆ ಮತ್ತೊಂದಿಷ್ಟು ಮಾತುಕತೆಗಳು

ಮಂಜಮ್ಮನ ಆತ್ಮಕಥೆಯ ಮತ್ತೊಂದಿಷ್ಟು ಚಿತ್ರಣಗಳಿಗೆಗಾಗಿಯೇ ಆಕೆಯ ಒಡನಾಡಿ ಗಳಿಂದ ಕೆಲವು ಮಾತುಗಳನ್ನು ಸಂಗ್ರಹಿಸಲಾಗಿದೆ. ಅಂದರೆ ಗಂಡು ಜೋಗತಿಯರು, ರಂಗನಟಿಯರು, ಸಮಾಜ ಸೇವಕರು ಮತ್ತು ಸಂಶೋಧಕರ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಪ್ರಾಥಮಿಕ ಮಾಹಿತಿ ನೀಡಬಹುದಾದ ಕೆಲವು ಪ್ರಶ್ನೆಗಳಿಂದ ಉತ್ತರಗಳನ್ನು ಪಡೆದುಕೊಂಡು, ಆ ಎಲ್ಲ ಉತ್ತರಗಳನ್ನು ಸಂಯುಕ್ತಗೊಳಿಸಿ ಮಂಜಮ್ಮಳ

ಕಲೆ ಮತ್ತು ಬದುಕಿನ ಕೆಲವು ಚಿತ್ರಣಗಳನ್ನು ಕಟ್ಟಿಕೊಡಲಾಗಿದೆ. ಇದು ಆಕೆಯನ್ನು ಮತ್ತು ಜೋಗತಿ ಕಲೆಯನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಸಹಾಯಕ ವಾಗುತ್ತದೆ ಎನ್ನುವ ಭರವಸೆ ಇದೆ.

ಸಂದರ್ಶನಕ್ಕೆ ಒಳಪಡಿಸಿದ ಗಂಡುಜೋಗತಿಯರಲ್ಲಿ ಮತ್ತು ರಂಗ ಕಲಾವಿದೆಯರಲ್ಲಿ ಹೆಚ್ಚಾಗಿ ಕೇಳಿಬಂದ ಮಾತೆಂದರೆ ಆಕೆಯ ತಾಯ್ತನದ ಪ್ರೀತಿ. ಆ ಪ್ರೀತಿಯ ಅನುಭವ ವನ್ನು ಕವಿತ ಅನಾವರಣಮಾಡಿದ್ದು ಹೀಗೆ "ನಾನು ಜೋಗತಿಯಾಗಿ ಇಪ್ಪತ್ತೈದು ವರ್ಷವಾಯ್ತು. ಮಂಜಮ್ಮ ಜೋಗತಿಯವರನ್ನು ತಾಯಿಯಾಗಿ ಸ್ವೀಕಾರ ಮಾಡಿ ಹದಿನೆಂಟು ವರ್ಷಗಳು ಕಳೆದಿವೆ. ಆಸರೆ ಇಲ್ಲದ ಬಳ್ಳಿ ಎಲ್ಲಿಗೆ ಹಬ್ಬುವುದಕ್ಕೆ ಸಾಧ್ಯ! ಹೇಳಿ? ಅವರು ನನ್ನನ್ನು ಮಗಳು ಅಂತ ಸ್ವೀಕಾರ ಮಾಡಿ ಆಸರೆ ಕೊಟ್ಟವರು. ಚಿಕ್ಕ ವಯಸ್ಸಿನಲ್ಲೆ ತಂದೆ–ತಾಯಿ ಪ್ರೀತಿಯನ್ನು ಕಳೆದುಕೊಂಡ ನನಗೆ ಮಂಜಮ್ಮ ತಂದೆ–ತಾಯಿ ಇಬ್ಬರ ಪ್ರೀತಿಯನ್ನು ಕೊಟ್ಟಿದ್ದಾಳೆ. ಆ ಪ್ರೀತಿಯಲ್ಲಿ ನಾವು ನಮ್ಮ ಮನೆಯನ್ನು, ಸಂಕಟವನ್ನು ಮರೆತಿದ್ದೇವೆ. ಅವರಿಗೆ ನನ್ನ ಮೇಲೆ ಪ್ರೀತಿ ಮತ್ತು ದ್ವೇಷ ಎರಡು ಇವೆ. ಕವಿತ(ನನ್ನ ತಾಯಿ ಮಂಜಮ್ಮ ಜೋಗತಿ ಪ್ರೀತಿಯಿಂದ ಇಟ್ಟ ಹೆಸರು) ಓದಿದವಳಲ್ಲ. ಹೇಳಿಕೊಟ್ಟಿದ್ದನ್ನು ಚೆನ್ನಾಗಿ ಕಲಿಯುತ್ತಾಳೆ, ಹೆಜ್ಜೆ ಹಾಕುತ್ತಾಳೆ, ಅಭಿನಯ ಮಾಡುತ್ತಾಳೆ. ಸ್ವಚ್ಛವಾಗಿರುತ್ತಾಳೆ. ತಾನಿರುವ ಜಾಗವನ್ನು ಅಷ್ಟೇ ಚೆನ್ನಾಗಿ ಇರಿಸಿಕೊಳ್ಳುತ್ತಾಳೆ. ಮೇಲಾಗಿ ದೈವಿಭಕ್ತೆ, ಅಲ್ಲದೆ ಆರೇಳು ಭಾಷೆಗಳನ್ನು ಮಾತನಾಡುತ್ತಾಳೆ ಅಂತ ಎಲ್ಲರತ್ತಿರ ಹೇಳುತ್ತಿರುತ್ತಾರೆ. ಆದರೆ ನಾನು ಸ್ವಲ್ಪ ಫ್ಯಾಶನ್ ಹುಡುಗಿ. ಒಳ್ಳೊಳ್ಳೆ ಡ್ರೆಸ್ ಹಾಕುತ್ತೇನೆ. ಜನರತ್ತಿರ ನೈಸಾಗಿ ಮಾತನಾಡುವೆ. ಆ ಮೂಲಕ ಜನರನ್ನು ಆಕರ್ಷಣೆ ಮಾಡಿಕೊಳ್ಳುವುದು ಹೆಚ್ಚು. ಅವ್ವನಿಗೆ ಇದು ಆಗುವುದಿಲ್ಲ. ಈ ವಿಷಯಕ್ಕಾಗಿ ಆಗಾಗ ಬೈಯುತ್ತಿರುತ್ತಾರೆ. ಒಳಿತು ಮತ್ತು ಕೆಟ್ಟದನ್ನು ಹೇಳಿಕೊಟ್ಟು ಸಮಾಜದಲ್ಲಿ ಗೌರವಯುತವಾಗಿ ಬದುಕುವ ಕ್ರಮವನ್ನು ಕಲಿಸಿಕೊಟ್ಟ ತಾಯಿ ಆಕೆ"[೧] ಎನ್ನುತ್ತಾಳೆ.

ಮಂಜಮ್ಮ ತನ್ನ ಮಕ್ಕಳಿಗೆ ಅಥವಾ ಗಂಡುಜೋಗತಿಯರಿಗೆ ಮಾತ್ರ ಇಂತಹ ಪ್ರೀತಿಯನ್ನು ಕೊಡದೇ ತನ್ನ ಸುತ್ತಮುತ್ತಲಿನವರಿಗೂ ಕೊಡುತ್ತಿದ್ದಾರೆ. ಹಿರಿಯ ರಂಗಕಲಾವಿದರಿಂದಲೂ ಆ ಬಗೆಯ ಮಾತುಗಳು ಅಭಿವ್ಯಕ್ತಗೊಂಡಿವೆ. ಡಾ. ಕೆ. ನಾಗರತ್ನಮ್ಮ ಅವರ ಮಾತುಗಳನ್ನು ಉದಾಹರಣೆಯಾಗಿ ನೋಡಬಹುದು. "ಮಂಜಮ್ಮನನ್ನು ನಾನು ತಾಯಿ ಅಂತ ಸ್ವೀಕಾರ ಮಾಡಿಕೊಂಡಿದ್ದೇನೆ. ಆಕೆ ಒಂದು ದೃಷ್ಟಿಯಲ್ಲಿ ನನ್ನ ಹಡೆದ ತಾಯಿಗಿಂತ ಹೆಚ್ಚು. ಆಕೆಯದು ಹೆಣ್ಣುಗರುಳು. ಯಾರಿಗಾದ್ರು ಏನಾದ್ರು ಆದ್ರೆ ಅತ್ತು ಬಿಡುತ್ತಾಳೆ. ನನಗೆ ಆರೋಗ್ಯ ಸರಿಯಿಲ್ಲ ಅಂತ ಫೋನಿನಲ್ಲಿ ಹೇಳಿದ್ರೆ ಸಾಕು ಗೊಳೋ ಅಂತ ಅತ್ತು ಬಿಡುತ್ತಾಳೆ. ಅನ್ಯಾಯ, ಸುಳ್ಳು ಹೇಳುವುದು ಆಕೆಗೆ ಗೊತ್ತೇಯಿಲ್ಲ. ಇದ್ದಿದ್ದನ್ನು ಇದ್ದಂಗೆ ಹೇಳುವ ಆಕೆಯ ಗುಣ ನನಗಿಷ್ಟ. ನನ್ನ ಆರೋಗ್ಯ ಸರಿ ಇಲ್ಲದಿದ್ದಾಗ ತಾಯಿಯಂತೆ ಆರೈಕೆ ಮಾಡುತ್ತಾಳೆ. ಅಂತಹ

ಸಂದರ್ಭಗಳಲ್ಲಿ ಸಮಾಧಾನ ಹೇಳುವ ರೀತಿಯಂತೂ ಎಂಥವರ ಮನ ಕರಗಿಸಿ ಬಿಡುತ್ತದೆ. ಆಸ್ಪತ್ರೆಯಲ್ಲಿ ನಾನು ವಾಂತಿ ಮಾಡಿಕೊಂಡಾಗಲೂ ಒಂದಿಷ್ಟು ಹೇಸಿಗೆಪಡದೆ ಅದನ್ನು ಬಳಿದು ಹಾಕಿದ್ದಾಳೆ. ನೀನು ದೇವತೆ ಕಟ್ಟಿಸಿಕೊಂಡಾಕಿ ಇದನ್ನೆಲ್ಲ(ವಾಂತಿ) ಮುಟ್ಟಬಾರದು ಅಂದರೂ ಕೇಳಲಿಲ್ಲ ಮತ್ತು ಕೇಳುವುದಿಲ್ಲ. 'ಅಕ್ಕ ದೇವರು ಎರಡನೆಯದು. ಮಾನವೀಯತೆ ಮೊದಲನೆಯದು ಎನ್ನುತ್ತಾಳೆ ಮಂಜಮ್ಮ'. ಆಕೆಯ ಈ ತಾಯವ್ವದ ಪ್ರೀತಿ ಮತ್ತು ಮಾನವೀಯತೆಗೆ ನಾನ್ಯಾವತ್ತೋ ಶರಣಾಗಿದ್ದೇನೆ".[೨] ಇಂತಹ ಗುಣದಿಂದಲೇ ಮಂಜಮ್ಮ ಎಲ್ಲ ವರ್ಗದವರ ಪ್ರೀತಿಗೆ ಪಾತ್ರಳಾಗಿದ್ದಾಳೆ. ಹೀಗೆ ಜನರನ್ನು ಪ್ರೀತಿಸುವ ಗುಣವನ್ನು ತಾಯಿ ಕಾಳವ್ವ ಜೋಗತಿಯಿಂದ ಮತ್ತು ನಾನು ಕಳೆದುಕೊಂಡ ತಂದೆ–ತಾಯಿಯ ಪ್ರೀತಿಯ ಕೊರತೆಯಿಂದ ಕಲಿತೆ ಎನ್ನುತ್ತಾರೆ. ನನ್ನತ್ತಿರ ಬಂದ ಗಂಡುಜೋಗತಿಯರು ತಂದೆ–ತಾಯಿ, ಬಂಧು–ಬಳಗದವರ ಪ್ರೀತಿಯನ್ನು ಕಳೆದುಕೊಂಡಿರುತ್ತಾರೆ. ಸಮಾಜದಲ್ಲಿ ಅವಮಾನಕ್ಕೆ ಒಳಗಾಗಿರುತ್ತಾರೆ. ನನ್ನಲ್ಲಿರುವಾಗ ಯಾವುದೇ ಕಾರಣಕ್ಕೆ ಆ ಯಾತನೆಯನ್ನು ಅನುಭವಿಸಬಾರದು ಎನ್ನುವುದೇ ನನ್ನ ಆಸೆ ಎನ್ನುತ್ತಾರೆ ಮಂಜಮ್ಮ ಜೋಗತಿಯವರು.

ಇಂತಹ ತಿಳುವಳಿಕೆಯಿಂದಲೇ ತಂಡವನ್ನು ಒಂದು ಕುಟುಂಬವನ್ನಾಗಿ ರೂಪಿಸಿದ್ದಾರೆ. ಇದಕ್ಕಾಗಿ ತನ್ನ ಕುಟುಂಬದಿಂದ, ತಮ್ಮ ಸಹೋದರರಿಂದ ಮನೆಗೆ ಬಾ ಎನ್ನುವ ಆಹ್ವಾನಗಳು ಬಂದರೂ ಹೋಗುತ್ತಿಲ್ಲ. ಅವತ್ತು ನನ್ನನ್ನು ಮನೆ ನಿರಾಕರಣೆ ಮಾಡಿದಾಗ ನನ್ನನ್ನು ಕಾಪಾಡಿ ಪ್ರೀತಿ ಕೊಟ್ಟಿದ್ದು ಈ ಜೋಗತಿ ಸಮುದಾಯವೇ ಹೊರತು ನಾನು ಹುಟ್ಟಿ ಬೆಳೆದ ಮನೆಯಲ್ಲ. ನನ್ನನ್ನು ಬೆಳೆಸಿದ ಮನೆಯನ್ನೇ ಮಾದರಿ ಮನೆಯನ್ನಾಗಿ ಮಾಡಬೇಕೆನ್ನುವ ಕಾಳಜಿ ಮತ್ತು ಹಠ ಮಂಜಮ್ಮನದು. ಆದರೆ ಇತ್ತೀಚೆಗೆ ಆ ಕುಟುಂಬದ ಪ್ರೀತಿಯನ್ನು ಅನುಭವಿಸುವುದಕ್ಕೆ ಸಾಧ್ಯವಾಗುತ್ತಿಲ್ಲ, ಇನ್ನೊಂದಿಷ್ಟು ದಿನದಲ್ಲಿ ಆ ವಾತಾವರಣವನ್ನು ಕಳೆದುಕೊಂಡು ಬಿಡುತ್ತೇವೆ ಎನ್ನುವ ಆತಂಕವನ್ನು ಈ ಜೋಗತಿಯರು ವ್ಯಕ್ತಪಡಿಸುತ್ತಿದ್ದಾರೆ. "ನಾನು ಜೋಗತಿಯಾಗಿ ಮೂವತ್ತೆರಡು ವರ್ಷವಾಯ್ತು. ಅಂದಿನಿಂದಲೂ ಈತನಕ ಮಂಜಮ್ಮಳ ಜೊತೆಗಿದ್ದೇನೆ. ನಾವಿಬ್ಬರೂ ಕಾಳವ್ವ ಜೋಗತಿಯರ ಮಕ್ಕಳು. ಮಂಜಮ್ಮ ಮತ್ತು ನಾನು ಅಕ್ಕ–ತಂಗಿಯರಿಗಿಂತ ಹೆಚ್ಚಾಗಿ ಬದುಕಿದ್ದೇವೆ. ಯಾರು ಹೆಚ್ಚು, ಯಾರು ಕಡಿಮೆ ಅನ್ನುವಂತಿಲ್ಲ. ತಾಯಿ ಕಾಳವ್ವ ಜೋಗತಿ ಹೇಳಿಕೊಟ್ಟ ಕಲೆ ಮತ್ತು ಜೀವನ ವಿಧಾನಕ್ಕೆ ಬದ್ಧರಾಗಿ ಜೀವನ ನಡೆಸುತ್ತಿದ್ದೇವೆ. ಈಗ ಎರಡು–ಮೂರು ವರ್ಷಗಳಿಂದ ನಮ್ಮ ಕಲೆ ಪ್ರದರ್ಶನ ಮಾಡುವುದಕ್ಕೆ ಅವಕಾಶಗಳೇ ಅಥವಾ ಕಾರ್ಯಕ್ರಮಗಳೇ ಇಲ್ಲದಂತಾಗಿದೆ. ಕಾಳವ್ವ ಹೇಳಿದಂತೆ ಬದುಕು ಮಾಡುವುದಕ್ಕೆ ಆಗುತ್ತಿಲ್ಲ. ಇತರೆ ತೃತೀಯಲಿಂಗಿಗಳು ಮಾಡಿದಂತೆ ಭಿಕ್ಷೆ ಬೇಡಿ ತಿನ್ನುವುದಕ್ಕೆ ಆಗುತ್ತಿಲ್ಲ. ನಾವು ಇಂತಹ ಇಕ್ಕಟ್ಟಿನ ಸ್ಥಿತಿಯನ್ನು ಅನುಭವಿ ಸುತ್ತಿದ್ದೇವೆ. ನಾವೆಲ್ಲರೂ ಒಟ್ಟಾಗಿ ಒಂದೇ ಕಡೆ ಇದ್ದು ಜೀವನ ಮಾಡುವುದು

ಕಷ್ಟವಾಗಿದೆ. ಕಾರ್ಯಕ್ರಮಗಳಿದ್ದಾಗ ಮಾತ್ರ ಕಾರ್ಯಕ್ರಮ ಕೊಡುವುದಕ್ಕಾಗಿಯೇ ನಾವೆಲ್ಲ ಒಂದುಗೂಡುತ್ತೇವೆ. ಕಾರ್ಯಕ್ರಮ ಮುಗಿಯುತ್ತಿದ್ದಂತೆ ನಮ್ಮಲ್ಲಿ ದುಃಖದ ವಾತಾವರಣ ಸುರುವಾಗಿಬಿಡುತ್ತದೆ. ನಮ್ಮ ನಮ್ಮ ಮನೆಗೆ ಬರುವಾಗಲಂತೂ ನಾವಿಬ್ಬರು ಸೇರಿ ಕಣ್ಣೀರು ಹಾಕುತ್ತೇವೆ. ಈಗಂತೂ ಒಬ್ಬರನ್ನೊಬ್ಬರು ಬಿಟ್ಟು ಸಂಕಟ ಅನುಭವಿಸುತ್ತಿದ್ದೇವೆ. ಇವತ್ತು ಅಂತಹ ವಾತಾವರಣ ಈ ಕಲೆ ತಂದುಬಿಟ್ಟಿದೆ"[೩] ಎನ್ನುವ ಮಾತುಗಳು ಈ ತಂಡದ ಜೋಗತಿಯರಲ್ಲಿ ಕೇಳಿಬರುತ್ತಿವೆ.

ಜಾಗತೀಕರಣ ಮತ್ತು ಆಧುನೀಕರಣದ ಪ್ರಭಾವದಿಂದಾಗಿ ಕಲೆಯ ಅವಕಾಶಗಳು ಕಡಿಮೆಯಾಗಿ ಇವರದೇಯಾದ ಕೌಟುಂಬಿಕ ಪ್ರೀತಿಯನ್ನು ಕಿತ್ತುಕೊಂಡಿದೆ ಮತ್ತು ಅಲೆಮಾರಿಗಳನ್ನಾಗಿ ಮಾಡಿದೆ. ಸಮಾಜದಲ್ಲಿ ಅವಮಾನಕರ ಸಂಗತಿಗಳನ್ನು ಅನುಭವಿಸುವಂತೆ ಮಾಡಿದೆ. ಇದಕ್ಕೆ ಮಂಜಮ್ಮ ತೀವ್ರವಾದ ಆತಂಕವನ್ನು ವ್ಯಕ್ತಪಡಿಸುತ್ತಾರೆ. ನನ್ನವರಿಗಾಗಿ ಇಂತಹ ಸ್ಥಿತಿ ಬಂದಿದೆಯಲ್ಲ ಅಂತ ದು:ಖಪಡುತ್ತಿದ್ದಾರೆ. ಹಾಗೆಂದು ನೋವುಪಡುತ್ತಲೇ ಕಾಲ ಕಳೆಯುವ ಜಾಯಮಾನ ಇವರದಲ್ಲ. ಕೇವಲ ಜೋಗತಿ ಕಲೆಯನ್ನು ನಂಬಿದ್ದಕ್ಕೆ ನಮಗೆ ಈ ಸ್ಥಿತಿ ಬಂದಿದೆ ಎನ್ನುವ ವಾಸ್ತವವನ್ನು ಅರಿತು ಜೋಗತಿಯರಿಗೆ ಬೇರೆ ಬೇರೆ ಕಲೆಗಳನ್ನು ಕಲಿಸುವತ್ತ ಆಲೋಚನೆ ಮಾಡುತ್ತಿದ್ದಾರೆ. "ಅದಕ್ಕಾಗಿಯೇ ಇವರಿಗೆ ಬೇರೆ ಬೇರೆ ಕಲೆಗಳನ್ನು ಕಲಿಸಬೇಕು ಮತ್ತೆ ಅವರನ್ನೆಲ್ಲ ಒಂದುಗೂಡಿ ಬದುಕುವ ವಾತಾವರಣವನ್ನು ಸೃಷ್ಟಿಸಬೇಕು ಎನ್ನುವ ಆಸೆ ನನ್ನಲಿದೆ"[೪] ಎನ್ನುತ್ತಾರೆ. ಅಲ್ಲದೆ ತಂಡದ ಜೋಗತಿಯರಲ್ಲೂ ಇಂತಹ ಮಾತುಗಳು ಕೇಳಿಬರುತ್ತಿವೆ. "ಮಂಜಮ್ಮ ನಾನು ಒಂದೆ ತಾಯಿಯ(ಕಾಳವ್ವ-ಜೋಗತಿ) ಮಕ್ಕಳು. ಅವ್ವ ತೀರಿಕೊಂಡ ನಂತರ ಮಂಜಮ್ಮ ನಮಗೆಲ್ಲ ತಾಯಿಯಾಗಿದ್ದಾಳೆ. ಒಂದಿಷ್ಟು ತಾರತಮ್ಯತೆ ಮಾಡದೇ ನಮ್ಮನ್ನೆಲ್ಲ ಕಟ್ಟಿಕೊಂಡು ಜೀವ್ನ ಮಾಡ್ತಾಳೆ. ಈಗ ನನಗೆ ತಾಯಿಯಾಗಿದ್ದರು ಆಕೆಯನ್ನು ಅಕ್ಕನೆಂದು ಕರೆಯುತ್ತೇನೆ. ನಮಗೆಲ್ಲ ಕಲೆ ಕಲಿಸಿ ಸಮಾಜದಲ್ಲಿ ಗೌರವಯುತವಾದ ಜೀವ್ನ ಮಾಡಿಸಬೇಕೆಂಬ ಆಸೆ ಇಟ್ಟುಕೊಂಡಿದ್ದಾಳೆ. ಅದು ಸುಲಭವಲ್ಲವೆಂದು ನಮಗೆ ತಿಳಿದಿದೆ. ಆದರೂ ಆಕಿ ಹಟ ಬಿಡುತ್ತಿಲ್ಲ. ಆಕಿ ಬಾಳ ಹಠಮಾರಿ. ಸಾಧಿಸಿ ತೋರಿಸುವೆ ಅಂತ ನಿಂತಿದ್ದಾಳೆ. ಆಕೆಯ ಆಸೆಗೆ ನಾವೆಲ್ಲ ಸಾಧ್ಯವಾದಷ್ಟು ಸಹಾಯ ಮಾಡುತ್ತಿದ್ದೇವೆ. ಆಕೆ ಮಾಡುತ್ತಿರುವುದು ನಮ್ಮ ಒಳಿತಿಗಲ್ಲವೆ?" ಎನ್ನುವ ಮೂಲಕ ಗಂಡು ಜೋಗತಿಯರ ಭರವಸೆ ಕನಸುಗಳನ್ನು ಬಿತ್ತಿ, ಬೆಳೆಯುವುದಕ್ಕೆ ಮಂಜಮ್ಮ ಹಂಬಲಿಸುತ್ತಿದ್ದಾಳೆ.

ತಮ್ಮ ತಂಡದ ಮತ್ತು ಜೋಗತಿ ಸಮುದಾಯದ ಒಳಿತಿಗಾಗಿ ತನ್ನನ್ನೇ ಶಿಕ್ಷೆಗೆ ಒಳಪಡಿಸಿಕೊಳ್ಳುವುದಕ್ಕೆ ಸಿದ್ಧಳಾಗುತ್ತಾಳೆ ಎನ್ನುವ ವಾಸ್ತವತೆ ರಾಮವ್ವ ಜೋಗತಿಯ ಮಾತುಗಳಿಂದ ತಿಳಿದುಬರುತ್ತದೆ. 'ನಾನು ಜೋಗತಿಯಾಗಿ ಹತ್ತೊಂಬತ್ತು ವರ್ಷ ಕಳೆದಿವೆ. ಹದಿನೆಂಟು ವರ್ಷದಿಂದ ಮಂಜಮ್ಮ ಜೋಗತಿ ಹತ್ತಿರವಿರುವೆ. ನನ್ನ ಮೇಲೆ ಆಕಿಗೆ ಬಾಳ ಪ್ರೀತಿ. ನನ್ನನ್ನು ಆಕಿಯ ಬಲಗೈ ಅಂತ ಎಲ್ಲರತ್ತಿರ ಹೇಳಿಕೊಂತಾಳೆ.

ನಾನು ಆಕಿ ಒಂದು ದೇಹ ಎರಡು ಉಸಿರು ಇದ್ದಾಂಗೆ. ನಮಗೆ ಇವತ್ತು ಜೋಗತಿ ಕಲೆಯನ್ನು ನಂಬಿ ಜೀವ್ನ ಮಾಡುವುದು ಕಷ್ಟವಾಗಿದೆ. ಹಾಗಾಗಿ ಕಲೆಕ್ಷನ್‌ಗೆ ಅಂತ ರಸ್ತೆಗಳಲ್ಲಿ ಲಾರಿಗಳಿಗೆ, ಟೋಲ್‌ಗೇಟ್ ಮತ್ತು ಜಾತ್ರೆಗಳಿಗೆ ಹೋಗುತ್ತಿದ್ದೇವೆ. ಅಲ್ಲಿ ಯಾರಾದ್ರು ನಮ್ಮ ಜೊತೆ ಗಲಾಟೆ ಮಾಡಿದ್ರೆ ಅವರಿಗೆ ತಿಳುವಳಿಕೆ ಹೇಳುತ್ತಾರೆ. 'ಸಮಾಜದಲ್ಲಿ ನಮ್ಮ ತಂಡಕ್ಕೆ ಬೆಲೆ ಇದೆ. ಅವರನ್ನು(ನಮ್ಮ ಜೋಗತಿಯರನ್ನು) ಹೊಡಿಬ್ಯಾಡ್ರಿ. ಬೇಕಾದರೆ ನನ್ನ ಬಡಿರಿ' ಅಂತಾಳೆ. ಪ್ರೀತಿಯಿಂದ ಅವರಿಗೆ ಮತ್ತು ನಮಗೆ ತಿಳುವಳಿಕೆ ಹೇಳಿ ಸಮಧಾನಪಡಿಸುತ್ತಾಳೆ. ಹೈವೆದಲ್ಲಿ ಭಿಕ್ಷೆ ಬೇಡುವುದಕ್ಕೆ ಪೋಲಿಸರು ಅಡ್ಡಿ ಮಾಡಿದ್ರೆ ಪೋಲಿಸ್ ಸ್ಟೇಷನ್‌ಗೆ ಹೋಗಿ ಅವರತ್ತಿರ ಅಂಗಲಾಚಿ 'ನಮ್ಮವರಿಗೆ ಅವಕಾಶ ಮಾಡಿಕೊಡಿ, ನಮ್ಮವರು ಯಾರಿಗೂ ತೊಂದರೆ ಕೊಡದಂತೆ ಭಿಕ್ಷೆ ಬೇಡಿಕೊಂಡು ಊಟ ಮಾಡುತ್ತಾರೆ' ಅಂತ ಹೇಳಿ ಪರ್ಮಿಶನ್ ತಗೊಂಡು ಬರುತ್ತಾಳೆ. ನಮಗ್ಯಾರಿಗಾದ್ರು ಆರಾಮ ಇಲ್ಲ ಅಂತ ಗೊತ್ತಾದ್ರೆ ಸಾಕು ಅತ್ತುಬಿಡುತ್ತಾಳೆ. ಅವರತ್ತಿರ ರೊಕ್ಕ ಇಲ್ಲಂದ್ರೆ ಆಕಿ ರೊಕ್ಕ ಕೊಟ್ಟು ಆಸ್ಪತ್ರೆಗೆ ಕಳಿಸುತ್ತಾಳೆ. ಒಮ್ಮೊಮ್ಮೆ ಆಸ್ಪತ್ರೆಗೆ ಆಕಿಯೇ ಬಂದು ಡಾಕ್ಟರ್ ಹತ್ತಿರ ಚೆನ್ನಾಗಿ ನೋಡುವಂತೆ, ಕಡಿಮೆ ರೊಕ್ಕ ತೆಗೆದುಕೊಳ್ಳುವಂತೆ ಕೇಳಿಕೊಳ್ಳುತ್ತಾಳೆ. ಆಕಿ ಹತ್ತಿರ ದುಡ್ಡು ಇಲ್ಲಂದ್ರೆ ತನಗೆ ಗೊತ್ತಿರುವ ಸಾಹುಕಾರರು, ರಾಜಕಾರಣಿಗಳತ್ತಿರ ಕೇಳಿ, ಬೇಡಿತಂದು ತೋರಿಸಿದ ಸಾಕಷ್ಟು ಉದಾಹರಣೆಗಳಿವೆ. ಮೊನ್ನೆ ಸೋಮವ್ವ ಜೋಗತಿಯವರಿಗೆ ಆರಾಮ ಇರಲಿಲ್ಲ. ಆಕಿತಾಲೆ ರೊಕ್ಕನು ಇರಲಿಲ್ಲ. ಮಂಜಮ್ಮನತ್ತಿರನು ರೊಕ್ಕ ಇರಲಿಲ್ಲ. ಆಗ ಸೊಮಕ್ಕ ಜೋಗತಿಯ ಫೋಟೊ ಪೇಪರ್‌ಗೆ ಹಾಕ್ಸಿ, ಅಕೌಂಟ್ ನಂಬರ್ ಕೊಟ್ಟು, ರೊಕ್ಕ ಸಂಗ್ರಹ ಮಾಡಿ ಡಾಕ್ಟರ್ ಹತ್ತಿರ ತೋರಿಸಿದ್ಲು. ಆ ಯಮ್ಮ(ಮಂಜಮ್ಮ) ನಮ್ಮ ತಾಯಿಗಿಂತ ಹೆಚ್ಚು. ನಮ್ಮ ಬಗ್ಗೆ ಒಂದುವೇಳೆ ಹೆತ್ತ ತಾಯಿ ಬ್ಯಾಸರಗೊಳ್ಳಬಹುದು ಈಕೆ ಬ್ಯಾಸರಗೊಂಡಿಲ್ಲ".[೫] ಹೀಗೆ ಮಂಜಮ್ಮ ಬೇಸರಪಟ್ಟುಕೊಳ್ಳದೇ ತನ್ನವರಿಗಾಗಿ, ತನ್ನ ಕಲೆಗಾಗಿ ಜೀವನವನ್ನೇ ಮುಡುಪಾಗಿಟ್ಟ ಅಪರೂಪದ ಕಲಾವಿದೆ, ಜೋಗತಿ, 'ತೃತಿಯಲಿಂಗಿ' ಎನ್ನಬಹುದು.

ಮಂಜಮ್ಮ ಜೋಗತಿ ಕಲೆಯನ್ನೇ ಜೀವನ ಎಂದುಕೊಂಡು ಬದುಕುತ್ತಿದ್ದಾಳೆ. ಆಕೆಯ ಕಲಾ ಪ್ರೀತಿ ಮತ್ತು ಬದ್ಧತೆಯನ್ನು ಗೌರಮ್ಮ ಜೋಗತಿಯ ಮಾತುಗಳಿಂದ ತಿಳಿಯಬಹುದು. "ಅವ್ವ ಕಲೆ ಮಾಡೋದನ್ನ ಬಿಡೋದಿಲ್ಲ. ವಯಸ್ಸಾಗಿದೆ ಕುಣಿಯೋದು ಸಾಕವ್ವ ಅಂತಿವಿ. ಆಕಿ ಕೇಳಂಗಿಲ್ಲ, ಕುಣಿವಾಗ್ಲೆ ನನ್ನ ಪ್ರಾಣ ಹೋದ್ರು ಪರವಾಗಿಲ್ಲ. ನಾನು ಕುಣಿಯೋದನ್ನ ಮಾತ್ರ ಬಿಡಂಗಿಲ್ಲ ಅಂತ ಹಠ ಮಾಡುತ್ತಾಳೆ. ಕಾರ್ಯಕ್ರಮಗಳು ಬಂದರೆ ಕುಣಿಯುತ್ತಾಳೆ. ನಾಟಕಗಳಲ್ಲಿ ಅಭಿನಯಿಸುತ್ತಾಳೆ"[೬] ಎನ್ನುತ್ತಾಳೆ. "ಮಂಜಮ್ಮ ಅವರು ಹಿಜಡಾ ಸಮುದಾಯದಲ್ಲೇ ಭಿನ್ನ. ಉತ್ತರ ಕರ್ನಾಟಕದಲ್ಲಿ ವಿಶಿಷ್ಟವಾದ ಹೆಸರನ್ನು ಮಾಡಿದಾಕೆ. ಜೋಗತಿ ಕಲೆಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟು

ಕೊಂಡವರು. ಈ ವಯಸ್ಸಿನಲ್ಲೂ ಕಲೆಯನ್ನು ಪ್ರದರ್ಶನ ಮಾಡುವ ಅವರ ವಿಧಾನ ವಂತೂ ರೋಮಾಂಚನಕಾರಿ. ಅವರಿಗೆ ಶ್ರೀಮತಿ ಅರುಂಧತಿ ನಾಗ್, ಡಾ. ಕೆ. ನಾಗರತ್ನಮ್ಮ, ಶ್ರೀಮತಿ ಇಳಕಲ್ ಉಮಾರಾಣಿ ಅವರಂತಹ ಬೆಂಬಲ ಸಿಕ್ಕಿರುವುದು ನಮ್ಮ ಹಿಜಡಾ ಸಮುದಾಯಕ್ಕೆ ಕಿರೀಟವನ್ನಿಟ್ಟಂತಾಗಿದೆ"[೬] ಎನ್ನುವ ಅಭಿಪ್ರಾಯಗಳು ಹಿಜಡಾಗಳಿಂದಲೂ ಕೇಳಿ ಬರುತ್ತಿದೆ. ಹಾಗಾಗಿ ಮಂಜಮ್ಮ ಕೇವಲ ಜೋಗತಿಯರ ಪ್ರೀತಿಗೆ ಪಾತ್ರವಾಗಿಲ್ಲ. ಹಿಜಡಾಗಳಿಂದಲೂ ತನ್ನ ಪ್ರೀತಿ ಮತ್ತು ಗೌರವನ್ನು ಪಡೆದು ಕೊಂಡಿದ್ದಾಳೆ.

ಮಂಜಮ್ಮನ ಈ ಹಠತನವೇ ಜೋಗತಿ ಕಲೆಯನ್ನು ಜೀವಂತಗೊಳಿಸಿದೆ. ಉತ್ತರ ಕರ್ನಾಟಕದ ಏಕೈಕ ಜೋಗತಿ ಕಲಾ ತಂಡ ಎನ್ನುವ ಅಸ್ಮಿತೆಯನ್ನು ತನ್ನ ತಂಡ ಪಡೆದುಕೊಂಡಿದೆ. ಇಂತಹ ಅಸ್ಮಿತೆಗೆ ಕಾರಣವಾಗಿರುವ ಮತ್ತು ಸಮಾಜದಿಂದ ನಿರಾಕರಣೆಗೆ ಒಳಗಾಗಿರುವ ಜೋಗತಿಯರ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಮಂಜಮ್ಮ ಜೋಗತಿಯ ಕಾರ್ಯ ಶ್ಲಾಘನೀಯ.

**ಅಡಿಟಿಪ್ಪಣಿಗಳು**

೧. ಕೆ. ಮಂಜಮ್ಮ (ಕವಿತ) ಜೋಗತಿ, ಹೊಸಪೇಟೆ, ವಯಸ್ಸು ೩೫.
೨. ಡಾ. ಕೆ. ನಾಗರತ್ನಮ್ಮ, ಮರಿಯಮ್ಮನಹಳ್ಳಿ, ವಯಸ್ಸು ೬೮.
೩. ಅಂಜಲಿ ಜೋಗತಿ, ಗಜಾಪುರ, ವಯಸ್ಸು ೪೦.
೪. ಮಂಜಮ್ಮ ಜೋಗತಿ, ಗೊಲ್ಲರಹಳ್ಳಿ, ವಯಸ್ಸು ೫೦.
೫. ರಾಮವ್ವ ಜೋಗತಿ, ಗೊಲ್ಲರಹಳ್ಳಿ, ವಯಸ್ಸು ೪೫.
೬. ಗೌರಮ್ಮ ಜೋಗತಿ, ಹಗರಿಬೊಮ್ಮನಹಳ್ಳಿ, ವಯಸ್ಸು ೨೫.
೭. ಶ್ರೀ ರಾಮಾಂಜನೇಯ, ಹೊಸಪೇಟೆ, ವಯಸ್ಸು ೩೦.

□□

೪

# ಮಂಜಮ್ಮನ ಕಲೆ ಮತ್ತು ಬದುಕಿನ ವಿಶ್ಲೇಷಣೆ

**ಕ**ರ್ನಾಟಕದ ಜನಪದ ಧಾರ್ಮಿಕ ವೃತ್ತಿಗಾಯಕ ಕಲೆಗಳಲ್ಲಿ ಜೋಗತಿ ಸಂಪ್ರದಾಯವೂ; ಕಲೆಯೂ ಒಂದು. ಇದನ್ನು ಯಲ್ಲಮ್ಮನ ಸಂಪ್ರದಾಯ, ಚೌಡಿಕೆ ಮೇಳ, ಜೋಗತಿ ಮೇಳವೆಂದು ಕರೆಯುತ್ತಾರೆ. ಈ ಪರಿಭಾಷೆಗಳು ಜೋಗತಿಯರನ್ನು ಗುರುತಿಸುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಯಲ್ಲಮ್ಮ ದೇವಿಯ ಸೇವೆಗಾಗಿಯೇ ಆಕೆಯ ಹೆಸರಿನಲ್ಲಿ ದೀಕ್ಷೆ ಪಡೆದುಕೊಂಡ ಮತ್ತು ಯಲ್ಲಮ್ಮ ದೇವತೆಯನ್ನು ಭಕ್ತಿಯಿಂದ ಹಾಡುವುದಕ್ಕಾಗಿ ಚೌಡಿಕೆಯನ್ನು ಹಿನ್ನೆಲೆ ವಾದ್ಯವಾಗಿ ಬಳಸುವ ವೃತ್ತಿಗಾಯಕ ವರ್ಗಗಳಿಗೆ ಈ ಹೆಸರುಗಳು ಪ್ರಾದೇಶಿಕವಾಗಿ ಬಳಕೆಯಾಗುತ್ತಿವೆ. ಈ ಗಾಯಕ ವರ್ಗಗಳಲ್ಲಿ ಜೋಗತಿಯರು ಜನಪ್ರಿಯ. ಇವರು "ಯಲ್ಲಮ್ಮನ ಹೆಸರಿನಲ್ಲಿ ದೀಕ್ಷೆ ಪಡೆದುಕೊಂಡಿರುತ್ತಾರೆ. ಇವರಲ್ಲಿ ಪುರುಷವೇಷದ ಸ್ತ್ರೀಯರೂ, ಸ್ತ್ರೀವೇಷದ ಪುರುಷರೂ ಕಾಣಬರುತ್ತಾರೆ. ಇವರನ್ನು ಜೋಗತಿ ಮತ್ತು ಜೋಗಪ್ಪ ಎಂದು ಕರೆಯಲಾಗುತ್ತದೆ. ಸ್ತ್ರೀಯರು ಚಿಕ್ಕವಯಸ್ಸಿನಲ್ಲಿ ಜೋಗತಿ ದೀಕ್ಷೆ ಪಡೆದರೆ ವಿವಹವಾಗದೆ ಉಳಿಯುತ್ತಾರೆ. ದೇವಿಯ ಅಡ್ಲಿಗೆ(ಪಡ್ಲಿಗೆ)ಯನ್ನು ಹೊತ್ತು, ಬಿಳಿಯ ಅರಿವೆಯನ್ನು ಉಟ್ಟು, ಕಾಲಿಗೆ ಗೆಜ್ಜೆ ಕಟ್ಟಿ, ಕೊರಳಲ್ಲಿ ಕವಡೆ ಸರ ಮತ್ತು ಐದು ಮುತ್ತನ್ನು ಧರಿಸಿ ದೇವಿಯನ್ನು ಸ್ತುತಿಸುತ್ತ, ನೃತ್ಯ ಮಾಡುವವರು. ದೇವಿಯ ಭಂಡಾರದ ಚೀಲವನ್ನು ಧರಿಸಿರುತ್ತಾರೆ. ಗಂಡಸರು ಹೀಗೆ ಹೆಂಗಸರಂತೆ ನಡೆದುಕೊಳ್ಳುವುದನ್ನು ಪರಶುರಾಮನ ಅವತಾರವೆಂದು ಹೇಳಲಾಗುತ್ತಿದೆ".[೧] ಇಂತಹ ವಿಶಿಷ್ಟವಾದ ಸಂಪ್ರದಾಯ; ಕಲೆಯನ್ನು ಕರಗತ ಮಾಡಿಕೊಂಡವರಲ್ಲಿ ಮಂಜಮ್ಮ ಜೋಗತಿಯು ಒಬ್ಬರು. ಮಂಜಮ್ಮನವರು ಈ ಕಲಾಕ್ಷೇತ್ರಕ್ಕೆ ಅನಿವಾರ್ಯವಾಗಿ ಬಂದವರಲ್ಲ. ಈ ಕಲೆಯನ್ನು ಪ್ರದರ್ಶನ ಭಿಕ್ಷೆ ಪಡೆಯಬಹುದು ಎನ್ನುವ ಉದ್ದೇಶಕ್ಕಾಗಿಯೇ ಆಗಮಿಸಿದವರು. ಹಲವಾರು ಗುರುಗಳು ಮತ್ತು ಹಿರಿಯ ಕಲಾವಿದರಿಂದ ಈ ಕಲೆಯ ವಿವಿಧ ಆಯಾಮಗಳನ್ನು ಕಲಿತು ಸಮಷ್ಟಿಯಾಗಿ ರೂಪುಗೊಂಡಿದ್ದಾರೆ. ಮೊದಲು ಕುಣಿತವನ್ನು ಕಲಿತವರು. ಆ ಸಂದರ್ಭದಲ್ಲಿ ಮಟ್ಟಿಕಲ್ಲು ಬಸಪ್ಪನಿಂದ ಶೋಷಣೆಗೆ ಒಳಗಾದರೂ ಹಠ ಬಿಡದೆ ಜೋಗತಿ ಕುಣಿತವನ್ನು ಕಲಿತವರು. ಆದರೆ ಬಸಪ್ಪನನ್ನು 'ನನ್ನನ್ನು ಶೋಷಣೆ ಮಾಡಿದ

ವ್ಯಕ್ತಿ' ಎಂದು ದೂಷಣೆ ಮಾಡದೆ 'ನನಗೆ ಲಕ್ಷಾಂತರ ಜನರ ಪ್ರೀತಿಯನ್ನು ತಂದುಕೊಟ್ಟ ಮಹಾನ್ ಕಲಾವಿದ'ನೆಂದು ಹೊಗಳುತ್ತಾಳೆ. ಅದು ಮಂಜಮ್ಮನ ದೊಡ್ಡಗುಣ. ಆದರೆ ನಮಗೆ ಕಲೆಯನ್ನು ಕಲಿಯುವುದಕ್ಕಾಗಿಯೇ ಹಲವಾರು ನೋವುಗಳನ್ನು ಅನುಭವಿಸಿದರು ಎನ್ನುವುದು ಮುಖ್ಯವಾಗುತ್ತದೆ. ಜೊತೆಗೆ ಜೀವನ ವಿಧಾನದಲ್ಲಿ ಅಥವಾ ಕಲಾಲೋಕದಲ್ಲಿ ಮಟ್ಟಿಕಲ್ಲು ಬಸಪ್ಪನನ್ನು ಮಾದರಿಯನ್ನಾಗಿ ಮಾಡಿಕೊಳ್ಳದೆ ತನ್ನ ಎರಡನೇ ಗುರು : ತಾಯಿಯಾದ ಕಾಳವ್ವ ಜೋಗತಿಯ ಕಲೆ ಮತ್ತು ಬದುಕಿನ ತಾತ್ವಿಕ ಸಿದ್ಧಾಂತಕ್ಕೆ ಬದ್ಧರಾದವರು. ಕಾಳವ್ವ ಜೋಗತಿ ಕಲಿಸಿದ ಕಲೆಗಳಿಗಷ್ಟೇ ಸೀಮಿತಗೊಳಿಸಿಕೊಳ್ಳದೇ ರಂಗಭೂಮಿ, ನಾಟಕ ಮುಂತಾದ ಕ್ಷೇತ್ರಗಳಿಗೆ ತಮ್ಮನ್ನು ಮತ್ತು ತಮ್ಮ ತಂಡವನ್ನು ಸಹ ವಿಸ್ತರಣೆಗೊಳಿಸಿದವರು. 'ಮೋಹಿನಿ ಬಸ್ಮಾಸುರ' ಎಂಬ ಪೌರಾಣಿಕ ನಾಟಕ 'ಅಕ್ಕಮಹಾದೇವಿ' ಕುರಿತ ರಂಗರೂಪಕಗಳ ಪ್ರದರ್ಶನಗಳು ಈ ತಂಡದ ವಿಸ್ತರಣೆಗೆ ಉದಾಹರಣೆಯಾಗಿ ನಿಲ್ಲುತ್ತವೆ.

ಮಂಜಮ್ಮ ಬೇರೆ ಬೇರೆ ಕಲೆಗಳನ್ನು ಕಲಿತು ಪ್ರದರ್ಶನ ಮಾಡುವುದರ ಜೊತೆಗೆ ಪಾರಂಪರಿಕ ಜೋಗತಿ ಕಲೆಯನ್ನು ಪ್ರದರ್ಶನ ಮಾಡುತ್ತಿದ್ದಾರೆ. ಇವರು ಕೇವಲ ಕಲೆಗಾಗಿ, ಬದುಕಿಗಾಗಿ ಪ್ರದರ್ಶನ ಮಾಡುತ್ತಿಲ್ಲ. ಇಂತಹ ಉದ್ದೇಶಗಳ ಜೊತೆಗೆ ತಮ್ಮ (ಗಂಡು ಜೋಗತಿಯರ) ಅಸ್ತಿತ್ವಕ್ಕಾಗಿ ಪ್ರದರ್ಶನ ಮಾಡುತ್ತಿದ್ದಾರೆ ಎನ್ನುವುದು ಬಹಳ ಮಹತ್ವವಾದ ಸಂಗತಿ. ಜನರು ಕೀಳಾಗಿ ಕಾಣುವ ನಮ್ಮ ಕಲೆಯಿಂದಲೇ ಸಾಮಾಜಿಕ ಗೌರವ ಪಡೆಯಲು ಮತ್ತು ನಮಗೆ ಅಂಟಿಸಿರುವ ಪೂವಗ್ರಹಗಳನ್ನು ಹೊಡೆದುಹಾಕುವುದಕ್ಕೆ ಸಾಧ್ಯವಿದೆ ಎನ್ನುವುದು ಮಂಜಮ್ಮಳ ಬಲವಾದ ಧೋರಣೆ. ಈ ನಂಬಿಕೆಯಿಂದಲೇ ಅವರು ತಮ್ಮ ತಂಡವನ್ನು ಸಿದ್ಧಗೊಳಿಸಿದ್ದಾಳೆ. ಪೂರ್ವ ಗ್ರಹಗಳನ್ನು ಹೊಡೆದು ಹಾಕುತ್ತಿದ್ದಾಳೆ. ಈ ಪರಿಕಲ್ಪನೆಯನ್ನು ಮತ್ತಷ್ಟು ಗಟ್ಟಿಗೊಳಿಸು ವುದಕ್ಕಾಗಿಯೇ ಗಂಡುಜೋಗತಿ ಹಾಗೂ ಹಿಜಿಡಾಗಳಿಗಾಗಿ ಹುಡುಕಾಟ ಮಾಡಿದ್ದಾಳೆ. ಹೀಗೆ ಸಮಾಜದಲ್ಲಿ ಗೌರವಯುತವಾದ ಸ್ಥಾನವನ್ನು ಕಲ್ಪಿಸಿ ಕೊಡುವುದಕ್ಕಾಗಿ ಕಲೆಯನ್ನೇ ಅಸ್ತ್ರವನ್ನಾಗಿಸಿಕೊಂಡು ಹೋರಾಟ ಮಾಡುತ್ತಿರುವುದು ವಿಶೇಷ. ಈ ಹೋರಾಟದ ವಿವಿಧ ಆಯಾಮಗಳಿಗಾಗಿ ಮಂಜಮ್ಮಳ ತಂಡದ ಜೋಗತಿಯರ ಅಭಿಪ್ರಾಯಗಳನ್ನು ಇತರರೊಂದಿಗೆ ಮತ್ತೊಂದಿಷ್ಟು ಮಾತುಕತೆಗಳು ಎನ್ನುವ ಭಾಗದಲ್ಲಿರುವ ಗಮನಿಸ ಬಹುದು.

ಮಂಜಮ್ಮ ತಲೆಮೇಲೆ ಕೊಡಹೊತ್ತು ಕುಣಿಯುವ ಕುಣಿತವಂತು ಅದ್ಭುತ. ಈ ಕಲೆಯ ವೈಧಾನಿಕತೆಯನ್ನು ನೋಡಿ ಸೋಲದವರೇ ಇಲ್ಲ. ಸ್ತ್ರೀವೇಷದಲ್ಲಿ ಕೊಡಹೊತ್ತು

ಎಲ್ಲಿ ಕಾಣೆಲ್ಲಿಕಾಣೆ ಎಲ್ಲವ್ವ
ನಿನ್ನಂಥಾಕೀನೆಲ್ಲಿ ಕಾಣೆಲ್ಲಿ ಕಾಣೆ ॥ಪ॥

ಎಲ್ಲಿಕಾಣೇನು ಶಿವ ಒಲ್ಲ ಭೀಮಾನು ತಾಯಿ
ಕಲ್ಲಿನೊಳಗೆ ಹುಟ್ಟಿ ಉಗರಗೊಳ್ಳಕ ಇಳಿದೆ ॥ಎಲ್ಲಿ॥

ಎಂದು ಹಾಡನ್ನು ಹಾಡುತ್ತ ಚೌಡಿಕೆ ಅಥವಾ ತುಂತುಣಿ ವಾದ್ಯಗಳ ನಾದಕ್ಕೆ ಹೆಜ್ಜೆ ಹಾಕುವ ಶೈಲಿಯಂತೂ ವಿಭಿನ್ನ. ನೃತ್ಯದ ನಡುನಡುವೆ ಮಾಡುವ ದೈಹಿಕ ಕಸರತ್ತುಗಳು ನೋಡುಗರನ್ನು ಬೆರಗುಗೊಳಿಸುತ್ತವೆ. ತಲೆಮ್ಯಾಲೆ ಹೊತ್ತ 'ದೇವರ ಕೊಡ'ವನ್ನು ತಿರುಗಿಸುವ ತಂತ್ರಗಾರಿಕೆಯಂತೂ ಅಚ್ಚರಿಯನ್ನುಂಟುಮಾಡುತ್ತದೆ. ನಾಟಕಗಳ ಪಾತ್ರಾಭಿನಯದಲ್ಲೂ ಮಂಜಮ್ಮ ಹಿಂದೆ ಬಿದ್ದಿಲ್ಲ. ಜೋಗತಿಯರು ಪಾರಂಪರಿಕವಾಗಿ ಹಾಡಿಕೊಂಡು ಬಂದ 'ಯಲ್ಲಮ್ಮ' ನಾಟಕವನ್ನು ಅಸ್ತಿತ್ವದಲ್ಲಿರಿಸಿ ಕೊಂಡಿದ್ದಾರೆ. ಅಲ್ಲದೇ ರಾತ್ರಿಯಿಡೀ ಆಡಬಹುದಾದ ಈ ನಾಟಕವನ್ನು ಮೂರು ತಾಸಿಗೆ ಸಂಕಲಿಸಿ ಈ ಕಾಲದ ಅನೇಕ ಸಂಗತಿಗಳನ್ನು ಸೇರಿಸಿ ಮತ್ತಷ್ಟು ಸೃಜನಶೀಲ ಗೊಳಿಸಿದ್ದಾರೆ. ಈ ನಾಟಕವನ್ನು ಆಕೆಯ ಮಾರ್ಗದರ್ಶನದಲ್ಲಿ ತಮ್ಮ ತಂಡವೇ ಪ್ರದರ್ಶನ ಮಾಡುತ್ತಿದೆ. ಅಲ್ಲದೆ ಇಳಕಲ್ಲು ಉಮಾರಾಣಿಯವರ ಮಾರ್ಗದರ್ಶನದಲ್ಲಿ ಈಗ ಮೋಹಿನಿ ಬಸ್ಮಾಸುರ ಎಂಬ ಪೌರಾಣಿಕ ನಾಟಕವೂ ಈ ತಂಡದಿಂದ ಪ್ರದರ್ಶನವಾಗುತ್ತಿದೆ. ಇದರಲ್ಲಿ ಮಂಜಮ್ಮ ಬಸ್ಮಾಸುರ ಪಾತ್ರವನ್ನು ಮಾಡುತ್ತಿದ್ದಾರೆ. ಈ ಪಾತ್ರದ ಮೂಲಕ ತಮಗಿದ್ದ ಅನನ್ಯತೆಯನ್ನು ಮತ್ತಷ್ಟು ಹೆಚ್ಚಿಸಿಕೊಂಡಿದ್ದಾರೆ. ಇಂತಹ ಬೆಳವಣಿಗೆಯನ್ನು ಇಳಕಲ್ಲು ಉಮಾರಾಣಿಯವರು "ಮಂಜಮ್ಮ ಅದ್ಭುತ ಕಲಾವಿದೆ. ಅವರ ತಂಡ ನನ್ನ ನಿರ್ದೇಶನದಲ್ಲಿ ಮೋಹಿನಿ ಬಸ್ಮಾಸುರ ನಾಟಕವನ್ನು ಮಾಡಿದೆ. ಇವರಿಗೆ ಕೇವಲ ಹತ್ತು ದಿವಸದಲ್ಲಿ ಈ ನಾಟಕ ಕುಂದ್ರಿಸೀನಿ. ಅವರು ಅಷ್ಟು ಆಸಕ್ತಿಯಿಂದ ನಾಟಕವನ್ನು ಕಲಿತರು. ಇದರ ಹಿಂದೆ ಮಂಜಮ್ಮನ ಶ್ರಮ ಹೆಚ್ಚಾಗಿದೆ. ಆಕೆಯ ಕಲಿಕೆ ಮತ್ತು ಅಭಿನಯನವನ್ನು ನಾನ್ಯಾವತ್ತು ಮರೆಯಂಗಿಲ್ಲ. ಬಸ್ಮಾಸುರ ಪಾತ್ರವೆಂದರೆ ಮಂಜಮ್ಮ ಎನ್ನುವಷ್ಟರಮಟ್ಟಿಗೆ ಆ ಪಾತ್ರವನ್ನು ಮಾಡಿದ್ದಾಳೆ. ಈ ನಾಟಕದಲ್ಲಿ ಗಂಡುಜೋಗತಿಯರು ಅಭಿನಯವನ್ನು ನೋಡಿದ ನನಗೆ ಈ ತಂಡಕ್ಕೆ ಏನಾದ್ರು ಕಲಿಸಬೇಕು ಅಂತ ಆಸೆ ಬಂದಿದೆ. ಅದಕ್ಕಾಗಿಯೇ ಶ್ರೀಕೃಷ್ಣ ಸಂಧಾನ, ಪುಟ್ಟರಾಜ ಗವಾಯಿ ಅವರ ಜೀವನ ಚರಿತ್ರೆಯ ನಾಟಕವನ್ನು ಇವರಿಂದ ಮಾಡಿಸಬೇಕೆಂದಿರುವೆ. ಮಂಜಮ್ಮನಿಗಂತೂ ಎಲ್ಲ ಪಾತ್ರಗಳನ್ನು ಸಮರ್ಥವಾಗಿ ನಿಭಾಯಿಸುವ ಶಕ್ತಿ ಇದೆ. ಇಂತಹ ಶಕ್ತಿಯನ್ನು ತನ್ನಲ್ಲಿಟ್ಟುಕೊಂಡು ಜೋಗತಿ ಕಲೆಗೆ ಮಾತ್ರ ಮೀಸಲಾಗುತ್ತಿದ್ದಾಳೆ. ನಾನು ಮತ್ತು ನಾಗರತ್ನಮ್ಮ ಆಕೆಯನ್ನು ರಂಗಭೂಮಿಗೆ ತಂದಿದ್ದೇವೆ. ಅದನ್ನು ಮಂಜಮ್ಮ ಸಮರ್ಥವಾಗಿ ಬಳಸಿಕೊಳ್ಳುತ್ತಿದ್ದಾಳೆ. ಅದಕ್ಕಾಗಿಯೇ ನಮಗೆ ಖುಷಿಯಾಗುತ್ತಿದೆ. ಅಲ್ಲದೆ ಆಕೆಯಲ್ಲಿ ಒಳ್ಳೆಯ ಸಂಘಟನಾ ಗುಣವಿದೆ. ಹಾಗಾಗಿ ಏನಾದರೊಂದು ಸಾಧನೆ ಮಾಡುತ್ತಾಳೆ ಎನ್ನುವ ಭರವಸೆ ನನಗೈತಿ".[೨] ಮಂಜಮ್ಮ ಇಂತಹ ಸಂಘಟನಾ ಶಕ್ತಿಯಿಂದ ತಮ್ಮ ತಂಡ ಮತ್ತು ವೃತ್ತಿಗೆ ಎದುರಾಗುವ

ಸಮಸ್ಯೆಗಳನ್ನು ಬಹಳ ಸರಳವಾಗಿ ಬಗೆಹರಿಸಿಕೊಳ್ಳುತ್ತಿದ್ದಾಳೆ. ಈ ಗುಣ ಅನೇಕ ಗಂಡುಜೋಗತಿಯರಲ್ಲಿ ಧೈರ್ಯ ತಂದಿದೆ. ಈಕೆಯನ್ನು ನಂಬಿ ಬದುಕುವಂತೆ ಮಾಡಿದೆ.

ಆದರೂ ಸಮಾಜದಿಂದ ಅನೇಕ ಯಾತನೆಗಳನ್ನು ಅನುಭವಿಸುತ್ತಿದ್ದಾರೆ. "ಮಂಜಮ್ಮ ಜೋಗತಿ ಅನೇಕ ಅಪಮಾನ, ಅವಮಾನಗಳ ನಡುವೆಯೂ ಕೂಡ ಜೋಗತಿ ಕಲೆಯನ್ನು ಜೀವಂತಗೊಳಿಸುವುದಕ್ಕೆ ಸಮರ್ಥವಾದ ಯೋಜನೆಗಳನ್ನು ಹಾಕಿ ಕೊಂಡಿದ್ದಾಳೆ. ಜೋಗತಿಯರ ಬಗ್ಗೆ ನಮ್ಮ ಸಮಾಜದಲ್ಲಿ ಒಂದು ಬಗೆಯ ಕೀಳರಿಮೆಯಿದೆ. ಹಾಗಿದ್ದರೂ ಕೂಡ ಒಂದಿಷ್ಟು ಧೃತಿಗೆಡದೆ ಸ್ವಯಂಸ್ಫೂರ್ತಿಯಿಂದ ಕಲೆಯನ್ನು ನೆಚ್ಚಿಕೊಂಡು ಬದುಕನ್ನು ಮಾಡುತ್ತಿದ್ದಾರೆ. ತಮ್ಮ ತಂಡವನ್ನು ಸೃಜನಶೀಲ ಗೊಳಿಸುತ್ತಿದ್ದಾರೆ".[೩] ಈ ಸೃಜನಶೀಲತೆ ಮಂಜಮ್ಮನನ್ನು ಮತ್ತು ಆಕೆಯ ತಂಡವನ್ನು ಇಂದಿಗೂ ಜೀವಂತಗೊಳಿಸಿದೆ. ಇಂತಹ ಸೃಜನಶೀಲತೆಯನ್ನು ಗುರುತಿಸಿ ಮಂಜಮ್ಮ ಜೋಗತಿಗೆ ಮಹಾರಾಷ್ಟ್ರದ ನಾಗಪುರ ದಕ್ಷಿಣ ಮಧ್ಯವಲಯ ಸಾಂಸ್ಕೃತಿಕ ಕೇಂದ್ರ ೨೦೧೦-೧೧ರಲ್ಲಿ 'ಗುರುಶಿಷ್ಯ ಪರಂಪರೆ'ಯ ಯೋಜನೆ ನೀಡಿತ್ತು. ಈ ಯೋಜನೆಯ ಭಾಗವಾಗಿ ಯುವ ಜೋಗತಿಯರಿಗೆ ಜೋಗತಿನೃತ್ಯ ಮತ್ತು ನಾಟಕದ ತರಬೇತಿ ನೀಡಿದ್ದಾರೆ. ಅಲ್ಲದೆ ಪ್ರದರ್ಶನಗಳಲ್ಲಿ ಅವರ ಕುಣಿತವನ್ನು ನೋಡಿ ಸಂತೋಷ ಪಡುತ್ತಿದ್ದಾರೆ. 'ಹಿಂದೆ ನಾನೊಬ್ಬಳೆ ಕುಣಿಯುತ್ತಿದ್ದೆ, ಈಗ ವೇದಿಕೆ ತುಂಬುವಷ್ಟು ಗಂಡುಜೋಗತಿಯರು ಕುಣಿಯುತ್ತಿದ್ದಾರೆ. ಇದರಿಂದಾಗಿ ನಮ್ಮ ತಂಡದ ಪ್ರದರ್ಶನಕ್ಕೆ ಮತ್ತಷ್ಟು ಬಲ ತಂದಿದೆ. ಆಟದ ಅಲಂಕಾರವನ್ನು ಹೆಚ್ಚಿಸಿದೆ. ಇದಕ್ಕಾಗಿ ಜೋಗತಿಯರಿಗೆ ಧನ್ಯವಾದಗಳು' ಎನ್ನುತ್ತಾರೆ. ಇಂತಹ ಮನೋಭಾವನ್ನು ಇಟ್ಟುಕೊಂಡ ಕಲಾವಿದರು ಅಪರೂಪ ಎನ್ನಬಹುದು.

ಅಲ್ಲದೆ ಮಂಜಮ್ಮನಲ್ಲಿ ಸಮಷ್ಟಿ ಮತ್ತು ವಿಸ್ತೃತವಾದ ಗುಣಗಳು ಪ್ರಧಾನವಾಗಿ ಕಾಣಿಸುತ್ತವೆ. ವಾಸ್ತವತೆಯನ್ನು ವಸ್ತುನಿಷ್ಠವಾಗಿ ವಿಶ್ಲೇಷಣೆ ಹಾಗೂ ವಿಮರ್ಶೆ ಮಾಡುವ ಇವರ ಮನೋಧರ್ಮ ವಿಶಿಷ್ಟವಾದುದು. ಈ ಕಾರಣಕ್ಕಾಗಿಯೇ ತಮ್ಮ ಜೀವನದ ವಾಸ್ತವತೆಯನ್ನು ಜನರಿಗೆ ಮತ್ತು ಸರಕಾರದ ಮುಂದೆ ಬೇರೆ ಬೇರೆ ನೆಲೆಗಳಲ್ಲಿ ಅನಾವರಣ ಮಾಡುತ್ತಿದ್ದಾರೆ. ಮಾಸಾಶನದ ಆಯ್ಕೆಯ ಅವಧಿಯನ್ನು ಕಡಿಮೆ ಮಾಡಬೇಕೆನ್ನುವ ವಾದವೇ ಇದಕ್ಕೆ ಪ್ರಮುಖ ಉದಾಹರಣೆ. ಇದು ಕೇವಲ ಮಂಜಮ್ಮ ಜೋಗತಿಯ ಅಥವಾ ಗಂಡುಜೋಗತಿ ಕಲಾವಿದರ ಅಭಿಪ್ರಾಯವಲ್ಲ. ಕರ್ನಾಟಕದ ಅನೇಕ ಕಲಾವಿದರು ಹಲವು ದಶಕಗಳಿಂದ ಈ ಅಭಿಪ್ರಾಯ ಮತ್ತು ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಹರದೇಶಿ-ನಾಗೇಶಿ ಕಲಾವಿದೆಯರಲ್ಲೂ ಇಂತಹ ಆತಂಕಗಳಿವೆ. "ನಾನು ಸಂದರ್ಶಿಸಿದ ಐವತ್ತೈದರ ಗಡಿದಾಟಿದ ಅನೇಕ ಮಹಿಳೆಯರು ಪಿಂಚಣಿ

ಪಡೆಯುವ ಹಂಬಲದಿಂದ. ನನ್ನ ಜೊತೆ ಮನತೆರೆದು ಮಾತನಾಡಿದ್ದಾರೆ. ನಾನು ಪಿಂಚಣಿ ಕೊಡಿಸುವುದಕ್ಕಾಗಿ ಬಂದಿಲ್ಲ ಎನ್ನುವುದನ್ನು ಹಲವುಬಾರಿ ಸ್ಪಷ್ಟಪಡಿಸಿದರೂ ಯಾಕ ತಾಯಿ ಹಿಂಗಾಡ್ತಿ? ನೀನು ಮನಸು ಮಾಡಿದ್ರೆ ನಮಗೆ ಪಿಂಚಣಿ ಕೊಡ್ಸೋದು ದೊಡ್ಡ ಮಾತೇನವ್ವಾ? ಎಂದು ನನ್ನನ್ನೇ ಪ್ರಶ್ನೆಸುತ್ತಿದ್ದರು".[೪] ಇಂತಹ ಸ್ಥಿತಿ ಅನಾಥ ಮತ್ತು ವಯಸ್ಸಾದ ಜನಪದ ಕಲಾವಿದರಲ್ಲಿ ಹೆಚ್ಚಾಗಿ ಕಂಡುಬರುತ್ತಿದೆ. ಇದು ಸಹಜವಾದರೂ ಅದರ ಹಿಂದಿನ ಅನಿವಾರ್ಯತೆಯನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಏಕೆಂದರೆ "ಪಿಂಚಣಿಗಾಗಿ ಕೋರಿಕೆ ಮಾಡಿಕೊಂಡವರೆಲ್ಲ ಬದುಕಿನ ಸಾಯಂಕಾಲದಲ್ಲಿದ್ದ ಅವರಿಗೆ ಹಾಡಿಕೆಯ ದುಡುಮೆಯನ್ನು ನಡೆಸಿಕೊಂಡು ಹೋಗುವ ಚೈತನ್ಯವಿರಲಿಲ್ಲ. ಇವರು ಹಾಡುಗಾರಿಕೆಗೆ ಸೂರು ಹಾಕುತ್ತಿದ್ದವರು. ಇವರ ಸೋದರ ಮಾವಂದಿರು, ಅಣ್ಣಂದಿರು ಇವರೆಲ್ಲ ಹಾಡುವ ಮಹಿಳೆಯರ ವಯಸ್ಸಿಗಿಂತ ಹದಿನೈದು, ಇಪ್ಪತ್ತು ವರ್ಷ ದೊಡ್ಡವರು. ಹಿಮ್ಮೇಳದವರು, ವಯಸ್ಸಾಗಿಯೋ, ಅನಾರೋಗ್ಯದ ಕಾರಣ ದಿಂದಾಗಿಯೋ ಇಹಲೋಕಕ್ಕೆ ವಿದಾಯ ಹೇಳಿದ್ದಾರೆ. ಬದುಕಿನ ಮುಸ್ಸಂಜೆಯಲ್ಲಿ ಹೊಸ ಮೇಳ ಕಟ್ಟಿಕೊಂಡು ಹಾಡಿಕೆ ಮಾಡುವ ದೈಹಿಕ ಶಕ್ತಿಯನ್ನು, ಮಾನಸಿಕ ಚೈತನ್ಯವನ್ನು ಈ ವಯಸ್ಸಾದ ಮಹಿಳಾ ಹಾಡುಗಾರರು ಕಳೆದುಕೊಂಡಿದ್ದರು. ಕಲಾ ಪ್ರದರ್ಶನಕ್ಕಾಗಿ ನಿದ್ದೆಗೆಟ್ಟು, ಅಲೆಮಾರಿಯಾಗಿ ಹಾಡಿಕೆ ಮಾಡಿ ಮನೆಯ ಸದಸ್ಯರನ್ನು ಅಗಲಿದವರು. ಇವತ್ತು ಮನೆಯ ಯಾವ ಸದಸ್ಯರೂ ಕುಳಿತು ಉಣ್ಣುವಂತಿಲ್ಲ. ಕೇರಿಯ ಕುಟುಂಬಗಳಿಗೆ ಬಡತನವೇ ಬಸಿರಾಗಿದೆ. ಹೀಗಾಗಿ ಮನೆಯ ಆರ್ಥಿಕ ಮುಗ್ಗಟ್ಟು ವಿರಾಮ ಬಯಸುವವರನ್ನು ಕುಟುಂಬಕ್ಕೆ ಭಾರ ಎಂದೇ ಪರಿಗಣಿಸುವಂತೆ ಒತ್ತಾಯಿಸುತ್ತಿತ್ತು. ಹಾಡಿಕೆಯನ್ನು ಕೈಬಿಟ್ಟು ಕುಟುಂಬಕ್ಕೆ ಹೊರೆಯಾಗದಂತೆ ಬದುಕಬೇಕೆಂದರೆ ಕಲಾಪಿಂಚಣಿ ಅಗತ್ಯವಾಗಿತ್ತು".[೫] ಇಂತಹ ಅಗತ್ಯತೆ ಐವತ್ತರ ಗಡಿದಾಟಿದ ಗಂಡುಜೋಗತಿಯರಿಗೆ ಇನ್ನೂ ಹೆಚ್ಚಾಗಿದೆ. ಏಕೆಂದರೆ ಚಿಕ್ಕ ವಯಸ್ಸಿನಲ್ಲೇ ಮನೆಯಿಂದ ನಿರಾಕರಣೆಗೆ ಒಳಗಾದವರು. ತಮ್ಮ ಬದುಕಿಗಾಗಿ ಅಲೆಮಾರಿಗಳಾದವರು. ಕಲೆ ಪ್ರದರ್ಶನ ಮಾಡಿ, ಭಿಕ್ಷೆ ಬೇಡಿ ತಿನ್ನುವುದೇ ಇವರ ಕಾಯಕ. ಸುಮಾರು ಐವತ್ತು ವರ್ಷ ದಾಟುತ್ತಿದ್ದಂತೆಯೆ ದುಡಿಮೆಗೆ ಅನುಸರಿಸುತ್ತಿದ್ದ ಕಾರ್ಯಗಳನ್ನು ಮುಂದುವರೆಸುವುದು ಕಷ್ಟವಾಗುತ್ತದೆ. ಅಂದರೆ ಕಲೆ ಪ್ರದರ್ಶನ ಮತ್ತು ಭಿಕ್ಷಾಟನೆ ಮಾಡುವ ಶಕ್ತಿಯನ್ನು ಕಳೆದುಕೊಂಡಿರುತ್ತಾರೆ. ತಮ್ಮದೇಯಾದ ಸೂರುಗಳಿರುವುದಿಲ್ಲ. ಈ ಸಂಕಷ್ಟವನ್ನು ಅನುಭವಿಸಿದ ಮತ್ತು ಆ ವಾಸ್ತವತೆಯನ್ನು ಅರಿತ ಮಂಜಮ್ಮ ಜೋಗತಿ ಮಾಸಾಶನದ ಅರ್ಹತಾ ವಯಸ್ಸನ್ನು ಸುಮಾರು ನಲವತ್ತೆಂಟು ಅಥವಾ ಐವತ್ತು ವರ್ಷಕ್ಕೆ ಇಳಿಸಬೇಕೆಂದು ಸರಕಾರವನ್ನು ಒತ್ತಾಯಿಸುತ್ತಾಳೆ. ಕಲಾವಿದರ ಪರವಾಗಿ ಈ ವಿಷಯದ ಬಗ್ಗೆ ಸಂಶೋಧಕರು, ಅಧಿಕಾರಿಗಳೂ, ಸಂಘ-ಸಂಸ್ಥೆಗಳು,

ಮಾಸಾಶನಕ್ಕೆ ಸಂಬಂಧಿಸಿದ ಸರಕಾರದ ಅಧಿಕಾರಿಗಳತ್ತಿರ ಮಾತನಾಡಬೇಕೆಂದು ಅಂಗಲಾಚುತ್ತಾರೆ. ಈ ಅಂಗಲಾಚುವಿಕೆ ವ್ಯಕ್ತಿಗತವಾದದ್ದಲ್ಲ. ಕಲಾ ಸಮುದಾಯ ಆಧಾರಿತವಾದದ್ದು ಎನ್ನುವುದೇ ಅವರ ಒತ್ತಾಯದ ವಿಶೇಷ.

ಸರಕಾರದ ಸೌಲಭ್ಯಗಳು ನನಗೆ ಮಾತ್ರ ಸಿಕ್ಕರೆ ಸಾಕು ಎನ್ನುವ ಮನಸ್ಥಿತಿ ಇವರದಲ್ಲ. 'ಮನಸ್ಥಿತಿ ಮತ್ತು ಮೈತ್ರಿ' ಯೋಜನೆಗೆ ಅರ್ಜಿ ಹಾಕದೆ ಇರುವುದು ಮತ್ತು ನನ್ನ ಜೊತೆಗಿದ್ದವರಿಗೆ ಸಿಗದಿರುವ ಅವಕಾಶ ನನಗ್ಯಾಕೆ ಎನ್ನುವ ಮಾತೇ ಇದಕ್ಕೆ ಸಾಕ್ಷಿ. ಸಿಗುವುದಾದರೆ ನಮ್ಮೆಲ್ಲರಿಗೆ ಸಿಗಬೇಕು, ಪಾತ್ರ ಮಾಡುವುದಾದರೆ ನಮ್ಮ ತಂಡದವರೆಲ್ಲರೂ ಮಾಡಬೇಕು ಅನ್ನುವ ಮನಸ್ಥಿತಿಯವರು. "ಈಗ ಮೋಹಿನಿ ಬಸ್ಮಾಸುರ ನಾಟಕದಲ್ಲಿ ಪಾತ್ರ ಮಾಡುವುದಕ್ಕೆ ತಂಡದ ಕೆಲವು ಜೋಗತಿಯರು ಹಿಂಜರಿಯುತ್ತಿದ್ದಾರೆ. ಹಾಗಾಗಿ ಮಂಜಮ್ಮ ನಾನು ಬರುವುದಿಲ್ಲ ಎನ್ನುತ್ತಿದ್ದಾಳೆ. ಇದರಿಂದಾಗಿ ನಾಟಕ ನಿಲ್ಲುವ ಹಂತಕ್ಕೆ ಬಂದಿದೆ."[೬] ಆದರೂ ಮಂಜಮ್ಮ ನಾಟಕ ನಿಂತುಹೋಗುತ್ತದೆಯೆಂದು ಸಂಕಟ ಪಡುತ್ತಾಳೆ ಹೊರತು ತಂಡವನ್ನು ಬಿಟ್ಟು ತಾನೊಬ್ಬಾಕೆ ಯಾವುದೇ ಕೆಲಸದಲ್ಲಿ ಮುಂದುವರೆಯುವುದಿಲ್ಲ. ಇಂತಹ ಗುಣಗಳು ಅಲ್ಲದೆ ಅನೇಕ ಬಗೆಯ ಸಾಮಾಜಿಕ ಕಾಳಜಿಗಳು ಇವರಲ್ಲಿವೆ. 'ನಾನು ಪುರುಷನಾದ್ರು ಸೀರೆ ಹಾಕಿಕೊಂಡಿರುವೆ. ಈ ವೇಷ ಧರಿಸಿ ನಾನೇನಾದ್ರು ಅನೈತಿಕ ಚಟುವಟಿಕೆಗಳನ್ನು ಮಾಡಿದರೆ ಅದು ಹೆಣ್ಣುಕುಲಕ್ಕೆ ಅವಮಾನ ಮಾಡಿದಂತೆ. ನಾನು ಹೆಣ್ಣಿನ ವೇಷದಲ್ಲಿರುವುದರಿಂದ ಹೆಣ್ಣಾಗಿ ಹೆಣ್ಣಿನಂತೆ ಬದುಕುವೆ' ಎನ್ನುವ ಬದ್ಧತೆ ಮಹಿಳಾ ಮತ್ತು ಸಾಮಾಜಿಕ ಕಾಳಜಿಯನ್ನು ತಿಳಿಸುತ್ತದೆ. ಈ ಕಾಳಜಿ ಅಥವಾ ಜೀವನ ವಿಧಾನ ಪ್ರಸ್ತುತ ಪುಸ್ತಕಕ್ಕೆ ಸಂದರ್ಶನ ಮಾಡಿದ ಸಮಾಜಸೇವಕರು, ಸಂಶೋಧಕರಿಂದ ಅಭಿವ್ಯಕ್ತಿಗೊಂಡಿದೆ.

ಮಂಗಳಮುಖಿಯರನ್ನು ಅಥವಾ ಗಂಡುಜೋಗತಿಯರನ್ನು ಮನುಷ್ಯರಂತೆ ನೋಡಿ, ನಮಗೂ ನಿಮ್ಮ ಜೊತೆ ಬದುಕುವುದಕ್ಕೆ ಅವಕಾಶ ಮಾಡಿಕೊಡಿ. ನಾವು ಸಹ ಮನುಷ್ಯರು, ಮನುಷ್ಯರು ಮನಷ್ಯರತ್ತಿರ ಮಾತ್ರ ಬದುಕುವುದಕ್ಕೆ ಸಾಧ್ಯ ಎನ್ನುವ ಇವರ ಕೋರಿಕೆ ಲಿಂಗತಾರತಮ್ಯದ ನೆಲೆಯಲ್ಲಿ ಶೋಷಿತವಾಗುವ ಬದುಕಿನ ಮುಕ್ತತೆಗಾಗಿ ಅಂಗಲಾಚುವಂತಿದೆ. ಇದೇ ಅಳಲನ್ನು ಹಲವು ತೃತೀಯಲಿಂಗಿಗಳು ವ್ಯಕ್ತಪಡಿಸಿದ್ದಾರೆ. "ಇಡೀ ಸೃಷ್ಟಿಯೇ ಪರಸ್ಪರ ಅವಲಂಬನೆಯಿಂದ ಕೂಡಿದುದು. ಮನುಷ್ಯರಲ್ಲೇ ಒಂದು ಗುಂಪಿಗೆ ಸೇರಿದವರಾದ ನಾವು ಎಲ್ಲದಕ್ಕೂ ಯಾರನ್ನಾದರೂ ಅವಲಂಬಿಸಿಯೇ ತೀರಬೇಕು. ಆದರೆ ಒರಗಿಕೊಳ್ಳಲು ನಮಗೆ ಒಂದು ಗೋಡೆಯಾಗಲೀ, ನಿಲ್ಲಲು ಒಂದಿಷ್ಟು ಸ್ಥಳವಾಗಲೀ ನೀಡಲು ಕೂಡ ಇಚ್ಚಿಸದ ಈ ಸಮಾಜದಲ್ಲಿ ನಾವು ಬೇರೆ ಏನುತಾನೆ ಮಾಡಲು ಸಾಧ್ಯ?".[೭] ಇಂತಹ ಆತಂಕ, ಕೋರಿಕೆ ಮತ್ತು ವಾದಗಳು ತೀವ್ರವಾಗಿ ಕೇಳಿಬರುತ್ತವೆ. ಅಲ್ಲದೆ "ನನಗೊಂದು ಆತಂಕವಿದೆ, ಸುಪ್ರಿಂಕೋರ್ಟ್

ಹೇಳಿದೆಯೆಂದು ಸರ್ಕಾರವೇನೋ ನಮಗೆ ಮೀಸಲಾತಿ ನೀಡಬಹುದು. ಎಲ್ಲ ರೀತಿಯ ಸರಕಾರಿ ದಾಖಲೆಗಳಲ್ಲಿ ಹಾಗೂ ಅರ್ಜಿಗಳಲ್ಲಿ ನಮ್ಮನ್ನು 'ತೃತೀಯಲಿಂಗ'ವೆಂದು ಗುರುತಿಸಲೂಬಹುದು. ಆದರೆ ನಮಗೆ ಬೇಕಿರುವುದು ಕೇವಲ ಈ ಐಡೆಂಟಿಟಿ ಮಾತ್ರವಲ್ಲ. ನಮಗೆ ಜನರ ಪ್ರೀತಿ ಬೇಕು. ಅದು ಸಿಗುತ್ತದೆಯೇ? ನಾನು ನೋಡಿದಂತೆ, ಕಾಯ್ದೆಯಲ್ಲಿರುವುದನ್ನೆಲ್ಲ ಜನ ಒಪ್ಪಿಕೊಳ್ಳುವುದಿಲ್ಲ. ಹೆದರಿಕೆಯಿಂದ ಅವುಗಳನ್ನು ಪಾಲಿಸಬಹುದಷ್ಟೆ, ಆದರೆ ಮನಃಪೂರ್ವಕವಾಗಿ ಅವುಗಳನ್ನು ಸ್ವೀಕರಿಸುವುದಿಲ್ಲ. ಹಾಗಾಗಿ ಜನರು ಎಲ್ಲರಂತೆ ನಮ್ಮನ್ನು ನೋಡಲು ಆರಂಭಿಸಿದ ದಿನ ನಿಜವಾಗಿಯೂ ನಾವು ಮನುಷ್ಯರು ಎಂಬ ಭಾವನೆ ನಮಗೆ ಬರುತ್ತದೆ"[೩] ಎನ್ನುವ ಮಾತುಗಳು ವಾಸ್ತವದಿಂದ ಕೂಡಿವೆ. ಮಂಜಮ್ಮಳು ಸಹ ಈ ಆಲೋಚನೆಗೆ ಬದ್ಧರಾದವರು. ಆದರೆ ಜನರಲ್ಲಿ ಈ ಮನಸ್ಥಿತಿ ಬರಬೇಕೆಂದರೆ ನಾವು ನೈತಿಕವಾಗಿ ಬದುಕಬೇಕು. ಪರಂಪರೆ ನಮ್ಮನ್ನು ನೋಡಿದ ದೃಷ್ಟಿ ತುಂಬಾ ಕೆಟ್ಟದಾಗಿದೆ. ಇದನ್ನು ಹೋಗಲಾಡಿಸ ಬೇಕು. ಆಗ ನಮ್ಮ ಬಗ್ಗೆ ಜನರಲ್ಲಿರುವ ಪಾರಂಪರಿಕ ನಂಬಿಕೆ ಮತ್ತು ಪೂರ್ವಗ್ರಹಗಳನ್ನು ಹೊಡೆದುಹಾಕುವುದಕ್ಕೆ ಸಾಧ್ಯ ಎನ್ನುವ ತತ್ವಕ್ಕೆ ಮಂಜಮ್ಮ ಜೋಗತಿ ಬದ್ಧರಾಗಿದ್ದಾರೆ. ಈ ಕಲಾಬದ್ಧತೆ ವಿಭಿನ್ನವಾಗಿದೆ ಮತ್ತು ಆರೋಗ್ಯಕರ ಬೆಳವಣಿಗೆಗೆ ಉತ್ತೇಜನಕರವಾಗಿದೆ. ಇಂತಹ ಆಲೋಚನೆಯುಳ್ಳ ಮಂಜಮ್ಮ ಅವರಿಗೆ ನಮ್ಮೆಲ್ಲರ ಪ್ರೀತಿ ಮತ್ತು ಗೌರವ ಬೇಕು. ಆಗ ಅವರಂದುಕೊಂಡಂತೆ ಅವರ ಬದುಕು ಹಸನಾಗುತ್ತದೆ.

ಮಂಜಮ್ಮಳನ ಇಂತಹ ವ್ಯಕ್ತಿತ್ವ ಮತ್ತು ಕಲಾ ವೈಶಿಷ್ಟ್ಯತೆಗೆ ಹಲವಾರು ಸನ್ಮಾನಗಳು, ಪ್ರಶಸ್ತಿಗಳು ಹುಡುಕಿಕೊಂಡು ಬಂದಿವೆ. ಆಗ ತನ್ನ ತಾಯಿ ಕಾಳವ್ವ ಜೋಗತಿಯನ್ನು ಮತ್ತು ತನ್ನ ಜೊತೆಗೆ ದುಡಿಯುತ್ತಿರುವ ತಂಡದ ಜೋಗತಿಯರನ್ನು ನೆನಪಿಸಿಕೊಳ್ಳುತ್ತಾಳೆ. ಬಂದ ಪ್ರಶಸ್ತಿಗಳಲ್ಲಿ ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ(೨೦೦೬), ಜಾನಪದ ಲೋಕ ಪ್ರಶಸ್ತಿ(೨೦೦೮), ರಾಜ್ಯೋತ್ಸವ ಪ್ರಶಸ್ತಿ(೨೦೧೦), ಶ್ರೀ ತಾಯಮ್ಮ ಮಲ್ಲಯ್ಯ ದತ್ತಿನಿಧಿ ಪ್ರಶಸ್ತಿ(೨೦೧೨) ಕರ್ನಾಟಕ ಜಾನಪದ ಜಾನ ಪ್ರಶಸ್ತಿ, ಸಮಾಜ ಸಖಿ ಪ್ರಶಸ್ತಿ(೨೦೧೪) ಪ್ರಮುಖವಾದವು. ಅಲ್ಲದೇ ಮಂಜಮ್ಮ ಹೊಸಪೇಟೆ ಆಕಾಶವಾಣಿಗೆ ನೀಡಿದ ಸಂದರ್ಶನಗಳಿಗೂ ಪ್ರಶಸ್ತಿಗಳು ಬಂದಿವೆ. ಇವರಿಗೆ ಇನ್ನೂ ಹಲವು ಅವಕಾಶಗಳು ಮತ್ತು ಪ್ರಶಸ್ತಿಗಳು ಹುಡುಕಿಕೊಂಡು ಬರಲಿ, ಕೀರ್ತಿ ಹೆಚ್ಚಾಗಲಿ ಆ ಮೂಲಕ ಗಂಡುಜೋಗತಿಯರ ಕಲಾ ಅನನ್ಯತೆ ಗಟ್ಟಿಗೊಳ್ಳಲಿ ಎಂದು ಹಾರೈಸುವೆ.

**ಅಡಿಟಿಪ್ಪಣಿಗಳು**

೧. ದಕ್ಷಿಣ ಕರ್ನಾಟಕ ಕಾವ್ಯ ಪ್ರಕಾರಗಳು, ಜೀ.ಶಂ. ಪರಮಶಿವಯ್ಯ, ಪು. ೨೪೩.

೨. ಶ್ರೀಮತಿ ಇಳಕಲ್ ಉಮಾರಾಣಿ, ಇಳಕಲ್, ವಯಸ್ಸು ೪೮.

೩. ಪ್ರೊ. ಅಂಬಳಿಕೆ ಹಿರಿಯಣ್ಣ, ಕುಲಪತಿಯವರು, ಪಟ್ಟಾಂಗ ಕಾರ್ಯಕ್ರಮದ ಅಧ್ಯಕ್ಷೀಯ ಭಾಷಣದ ತುಣುಕು.

೪. ಹರದೇಶಿ–ನಾಗೇಶಿ : ಕಲೆ ಮತ್ತು ಕಲಾವಿದರು ಲಿಂಗಸಂಬಂಧಿ ಅಧ್ಯಯನ, ಡಾ. ಶೈಲಜ ಹಿರೇಮಠ; ಪು. ೧೫.

೫. ಅದೇ., ಪು. ೧೭.

೬. ಇಳಕಲ್ ಉಮಾರಾಣಿ, ಇಳಕಲ್, ಫ ೪೮.

೭. ನಾನು ಅವನಲ್ಲ ಅವಳು..., ಡಾ. ತಮಿಳ್‌ಸೆಲ್ವಿ, ಪು. ೧೯೬.

೮. ಸಖಿ, ಡಾ. ವೆಂಕಟೇಶ್ ಎಂ. ರಾವ್, ಪು. ೬೮.

□□

# ಅನುಬಂಧ

## ಅ. ಸಾಂಸ್ಕೃತಿಕ ಪದಕೋಶ

**ಊರಾಡುವುದು :** ಜೋಗತಿಯರು ಊರುಗಳಲ್ಲಿ ಮನೆಮನೆಗೆ ಹೋಗಿ ಭಿಕ್ಷೆ ಬೇಡುವ ಕ್ರಮ. ವೃತ್ತಿಜೋಗತಿಯರು ವೇಷಭೂಷಣಗಳನ್ನು ಧರಿಸಿ(ಕಡ್ಡಾಯವೇನಲ್ಲ) ನಿತ್ಯ ಭಿಕ್ಷೆ ಬೇಡಿದರೆ, ಹವ್ಯಾಸಿ ಜೋಗತಿಯರು ಮಂಗಳವಾರ, ಶುಕ್ರವಾರ, ಹುಣ್ಣಿಮೆ ಹಬ್ಬ ಮತ್ತು ತಮ್ಮ ಆರಾಧ್ಯ ದೇವತೆಗೆ ಸಂಬಂಧಿಸಿದ ದಿನ ಮತ್ತು ಹಬ್ಬಗಳಲ್ಲಿ ಭಿಕ್ಷೆ ಬೇಡುತ್ತಾರೆ. ಇವರು ಆ ದಿನದಂದು ಕನಿಷ್ಟ ಏಳು ಮನೆಗಳನ್ನಾದರೂ ಭಿಕ್ಷೆ ಬೇಡಬೇಕು ಎನ್ನುವ ಪಾರಂಪರಿಕ ನಿಯಮವಿದೆ.

**ಇಳೆವು :** ಕಲೆ ಪ್ರದರ್ಶನ ಮಾಡುವವರ ಮತ್ತು ಮಾಡಿಸುವವರ ನಡುವೆ ನಡೆಯುವ ಒಪ್ಪಂದ. ಈ ಒಪ್ಪಂದಕ್ಕಾಗಿಯೇ ಆಟ ಮಾಡಿಸುವವರು ಐದು ವೀಳ್ಯದ ಎಲೆ, ಐದು ಅಡಿಕೆ, ನಿರ್ದಿಷ್ಟ ಮೊತ್ತ(ಒಂದು ರೂಪಾಯಿ ಇಪ್ಪತ್ತೈದು ಪೈಸೆ, ಹನ್ನೊಂದು ರೂಪಾಯಿ, ಒಂದುನೂರ ಒಂದು ರೂಪಾಯಿ ಕೊಡುವ ಪಾರಂಪರಿಕ ಪದ್ಧತಿ ಇದೆ)ವನ್ನು ಆಟ ಮಾಡುವವನ ಕೈಯಲ್ಲಿ ಕೊಡುತ್ತಾರೆ. ಈ ಪದ್ಧತಿಗೆ ಜನಪದ ಕಲಾ ಪ್ರದರ್ಶನದಲ್ಲಿ ವಿಶೇಷವಾದ ಮಹತ್ವವಿದೆ. ಈ ಸಂದರ್ಭದಲ್ಲಿ ನಡೆದ ಒಪ್ಪಂದವನ್ನು ಕಲಾವಿದರು ಮೀರುವುದಿಲ್ಲ.

**ಗೆಜ್ಜೆಸರ/ಗೆಜ್ಜೆಪಟ್ಟಿ :** ಎತ್ತುಗಳ ಹಣೆಗೆ ಕಟ್ಟುವ ಸರ. ಎತ್ತುಗಳು ಅಲಂಕಾರಕ್ಕಾಗಿ ಇದನ್ನು ಬಳಸುತ್ತಾರೆ. ಜನಪದ ಕಲಾವಿದರು ನೃತ್ಯ ಮಾಡುವ ಸಂದರ್ಭದಲ್ಲೂ ಅಪೂರ್ವವಾಗಿ ಇದನ್ನು ಬಳಸುತ್ತಾರೆ. ಸುಮಾರು ಒಂದು ಅಡಿ ಉದ್ದ, ಎರಡು ಇಂಚು ಅಗಲದ ಬಟ್ಟೆಯ ಪಟ್ಟಿಗೆ ಎರಡು ಅಥವಾ ಮೂರು ಸಾಲುಗಳಲ್ಲಿ ಗೋಲಿಗುಂಡಿನ ಆಕಾರದಷ್ಟಿರುವ ಕಂಚಿನ ಗೆಜ್ಜೆಗಳನ್ನು ಪೋಣಿಸಿರುತ್ತಾರೆ. ಈ ಪಟ್ಟಿಯನ್ನು ಕಟ್ಟಿಕೊಳ್ಳುವುದಕ್ಕೆ ಅನುಕೂಲವಾಗುವಂತೆ ಕಸೆಗಳಿರುತ್ತವೆ. ಈ ಸರಗಳನ್ನು ಪುರುಷ ಕಲಾವಿದರು ಹೆಚ್ಚಾಗಿ ಬಳಸುತ್ತಾರೆ.

**ಚಂಬಿಗೆ/ತಂಬಿಗೆ :** ನೀರು ಕುಡಿಯುವುದಕ್ಕೆ ಬಳಸುವ ವಸ್ತು. ಹಿತ್ತಾಳೆ, ಸ್ಟೀಲ್, ಸಿಲ್ವರ್, ಪ್ಲಾಸ್ಟಿಕ್ ಮುಂತಾದವುಗಳಿಂದ ಚಂಬಿಗೆಯನ್ನು ತಯಾರಿಸುತ್ತಾರೆ. ಅರ್ಧಲೀಟರ್ ನೀರಿನಿಂದ ಸುಮಾರು ಎರಡು ಲೀಟರ್ ನೀರು ಹಿಡಿಯುವಷ್ಟು ಗಾತ್ರದ ಚಂಬಿಗೆಗಳನ್ನು ಕಾಣಬಹುದು.

**ತಿಂಗಳ ಪೂಜೆ :** ಕಾರಹುಣ್ಣಿಮೆಯ ದಿವಸ ಯಲ್ಲಮ್ಮ/ಹುಲಿಗೆಮ್ಮ ದೇವಿಯ ಹೆಸರಿನಲ್ಲಿ ಪಡ್ಲಿಗಿ ತುಂಬಿಸುವ ಆಚರಣೆ. ಹುಣ್ಣಿಮೆಯಾದ ಒಂಬತ್ತನೇ ದಿನದ ನಂತರ ಹೊಸಪೇಟೆ ತಾಲೂಕು 'ಹುಲಿಗಿ' ಗ್ರಾಮದಲ್ಲಿ ಹುಲಿಗೆಮ್ಮ ಜಾತ್ರೆ ಆರಂಭವಾಗುತ್ತದೆ. ಇದು ಇಪ್ಪತ್ತೊಂದು ದಿನಗಳು ನಡೆಯುವ ಜಾತ್ರೆ. ಈ ಇಪ್ಪತ್ತೊಂದು ದಿವಸ ಜಾತ್ರೆಯಲ್ಲೇ ಉಳಿದ ಜೋಗತಿಯರು ಭಿಕ್ಷೆ ಬೇಡುತ್ತಾ, ಸೇವೆ/ಆರಾಧನೆ ಮಾಡುತ್ತಾ ಕಾಲ ಕಳೆಯುತ್ತಾರೆ. ಜಾತ್ರೆ ಮುಗಿದ ಮರುದಿವಸ ಅಂದರೆ ಕಾರಹುಣ್ಣಿಮೆಯ ದಿವಸ ತಿಂಗಳ ಪೂಜೆ ಮುಗಿಸಿಕೊಂಡು ತಮ್ಮ ತಮ್ಮ ಮನೆಗೆ ಹೋಗುವ ಸಂಪ್ರದಾಯ ಜೋಗತಿಯರಲ್ಲಿದೆ. ಈ ಸಂಪ್ರದಾಯ ಇತ್ತೀಚೆಗೆ ಕಡಿಮೆಯಾಗಿದೆ.

**ದೇವರು ಕಟ್ಟಿದ ಕೊಡ :** ಯಲ್ಲಮ್ಮನ ದೀಕ್ಷೆ ತೆಗೆದುಕೊಂಡ ಜೋಗಪ್ಪ ಮತ್ತು ಜೋಗತಿಯರು ತಮ್ಮ ಕಲೆ ಪ್ರದರ್ಶನ ಮಾಡುವ ಸಂದರ್ಭದಲ್ಲಿ ವಿಶೇಷವಾಗಿ ಕುಣಿತ ಮಾಡುವ ಸಂದರ್ಭದಲ್ಲಿ ತಮ್ಮ ತಲೆಯ ಮೇಲೆ ಹೊತ್ತುಕೊಂಡು ಕುಣಿತ ಮಾಡುವ ಸಣ್ಣದಾದ ಕೊಡ. ಈ ಕೊಡಕ್ಕೆ ಅಲಂಕಾರ ಮಾಡಿರುತ್ತಾರೆ. ಅಂದರೆ ಕೊಡದ ಕಂಠಕ್ಕೆ ಯಲ್ಲಮ್ಮದೇವತೆಯ ಮುಖಮೂರ್ತಿಯನ್ನು ಕಟ್ಟಿಕೊಳ್ಳಲಾಗುತ್ತದೆ. ಬಳಸುವ ಮುಖಮೂರ್ತಿಯು ಸಹ ಕೊಡದಷ್ಟೇ ಎತ್ತರದಲ್ಲಿರುತ್ತದೆ. ಮುಂಭಾಗದಿಂದ ಮೂರ್ತಿಯನ್ನು ಗಮನಿಸಿದರೆ ಅದರ ಹಿಂದಿರುವ ಕೊಡ ಕಾಣಿಸುವುದಿಲ್ಲ. ಈ ಕೊಡವನ್ನು ನವಿಲುಗರಿ, ಹೂವುಗಳಿಂದ ಅಲಂಕಾರ ಮಾಡುವ, ಅದಕ್ಕೆ ತಾಳಿಸರವನ್ನು ಹಾಕುವ ಪಾರಂಪರಿಕ ಸಂಪ್ರದಾಯವಿದೆ. ಇದನ್ನು ಜೋಗತಿಯರು ಯಲ್ಲಮ್ಮ ದೇವತೆ ಎನ್ನುತ್ತಾರೆ.

**ಪಡ್ಲೀಗಿ/ಹಡ್ಲೀಗಿ/ಪಡಲಗಿ/ಹಡಲಗಿ :** ಯಲ್ಲಮ್ಮನ ವಿಗ್ರಹವನ್ನು ಕೂರಿಸಿ ಹೋರುವ ಬುಟ್ಟಿ. ಇದಕ್ಕೆ ಚಿಬ್ಬಲು, ಹರಿವಾಣ ಎನ್ನುವ ಪದಗಳು ಅಪರೂಪವಾಗಿ ಬಳಕೆಯಾಗುತ್ತಿವೆ. ಜೋಗಪ್ಪ ಮತ್ತು ಜೋಗತಿಯರು ಭಿಕ್ಷೆ ಬೇಡುವುದಕ್ಕಾಗಿ ಮತ್ತು ಧರ್ಮ ಪ್ರಚಾರಕ್ಕೆ ಹೋಗುವಾಗ ಇದನ್ನು ಬಳಸುತ್ತಾರೆ. ಮುತ್ತು ಕಟ್ಟುವ, ಬಸವಿ ಹರಕೆ, ವಾರದ ಪೂಜೆ, ತಿಂಗಳಪೂಜೆ ಮುಂತಾದ ಆಚರಣೆಗಳಲ್ಲಿ ಪಡ್ಲೀಗಿ ತುಂಬಿಸುವ ಆಚರಣೆಯನ್ನು ಮಾಡಬೇಕೆನ್ನುವ ಪಾರಂಪರಿಕ ನಿಯಮ ಯಲ್ಲಮ್ಮ ಸಂಪ್ರದಾಯ ದಲ್ಲಿದೆ.

**ಬಿಳಿ ಉಟಗಿ :** ಒಂದು ಬಗೆಯ ಹರಕೆಯ ಸೇವೆ. ವಿಶೇಷವಾಗಿ ಇದು ಯಲ್ಲಮ್ಮನ ಆರಾಧಕರು ಬಳಸುವ ಪರಿಭಾಷೆ. ಯಲ್ಲಮ್ಮನ ಆರಾಧಕರು 'ಜೋಗತಿ ದೀಕ್ಷೆ' ತೆಗೆದುಕೊಳ್ಳುವ ಸಂದರ್ಭದಲ್ಲಿ ಗಂಡು ಹೆಣ್ಣಾಗುವ, ಹೆಣ್ಣು ಗಂಡಾಗುವ 'ಗರ್ದಾನಿ ಹರಕೆ'ಯ ಸಂದರ್ಭದಲ್ಲಿ ಹೆಂಗಸಾಗುವ ಗಂಡಸರು ಬಿಳಿಸೀರೆ, ಕುಪ್ಪಸ, ಬಳೆ, ಗಂಡಸಾಗುವ ಹೆಂಗಸರು ಬಿಳಿಪಂಚೆ, ಬಿಳಿ ಅಂಗಿಯನ್ನು ಧರಿಸುವ ಸಂಪ್ರದಾಯವಿದೆ.

'ಮುತ್ತು ಕಟ್ಟುವ' ಅಥವಾ 'ಜೋಗತಿ ದೀಕ್ಷೆ' ತೆಗೆದುಕೊಳ್ಳುವ ಸಂದರ್ಭದಲ್ಲಿ ಈ ಮಾತು ಹೆಚ್ಚಾಗಿ ಬಳಕೆಯಾಗುತ್ತದೆ.

**ವಾರದ ಪೂಜೆ :** ಜೋಗತಿ ದೀಕ್ಷೆ ತೆಗೆದುಕೊಂಡ ಜೋಗತಿಯರು ಐದು ವಾರದ ನಂತರ ಆಚರಿಸುವ ಆಚರಣೆ. ಇದಕ್ಕೆ ಪರಶುರಾಮನನ್ನು ಹಿಂದಕ್ಕೆ ಕಳುಹಿಸುವ ಆಚರಣೆ, ಪರಶುರಾಮನನು ಮಾಡುವ ಆಚರಣೆ ಎಂದು ಕರೆಯುವ ವಾಡಿಕೆಯೂ ಇದೆ. ದೀಕ್ಷೆ ತೆಗೆದುಕೊಂಡ ಗಂಡುಜೋಗತಿಯರು ಐದುವಾರ ಭಿಕ್ಷೆ ಬೇಡಬೇಕು. ಈ ಭಿಕ್ಷೆಯಿಂದ ಬಂದಿರುವ ಯಾವುದೇ ವಸ್ತು, ಪದಾರ್ಥಗಳನ್ನು ಬಳಸದಂತೆ ಸಂಗ್ರಹಿಸಿಟ್ಟು, ಇವುಗಳನ್ನೇ ಬಳಸಿ ಈ ಆಚರಣೆಯನ್ನು ಮಾಡಬೇಕು ಎನ್ನುವ ಪಾರಂಪರಿಕ ಸಂಪ್ರದಾಯವಿದೆ. ಆ ಸಂದರ್ಭದಲ್ಲಿ 'ಐದು ಜೊತೆ ಪಡ್ಲೀಗಿ' ತುಂಬಿಸುವುದು ಮತ್ತು 'ಪರಶುರಾಮನ ಬುಟ್ಟಿ'ಯನ್ನು ತುಂಬಿಸುವುದು ಪ್ರಮುಖ. ಪರಶುರಾಮ ತಾಯಿ ಹೊಟ್ಟೆಯಲ್ಲಿರುವಾಗ ಗೌಡಶಾನಿ ತೋಟದ ತರಕಾರಿಗಳನ್ನು ಬೇಡಿದ್ದನೆನ್ನುವ ಸೃಷ್ಟಿಮೂಲ ಕಥನದ ಉಲ್ಲೇಖಿತ ಬಯಕೆಯನ್ನು ತೀರಿಸುವ ಸಾಂಕೇತಿಕ ಆಚರಣೆ ಇಲ್ಲಿನ ಪ್ರಮುಖ ವಸ್ತುವಾಗಿದೆ.

**ಹಣ್ಣಗಾಯಿ :** ಹಣ್ಣು ಆಗಿರುವ ಮೆಣಸಿನಕಾಯಿ. ಮೆಣಸಿನ ಗಿಡದಿಂದ ತೆಗೆಯುವುದಕ್ಕಿಂತ ಮುಂಚೆ ಹಾಗೂ ಅದು ಒಣಗುವ ತನಕ ಈ ಪದವನ್ನು ಕೃಷಿಕರು ಹೆಚ್ಚಾಗಿ ಬಳಸುತ್ತಾರೆ. ಇದು ಒಣಗಿದ ನಂತರ ಒಣಮೆಣಸಿನಕಾಯಿ ಎನ್ನುವ ಪದವನ್ನು ಬಳಸುತ್ತಾರೆ.

□□

## ಆ. ಪತ್ರಿಕಾ ವರದಿಗಳು

### ಜೋಗತಿ ನೃತ್ಯಕ್ಕೆ--ರಾಜ್ಯೋತ್ಸವ ಮುಕುಟ

"ಹುಟ್ಟಿ ಬಂದಮ್ಯಾಲ ಏಳುಕೊಳ್ಳಕ ನಡೀರಿ
ಬೆಟ್ಟದಮ್ಯಾಲ ಐತಿ ಎಲ್ಲವ್ವನ ಗುಡೀರಿ
ದುಡ್ಡು ಒಗದು ಕರ್ಪೂರನ ಕಳೀರಿ
ಹಚ್ಚಿಗೊಳ್ಳಾದು ಬಂಡಾರದ ಪುಡೀರಿ"

ಮಂಜವ್ವ ಜೋಗತಿ ಚೌಡಕಿ ನುಡಿಸುತ್ತಾ ದಿನಗಟ್ಟಲೇ ಈ ರೀತಿ ಪದ ಹೇಳಬಲ್ಲಳು. ಭಕ್ತಿ, ವಿನಯದಿಂದ ನಡೆದರೆ ನಂಬಿದ ರೇಣುಕ ಎಲ್ಲಮ್ಮ ಕೈಬಿಡುವುದಿಲ್ಲ ಎಂಬುದೇ ಈ ಹಾಡುಗಳ ಸಾರ. ಅನೇಕ ದೃಷ್ಟಾಂತಗಳ ಮೂಲಕ, ಪ್ರತಿಮೆಗಳಲ್ಲಿ ಆಕೆ ಕಾವ್ಯ ಕಟ್ಟುತ್ತಾಳೆ. ಇದು ಜೋಗತಿಯರಿಂದ ಜೋಗತಿಯರಿಗೆ ಬೆಳೆದುಬಂದ ಮೌಖಿಕ ಪರಂಪರೆ. ಹಿಂದಿನಿಂದ ಬಂದ ಹಾಡುಗಳನ್ನು ಬೆಳೆಸುತ್ತಾ, ಅದಕ್ಕೆ ಮತ್ತೆ ಹೊಸದನ್ನು ಸೇರಿಸುತ್ತಲೇ ಹೋಗುತ್ತಾಳೆ. ದಣಿವರಿಯದ ಆಕೆಯ ಹಾಡುವ ಸಾಮರ್ಥ್ಯಕ್ಕೆ ಮತ್ತು ತಲೆಯ ಮೇಲೆ ಕೊಡ ಹೊತ್ತು ಮಾಡುವ ಸಾಹಸ ನರ್ತನವಂತೂ ರೋಮಾಂಚನಕಾರಿ.

ಮಂಜವ್ವನಂತೆ ಜೋಗತಿಯರು ಸಂತೆ, ಹಬ್ಬ ಹರಿದಿನ, ಜಾತ್ರೆಗಳಲ್ಲಿ ಕೇವಲ ಒಂದೆರಡು ರೂಪಾಯಿಗಳಿಗೆ ಚೌಡಿಕಿ ನುಡಿಸುತ್ತಾ, ಹಾಡುತ್ತಿರುವವರನ್ನು ಕಂಡರೆ ಸಾಕು ಹಿಂಜರಿಯುವವರೇ ಹೆಚ್ಚು, ವಿಚಿತ್ರವಾಗಿ ಕಾಣುವ, ಇನ್ನು ಕೀಳರಿಮೆಯಿಂದ ಮೂಗು ಮುರಿವವರೇ ಹೆಚ್ಚಿರುವ ಈ ದಿನಗಳಲ್ಲಿ ಇತ್ತ ಪುರುಷರೂ ಅಲ್ಲದ, ಅತ್ತ ಸ್ತ್ರೀಯರೂ ಅಲ್ಲದ ಇಂತಹವರು ಪ್ರತಿಭೆಯ ಖಣಿಯಾಗಿದ್ದರೂ ಮೆಚ್ಚುವವರು ವಿರಳ. ಸನ್ಮಾನ, ಸತ್ಕಾರಗಳ ಮಾತಂತೂ ದೂರವಾಯಿತು. ಅಂತಹದರಲ್ಲಿ ಈ ಜೋಗತಿ ನೃತ್ಯ ಮಾಡುವ ಏಕೈಕ ಪ್ರತಿಭೆ ಮಂಜಮ್ಮ ಜೋಗತಿಗೆ ಈ ಸಾಲಿನ ರಾಜ್ಯೋತ್ಸವ ಪ್ರಶಸ್ತಿ ಬಂದಿರುವುದು ಸಂತಸದ ವಿಚಾರ.

ಜೋಗತಿ ಕಲೆಯು ತನ್ನದೇ ಆದ ಸಾಂಸ್ಕೃತಿಕ, ಸಾಹಿತ್ಯಿಕ ಸತ್ವವನ್ನು ಪಡೆದುಕೊಂಡು ಕನ್ನಡ ನಾಡಿನಲ್ಲಿ ಉಳಿಸಿ--ಬೆಳೆಸಿಕೊಂಡು ಬಂದಿದೆ. ಇಂದಿನ ಯಾಂತ್ರಿಕ ಬದುಕಿನ ಜಂಜಾಟದಲ್ಲೂ ತನ್ನ ಅಸ್ತಿತ್ವನ್ನು ಉಳಿಸಿಕೊಳ್ಳಲು ಸದಾ ಹೋರಾಡುತ್ತಿದೆ. ಗಂಡು ಜೋಗತಿಯರು ನಮ್ಮ ಸಮಾಜದ ಹಲವಾರು ಅಪಮಾನ, ಸಮಸ್ಯೆಗಳ ನಡುವೆಯೂ ತಮ್ಮ ಜೀವನಾಧಾರವಾದ ಜೋಗತಿ ಕಲೆ ಶ್ರೀಮಂತಗೊಳಿಸಲು ಶ್ರಮಿಸುತ್ತಿದ್ದಾರೆ. ಅನಾಥ ಸಮಾಜದ ಕಲಾಪರಂಪರೆಗಳಲ್ಲಿ ಒಂದಾದ ಜೋಗತಿ ಕಲೆಯನ್ನು ನಾವು

ನಿರ್ಲಕ್ಷಿಸಿದ್ದೇ ಹೆಚ್ಚು. ಈ ಕಲೆಗೆ ನಿಜವಾದ ಬೆಲೆ ನಮ್ಮಿಂದ ಸಿಗುತ್ತಿಲ್ಲ. ಇಂಥ ಪ್ರತಿಕೂಲ ಸನ್ನಿವೇಶದಲ್ಲೂ ಆ ಜೋಗತಿ ನೃತ್ಯಕ್ಕೆ ಕೊಡುಗೆ ನೀಡುತ್ತಾ, ಜೋಗತಿಯರಿಗೆ ಒಂದು ವಿಶಿಷ್ಟ ಸ್ಥಾನ ಕಲ್ಪಿಸಿದ ಮಂಜವ್ವ ಜೋಗತಿಯನ್ನು ಪ್ರಶಂಸಿಸಲೇಬೇಕು.

**ಮಂಜುನಾಥ–ಮಂಜಮ್ಮ ಜೋಗತಿಯಾದದ್ದು**

ಬಳ್ಳಾರಿಯ ಕಲ್ಲುಕಂಬದಲ್ಲಿ ಹನುಮಂತ ಶೆಟ್ಟಿ ಹಾಗೂ ಜಯಲಕ್ಷ್ಮಿ ಇವರ ಮಗನಾಗಿ ಮಂಜುನಾಥ ೧೯೬೪ರಲ್ಲಿ ಜನಿಸಿದನು. ಮಂಜುನಾಥ ೧೦ನೇ ತರಗತಿ ನಂತರ ಪಿಗ್ಮಿ ಕಲೆಕ್ಷನ್ ಕೆಲಸ ಮಾಡುವ ಸಮಯದಲ್ಲಿ, ಮಂಜುನಾಥ ಮಂಜಮ್ಮ ಜೋಗ್ತಿಯಾದಳು. ಮನೆಯವರ, ಹೊರಗಿನವರ ಮಾನಸಿಕ ಒತ್ತಡಗಳಿಂದ ವಿಷಸೇವನೆ ಮಾಡಿದರೂ ಉಳಿದದ್ದು ಪವಾಡ. ದಾವಣಗೆರೆಯ ಮಟ್ಟಿಕಲ್ಲಿನ ಬಸಪ್ಪನವರ ಮಾರ್ಗದರ್ಶನದಲ್ಲಿ ತಲೆಮೇಲೆ ದೇವರು ಹೊತ್ತುಕೊಂಡು ಬೀದಿ ಬೀದಿ ನೃತ್ಯ ಮಾಡುತ್ತಾ ಜೀವನ ಸಾಗಿಸಿದಳು. ಮಂಜವ್ವ ಅವರಿಂದ ನೃತ್ಯವನ್ನು ಕಲಿಯುತ್ತಾ, ಪ್ರದರ್ಶನ ಮಾಡುತ್ತಾ ಕೆಲಕಾಲ ಕಳೆದಳು.

೧೯೮೬ರಲ್ಲಿ ಕಾಳವ್ವ ಜೋಗತಿಯ ಪರಿಚಯವಾಯಿತು. ಕಂಚಿನ ಕಂಠದ ಕಾಳವ್ವ ಜೋಗತಿ ಚೌಡಿಕಿ ನುಡಿಸುತ್ತಾ ಹಾಡುತ್ತ, ಕುಣಿಯುವುದರಲ್ಲಿ ಪ್ರಸಿದ್ಧಳಾಗಿದ್ದಳು. ಆಕೆಯ ಕಲಾಪ್ರತಿಭೆಯನ್ನು ಗುರುತಿಸಿ ಸರ್ಕಾರ ೨೦೦೧ರಲ್ಲಿ ರಾಜ್ಯೋತ್ಸವ ಪ್ರಶಸ್ತಿಯನ್ನೂ ನೀಡಿತ್ತು. ಆಕೆಯನ್ನು ಮಂಜಮ್ಮ ತನ್ನ ಗುರುವಾಗಿ ಸ್ವೀಕರಿಸಿ, ಆ ತಂಡದ ಖಾಯಂ ಸದಸ್ಯಳಾದಳು. ಕಾಳವ್ವನ ಗರಡಿಯಲ್ಲಿ ನೃತ್ಯ ಮಾಡುವ ಕಲೆಯನ್ನು ಕರಗತ ಮಾಡಿ ಕೊಂಡಳು. ಅಲ್ಲಿಂದ ಕಲಾಪ್ರದರ್ಶನದಲ್ಲಿ ಹಿಂತಿರುಗಿ ನೋಡುವ ಪ್ರಸಂಗವೇ ಬರಲಿಲ್ಲ.

**ಜೋಗತಿಯ ನೇತೃತ್ವ**

ಕಾಳವ್ವ ಜೋಗತಿಯ ನಂತರ ಆ ತಂಡದ ನಾಯಕತ್ವವನ್ನು ಮಂಜಮ್ಮ ವಹಿಸಿ ಕೊಂಡಳು. ಆಕೆ ಇತರರೊಡಗೂಡಿ "ದೇವಿ ನಾಟ್ಯ ಕಲಾ ಸಂಘ" ತಂಡ ಕಟ್ಟಿಕೊಂಡಳು. ತಂಡದಿಂದ ರೇಣುಕಾದೇವಿ ಹಾಗೂ ಬಡವಿ ಲಕ್ಕಮ್ಮ ನಾಟಕಗಳನ್ನು ರಾಜ್ಯದ ಎಲ್ಲಾ ಭಾಗಗಳಲ್ಲಿ ಸಾವಿರಾರು ಪ್ರದರ್ಶನಗಳನ್ನು ನೀಡಿದರು. ನಾಟಕಗಳಲ್ಲಿ ಗಂಡು, ಹೆಣ್ಣು ಯಾವುದೇ ಪಾತ್ರಗಳಲ್ಲಿ ಲೀಲಾಜಾಲವಾಗಿ ಅಭಿನಯಿಸುವ ಮಂಜವ್ವಳ ಕಲಾವಂತಿಕೆಯನ್ನು ಮೆಚ್ಚದವರೇ ಇಲ್ಲ. ಪುರುಷನಲ್ಲದಿದ್ದರೂ ನಾಟಕಗಳಲ್ಲಿ ಪರಶುರಾಮನ ಪಾತ್ರ ಮಾಡಿ ಗಂಡು ರೂಪಗ ಅಭಿನಯದಲ್ಲಿ ಸೈ ಎನಿಸಿಕೊಂಡಿದ್ದಾಳೆ. ಅದರಲ್ಲೂ ಗೌಡಶಾನಿ ಪಾತ್ರ ಆಕೆಗೆ ಹೆಚ್ಚು ಸಂತಸ ನೀಡಿದೆಯಂತೆ.

ಮಂಜಮ್ಮ ಜೋಗತಿ ಅವರ ತಂಡದಿಂದ ಆಕಾಶವಾಣಿ ಮತ್ತು ದೂರದರ್ಶನದಲ್ಲಿ ಅನೇಕ ಕಾರ್ಯಕ್ರಮಗಳು ಪ್ರಸಾರವಾಗಿವೆ. ಅಲ್ಲದೆ ಹಂಪಿ ಉತ್ಸವ, ರಾಜ್ಯದ ಅನೇಕ ಕಡೆ ನಡೆದ ಜಾನಪದ ಜಾತ್ರೆ, ಸುವರ್ಣ ಕರ್ನಾಟಕದ ರಾಜ್ಯ ಕಾರ್ಯಕ್ರಮ, ಆಳ್ವಾಸ್ ನುಡಿಸಿರಿ ಸೇರಿದಂತೆ ಎಲ್ಲಾ ಭಾಗಗಳಲ್ಲೂ ತಮ್ಮ ಕಲೆಯನ್ನು ಪ್ರಸಾರ ಮಾಡಿದ್ದಾರೆ.

ಆರೋಗ್ಯ ಇಲಾಖೆಯವರು ಏಡ್ಸ್, ಗರ್ಭಿಣಿಯರು, ಆರೋಗ್ಯ ಮತ್ತು ಪರಿಸರ ನೈರ್ಮಲ್ಯ, ಪಲ್ಸ್ ಪೋಲಿಯೋ, ಸಂತಾನಹರಣಗಳ ಕುರಿತು ಸಮುದಾಯದಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳಿಗೆ ಇವರ ಕಲೆ ಬಳಸಿದ್ದಕ್ಕೆ ಮಂಜಮ್ಮನಿಗೆ ಅಪಾರ ಸಂತಸವಿದೆ.

ನಶಿಸಿ ಹೋಗುತ್ತಿರುವ ಈ ಗ್ರಾಮೀಣ ಜನಪದ ಕಲೆ, ಸಂಸ್ಕೃತಿಯನ್ನು ಗುರುತಿಸಿ, ಉಳಿಸಿಕೊಂಡು ಮುಂದಿನ ಪೀಳಿಗೆಗೆ ತೋರಿಸಬೇಕಾಗಿದೆ. ಅದಕ್ಕೆ ಜಿಲ್ಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಗುರುಶಿಷ್ಯ ಪರಂಪರೆ ಯೋಜನೆ ಅಡಿಯಲ್ಲಿ ವಿಶೇಷವಾಗಿ ಈ ಜೋಗತಿ ಕಲೆಯನ್ನು, ನೃತ್ಯವನ್ನು ಪ್ರೋತ್ಸಾಹಿಸಲು ಜೋಗತಿಯರಿಗೆ ಆರು ತಿಂಗಳ ತರಬೇತಿ ನೀಡಿದೆ. ಆ ತರಬೇತಿ ತಂಡದ ಮುಖ್ಯಸ್ಥೆಯಾಗಿ ಮತ್ತು ತರಬೇತಿದಾರಳಾಗಿ ಮಂಜಮ್ಮ ಅನೇಕ ಜೋಗತಿಯರಿಗೆ ಕಲೆಯ ತರಬೇತಿ ನೀಡಿದ್ದಾಳೆ. ಇತ್ತೀಚೆಗೆ 'ದಕ್ಷಿಣ ಮಧ್ಯವಲಯ ಸಾಂಸ್ಕೃತಿಕ ಕೇಂದ್ರ' ನಾಗಪುರ ಹಾಗೂ ಶ್ರೀಮಾತಾ ಮಂಜಮ್ಮ ಜೋಗತಿ ನೃತ್ಯ ತಂಡದವರು ಬಳ್ಳಾರಿಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಕಾರದೊಂದಿಗೆ ಆರು ತಿಂಗಳುಗಳ ಕಾಲ ಜೋಗತಿ ನೃತ್ಯ ತರಬೇತಿ ಕಾರ್ಯಾಗಾರ ನಡೆಸಿದ್ದು ಅತ್ಯಂತ ಮಹತ್ವದ್ದಾಗಿದೆ. ಆ ಸಮಯದಲ್ಲಿ ಬಳ್ಳಾರಿಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಚೋರನೂರು ಕೊಟ್ರಪ್ಪನವರ "ಜೋಗತಿಯರು ಎಂದರೆ ಮೂಗು ಮುರಿಯುವ ಸಂದರ್ಭವಿತ್ತು ಹಾಗೂ ಇದು ಕೇವಲ ಮೆರವಣಿಗೆಗಳಲ್ಲಿ ಪ್ರಸ್ತುತಪಡಿಸುವ ಕಲಾಪ್ರಕಾರವಾಗಿತ್ತು. ಜೋಗತಿ ನೃತ್ಯ ಕಲಾ ವೇದಿಕೆಗಳಲ್ಲಿ ಪ್ರದರ್ಶನವಾಗತೊಡಗಿದ ನಂತರ, ರಾಷ್ಟ್ರಮಟ್ಟದಲ್ಲಿ ಇದೊಂದು ಉತ್ತಮ ಕಲಾಪ್ರಕಾರವಾಗಿ ಬೆಳೆಯುತ್ತಿದೆ. ಮಂಜಮ್ಮ ಆ ಕಲೆಯ ರಾಯಭಾರಿಯಾಗಿದ್ದಾಳೆ" ಎನ್ನುವ ಮಾತುಗಳು ಅಕ್ಷರಶಃ ಸತ್ಯ.

ಕಳೆದ ೨೬ ವರ್ಷಗಳಿಂದ ಜೋಗತಿ ನೃತ್ಯ ಮಾಡುತ್ತಾ, ತನ್ನಂತೆ ಇರುವ ಇತರರನ್ನು ಬದುಕಿಸಲು ಮಂಜವ್ವ ಮಾಡುತ್ತಿರುವ ಕಾರ್ಯ ಶ್ಲಾಘನೀಯ. ಅದಕ್ಕೆ ಆಕೆಯನ್ನು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ೨೦೦೭ರಲ್ಲಿ ಹುಡುಕಿಕೊಂಡು ಬಂದಿದೆ. ಪ್ರಸ್ತುತ ೨೦೧೦ರಲ್ಲಿ ರಾಜ್ಯೋತ್ಸವ ಗೌರವ ಸಂದಿದೆ. ಆ ಪ್ರಶಸ್ತಿಗಳು ಬಂದಿದ್ದು ತನ್ನ ಗುರುಮಾತೆ ದಿ. ಕಾಳಮ್ಮ ಜೋಗತಿ ಹಾಗೂ ತಂಡದ ಆಶೀರ್ವಾದದಿಂದ ಎಂದು ಮುಗ್ಧತೆಯಿಂದ ಮಂಜಮ್ಮ ಹೇಳುತ್ತಾಳೆ. ಜೊತೆಗೆ ತನ್ನ ಬೆಳವಣಿಗೆಗೆ ನೆರವು ನೀಡಿದ ಜಾನಪದ ಲೋಕದ ದಿ. ಹೆಚ್.ಎಲ್. ನಾಗೇಗೌಡರನ್ನು, ಪತ್ರಕರ್ತರಾದ ಗುಡಿಹಳ್ಳಿ ನಾಗರಾಜ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಚೋರನೂರು ಕೊಟ್ರಪ್ಪನವರ ನೆರವು ಮತ್ತು ಮಾರ್ಗದರ್ಶನ ನನ್ನನ್ನು ಕೈಹಿಡಿದು ಮುನ್ನಡೆಸಿದೆ ಎಂದು ಸ್ಮರಿಸಿಕೊಳ್ಳುತ್ತಾಳೆ.

ನಮ್ಮ ಸಮಾಜದಲ್ಲಿ ಜೋಗತಿಯರ ಬದುಕು ಹೂವಿನ ಹಾಸಿಗೆಯೇನಲ್ಲ. ಜೋಗತಿಯರ ಬವಣೆ ಕುರಿತು ಮಂಜಮ್ಮ "ಜೋಗತಿಯರ ಆರ್ಥಿಕ ಪರಿಸ್ಥಿತಿ

ಇಂದು ತೀರ ಕೆಳಮಟ್ಟದಲ್ಲಿದೆ. ಮೊದಲಿಗೆಲ್ಲ ಹಳ್ಳಿಗಳಲ್ಲಿ ರೈತರು ದವಸ-ಧಾನ್ಯಗಳನ್ನು ಉದಾರವಾಗಿ ದಾನ ಕೊಡುತ್ತಿದ್ದರು. ಆದರೆ ಇಂದು ರೈತರೇ ಸಂಕಟದಲ್ಲಿರುವಾಗ ನಮ್ಮ ಬಗ್ಗೆ ಅನುಕಂಪ ತೋರಿಸುವವರಾರು? ಹಾಗಾಗಿ ನಮ್ಮ ಜೀವನ ದಿನದಿನಕ್ಕೆ ದುಸ್ತರವಾಗುತ್ತಿದೆ. ಕಲಾಪ್ರದರ್ಶನಕ್ಕೆ ಕರೆ ಬಂದಲ್ಲಿಗೆ ಹೋಗಿ ಪ್ರದರ್ಶನ ಮಾಡಿ ಅವರು ಕೊಡುವ ಸ್ವಲ್ಪ ಹಣವನ್ನು ಹಂಚಿಕೊಂಡು ಜೀವನ ಸಾಗಿಸಬೇಕು. ಇಲ್ಲವೇ ಸಂತೆ, ಜಾತ್ರೆ, ಹಬ್ಬಗಳಲ್ಲಿ ಜನರ ಹತ್ತಿರ ಹಣ ಬೇಡಬೇಕು. ಜೀವನದಲ್ಲಿ ನಲಿವಿಗಿಂತ ನೋವೇ ಹೆಚ್ಚು" ಎಂದು ಹೇಳುವಾಗ ಅವರ ಇನ್ನೊಂದು ಮುಖದ ಚಿತ್ರಣ ಕಾಣಿಸುತ್ತದೆ. ಇದರ ಕುರಿತಾಗಿ ನಾಗರಿಕ ಸಮಾಜವೆಂದು ಹೆಮ್ಮೆಯಿಂದ ಹೇಳಿಕೊಳ್ಳುವ ನಾವು ಗಮನಹರಿಸಲೇಬೇಕಿದೆ.

ಜೋಗತಿಯರ ಕಲೆ ಇಂದು ಕೆಲವೇ ಕೆಲವರಲ್ಲಿ ಮಾತ್ರ ಉಳಿದಿರುವುದರಿಂದ ಸರ್ಕಾರ, ಸಂಘ-ಸಂಸ್ಥೆಗಳು ಅದನ್ನು ಅಳಿಯಲು ಬಿಡಬಾರದು. ಜೋಗತಿ ಸಮುದಾಯಕ್ಕೆ ಸೂಕ್ತ ಸ್ಥಾನಮಾನಗಳನ್ನು ಕೊಡಬೇಕು. ಈ ವಿಶೇಷ ಕಲಾಪರಂಪರೆಗೆ ಅಸ್ತಿತ್ವ ಕಲ್ಪಿಸಿಕೊಡುತ್ತಾ ಅವರಲ್ಲಿ ಆತ್ಮವಿಶ್ವಾಸ ತುಂಬುವ ಕೆಲಸ ಆಗಬೇಕಿದೆ. ಆ ನಿಟ್ಟಿನಲ್ಲಿ ರಾಜ್ಯೋತ್ಸವ ಪ್ರಶಸ್ತಿ ಬಂದಿರುವುದು ಉತ್ತಮ ಬೆಳವಣಿಗೆ. ಇಲ್ಲಿಗೆ ಇಂಥವರನ್ನು ಪ್ರೋತ್ಸಾಹಿಸುವ ಕಾರ್ಯ ನಿಲ್ಲಬಾರದು. ಅದು ನಿರಂತರ ಪ್ರಕ್ರಿಯೆ ಆಗಬೇಕು.

**ಜನಪದ, ಫೆಬ್ರವರಿ, ೨೦೧೧**

## ಮಂಜವ್ವ ನಿನ್ನ ಜೋಗತಿ ನೃತ್ಯಕ್ಕೆ ಸೋಲದವರಾರವ್ವ!

ನಮ್ಮ ಸಮಾಜದಲ್ಲಿ ಜೋಗತಿಯರನ್ನು ಕಂಡರೆ ಗೌರವ ಭಾವನೆಯಿಂದ ಕಾಣುವವರಿಗಿಂತ ಹಿಂಜರಿಯುವವರೇ ಹೆಚ್ಚು. ವಿಚಿತ್ರವಾಗಿ ಕಾಣುವ ಮತ್ತು ಕೀಳರಿಮೆ ಯಿಂದ ಮೂಗು ಮುರಿಯುವವರಿಗೇನು ನಮ್ಮಲ್ಲಿ ಕೊರತೆಯಿಲ್ಲ. ಅತ್ತ ಪುರುಷರೂ ಅಲ್ಲ ಇತ್ತ ಸ್ತ್ರೀಯರೂ ಅಲ್ಲದೆ ಇರುವ ಇಂತವರಲ್ಲಿನ ಕಲಾಪ್ರತಿಭೆ ಕುರಿತು ಮೆಚ್ಚುಗೆಯಿಂದ ಮಾತನಾಡುವವರು ತುಂಬ ವಿರಳವೆನ್ನಬಹುದು. ಹಾಗಾಗಿ ಇಂದು ಜೋಗತಿಯಾಗಿ ಬದುಕುವುದು ಅವರಿಗೆ ಬಹಳ ಕಷ್ಟವಾಗಿದೆ. ಅವರ ಬದುಕಿನ ಬವಣೆಯನ್ನು ಕೇಳುವವರಾರೂ ಇಲ್ಲದಂತಾಗಿದೆ. ಅಲ್ಲದೆ ಚುಡಾಯಿಸುವುದೂ ಸೇರಿದಂತೆ ಅನೇಕ ಬಗೆಯ ಅಪಮಾನಗಳಿಗೆ ಒಳಗಾದ ಪ್ರಸಂಗಗಳೂ ದಿನನಿತ್ಯ ನಡೆಯುತ್ತಲೇ ಇರುತ್ತವೆ. ಇಂಥ ಸನ್ನಿವೇಶದಲ್ಲೂ ತನ್ನ ಪ್ರತಿಭೆಯಿಂದ ನಮ್ಮ ನಾಡಿನಲ್ಲಿ ಜೋಗತಿ ನೃತ್ಯ ಮಾಡುವವರಲ್ಲಿ ಉಳಿದಿರುವ ಏಕೈಕ ಪ್ರತಿಭೆ ಮಂಜವ್ವ ಜೋಗತಿ.

'ಹುಟ್ಟಿಬಂದೆ ಯಲ್ಲಮ್ಮನಾಗಿ ನಿನ್ನ ಕೊಟ್ಟರವ್ವ ಜಮದಗ್ನಿಗೆ' 'ಎಲ್ಲು ಕಾಣೆ ಎಲ್ಲೂ ಕಾಣೆ ಎಲ್ಲವ್ವನಂತರೋ ಎಲ್ಲಿ ಕಾಣೆ ಎಲ್ಲಿ ಕಾಣೇ' ಎಂದು ಎಲ್ಲರ ಅಮ್ಮನಾದ ಯಲ್ಲಮ್ಮನನ್ನು ಸ್ತುತಿಸುತ್ತಾ ಹಾಡಿ ಕುಣಿಯುವುದಕ್ಕೆ ಒಂದು ಜನಪದ ಕಲೆಯ

ರೂಪಕೊಟ್ಟವರು ಜೋಗತಿಯರು. ಚೌಡಕ್ಕಿ ಪದಗಳು, ದೇವಿ ಪದಗಳು, ಜೋಗತಿ ನೃತ್ಯ, ದೇವಿಕೊಡ ಹೊತ್ತು ಕುಣಿಯುತ್ತಾ, ನಾಟಕಗಳ ಮೂಲಕ ಅದನ್ನು ರಂಗ ಪರಂಪರೆಗೆ ಅಳವಡಿಸಿದ ಕೀರ್ತಿಯೂ ಅವರಿಗೆ ಸಲ್ಲತಕ್ಕದ್ದು.

ಚೌಡಿಕೆ ವಾದ್ಯ ಹಿಡಿದು ಜೋಗಮ್ಮನ ಹಾಡು ಹೇಳುತ್ತಾ ಊರೂರಲ್ಲಿ ಭಿಕ್ಷೆ ಬೇಡುವ, ಸಂತೆ, ಹಬ್ಬ, ಜಾತ್ರೆಯಲ್ಲಿ ಭಿಕ್ಷೆಗಾಗಿ ಪರದಾಡುವ ಈ ಜೋಗಮ್ಮಗಳು ಅಸಾಧಾರಣ ಕಲಾವಂತರು. ತಲೆ ಮೇಲೆ ಕೊಡ ಹೊತ್ತು ವಿವಿಧ ಭಂಗಿಗಳಲ್ಲಿ ನೃತ್ಯ ಮಾಡುತ್ತಾ ಹಾಡುವ ದೃಶ್ಯ ರೋಮಾಂಚನಕಾರಿಯಾದುದು. ನಾಡಿನ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಇವರ ಕೊಡುಗೆ ಹಿರಿದಾದುದು. ಸಾಹಿತ್ಯಾಸಕ್ತರ ಮನಸೂರೆ ಗೊಳ್ಳುವಲ್ಲಿ ಜೋಗತಿಯರ ನೃತ್ಯ ಯಶಸ್ವಿಯಾಗಿದೆ.

ಜೋಗತಿ ಕಲೆಯು ತನ್ನದೇ ಆದ ಸಾಂಸ್ಕೃತಿಕ, ಸಾಹಿತ್ಯಿಕ ಸತ್ವವನ್ನು ಕನ್ನಡ ನಾಡಿನಲ್ಲಿ ಉಳಿಸಿ–ಬೆಳೆಸಿಕೊಂಡು ಬಂದಿದೆ. ಇಂದಿನ ಯಾಂತ್ರಿಕ ಬದುಕಿನ ಜಂಜಾಟ ದಲ್ಲೂ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಸದಾ ಹೋರಾಡುತ್ತಿದೆ. ಗಂಡುಜೋಗತಿಯರು ನಮ್ಮ ಸಮಾಜದ ಹಲವಾರು ಅಪಮಾನ, ಸಮಸ್ಯೆಗಳ ನಡುವೆಯೂ ತಮ್ಮ ಜೀವನಾಧಾರವಾದ ಜೋಗತಿ ಕಲೆ ಶ್ರೀಮಂತಗೊಳಿಸಲು ಶ್ರಮಿಸುತ್ತಿದ್ದಾರೆ. ಅನಾಥ ಸಮಾಜದ ಕಲಾಪರಂಪರೆಗಳಲ್ಲಿ ಒಂದಾದ ಜೋಗತಿ ಕಲೆಯನ್ನು ನಾವು ನಿರ್ಲಕ್ಷಿಸಿದ್ದೇ ಹೆಚ್ಚು. ಈ ಕಲೆಗೆ ನಿಜವಾದ ಬೆಲೆ ನಮ್ಮಿಂದ ಸಿಗುತ್ತಿಲ್ಲ. ಇಂಥ ಪ್ರತಿಕೂಲ ಸನ್ನಿವೇಶ ದಲ್ಲೂ ಆ ಜೋಗತಿ ನೃತ್ಯಕ್ಕೆ ಕೊಡುಗೆ ನೀಡುತ್ತಾ ಜೋಗತಿಯರಿಗೆ ಒಂದು ವಿಶಿಷ್ಟ ಸ್ಥಾನ ಕಲ್ಪಿಸಿದ ಮಂಜವ್ವ ಜೋಗತಿಯನ್ನು ಪ್ರಶಂಸೆ ಮಾಡಲೇಬೇಕು.

ಬಳ್ಳಾರಿಯ ಕಲ್ಲುಕಂಬದಲ್ಲಿ ಹನುಮಂತ ಶೆಟ್ಟಿ ಹಾಗೂ ಜಯಲಕ್ಷ್ಮಿ ಇವರ ಮಗುವಾಗಿ ಮಂಜುನಾಥ ೧೯೬೮ರಲ್ಲಿ ಜನಿಸಿದನು. ಈ ದಂಪತಿಗಳಿಗೆ ೨೧ ಜನ ಮಕ್ಕಳು. ಬದುಕುಳಿದ ನಾಲ್ವರಲ್ಲಿ ಮಂಜುನಾಥ ೧೦ನೇ ತರಗತಿ ನಂತರ ಒಂದೂವರೆ ವರ್ಷ ಪಿಗ್ಮಿ ಕಲೆಕ್ಷನ್ ಕೆಲಸ. ಆಶ್ಚರ್ಯವೆಂದರೆ ೧೯೮೫ರಲ್ಲಿ ಮಂಜುವಿನ ದೇಹದಲ್ಲಿ ಬದಲಾವಣೆಯಾಯಿತು. ಮನೆಯವರನ್ನೆಲ್ಲ ಒಪ್ಪಿಸಿ ಮಂಜುನಾಥ ಶೆಟ್ಟಿ ಮಂಜವ್ವ ಜೋಗತಿಯಾದಳು. ಆಗ ಸುತ್ತಮುತ್ತಲಿನವರ ಅವಮಾನ ಮಿತಿಮೀರಿತು. ಬೇಸತ್ತು ಆತ್ಮಹತ್ಯೆಗೆ ಪ್ರಯತ್ನ. ಇವುಗಳ ಪರಿಣಾಮದಿಂದಾಗಿ ಮನೆಯವರು ಮಂಜಮ್ಮನನ್ನು ಹೊರಗಟ್ಟಿದರು. ಆಶ್ರಯಕ್ಕೆ ಅಲೆದಲೆದು ಕೊನೆಗೆ ದಾವಣಗೆರೆಯ ದೇವಸ್ಥಾನದಲ್ಲಿ ವಾಸ. ಆಗ ಪಡ್ಲೀಗಿಯಿಂದ ಹಾಡುತ್ತ ಬಂದ ಹಣದಲ್ಲಿ ಜೀವನ ನಿರ್ವಹಣೆ ಮಾಡಿದಳು.

ದಾವಣಗೆರೆಯ ಮಟ್ಟಿಕಲ್ಲಿನ ಬಸಪ್ಪ ತಮ್ಮ ಮಗನ ಜೊತೆ ದೇವರು ಹೊತ್ತು ಕೊಂಡು ಬೀದಿ ಬೀದಿ ನೃತ್ಯ ಮಾಡುತ್ತಾ ಜೀವನ ಸಾಗಿಸುತ್ತಿದ್ದರು. ಅವರು ಮಂಜವ್ವನನ್ನು ಕಂಡು ಮರುಗಿದರು. ಆಕೆಯನ್ನು ತಮ್ಮೊಡನೆ ಸೇರಿಸಿಕೊಂಡರು. ಮಂಜವ್ವ ಅವರ ಜೊತೆ ಸೇರಿ ನೃತ್ಯವನ್ನು ಕಲಿಯುತ್ತಾ, ಪ್ರದರ್ಶನ ಮಾಡುತ್ತಾ

ಕೆಲವು ಕಾಲ ಕಳೆದಳು. ಅಲ್ಲಿಂದ ನೇರವಾಗಿ ಕೂಡ್ಲಿಗಿಯ ಚಿಲಕನಹಟ್ಟಿಗೆ ಬಂದಳು. ಅಲ್ಲಿಯೇ ಮಂಜವ್ವಳ ಭಾಗ್ಯದ ಬಾಗಿಲು ತೆರೆದಿದ್ದು. ಕಾಳವ್ವ ಜೋಗತಿ ಪರಿಚಯ ವಾಯಿತು.

ಜೋಗತಿ ಕಾಳವ್ವ ಜೋಗತಿ ಕುಣಿತದಲ್ಲಿ ರಾಜ್ಯದಲ್ಲಿ ಪ್ರಖ್ಯಾತಿ ಪಡೆದಿರುವಾಕೆ. ಆಕೆಯ ಕಲಾಪ್ರತಿಭೆ ಗುರುತಿಸಿ ಸರ್ಕಾರ ೨೦೦೧ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ. ಅಸಾಧಾರಣ ಪ್ರತಿಭೆಯಾದ ಕಾಳವ್ವ ಮಂಜವ್ವಳಿಗೆ ಗುರುವಾದಳು. ಆರಂಭದಲ್ಲಿ ಒಂದು ಹಾಡು ಕಲಿಸಿ ಹೊಸ ಜೀವನಕ್ಕೆ ಕಾಲಿರಿಸಲು ನೆರವಾದಳು. ಅದೇ ರೀತಿ ದಿನಾಲು ಕಲಿಯುತ್ತಾ ಕಾಳವ್ವನ ಗರಡಿಯಲ್ಲಿ ಸಂಪೂರ್ಣವಾಗಿ ಮಂಜವ್ವ ಪಳಗಿದಳು. ನೃತ್ಯ ಮಾಡುವ ಕಲೆಯನ್ನು ಕರಗತಮಾಡಿಕೊಂಡಳು. ಕಾಳವ್ವ ತಂಡದ ಖಾಯಂ ಸದಸ್ಯಳಾದ ಮಂಜವ್ವ, ಮೊದಲ ಬಾರಿಗೆ ಹಾರನಹಳ್ಳಿ ಊರಮ್ಮ ಜಾತ್ರೆಯಲ್ಲಿ ಬಣ್ಣ ಹಚ್ಚಿಕೊಂಡು ನಾಟಕಕ್ಕೆ ಧುಮುಕಿದಳು. ಅಲ್ಲಿಂದ ಇಲ್ಲಿಯವರೆಗೂ ಹಿಂತಿರುಗಿ ನೋಡುವ ಪ್ರಸಂಗವೇ ಬಂದಿಲ್ಲ.

ಕಾಳವ್ವ ಜೋಗತಿಯ ನಂತರ ಆ ತಂಡದಲ್ಲಿ ಮಿಂಚುವ ವ್ಯಕ್ತಿತ್ವ ಎಂದರೆ ಮಂಜಮ್ಮ ಜೋಗತಿಯದು. ಇವರೆಲ್ಲಾ ಸೇರಿಕೊಂಡು 'ದೇವಿ ನಾಟ್ಯ ಕಲಾ ಸಂಘ' ಎಂಬ ಕಲಾತಂಡ ಕಟ್ಟಿಕೊಂಡರು. ತಂಡದಿಂದ ರೇಣುಕಾದೇವಿ ಹಾಗೂ ಬಡವಿ ಲಕ್ಕಮ್ಮ ಅವರ ನಾಟಕಗಳನ್ನು ರಾಜ್ಯದ ಎಲ್ಲಾ ಭಾಗಗಳಲ್ಲಿ ಸಾವಿರಾರು ಪ್ರದರ್ಶನಗಳನ್ನು ನೀಡಿದರು. ನಾಟಕಗಳಲ್ಲಿ ಗಂಡು, ಹೆಣ್ಣು ಯಾವುದೇ ಪಾತ್ರಗಳಲ್ಲಿ ಲೀಲಾಜಾಲವಾಗಿ ಅಭಿನಯಿಸುವ ಮಂಜವ್ವಳ ಕಲಾವಂತಿಕೆ ಮೆಚ್ಚದವರೇ ಇಲ್ಲ. ಪುರುಷನಲ್ಲದಿದ್ದರೂ ನಾಟಕಗಳಲ್ಲಿ ಪರಶುರಾಮನ ಪಾತ್ರ ಮಾಡಿ ಗಂಡು ರೂಪದ ಅಭಿನಯದಲ್ಲಿ ಸೈ ಎನಿಸಿಕೊಂಡಿದ್ದಾಳೆ. ಅದರಲ್ಲೂ ಗೌಡಶಾನಿ ಪಾತ್ರ ಆಕೆಗೆ ಹೆಚ್ಚು ಸಂತಸ ನೀಡಿದೆ.

ಮಂಜಮ್ಮ ಜೋಗತಿ ಅವರ ತಂಡದಿಂದ ಧಾರವಾಡ, ಹೊಸಪೇಟೆ ಆಕಾಶವಾಣಿ ಯಲ್ಲಿ, ಚಂದನ ದೂರದರ್ಶನದಲ್ಲಿ ಅನೇಕ ಕಾರ್ಯಕ್ರಮಗಳು ಬಿತ್ತರವಾಗಿವೆ. ಅಲ್ಲದೆ ಹಂಪಿ ಉತ್ಸವ, ನವರಸಪುರ ಉತ್ಸವ, ಬೀದರ್ ಉತ್ಸವ, ರಾಜ್ಯದ ಅನೇಕ ಕಡೆ ಜನಪದ ಜಾತ್ರೆ, ಸುವರ್ಣ ಕರ್ನಾಟಕದ ರಾಜ್ಯ ಕಾರ್ಯಕ್ರಮ, ಮೂಡುಬಿದರೆ ಆಳ್ವಾಸ್ ನುಡಿಸಿರಿ ಸೇರಿದಂತೆ ಎಲ್ಲಾ ಭಾಗಗಳಲ್ಲೂ ತಮ್ಮ ಕಲೆಯನ್ನು ಪ್ರಸಾರ ಮಾಡಿದ್ದಾರೆ. ಆರೋಗ್ಯ ಇಲಾಖೆಯವರು ಏಡ್ಸ್, ಗರ್ಭಿಣಿ ಸ್ತ್ರೀಯರ ಸಂರಕ್ಷಣೆ, ಆರೋಗ್ಯ ಮತ್ತು ಪರಿಸರ ನೈರ್ಮಲ್ಯ, ಪಲ್ಸ್ ಪೋಲಿಯೋ, ಸಂತಾನಹರಣಗಳ ಕುರಿತು ಸಮುದಾಯದಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳಿಗೆ ಇವರ ಕಲೆ ಬಳಸಿದ್ದು, ಅದಕ್ಕೆ ಪೂರಕವಾಗಿ ಅವು ಯಶಸ್ವಿಯಾದ್ದಕ್ಕೆ ಮಂಜಮ್ಮನಿಗೆ ಅಪಾರ ಸಂತಸವಾಗಿದೆ.

ನಶಿಸಿ ಹೋಗುತ್ತಿರುವ ಹಳೆಯ ಪ್ರಕಾರದ ಗ್ರಾಮೀಣ ಜನಪದ ಕಲೆ, ಸಂಸ್ಕೃತಿಯನ್ನು ಗುರುತಿಸಿ, ಉಳಿಸಿಕೊಂಡು ಮುಂದಿನ ಪೀಳಿಗೆಗೆ ತೋರಿಸಬೇಕಿದೆ. ಅದಕ್ಕೆ ಜಿಲ್ಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಗುರುಶಿಷ್ಯ ಪರಂಪರೆ ಯೋಜನೆ ಅಡಿಯಲ್ಲಿ, ವಿಶೇಷವಾಗಿ ಈ ಜೋಗತಿ ಕಲೆಯನ್ನು ಪ್ರೋತ್ಸಾಹಿಸಲು ಜೋಗತಿಯರಿಗೆ ಆರು ತಿಂಗಳ ತರಬೇತಿ ನಡೆಸಿದೆ. ಆ ತರಬೇತಿ ತಂಡದ ಮುಖ್ಯಸ್ಥೆಯಾಗಿ ಮತ್ತು ತರಬೇತಿದಾರಳಾಗಿ ಮಂಜಮ್ಮ ಅನೇಕ ಜೋಗತಿಯರಿಗೆ ಕಲೆಯ ತರಬೇತಿ ನೀಡಿದ್ದಾಳೆ.

ಕಳೆದ ೨೫ ವರ್ಷಗಗಳಿಂದ ಜೋಗತಿ ನೃತ್ಯ ಮಾಡುತ್ತಾ, ತನ್ನಂತೆ ಇರುವ ಇತರರನ್ನು ಬದುಕಿಸಲು ಪ್ರಯತ್ನಿಸುವ ಮಂಜವ್ವಳ ಕಾರ್ಯ ಶ್ಲಾಘನೀಯ. ಅದಕ್ಕಾಗಿಯೇ ಆಕೆಯನ್ನು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ೨೦೦೬ರಲ್ಲಿ ಹುಡುಕಿಕೊಂಡು ಬಂದಿದೆ. ಆ ಪ್ರಶಸ್ತಿ ಬಂದಿದ್ದು ತನ್ನ ಗುರುಮಾತೆ ದಿವಂಗತ ಕಾಳಮ್ಮ ಜೋಗತಿ ಹಾಗೂ ತಂಡದ ಆಶೀರ್ವಾದದಿಂದ ಎಂದು ಮುಗ್ಧತೆಯಿಂದ ಹೇಳುತ್ತಾಳೆ. ಜೊತೆಗೆ ತನ್ನ ಬೆಳವಣಿಗೆಗೆ ನೆರವು ನೀಡಿದ ಜಾನಪದ ಲೋಕದ ದಿವಂಗತ ಹೆಚ್.ಎಲ್ ನಾಗೇಗೌಡರನ್ನು, ಪತ್ರಕರ್ತರಾದ ಗುಡಿಹಳ್ಳಿ ನಾಗರಾಜ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಚೋರುನೂರು ಕೊಟ್ರಪ್ಪನವರನ್ನು ಮರೆಯದೇ ಸ್ಮರಿಸಿಕೊಳ್ಳುತ್ತಾಳೆ.

ಮಂಜಮ್ಮ ಜೋಗತಿ ಸೇರಿದಂತೆ ಜೋಗತಿಯರ ಆರ್ಥಿಕ ಪರಿಸ್ಥಿತಿ ಇಂದು ತೀರ ಕೆಳಮಟ್ಟದಲ್ಲಿದೆ. ಮೊದಲಿಗೆಲ್ಲ ಹಳ್ಳಿಗಳಲ್ಲಿ ರೈತರು ದವಸ-ಧಾನ್ಯಗಳನ್ನು ಉದಾರ ವಾಗಿ ದಾನ ಕೊಡುತ್ತಿದ್ದರು. ಆದರೆ ಇಂದು ರೈತರು ಸಂಕಟದಲ್ಲಿರುವಾಗ ಇವರ ಬಗ್ಗೆ ಅನುಕಂಪ ತೋರಿಸುವವರಾರು? ಹಾಗಾಗಿ ಇವರ ಜೀವನ ದಿನದಿನಕ್ಕೆ ದುಸ್ತರವಾಗುತ್ತಿದೆ. ಕಲಾಪ್ರದರ್ಶನಕ್ಕೆ ಕರೆ ಬಂದಾಗ ಕರೆ ಬಂದಲ್ಲಿಗೆ ಹೋಗಿ ಪ್ರದರ್ಶನ ಮಾಡಿ ಅವರು ಕೊಡುವ ಸ್ವಲ್ಪ ಹಣವನ್ನು ಹಂಚಿಕೊಂಡು ಜೀವನ ಸಾಗಿಸಬೇಕು. ಅವರ ಜೀವನದ ಬಹುಪಾಲು ನೋವಿನಿಂದ ಕೂಡಿದೆ ಎನ್ನಬಹುದು. ಇದರ ಪರಿಣಾಮವಾಗಿ ಅನೇಕರು ಈ ಜನಪದ ಕಲೆಯಿಂದ ದೂರವಾಗುತ್ತಿದ್ದಾರೆ.

ಈ ಕಲೆ ಕೆಲವರಲ್ಲಿ ಮಾತ್ರ ಉಳಿದಿರುವುದರಿಂದ ಸರ್ಕಾರ, ಸಂಘ-ಸಂಸ್ಥೆಗಳು ಅದನ್ನು ಅಳಿಯಲು ಬಿಡಬಾರದು. ಜೋಗತಿ ಸಮುದಾಯಕ್ಕೆ ಸೂಕ್ತ ಸ್ಥಾನಮಾನಗಳನ್ನು ಕೊಡಬೇಕು. ಈ ವಿಶೇಷ ಕಲಾ ಪರಂಪರೆಗೆ ಅಸ್ತಿತ್ವ ಕಲ್ಪಿಸಿಕೊಡುತ್ತಾ ನಮ್ಮವರಲ್ಲಿ ಆತ್ಮವಿಶ್ವಾಸ ತುಂಬುವ ಕೆಲಸ ಆಗಬೇಕಿದೆ. ಇವೆಲ್ಲಕ್ಕಿಂತ ಮೊದಲು ಆಶ್ರಯಕ್ಕಾಗಿ ಒಂದು ಮನೆ, ಜೀವನಕ್ಕಾಗಿ ಮಾಸಾಶನವನ್ನು ಸರ್ಕಾರ ತಕ್ಷಣ ಮಂಜೂರು ಮಾಡಬೇಕು.

**ಪರಮೇಶ್ವರಯ್ಯ ಸೊಪ್ಪಿನಮಠ, ಬಳ್ಳಾರಿ**

ಕರ್ಮವೀರ, ಜೂನ್ ೧೩ ೨೦೧೦

**ಜೋಗತಿ ಸಂಸ್ಕೃತಿ ವಿಷಯದ ಮೇಲೆ ಪಿಎಚ್.ಡಿ.**

ಮರಿಯಮ್ಮನಹಳ್ಳಿ : ಜರ್ಮನಿಯಲ್ಲಿ ಗಂಡು-ಹೆಣ್ಣು ಎರಡೇ ಲಿಂಗಗಳಿವೆ. ಭಾರತದಲ್ಲಿದ್ದಂತೆ ಮೂರನೆ ಲಿಂಗಕ್ಕೆ ಅವಕಾಶ ಇಲ್ಲ ಎಂದು ಜರ್ಮನಿಯ ಸಂಶೋಧನಾ ವಿದ್ಯಾರ್ಥಿನಿ ಸಾರ ಮಾರ್ಕಲೆ ಹೇಳಿದರು.

> ಜೋಗಪ್ಪ ಮತ್ತು ಜೋಗ್ತಿಯರು ಸಮಾಜದಲ್ಲಿಂದು ಅನೇಕ ಸೂಕ್ಷ್ಮ ಸಮಸ್ಯೆಗಳಿಗೆ ತುತ್ತಾಗಿ ಸರ್ಕಾರಿ ಸೌಲಭ್ಯ ಪಡೆಯಲು ಹೆಣಗಬೇಕಿದೆ. ಇವರು ಕುಟುಂಬದಿಂದಲೇ ಅವಜ್ಞೆಗೊಳಗಾಗಿ ಸಮಾಜದಲ್ಲೂ ಅವಮಾನ ಅನುಭವಿಸುತ್ತಾರೆ. ಅವರ ಸಮಸ್ಯೆಗಳ ಕುರಿತು ಸಾರ ಮಾರ್ಕಲೆ ಅಧ್ಯಯನ ಮಾಡುತ್ತಿರುವುದು ವಿಶಿಷ್ಟವಾಗಿದ್ದು ಇದರಿಂದ ದುಸ್ತರವಾಗಿರುವ ಇವರ ಬದುಕಿಗೆ ಸರ್ಕಾರಗಳು ಜನಸಾಮಾನ್ಯರಿಗೆ ನೀಡುವ ಹಕ್ಕು-ಸೌಲಭ್ಯಗಳನ್ನು ಸಿಗುವಂತಾಗಲಿ

ಅವರು ಇತ್ತೀಚೆಗೆ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತೆ ಮಂಜಮ್ಮ ಜೋಗುತಿಯವರ ಮನೆಯಲ್ಲಿ ಭಾರತ ದೇಶದ ಜೋಗುತಿ ಸಂಸ್ಕೃತಿ ವಿಷಯದಲ್ಲಿ ತಮ್ಮ ಸಂಶೋಧನಾ ಅನುಭವಗಳನ್ನು ಹಂಚಿಕೊಂಡರು. ಜರ್ಮನಿಯ ಹ್ಯುಚ್‌ಬರ್ಗ್ ವಿಶ್ವವಿದ್ಯಾಲಯದಲ್ಲಿ ಜ್ಯೂಲಿಯಸ್ ಮಾಕ್ಸ್ ಸುಲಿಯನ್‌ನಲ್ಲಿ ಚೆರ್ ಆಫ್ ಇಂಡೋಲಾಜಿ ಅಧ್ಯಯನ ವಿಭಾಗದಲ್ಲಿ ಪ್ರೊ. ಹೆಡ್ರಿನ್ ಬ್ರೂಕ್ನರ್ ಅವರ ಮಾರ್ಗದರ್ಶನದಲ್ಲಿ ಸಾರ ಈಗಾಗಲೇ ಎಂ.ಫಿಲ್. ಪದವಿ ಮುಗಿಸಿದ್ದು ಈಗ ಅವರು ಭಾರತದ ಲೈಂಗಿಕ ಅಲ್ಪಸಂಖ್ಯಾತರ ಸಂಶೋಧನೆ ಮಾಡಲು ಸಲಹೆ ಮೇರೆಗೆ ಜೋಗುತಿ ಸಂಸ್ಕೃತಿ ವಿಷಯದ ಮೇಲೆ ಪಿಎಚ್.ಡಿ. ಮಾಡುತ್ತಿದ್ದೇನೆ. ಇದಕ್ಕಾಗಿ ಈಗಾಗಲೇ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ, ಬೆಂಗಳೂರು ವಿಶ್ವವಿದ್ಯಾಲಯ, ಹಂಪಿಯ ಕನ್ನಡ ವಿಶ್ವವಿದ್ಯಾಲಯಗಳಿಗೆ ಭೇಟಿ ನೀಡಿದ್ದೇನೆ. ಜರ್ಮನಿಯಲ್ಲಿ ಮೂರನೇ ಲಿಂಗಕ್ಕೆ ಅವಕಾಶವಿಲ್ಲ, ಅದಕ್ಕೆ ಒಳಪಡುವವರು ಕಾನೂನಾತ್ಮಕವಾಗಿ ಪುರುಷ ಅಥವಾ ಸ್ತ್ರೀಲಿಂಗಕ್ಕೆ ಸೇರಬೇಕು. ಚಿಕಿತ್ಸೆಗಾಗಿ ಕಾನೂನು ಕ್ರಮಗಳನ್ನು ಪಾಲಿಸಬೇಕಿದೆ. ಇದೊಂದು ರೀತಿಯ ಹಿಂಸೆ ಎಷ್ಟೇ ತೊಂದರೆ ತೊಡರುಗಳಿದ್ದರೂ ಅನೇಕರು ಬದಲಾವಣೆ ಹೊಂದಿ ಬದುಕುತ್ತಿದ್ದಾರೆಂದರು. ಆದರೆ ಇಲ್ಲಿ ಯಾವುದೇ ಕಾನೂನು ಕಟ್ಟಳೆಗಳ ಕಡಿವಾಣವಿಲ್ಲದೆ ದೇವಿಯ ಮುತ್ತು ಕಟ್ಟಿಸುವ ಮೂಲಕ ಸರಳವಾಗಿ ಬದಲಾಗುತ್ತಾರೆ. ಕಳೆದ ಮೂರು ವರ್ಷಗಳಿಂದ ಕರ್ನಾಟಕಕ್ಕೆ ಮೂರು ಬಾರಿ ಭೇಟಿ ನೀಡಿ, ಉತ್ತರ ಕರ್ನಾಟಕದ ಸವದತ್ತಿ, ಹುಲಿಗಿ, ಬದಾಮಿ, ಬಳ್ಳಾರಿ ಜಿಲ್ಲೆಯ ಮರಿಯಮ್ಮನಹಳ್ಳಿಗೆ ಭೇಟಿ ನೀಡಿ ಜೋಗತಿಯರಿಗೆ ಸಂಬಂಧಿಸಿದ ಮಾಹಿತಿ ಸಂಗ್ರಹಿಸುತ್ತಿದ್ದೇನೆ. ಅವರ ಜೀವನ ಶೈಲಿ, ಬದುಕುವ ರೀತಿ ಅವರೊಂದಿಗೆ ಸ್ವತಃ ಇದ್ದುಕೊಂಡೇ ಅಧ್ಯಯನ ಮಾಡಿದ್ದೇನೆ. ಈ ಪ್ರಬಂಧವನ್ನು

ನಮ್ಮ ವಿಶ್ವವಿದ್ಯಾಲಯದಲ್ಲಿ ಮಂಡಿಸಿ ಇವರ ಸಮಸ್ಯೆಗಳ ಕುರಿತು ಅಲ್ಲಿ ಬೆಳಕು ಚೆಲ್ಲುತ್ತೇನೆಂದರು. ಭಾರತದ ಸಂಸ್ಕೃತಿ ವಿಶಾಲವಾದುದು. ನನ್ನ ಅಧ್ಯಯನದ ವಿಷಯ ಭಾರತದ ಸಂಸ್ಕೃತಿ ಕುರಿತದ್ದೇ. ಅದರೊಂದಿಗೆ ಜೋಗುತಿ ಮತ್ತು ಜೋಗಪ್ಪನವರ ಕುರಿತು ಅಧ್ಯಯನಕ್ಕೆ ಆಸಕ್ತಿ ತೋರಿದ್ದೇನೆಂದರು.

**ಈ ನಮ್ಮ ಕನ್ನಡನಾಡು**
**೧೩ ಏಪ್ರಿಲ್ ೨೦೧೩**

**ಎಲ್ಲಿ ಕಾಣೆ ಎಲ್ಲಿ ಕಾಣೇ... ಎಲ್ಲವ್ವನಂತರೋ...**

**ಮರಿಯಮ್ಮನಹಳ್ಳಿ:** 'ಎಲ್ಲಿ ಕಾಣೆ ಎಲ್ಲಿ ಕಾಣೇ...
ಎಲ್ಲವ್ವನಂತರೋ ಎಲ್ಲಿ ಕಾಣೆ ಎಲ್ಲಿ ಕಾಣೇ....'

ಹೀಗೆ ಈ ಭಾಗದಲ್ಲಿ ಸಂತೆದಿನ, ಹಬ್ಬ-ಹರಿದಿನ, ಜಾತ್ರೆಗಳಲ್ಲಿ ಕೇವಲ ಒಂದೆರಡು ರೂಪಾಯಿಗಳಿಗೆ ಚೌಡಿಕಿ ನುಡಿಸುತ್ತಾ, ಹಾಡುತ್ತಾ ರೊಕ್ಕ ಕೊಡೋಯಣ್ಣ ಕೊಡೇಯಕ್ಕ ಎಂದು ಪೀಡಿಸುತ್ತಾ ಸುತ್ತುವ ಜೋಗತಿಯರನ್ನು ಕಂಡರೆ ಸಾಕು ಹಿಂಜರಿಯುವವರೇ ಹೆಚ್ಚು. ವಿಚಿತ್ರವಾಗಿ ಕಾಣುವ, ಇನ್ನು ಕೀಳರಿಮೆಯಿಂದ ಮೂಗು ಮುರಿಯುವವರೇ ಹೆಚ್ಚಿರುವ ಇಂದಿನ ದಿನಮಾನಗಳಲ್ಲಿ ಇತ್ತ ಪುರುಷನಲ್ಲದೆ ಅತ್ತ ಸ್ತ್ರೀಯರಲ್ಲದೆ ಇರುವ ಇಂತಹವರಲ್ಲಿನ ಕಲೆ, ಪ್ರತಿಭೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುವವರಾರು...?

ಪಟ್ಟಣದಲ್ಲಿ ಅಂತಹ ಒಂದು ಪ್ರತಿಭೆಯ ಗಣಿಯಂತಿರುವ ಜೋಗಿತಿಯರ ತಂಡ ಇದೆ. ತಮ್ಮದೇ ಆದ ಚೌಡಿಕಿ ಪದ, ದೇವಿ ಪದ ಹಾಡುತ್ತಾ ಜೋಗತಿ ನೃತ್ಯ, ದೇವಿಯ ಕೊಡಹೊತ್ತು ಕುಣಿಯುವ ಪ್ರಕಾರದ ಪ್ರತಿಭೆಯನ್ನು ನಾಡಿನಾದ್ಯಂತ ಪ್ರದರ್ಶಿಸಿ ತಮ್ಮದೇ ಆದರ ರೀತಿಯಲ್ಲಿ ಶ್ರೀರೇಣುಕಾ ದೇವಿ ಮಹಾತ್ಮೆ ನಾಟಕವನ್ನು ಪ್ರದರ್ಶಿಸುವುದು ಈ ತಂಡದ ಹಿರಿಮೆ.

ನಶಿಸಿ ಹೋಗುತ್ತಿರುವ ಹಳೆಯ ಪ್ರಕಾರದ ಗ್ರಾಮೀಣ ಜಾನಪದ ಕಲೆ, ಸಂಸ್ಕೃತಿಗಳನ್ನು ಗುರುತಿಸಿ ಉಳಿಸಿಕೊಂಡು ಮುಂದಿನ ಪೀಳಿಗೆಗೆ ಕೊಂಡೊಯ್ಯುವ ದೃಷ್ಟಿಯಿಂದ ಜಿಲ್ಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮುಂದಾಗಿದೆ. ಸಾಂಸ್ಕೃತಿಕ ಪರಂಪರೆ ಯೋಜನೆಯಡಿ ವಿಶೇಷವಾಗಿ ಈ ಜೋಗತಿ ಕಲೆಯ ಪರಂಪರೆಯನ್ನು ಪ್ರೋತ್ಸಾಹಿಸಲು 'ಜೋಗತಿ ಕುಣಿತ' ತರಬೇತಿ ಶಿಬಿರ ಸಹ ಕಳೆದ ಮೂರು ತಿಂಗಳಿನಿಂದ ಪಟ್ಟಣದಲ್ಲಿ ಸದ್ದಿಲ್ಲದೆ ನಡೆಯುತ್ತಿದೆ.

ಈ ಜೋಗತಿಯರ ತಂಡವನ್ನು ಕಟ್ಟಿ ಬೆಳೆಸಿದವರು ದಿವಂಗತ ಕಾಳವ್ವ ಜೋಗತಿ. ಮೂಲತಃ ಮರಿಯಮ್ಮನಹಳ್ಳಿಯವರೇ ಆಗಿದ್ದ ಅವರು, ಜೋಗಿತಿಯಾಗಿ

'ಜೋಗತಿಯರ ತಂಡ'ವನ್ನು ಕಟ್ಟಿಕೊಂಡು ಸುಮಾರು ವರ್ಷ ನೃತ್ಯ, ನಾಟಕ ಪ್ರದರ್ಶಿಸುತ್ತಾ ಬಂದವರು. ೭೦ನೇ ಇಳಿವಯಸ್ಸಿನಲ್ಲಿಯೂ ಅಭಿನಯಿಸುತ್ತಿದ್ದುದು ಅವರಲ್ಲಿನ ಪ್ರತಿಭೆಗೆ ಸಾಕ್ಷಿ. ಸರ್ಕಾರ ಪ್ರಥಮ ಬಾರಿಗೆ ೨೦೦೧ರಲ್ಲಿ ಕಾಳವ್ವ ಜೋಗತಿಗೆ 'ರಾಜ್ಯೋತ್ಸವ ಪ್ರಶಸ್ತಿ' ನೀಡಿ ಗೌರವಿಸಿತು. ಕಾಳವ್ವ ಹಾಕಿಕೊಟ್ಟ ಪರಂಪರೆಯನ್ನು ಮುಂದುವರಿಸುತ್ತಿರುವ ಮಂಜಮ್ಮ ಜೋಗತಿ ಈಗಿನ ತಂಡದ ಮುಖ್ಯಸ್ಥೆ ಹಾಗೂ ತರಬೇತುದಾರೆ ಕೂಡ.

ಕಾಳವ್ವ ಜೋಗತಿಯಂತೆ ಮಂಜಮ್ಮ ಕೊಡಹೊತ್ತು ನೃತ್ಯ ಮಾಡುವುದರಲ್ಲಿ ಪ್ರವೀಣೆ. ಆರು ಜನರ ತಂಡದೊಂದಿಗೆ ಜೋಗತಿ ನೃತ್ಯ ಪ್ರದರ್ಶನ, ದೇವಿಕೊಡ ಹೊತ್ತು ಕುಣಿಯುವುದು, ಚೌಡಕಿ ಪದ ಹಾಗೂ ಇತರೆ ಪ್ರಕಾರದ ಕಲೆಗಳನ್ನು ಹಂಪಿ ಉತ್ಸವ, ಬಿಜಾಪುರದಲ್ಲಿ ನಡೆದ ನವರಸಪುರ ಉತ್ಸವ, ಬೆಂಗಳೂರು, ಮೈಸೂರು, ಮಡಿಕೇರಿ, ಉಡುಪಿ, ಅಥಣಿ, ಮಂಗಳೂರು, ಬಳ್ಳಾರಿ ಹೀಗೆ ಹಲವು ಊರುಗಳಲ್ಲಿ ಅನೇಕ ಪ್ರದರ್ಶನ ನೀಡಿದ್ದಾರೆ. ಈಗ ೧೨ ಜನ ಜೋಗತಿಯರಿಗೆ ಜೋಗತಿ ಕಲೆಯ ತರಬೇತಿ ನೀಡುತ್ತಿದ್ದಾರೆ.

ರಾಮವ್ವ ಜೋಗತಿ, ಸೋಮವ್ವ ಜೋಗತಿ, ಹೊನ್ನೂರವ್ವ ಜೋಗತಿ, ನಾಗಮ್ಮ ಜೋಗತಿ, ಭಾಗ್ಯಮ್ಮ ಜೋಗತಿ, ಅಂಜಿನಮ್ಮ ಜೋಗತಿ, ಹನುಮಂತಮ್ಮ ಜೋಗತಿ, ಅವಕ್ಕ ಜೋಗತಿ, ಗಂಗಮ್ಮ ಜೋಗತಿ, ಮಾರೆಕ್ಕ ಜೋಗತಿಯರು ತರಬೇತಿಯ ಶಿಬಿರಾರ್ಥಿಗಳು.

ಇಂದು ಈ ವೃತ್ತಿಯಲ್ಲಿ ಬದುಕುವುದು ಬಹಳ ಕಷ್ಟ, ಕರೆ ಮಾಡಿ ಎಲ್ಲಿ ಕರಿತಾರೋ ಅಲ್ಲಿಗೆ ಮಾತ್ರ ಪ್ರದರ್ಶನಕ್ಕೆ ಹೋಗುತ್ತಿವಿ. ಅವರು ಹಣ ಕೊಟ್ಟಷ್ಟು ಎಲ್ಲರೂ ಹಂಚಿಕೋತೀವಿ. ನಮಗ ಆಶ್ರಯ ಬೇಕಾಗೈತ್ರೀ. 'ಇರದಕಾ ಮನಿ, ಮಾಸಾಶನವಾದ್ರೂ ಮಂಜೂರಾದ್ರು ಮಾಡಿದ್ರೆ ಒಂದು ಜೀವನಾದ್ರು ಸಾಗತೈತ್ರಿ' ಎನ್ನುತ್ತಾರೆ ಮಂಜಮ್ಮ ಜೋಗಿತಿ.

ಜೋಗತಿ ಕಲೆ, ಕಲಾವಿದರ ಜೀವನ ನೋವಿನಿಂದ ಕೂಡಿದೆ. ಕಲೆಯನ್ನು ಉಳಿಸಿಕೊಂಡು ಹೋಗಲು ಅವರಿಗೆ ಸರ್ಕಾರ ಪ್ರೋತ್ಸಾಹ ನೀಡಬೇಕಿದೆ. ಜತೆಗೆ ಪುನರ್ವಸತಿ, ಮಾಸಾಶನ ನೀಡಬೇಕಿದೆ. ಈ ನಿಟ್ಟಿನತ್ತ ಸಂಬಂಧಪಟ್ಟ ಇಲಾಖೆ ಹಾಗೂ ಜನಪ್ರತಿನಿಧಿಗಳು ಮುಂದಾಗಬೇಕಿದೆ.

**ಎಚ್.ಎಸ್. ಶ್ರೀಹರಪ್ರಸಾದ್**

ಪ್ರಜಾವಾಣಿ, ೨೪ನೇ ಅಕ್ಟೋಬರ್ ೨೦೦೬

**ಜಾನಪದ ಲೋಕಕ್ಕೆ ಸಂದ ಗೌರವ : ಮಂಜಮ್ಮ**

**ಮರಿಯಮ್ಮನಹಳ್ಳಿ :** ಜಾನಪದ ರಂಗದಲ್ಲಿ ಹಿರಿ–ಕಿರಿಯ ಕಲಾವಿದರು ಇನ್ನು ಎಲೆಮರೆ ಕಾಯಿಯಾಗಿ ದುಡಿಯುತ್ತಿದ್ದು, ಅಂತಹದರಲ್ಲಿ ನನಗೆ ಮತ್ತು ಪ್ರಶಸ್ತಿಗೆ

ಆಯ್ಕೆಯಾದ ಅಷ್ಟು ಜನ ಹಿರಿಯರಲ್ಲಿನ ಚಿಕ್ಕವಯಸ್ಸಿನ ನಾನು ಈ ಪ್ರಶಸ್ತಿಗೆ ಆಯ್ಕೆಯಾಗಿರುವುದು ತುಂಬಾ ಸಂತಸ ಮತ್ತು ಹೆಮ್ಮೆಯಾಗುತ್ತದೆ ಎಂದು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿಗೆ ಆಯ್ಕೆಯಾದ ಪಟ್ಟಣದ ಮಂಜಮ್ಮ ಜೋಗತಿ ಸೋಮವಾರ 'ಪ್ರಜಾವಾಣಿ'ಯೊಂದಿಗೆ ಸಂತಸ ಹಂಚಿಕೊಂಡರು.

'ನೋಡ್ರಿ ನಾನು ಈ ಚಿಕ್ಕ ವಯಸ್ಸಿನಲ್ಲಿ ಇಂತಹ ಪ್ರಶಸ್ತಿಗೆ ಆಯ್ಕೆಯಾಗುತ್ತೇನೆಂದು ಅಂದುಕೊಂಡಿರಲಿಲ್ಲ ಮತ್ತು ಯಾರಿಗೂ, ಎಲ್ಲಿಯೂ ನಾನು ಬೇಡಿಲ್ಲ, ಇದಾಗಿ ಬಂದಿರುವುದು ಹೇಳಲಾಗದಷ್ಟು ಸಂತೋಷ ಮತ್ತು ಸಂತಸ ಆಗೈತ್ರಿ, ಇದಕ್ಕೆಲ್ಲ ನಮ್ಮ ಗುರುಮಾತೆ ರಾಜ್ಯ ಪ್ರಶಸ್ತಿ ವಿಜೇತೆ ದಿವಂಗತ ಕಾಳವ್ವ ಜೋಗಿತಿ ಮತ್ತು ತಂಡದ ಜೋಗಿತಿಯರ ಬೆಂಬಲವೇ ಕಾರಣ ಎನ್ನುತ್ತಾರೆ ಮಂಜಮ್ಮ ಜೋಗತಿ.

ಇದೇ ಸಂದರ್ಭದಲ್ಲಿ ಸಹಕಾರ ನೀಡಿದ ತಮ್ಮ ತಂಡ ಜೋಗತಿಯರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೂ ಮತ್ತು ಎಲ್ಲರನ್ನೂ ಸ್ಮರಿಸಿದ ಅವರು, ನಿಜವಾಗಲೂ ಇದು ಜಾನಪದ ಲೋಕಕ್ಕೆ ಮತ್ತು ಜಾನಪದ ಕಲೆಗೆ ಸಂದ ಗೌರವ ಎಂದು ತಿಳಿಸಿದರು.

**ಪ್ರಜಾವಾಣಿ**

೧೬ನೇ ಜನವರಿ ೨೦೦೭

□□

## ೩. ಆಧಾರ ಗ್ರಂಥಗಳು


೧. ಕಲಬುರ್ಗಿ ಎಂ.ಎ.(ಸಂ), **ಜಾನಪದ ಸಾಹಿತ್ಯ ದರ್ಶನ–೧೧** (೧೯೮೭), ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨. ಕಾಳೇಗೌಡ ನಾಗವಾರ; ಜಿ.ವಿ. ಅನಂದಮೂರ್ತಿ (ಸಂ); **ಗರಿಗೆದರಿದ ನವಿಲು,** (೨೦೦೧); ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು.

೩. ಕೊಟ್ರಶೆಟ್ಟಿ ಎಂ.ಬಿ. (ಸಂ), **ಜಾನಪದ ಸಾಹಿತ್ಯ ದರ್ಶನ–೮** (೧೯೯೦), ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೪. ತಮಿಳ್ ಸೆಲ್ವಿ; **ನಾನು ಅವನಲ್ಲ ಅವಳು...** (ಅನು), (೨೦೦೮); ಲಿವಿಂಗ್ ಸ್ಮೈಲ್ ವಿದ್ಯಾ (ಮೂ), ಪ್ರಗತಿ ಗ್ರಾಫಿಕ್ಸ್, ಬೆಂಗಳೂರು.

೫. ತ.ರಾ.ಸು., ಅಂಜಜಾತ ರಾ.ಸು., **ಹಿಂತಿರುಗಿ ನೋಡಿದಾಗ,** (೧೯೯೦); ಎಷ್. ವೆಂಕಟರಾಮಯ್ಯ ಅಂಡ್ ಸನ್ಸ್, ವಿದ್ಯಾನಿಧಿ ಬುಕ್ ಡಿಪೊ, ಮೈಸೂರು ೦೪.

೬. ಪರಮಶಿವಯ್ಯ ಜೀ.ಶಂ., **ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು** (೨೦೧೨); ಸಾಗರ್ ಪ್ರಕಾಶನ, ನಾಗರಭಾವಿ, ೨ನೇ ಹಂತ, ಬೆಂಗಳೂರು ೭೨.

೭. ಪುಟ್ಟಯ್ಯ ಬಿ.ಎಂ., **ಆತ್ಮಕಥೆಗಳಲ್ಲಿ ಕರ್ನಾಟಕದ ಕಥೆ,** (೧೯೯೯), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ.

೮. ಪ್ರೇಮಕುಮಾರ್. ಕೆ., **ಬುರ್ರಕಥಾ ಜಯಮ್ಮ,** (೨೦೧೩), ವಿಸ್ತರಣೆ ಹಾಗೂ ಸಲಹಾ ಕೇಂದ್ರ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ.

೯. ವೆಂಕಟೇಶ. ಎಂ. ರಾವ್, **ಸಖಿ**–ತಿಂಗಳ ಪತ್ರಿಕೆ, ನಂದೂ ಒಂದು ಬದುಕು–ವಿಭಾಗ, ಸಖಿ ಪಾಕ್ಷಿಕ, ಎಕ್ಸ್‌ಪ್ರೆಸ್ ಕಟ್ಟಡ ನಂ. ೧, ಕ್ವೀನ್ಸ್ ರಸ್ತೆ, ಬೆಂಗಳೂರು–೦೧.

೧೦. ವೃಷಭಕುಮಾರ, **ಹುಮಾಯೂನ್ ಹರಲಾಪುರ,** (೨೦೧೪), ವಿಸ್ತರಣೆ ಹಾಗೂ ಸಲಹಾ ಕೇಂದ್ರ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ–೫೮೧ ೧೯೭

೧೧. ಶೈಲಜ ಹಿರೇಮಠ, **ಹರದೇಶಿ, ನಾಗೇಶಿ ಕಲೆ ಮತ್ತು ಕಲಾವಿದರು ಲಿಂಗ ಸಂಬಂಧಿ ಅಧ್ಯಯನ,** (೨೦೧೧), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.


□□

## ಈ. ವಕ್ತೃಗಳ ವಿವರ

| ಕ್ರಸಂ. | ಹೆಸರು | ಲಿಂಗ | ವಯಸ್ಸು | ಸಮುದಾಯ | ವೃತ್ತಿ | ವಿಳಾಸ |
|---|---|---|---|---|---|---|
| ೧. | ತಾರ ಜೋಗತಿ | ತೃತೀಯ ಲಿಂಗ | ೫೨ | ಕುರುಬ | ಗಂಡು ಜೋಗತಿ | ಹಿರೆಬಗನಾಳ್, ಕೊಪ್ಪಳ ತಾ. ಕೊಪ್ಪಳ ಜಿ. |
| ೨. | ಅಂಜಲಿ ಜೋಗತಿ | ತೃತೀಯ ಲಿಂಗ | ೪೦ | ವಾಲ್ಮೀಕಿ | ಗಂಡು ಜೋಗತಿ | ಗಜಾಪುರ ಕೂಡ್ಲಿಗಿ ತಾ. ಬಳ್ಳಾರಿ ಜಿ. |
| ೩. | ಗಂಗಮ್ಮ ಜೋಗತಿ | ತೃತೀಯ ಲಿಂಗ | ೬೨ | ಕುರುಬ | ಗಂಡು ಜೋಗತಿ | ಸೊಬಟಿ ಹಗರಿಬೊಮ್ಮನಹಳ್ಳಿ ತಾ., ಬಳ್ಳಾರಿ ಜಿ. |
| ೪. | ಮಂಜಮ್ಮ (ಕವಿತ) ಜೋಗತಿ | ತೃತೀಯ ಲಿಂಗ | ೩೫ | ವಾಲ್ಮೀಕಿ | ಗಂಡು ಜೋಗತಿ | ಹೊಸಪೇಟೆ ಬಳ್ಳಾರಿ ಜಿ. |
| ೫. | ಯಲ್ಲಮ್ಮ ಜೋಗತಿ | ತೃತೀಯ ಲಿಂಗ | ೪೫ | ಕುರುಬ | ಗಂಡು ಜೋಗತಿ | ಚಿಲಗೋಡು ಹಗರಿಬೊಮ್ಮನಹಳ್ಳಿ ತಾ. ಬಳ್ಳಾರಿ ಜಿ. |

| | | | | | | |
|---|---|---|---|---|---|---|
| ೬. | ಭಾಗ್ಯಮ್ಮ ಜೋಗತಿ | ತೃತೀಯ ಲಿಂಗ | ೩೬ | ಭೋವಿ | ಗಂಡು ಜೋಗತಿ | ಯರದಮ್ಮನಹಳ್ಳಿ ಸೊಂಡೂರು ತಾ. ಬಳ್ಳಾರಿ ಜಿ |
| ೭. | ಗಂಗಮ್ಮ ಜೋಗತಿ | ತೃತೀಯ ಲಿಂಗ | ೪೭ | ಬಾರಿಕ | ಗಂಡು ಜೋಗತಿ | ಕಂಪ್ಲಿ ಬಳ್ಳಾರಿ ಜಿ. |
| ೮. | ರಾಮವ್ವ ಜೋಗತಿ | ತೃತೀಯ ಲಿಂಗ | ೪೫ | ವಾಲ್ಮೀಕಿ | ಗಂಡು ಜೋಗತಿ | ಗೊಲ್ಲರಹಳ್ಳಿ ಹೊಸಪೇಟೆ ತಾ. ಬಳ್ಳಾರಿ ಜಿ. |
| ೯. | ಹುಲಿಗೆಮ್ಮ ಜೋಗತಿ | ತೃತೀಯ ಲಿಂಗ | ೪೯ | ವಾಲ್ಮೀಕಿ | ಗಂಡು ಜೋಗತಿ | ಪೋತಲಕಟ್ಟೆ ಹೊಸಪೇಟೆ ತಾ. ಬಳ್ಳಾರಿ ಜಿ. |
| ೧೦. | ಗೌರಮ್ಮ ಜೋಗತಿ | ತೃತೀಯ ಲಿಂಗ | ೨೫ | ಮಡಿವಾಳ | ಗಂಡು ಜೋಗತಿ | ಹಗರಿಬೊಮ್ಮನಹಳ್ಳಿ ಬಳ್ಳಾರಿ ಜಿ. |
| ೧೧. | ಸೋಮವ್ವ ಜೋಗತಿ | ತೃತೀಯ ಲಿಂಗ | ೬೫ | ವಾಲ್ಮೀಕಿ | ಗಂಡು ಜೋಗತಿ | ಗೊಲ್ಲರಹಳ್ಳಿ ಹೊಸಪೇಟೆ ತಾ. ಬಳ್ಳಾರಿ ಜಿ. |

| | | | | | | |
|---|---|---|---|---|---|---|
| ೧೨. | ಮಾರಕ್ಕ ಜೋಗತಿ | ತೃತೀಯ ಲಿಂಗ | ೬೦ | ವಾಲ್ಮೀಕಿ | ಗಂಡು ಜೋಗತಿ | ಶಿವಪುರ<br>ಕೂಡ್ಲಿಗಿ ತಾ.<br>ಬಳ್ಳಾರಿ ಜಿ. |
| ೧೩. | ಡಾ. ಕೆ. ನಾಗರತ್ನಮ್ಮ | ಮಹಿಳೆ | ೬೮ | ವಾಲ್ಮೀಕಿ | ಹಿರಿಯ ರಂಗಕಲಾವಿದೆ | ಮರಿಯಮ್ಮನಹಳ್ಳಿ<br>ಹೊಸಪೇಟೆ ತಾ.<br>ಬಳ್ಳಾರಿ ಜಿ. |
| ೧೪. | ಶ್ರೀಮತಿ ಇಳಕಲ್<br>ಉಮರಾಣಿ | ಮಹಿಳೆ | ೪೮ | ವಾಲ್ಮೀಕಿ | ಹಿರಿಯ ರಂಗಕಲಾವಿದೆ | ಇಳಕಲ್<br>ಬಿಜಾಪುರ ಜಿ. |
| ೧೫. | ಶ್ರೀರಾಮಾಂಜನೇಯ | ಪುರುಷ | ೩೦ | ವಾಲ್ಮೀಕಿ | ಸಮಾಜ ಸೇವಕ | ಹೊಸಪೇಟೆ<br>ಬಳ್ಳಾರಿ ಜಿ. |
| ೧೬. | ಡಾ. ಸೋಮೇಶ<br>ಉಪಾರ್ | ಪುರುಷ | ೪೦ | ಉಪ್ಪಾರ | ಉಪನ್ಯಾಸಕ | ಮರಿಯಮ್ಮನಹಳ್ಳಿ<br>ಹೊಸಪೇಟೆ ತಾ.<br>ಬಳ್ಳಾರಿ ಜಿ. |

## ಈ. ವ್ಯಕ್ತಿ ವಿವರ

| | | |
|---|---|---|
| **ಹೆಸರು** | : | **ಬಿ. ಮಂಜಮ್ಮ ಜೋಗತಿ** |
| **ಜನ್ಮ ನಾಮ** | : | ಬಿ. ಮಂಜುನಾಥ |
| **ತಂದೆಯ ಹೆಸರು** | : | ಬಿ. ಹನುಮಂತ ಶೆಟ್ಟಿ |
| **ತಾಯಿಯ ಹೆಸರು** | : | ಬಿ. ಜಯಲಕ್ಷ್ಮಿ |
| **ವಿಳಾಸ** | : | **ಬಿ. ಮಂಜಮ್ಮ ಜೋಗತಿ**<br>ಜೋಗತಿ ನೃತ್ಯ ಕಲಾವಿದೆ<br>ಗೊಲ್ಲರಹಳ್ಳಿ ಗ್ರಾಮ<br>ಡಣಾಯಕನಕೆರೆ ಅಂಚೆ<br>ಹೊಸಪೇಟೆ ತಾ॥ ಬಳ್ಳಾರಿ ಜಿ॥<br>ಪಿನ್: ೫೮೩ ೨೨೨<br>ಫೋನ್: ೯೪೪೯೪೬೪೦೭೫ |
| **ಜನ್ಮ ದಿನಾಂಕ** | : | ೧೮.೦೪.೧೯೬೪ |
| **ವಯಸ್ಸು** | : | ೫೦ ವರ್ಷ |
| **ವಿದ್ಯಾರ್ಹತೆ** | : | ಎಸ್.ಎಸ್.ಎಲ್.ಸಿ. |
| **ಧರ್ಮ** | : | ಹಿಂದೂ |
| **ಜಾತಿ** | : | ಆರ್ಯ ವೈಶ್ಯ |
| **ವೃತ್ತಿ** | : | ಕಲಾಸೇವೆ<br>೧೯೮೫ರಲ್ಲಿ ಜೋಗತಿ ದೀಕ್ಷೆ<br>ತೆಗೆದುಕೊಳ್ಳಲಾಯಿತು<br>೧೯೮೬ರಿಂದ ರಾಜ್ಯ ಪ್ರಶಸ್ತಿ ವಿಜೇತೆ<br>ಕಾಳವ್ವ ಜೋಗತಿಯವರೊಂದಿಗೆ ಕಲಾಪ್ರದರ್ಶನ |

### ಪ್ರದರ್ಶನಗಳು

ಮಂಜಮ್ಮ ಜೋಗತಿ ಅವರು ತಮ್ಮ ಹದಿನೆಂಟನೇ ವಯಸ್ಸಿನಿಂದ ಈತನಕ ಗ್ರಾಮ, ಜಾತ್ರೆ, ಸಂತೆ, ವೇದಿಕೆ ಮುಂತಾದ ಸ್ಥಳಗಳಲ್ಲಿ ಸಾವಿರಾರು ಪ್ರದರ್ಶನಗಳನ್ನು ನೀಡಿದ್ದಾರೆ. ಸುಮಾರು ಇಪ್ಪತ್ತಕ್ಕೂ ಹೆಚ್ಚು ಗಂಡುಜೋಗತಿಯರಿಗೆ ತರಬೇತಿ ನೀಡಿದ ಅನುಭವ ಇವರಿಗಿದೆ. ಅಲ್ಲದೆ ಗಂಡುಜೋಗತಿಯರ ತಂಡವನ್ನು ಕಟ್ಟಿಕೊಂಡು

ಜೋಗತಿ ಕಲೆ ಪ್ರದರ್ಶನ ಮಾಡುವುದರ ಜೊತೆಗೆ ನಾಟಕ ಪ್ರದರ್ಶನ, ನಿರ್ದೇಶನ ಮಾಡಿದ್ದಾರೆ. ಅಂತಹ ಪ್ರದರ್ಶನಗಳಲ್ಲಿ ಕೆಲವು ಪ್ರದರ್ಶನಗಳ ವಿವರ ಇಂತಿದೆ.

೧. ಅಖಿಲ ಕರ್ನಾಟಕ ಮಹಿಳಾ ಜಾನಪದ ಸಮ್ಮೇಳನ, ತುಮಕೂರು, ೧೦, ಮಾರ್ಚ್ ೧೯೮೬.
೨. ಜಾನಪದ ಕಲಾ ಮಹೋತ್ಸವ, ರವೀಂದ್ರ ಕಲಾಕ್ಷೇತ್ರ, ಬೆಂಗಳೂರು, ೧೦, ಮಾರ್ಚ್, ೧೯೯೨.
೩. ಬುಡಕಟ್ಟು ಉತ್ಸವ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೩, ಜುಲೈ ೧೯೯೫.
೪. ಕರ್ನಾಟಕ ಬುಡಕಟ್ಟು ಮತ್ತು ಜನಪದ ನೃತ್ಯ ಉತ್ಸವ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೨, ೧೪ ಜುಲೈ ೧೯೯೫ ,
೫. ಬಳ್ಳಾರಿ ಜಿಲ್ಲಾ ಸಾಹಿತ್ಯ ಸಮ್ಮೇಳನ, ಬಳ್ಳಾರಿ, ೦೯, ೧೦ ಡಿಸೆಂಬರ್ ೧೯೯೫.
೬. ಹಂಪಿ ಉತ್ಸವ, ಹಂಪಿ (೧೯೯೫ ರಿಂದ ೨೦೧೦ರವರೆಗೆ ನಡೆದ ಹಂಪಿ ಉತ್ಸವಗಳಲ್ಲಿ ಪ್ರತಿವರ್ಷ ಪ್ರದರ್ಶನ ನೀಡಿರುವುದು ಈ ತಂಡದ ವಿಶೇಷ) ೧೯೯೫–೨೦೧೦.
೭. ರಾಜ್ಯಮಟ್ಟದ ಜಾನಪದ ಸಮಾವೇಶ, ಹೂವಿನಹಡಗಲಿ, ಬಳ್ಳಾರಿ ಜಿಲ್ಲೆ, ೦೯ ಜೂನ್ ೧೯೯೫.
೮. ಅಖಿಲ ಕರ್ನಾಟಕ ಜಾನಪದ ಸಮ್ಮೇಳನ ೨೭, ೨೮, ಮೇ ೧೯೯೮.
೯. ಜಾನಪದ ಉತ್ಸವ, ಅಥಣಿ, ಬೆಳಗಾವಿ ಜಿಲ್ಲೆ, ೨೭, ೨೮, ಮೇ ೧೯೯೯.
೧೦. ಜಾನಪದ ರಂಗ ಮಹೋತ್ಸವ, ರವೀಂದ್ರ ಕಲಾಕ್ಷೇತ್ರ, ಬೆಂಗಳೂರು ೧, ೧೮, ಜನವರಿ ೨೦೦೦.
೧೧. ಪ್ರಸಾರಭಾರತಿ ಆಕಾಶವಾಣಿ, ದಶಮಾನೋತ್ಸವ ಕಾರ್ಯಕ್ರಮ, ಹೊಸಪೇಟೆ, ೧೮, ಜುಲೈ ೨೦೦೨.
೧೨. ರಾಜ್ಯಮಟ್ಟದ ಚೌಡಕಿ ಮೇಳ, ಸವದತ್ತಿ ೧೪, ೧೫, ಸೆಪ್ಟಂಬರ್ ೨೦೦೩.
೧೩. ಸೊಂಡೂರು ತಾಲೂಕು ಸಾಹಿತ್ಯ ಸಮ್ಮೇಳನ, ಸೊಂಡೂರು, ೨೮, ಫೆಬ್ರವರಿ, ೨೦೦೪.
೧೪. ಕರ್ನಾಟಕ ಖಾದಿ ಉತ್ಸವ, ಬಳ್ಳಾರಿ, ೨೯, ಜುಲೈ ೨೦೦೪.
೧೫. ರಂಗಾಯಣ ಕಾರ್ಯಕ್ರಮ ಮೈಸೂರು, ೧೬ ಜುಲೈ ೨೦೦೪
೧೬. ಜಿಂದಾಲ್ ನವರಾತ್ರಿ ಉತ್ಸವ, ತೋರಣಗಲ್ಲು, ಬಳ್ಳಾರಿ ಜಿಲ್ಲೆ, ೨೨, ಅಕ್ಟೋಬರ್ ೨೦೦೪.
೧೭. ರಾಜ್ಯ ಜಾನಪದ ಕಲಾಸಾಗರ, ರಾಮದುರ್ಗ, ಬೆಳಗಾವಿ, ೨೫, ಫೆಬ್ರವರಿ ೨೦೦೬.
೧೮. ನವರಸಪುರ ಉತ್ಸವ, ಬಿಜಾಪುರ, ೦೫ ಮಾರ್ಚ್, ೨೦೦೫.

೧೯. ತಿಂಗಳ ಸೊಬಗು ಕಾರ್ಯಕ್ರಮ, ಮೈಸೂರು, ೧೦, ಮಾರ್ಚ್ ೨೦೦೫.

೨೦. ತಿಂಗಳ ಸೊಬಗು ಕಾರ್ಯಕ್ರಮ, ಬಿಜಾಪುರ, ೧೨, ಮಾರ್ಚ್ ೨೦೦೫.

೨೧. ಜಾನಪದ ಉತ್ಸವ, ಮೈಸೂರು, ೧೨ ಜೂನ್ ೨೦೦೫

೨೨. ಆಳ್ವಾಸ್ ನುಡಿಸಿರಿ ಕಾರ್ಯಕ್ರಮ, ಮೂಡಬಿದರೆ (೨೦೦೫ ರಿಂದ ೨೦೧೦ರವರೆಗೆ ಸತತವಾಗಿ ೫ ಬಾರಿ ಕಾರ್ಯಕ್ರಮ ನೀಡಿದ್ದಾರೆ) ೨೩, ಆಕ್ಟೋಬರ್ ೨೦೦೫.

೨೩. ದಸರಾ ನಾಡಹಬ್ಬ, ರಾಯಚೂರು ೨ ಸೆಪ್ಟೆಂಬರ್ ೨೦೦೬

೨೪. ಸುವರ್ಣ ಕರ್ನಾಟಕ ಸಾಂಸ್ಕೃತಿಕ ಕಾರ್ಯಕ್ರಮ, ಬಳ್ಳಾರಿ, ೭, ಜುಲೈ ೨೦೦೬.

೨೫. ರಾಜ್ಯೋತ್ಸವ ಕಾರ್ಯಕ್ರಮ ಚಿನ್ನಸ್ವಾಮಿ ಕ್ರಿಡಾಂಗಣ, ಬೆಂಗಳೂರು, ೦೧, ಡಿಸೆಂಬರ್, ೨೦೦೬..

೨೬. ಜಾನಪದ ಜಾತ್ರೆ, ಮಂಡ್ಯ ೧೮, ೧೯, ನವೆಂಬರ್ ೨೦೦೬.

೨೭. ಜಾನಪದ ಜಾತ್ರೆ, ಧಾರವಾಡ, ೨, ೩ ಡಿಸೆಂಬರ್ ೨೦೦೬.

೨೮. ಜಾನಪದ ಜಾತ್ರೆ, ಬೀದರ್ ೨೯, ಡಿಸೆಂಬರ್ ೨೦೦೬.

೨೯. ಜಾನಪದ ಜಾತ್ರೆ, ಚಾಮರಾಜನಗರ, ೬, ೭ ಜನವರಿ ೨೦೦೭.

೩೦. ಜಾನಪದ ಜಾತ್ರೆ, ಬಳ್ಳಾರಿ ೨೬, ೨೭ ಜನವರಿ ೨೦೦೭.

೩೧. ಜಾನಪದ ಜಾತ್ರೆ, ಬೆಂಗಳೂರು, ೧೦ ಫೆಬ್ರವರಿ ೨೦೦೭.

೩೨. ವಿಶ್ವ ಗೋ ಸಮ್ಮೇಳನ, ರಾಮಚಂದ್ರಪುರ ಮಠ, ಹೊಸನಗರ ತಾ, ಶಿವಮೊಗ್ಗ, ೨೮ ಏಪ್ರಿಲ್ ೨೦೦೭..

೩೩. ಅಂತಾರಾಜ್ಯ ಮಟ್ಟದ ಸಾಂಸ್ಕೃತಿಕ ಸಮ್ಮೇಳನ ಬಸವಪಟ್ಟಣ, ದಾವಣಗೆರೆ ಜಿಲ್ಲೆ, ೨೦ ಮೇ ೨೦೦೭.

೩೪. ಜಾನಪದ ಜಾತ್ರೆ, ಮುಳಗುಂದ, ಗದಗ ಜಿಲ್ಲೆ, ೯ ಜೂನ್ ೨೦೦೭.

೩೫. ರಾಷ್ಟ್ರೀಯ ವಿಚಾರ ಸಂಕಿರಣ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೫, ಜೂನ್ ೨೦೦೭.

೩೬. ಜಾನಪದ ಜಾತ್ರೆ, ಮಂಡ್ಯ, ೧, ೨, ಡಿಸೆಂಬರ್ ೨೦೦೭ .

೩೭. ಕರಾವಳಿ ಉತ್ಸವ, ಮಂಗಳೂರು, ೨೭ ಜನವರಿ ೨೦೦೮.

೩೮. ಜಾನಪದ ಲೋಕೋತ್ಸವ, ಬೆಂಗಳೂರು, ೧೦ ಫೆಬ್ರವರಿ ೨೦೦೮.

೩೯. ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಹರಪನಹಳ್ಳಿ, ದಾವಣಗೆರೆ, ೨೪, ಫೆಬ್ರವರಿ ೨೦೦೮.

೪೦. ರಾಜ್ಯಮಟ್ಟದ ಸಾಂಸ್ಕೃತಿಕ ಉತ್ಸವ, ಮಾಯಕೊಂಡ, ದಾವಣಗೆರೆ ಜಿಲ್ಲೆ, ೨೫, ಫೆಬ್ರವರಿ ೨೦೦೮.

೪೧. ಶ್ರೀ ಮಾರಿಕಾಂಬ ದೇವಿ ಜಾತ್ರ ಸಾಂಸ್ಕೃತಿಕ ಕಾರ್ಯಕ್ರಮ, ಸಾಗರ, ಶಿವಮೊಗ್ಗ ಜಿಲ್ಲೆ, ೪, ಮಾರ್ಚ್, ೨೦೦೮

೪೨. ಜಾನಪದ ಜಾತ್ರೆ, ಆದಿಚುಂಚನಗಿರಿ, ೧೯ ಮಾರ್ಚ್ ೨೦೦೮.

೪೩. ಕೆಂಪೇಗೌಡರ ೪೯೬ನೇ ಜಯಂತೋತ್ಸವ, ಟೌನ್‌ಹಾಲ್, ಬೆಂಗಳೂರು, ೨೫, ಜೂನ್ ೨೦೦೮

೪೪. ಅಂತಾರಾಷ್ಟ್ರೀಯ ವಿಚಾರಣ ಸಂಕಿರಣ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೫, ಜನವರಿ ೨೦೦೯.

೪೫. ರಸಋಷಿ ಚಲನಚಿತ್ರ ಚಿತ್ರೀಕರಣ, ಬೆಂಗಳೂರು, ೬, ೭, ಮಾರ್ಚ್ ೨೦೦೯.

೪೬. ಜಾನಪದ ಕಾರ್ಯಕ್ರಮ, ಅಶೋಕ ಹೋಟೆಲ್, ಬೆಂಗಳೂರು, ೫, ಮೇ ೨೦೦೯.

೪೭. ರಾಷ್ಟ್ರಮಟ್ಟದ ಜಾನಪದ ಸಮ್ಮೇಳನ, ಅರಸೀಕೆರೆ, ದಾವಣಗೆರೆ ಜಿಲ್ಲೆ, ೩, ಫೆಬ್ರವರಿ ೨೦೦೯.

೪೮. ನಮ್ಮ ಕಲೆ ನಮ್ಮ ನೆಲೆ, ರಾಷ್ಟ್ರಮಟ್ಟದ ಮಹಿಳೆಯರ ಕಲೆ ಅಭಿವ್ಯಕ್ತಿ, ೩, ಡಿಸೆಂಬರ್ ೨೦೦೯.

೪೯. ಹಾಲುರಾಮೇಶ್ವರ ಉತ್ಸವ, ಹೊಸದುರ್ಗ, ಚಿತ್ರದುರ್ಗ ಜಿಲ್ಲೆ, ೧೦, ಫೆಬ್ರವರಿ ೨೦೧೦.

೫೦. ರಾಜ್ಯಮಟ್ಟದ ಸಾಂಸ್ಕೃತಿಕ ಮಹೋತ್ಸವ, ನೇರ್ಲಿಗಿ, ದಾವಣಗೆರೆ ಜಿಲ್ಲೆ, ೨೭ ಫೆಬ್ರವರಿ ೨೦೧೦.

೫೧. ಜಾನಪದ ಜಾತ್ರೆ, ಗುಂಡ್ಲುಪೇಟೆ, ಚಾಮರಾಜನಗರ ಜಿಲ್ಲೆ, ೬, ಜುಲೈ ೨೦೧೦.

೫೨. ಕರ್ನಾಟಕ ಜಾನಪದ ಪರಿಷತ್ತಿನ ರಜತ ಮಹೋತ್ಸವ, ರವೀಂದ್ರ ಕಲಾಕ್ಷೇತ್ರ ಬೆಂಗಳೂರು, ೨೪, ಮೇ ೨೦೧೦.

೫೩. ನಾಟಕೋತ್ಸವ, ರಂಗ ಶಂಕರ, ಬೆಂಗಳೂರು, ೨೬, ಅಕ್ಟೋಬರ್ ೨೦೧೧.

೫೪. ಕನ್ನಡ ರಾಜ್ಯೋತ್ಸವ, ಕೇಂದ್ರ ಕಾರಾಗೃಹ, ಬೆಂಗಳೂರು, ೨೭ ನವೆಂಬರ್, ೨೦೧೧.

೫೫. ಆಕಾಶವಾಣಿ ಸಂದರ್ಶನ, ಹೊಸಪೇಟೆ, ೮, ಡಿಸೆಂಬರ್ ೨೦೧೧.

೫೬. ಬದುಕು ಜಟಕ ಬಂಡಿ ಝಿ ಕನ್ನಡ ಟಿ.ವಿ. ಸಂದರ್ಶನ ಪ್ರಸಾರ, ೩, ಜನವರಿ ೨೦೧೧.

೫೭. ಕೊಡಚಾದ್ರಿ ವೈಭವ, ಶಿವಮೊಗ್ಗ, ೧೨, ಜನವರಿ ೨೦೧೧.

೫೮. ಶ್ರೀ ಮಾರಿಕಾಂಬ ಜಾತ್ರೆ ಸಮಿತಿ ಸಾಂಸ್ಕೃತಿಕ ಕಾರ್ಯಕ್ರಮ, ಸಾಗರ, ೦೧, ಮಾರ್ಚ್ ೨೦೧೧.

೫೯. ಕೊಪ್ಪಳ ಜಿಲ್ಲಾ ಐದನೇ ಕನ್ನಡ ಸಾಹಿತ್ಯ ಸಮ್ಮೇಳನ, ಕುಷ್ಠಗಿ, ಕೊಪ್ಪಳ ಜಿಲ್ಲೆ, ೨೦, ಫೆಬ್ರವರಿ ೨೦೧೧.

೬೦. ಟಿ.ವಿ. ೯, ಜನಶ್ರೀ, ಕಸ್ತೂರಿ ಕಾರ್ಯಕ್ರಮ, ೧, ಏಪ್ರಿಲ್ ೨೦೧೧.

೬೧. ಅಖಿಲ ಭಾರತ ಸಾಹಿತ್ಯ ಸಮ್ಮೇಳನ, ಬೀದರ್, ೨೨ ರಿಂದ ೨೧, ೪ ತಿಂಗಳು.

೬೨. ಮೈಸೂರು ದಸರಾ ಉತ್ಸವ, ಮೈಸೂರು, ೫ ಜೂನ್ ೨೦೧೧.

೬೩. ೭೮ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಗಂಗಾವತಿ, ೧೧, ಡಿಸೆಂಬರ್ ೨೦೧೧.

೬೪. ಅಂತಾರಾಷ್ಟ್ರೀಯ ಮಟ್ಟದ ವಾಲಿಬಾಲ್ ಪಂದ್ಯಾವಳಿಯ ಸಾಂಸ್ಕೃತಿಕ ಕಾರ್ಯಕ್ರಮ, ೨೧ ಜನವರಿ ೨೦೧೨.

೬೫. ಅಂತಾರಾಷ್ಟ್ರೀಯ ಮಟ್ಟದ ಕಲೆ ಮತ್ತು ಸಂಗೀತೋತ್ಸವ, ಉಡುಪಿ, ೪ ಫೆಬ್ರವರಿ ೨೦೧೨.

೬೬. ಮಹಿಳಾ ಸಮಾವೇಶ(ಮಹಿಳಾ ಕರ್ನಾಟಕ ರಕ್ಷಣಾ ವೇದಿಕೆ ಬೆಂಗಳೂರು), ಬೆಂಗಳೂರು, ೮ ಏಪ್ರಿಲ್ ೨೦೧೨.

೬೭. ಕೊಡಚಾದ್ರಿ ವೈಭವ, ಶಿವಮೊಗ್ಗ  ೭, ೧೩ ಜುಲೈ ೨೦೧೨.

೬೮. ಮಂಡ್ಯ ಜಿಲ್ಲಾ ಸೋಬಾನೆ ಉತ್ಸವ, ಹೆಗ್ಗೇನಹಳ್ಳಿ, ೨೮ ಡಿಸೆಂಬರ್ ೨೦೧೨.

೬೯. ಮಹಿಳಾ ಪೌರಾಣಿಕ ನಾಟಕೋತ್ಸವ, ಮರಿಯಮ್ಮನಹಳ್ಳಿ, ೧, ೩ನೇ ಮಾರ್ಚ್ ೨೦೧೩.

೭೦. ವಿಶ್ವ ಆಳ್ವಾಸ್ ನುಡಿಸಿರಿ, ಮೂಡಬಿದರೆ, ೨೦೧೩.

**ಪ್ರಶಸ್ತಿಗಳು**

೧. ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ (೨೦೦೬)

೨. ಜಾನಪದ ಲೋಕ ಪ್ರಶಸ್ತಿ (೨೦೦೮)

೩. ರಾಜ್ಯೋತ್ಸವ ಪ್ರಶಸ್ತಿ (೨೦೧೦)

೪. ಶ್ರೀ ತಾಯಮ್ಮ ಮಲ್ಲಯ್ಯ ದತ್ತಿನಿಧಿ ಪ್ರಶಸ್ತಿ (೨೦೧೨)

೫. ಜಾನಪದ ಜಾನ ಪ್ರಶಸ್ತಿ

೬. ಸಮಾಜ ಸಖಿ ಪ್ರಶಸ್ತಿ (೨೦೧೪)

□□

# ಛಾಯಾಚಿತ್ರಗಳು



ಶ್ರೀಕೃಷ್ಣನ ವೇಷದಲ್ಲಿ ಕುಮಾರ ಮಂಜುನಾಥ ಶೆಟ್ಟಿ




ಅಮ್ಮ, ಅಣ್ಣ, ತಮ್ಮ, ತಂಗಿಯರ ಜೊತೆ ನಿಂತಿರುವ ಕುಮಾರ ಮಂಜುನಾಥ ಶೆಟ್ಟಿ



ಅಮ್ಮೊಂದಿಗೆ ಶ್ರೀ ಮಂಜುನಾಥ ಶೆಟ್ಟಿ



ಶ್ರೀ ರೇಣುಕ ಯಲ್ಲಮ್ಮ ನಾಟಕದ ಗೌಡಶಾನಿ ಪಾತ್ರದಲ್ಲಿ ಮಂಜಮ್ಮ ಜೋಗತಿ



ಶ್ರೀ ರೇಣುಕ ಯಲ್ಲಮ್ಮನ ನಾಟಕದ ಗೌಡಶಾನಿ ಪಾತ್ರದಲ್ಲಿ ಮಂಜಮ್ಮ



ಕೊಡ ಹೊತ್ತು ಕುಣಿಯುವ ತಂಡದಲ್ಲಿ ಮಂಜಮ್ಮ ಜೋಗತಿ



ಮೋಹಿನಿ ಭಸ್ಮಾಸುರ ನಾಟಕದಲ್ಲಿ ಭಸ್ಮಾಸುರ ಮಂಜಮ್ಮ ಜೋಗತಿ




ಮಂಜಮ್ಮ ಜೋಗತಿಯ ಅಭಿನಯದ ಭಂಗಿ



ಜಾತ್ರೆಯಲ್ಲಿ ತಮ್ಮ ತಂಡದೊಂದಿಗೆ ಮಂಜಮ್ಮ ಜೋಗತಿಯ ಕಲಾ ಪ್ರದರ್ಶನ




ಜೋಗತಿ ನೃತ್ಯ ತರಬೇತಿ ನೀಡುತ್ತಿರುವ ಮಂಜಮ್ಮ ಜೋಗತಿ



ಮಾನ್ಯ ಮಾಜಿ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ ಅವರಿಂದ
ರಾಜ್ಯೋತ್ಸವ ಪ್ರಶಸ್ತಿ ಸ್ವೀಕಾರ



ಜೋಗತಿ ಕಲಾ ತಂಡದೊಂದಿಗೆ ಕುಮಾರಿ ಸಾರಾ ಮತ್ತು
ಮಾನ್ಯ ಕುಲಪತಿ ಪ್ರೊ. ಅಂಬಳಿಕೆ ಹಿರಿಯಣ್ಣ




ಪಟ್ಟಾಂಗ ಕಾರ್ಯಕ್ರಮದಲ್ಲಿ ಆತ್ಮಕಥನ
ಅನಾವರಣಗೊಳಿಸುತ್ತಿರುವ ಮಂಜಮ್ಮ ಜೋಗತಿ



ಮಾನ್ಯ ಕುಲಪತಿ ಅವರಿಂದ ಸನ್ಮಾನ ಸ್ವೀಕರಿಸುತ್ತಿರುವ ಮಂಜಮ್ಮ ಜೋಗತಿ



ಯಲ್ಲಮ್ಮ ನಾಟಕ ತಂಡದಲ್ಲಿ ಮಂಜಮ್ಮ ಜೋಗತಿ




ನೃತ್ಯ ತರಬೇತಿ ಕಾರ್ಯಗಾರದ ಆಮಂತ್ರಣ ಪತ್ರ

# ನಮ್ಮ ಪ್ರಕಟಣೆಗಳು

| ಕ್ರ.ಸಂ. | ಕೃತಿಯ ಹೆಸರು ಲೇಖಕ/ ಸಂಪಾದಕರ ಹೆಸರು | ಬೆಲೆ |
|---|---|---|
| ೧. | ಇಂದಿನ ಕನಸು ನಾಳಿನ ನನಸು<br>*ಸಂ : ಪ್ರೊ. ಅಂಬಳಿಕೆ ಹಿರಿಯಣ್ಣ* | ೧೦೦.೦೦ |
| ೨. | ಜಾನಪದ ವರ್ಷ–೨೦೧೧<br>*ಸಂ : ಡಾ. ಎಸ್.ಪಿ. ಪದ್ಮಪ್ರಸಾದ್* | ೧೦೦.೦೦ |
| ೩. | ಜಾನಪದ ವಸ್ತುಕೋಶ<br>*ಸಂ : ಪ್ರೊ. ಸ.ಚಿ. ರಮೇಶ* | ೧೪೦.೦೦ |
| ೪. | ಕೇರಳದ ಜನಪದವೀರ ತಚ್ಚೋಳಿ ಒದೇನನ್<br>*ಡಾ. ಕೆ. ಕಮಲಾಕ್ಷ* | ೧೪೦.೦೦ |
| ೫. | ಕಾಡುಗೊಲ್ಲರ ಕೋಲಾಟದ ಪದಗಳು<br>*ಸಂ : ಮೋಹನಕುಮಾರ ಎನ್.* | ೮೦.೦೦ |
| ೬. | ತುಳುನಾಡಿನ ಜನಪದ ಕತೆಗಳು<br>*ಸಂ : ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್* | ೧೦೦.೦೦ |
| ೭. | ಕರ್ನಾಟಕ ಸಂಶೋಧನ ಜಾನಪದ<br>*ಸಂ : ಪ್ರೊ.ಎ.ವಿ. ನಾವಡ* | ೯೫೦.೦೦ |
| ೮. | ಮಲೆನಾಡ ನುಡಿಕೋಶ<br>*ಸಂ : ವೇಣಾಕ್ಷಿ ಎಸ್.ಡಿ.* | ೧೫೦.೦೦ |
| ೯. | ಬುರ್ರಕಥಾ ಜಯಮ್ಮ<br>*ಡಾ. ಕೆ. ಪ್ರೇಮಕುಮಾರ* | ೪೦.೦೦ |
| ೧೦. | ಗೊಂಬೇಗೌಡರ ರಾಮನಗೌಡರು<br>*ಡಾ. ಚಂದ್ರಪ್ಪ ಸೊಬಟಿ* | ೮೦.೦೦ |
| ೧೧. | ನಮ್ಮ ಪರಿಸರದ ಲಂಬಾಣಿಗರು<br>*ಡಾ. ಮಲ್ಲಿಕಾರ್ಜುನ ಕುಂಬಾರ* | ೬೦.೦೦ |
| ೧೨. | ಕಾಡುಗೊಲ್ಲರ ಬೆಡಗಿನ ಪದಗಳು<br>*ಸಂ : ಶ್ವೇತಾ ಎಂ.ಬಿ., ಶ್ರೀ ಮೋಹನಕುಮಾರ್ ಎನ್.* | ೬೦.೦೦ |
| ೧೩. | ಹುಮಾಯೂನ್ ಹರಲಾಪುರ<br>*ಡಾ. ವೃಷಭಕುಮಾರ* | ೬೦.೦೦ |
| ೧೪. | ಅಪ್ಪಗೆರೆ ತಿಮ್ಮರಾಜು<br>*ಶ್ವೇತಾ ಎಂ.ಬಿ.* | ೮೦.೦೦ |
| ೧೫. | ನೆಲದ ನೆನಪು<br>*ಡಾ. ಜಯಪ್ರಕಾಶ್ ಶೆಟ್ಟಿ ಹೆಚ್, ಡಾ. ಚಿಕ್ಕಮಗಳೂರು ಗಣೇಶ* | ೨೦೦.೦೦ |
| ೧೬. | ನಮ್ಮ ಗಿಡಮರಬಳ್ಳಿಗಳು<br>*ಶಾಂತಿ ನಾಯಕ* | ೪೦.೦೦ |

೧೭. ದೇಶೀಯ ಕೃಷಿ ಹತೋಟಿ ಮತ್ತು ಸಂರಕ್ಷಣಾ ಕ್ರಮಗಳು
*ಸಂ : ಪ್ರೊ. ಪ್ರಕಾಶ ಕಮ್ಮರಡಿ* ೧೦೦.೦೦

೧೮. ಜಾನಪದ ವರ್ಷ–೨೦೧೨
*ಸಂ : ಡಾ. ಕೆ.ವಿ. ಮುದ್ದವೀರಪ್ಪ* ೧೨೦.೦೦

೧೯. ದಕ್ಷಿಣ ಭಾರತೀಯ ದೇಶೀ ಕೃಷಿವಿಜ್ಞಾನ ಕೋಶ (ಎರಡು ಸಂಪುಟಗಳು ಸೇರಿ)
*ಪ್ರ.ಸಂ : ಪ್ರೊ. ಅಂಬಳಿಕೆ ಹಿರಿಯಣ್ಣ* ೧೦೦೦.೦೦
*ಕಾ.ನಿ.ಸಂ : ಪ್ರೊ. ಆರ್ಟಿಯಸ್ ಸುಂದರಂ,*
*ಸಂ : ಪ್ರೊ. ಸ.ಚಿ. ರಮೇಶ*

೨೦. ವಿಸ್ತೃತ ಜಾನಪದ ಗ್ರಂಥಸೂಚಿ
*ಪ್ರ.ಸಂ : ಪ್ರೊ. ಅಂಬಳಿಕೆ ಹಿರಿಯಣ್ಣ* ೭೦೦.೦೦
*ಸಂ : ಶ್ರೀ ಕ್ಯಾತನಹಳ್ಳಿ ರಾಮಣ್ಣ, ಶ್ರೀ ಟಿ.ಎಸ್. ರಾಜಪ್ಪ*

೨೧. ಮೂಲತಾನದ ನಾಗಬ್ರಹ್ಮ ಮತ್ತು ಪರಿವಾರ ದೈವಗಳ ಪಾಡ್ದನ
*ಸಂ : ಡಾ. ಇಂದಿರಾ ಹೆಗ್ಗಡೆ* ೧೫೦.೦೦

೨೨. ಉತ್ತರ ಕನ್ನಡ ಕರಾವಳಿಯ ಜನಪದ ಕತೆಗಳು
*ಸಂ : ಶಾಂತಿ ನಾಯಕ* ೧೨೦.೦೦

೨೩. **Manteswamy Epic Tradition of South Karnataka**
***Prof. Ambalike Hiriyanna*** ೨೮೦.೦೦

೨೪. **Dakshinatya Abhinaya Siddhanta**
***Dr. Guru Rao Bapat*** ೧೦೦.೦೦

೨೫. ನಾಡವರ ಜಾನಪದ ತವನಿಧಿ
*: ಪ್ರೊ. ಎನ್.ಆರ್. ನಾಯಕ* ೨೬೦.೦೦

೨೬. **The Bayalatas of North Karnataka**
***Dr. Basavaraja Malashetty***
***Translated by: Dr. Parvathi G. Aithal*** ೧೩೦.೦೦

೨೭. ತಾತ್ಯಾ–ಬಾಪು ಅವರ ಲಾವಣಿಗಳು
*ಸಂ : ಡಾ. ಹರಿಲಾಲ ಪವಾರ* ೮೦.೦೦

೨೮. ಪೂಜಾರಿ ಶಿವಣ್ಣ ಹೇಳಿದ ಜುಂಜಪ್ಪ ಮಹಾಕಾವ್ಯ
*ಸಂ : ಡಾ. ತೀ.ನಂ. ಶಂಕರನಾರಾಯಣ, ಡಾ. ಎಂ.ಎನ್. ವೆಂಕಟೇಶ್* ೧೭೦.೦೦

೨೯. ಬೆಳಗಲ್ಲು ವೀರಣ್ಣ
*ಡಾ. ಎಂ.ಎನ್. ವೆಂಕಟೇಶ್* ೭೦.೦೦

೩೦. ಮಂಜಮ್ಮ ಜೋಗತಿ
*ಡಾ. ಚಂದ್ರಪ್ಪ ಸೊಬಟಿ* ೮೦.೦೦

೩೧. ಡಾ. ಪಿ.ಕೆ. ರಾಜಶೇಖರ
*ಸಂಗಮೇಶ ಎಸ್. ಗಣಿ* ೧೨೦.೦೦

೩೨. ಜಾನಪದ ಜಗಲಿ (ಸಂಶೋಧನಾ ಅರ್ಧವಾರ್ಷಿಕ ಪತ್ರಿಕೆ)
ಸಂಚಿಕೆ–೧, ೨, ೩ & ೪
ಬಿಡಿ ಪ್ರತಿಗೆ ೫೦.೦೦

ಜೈವಿಕ ಅಂಶಗಳ ಕಾರಣದಿಂದಾಗಿ ವ್ಯಕ್ತಿಯ ಭೌತಿಕ ಚಹರೆಗಳಲ್ಲಿ ವ್ಯತ್ಯಾಸಗಳು ಕಾಣಿಸುವುದು ಸಹಜ. ಪ್ರತಿಭೆಗೆ ಯಾವುದೇ ತೆರನಾದ ಲಿಂಗಬೇಧವಾಗಲೀ, ಜಾತಿಮತಗಳ ಹಂಗಾಗಲೀ ಇರುವುದಿಲ್ಲ. ಸಮಾಜದ ಮುಖ್ಯವಾಹಿನಿಯಿಂದ ದೂರ ಉಳಿದ ಅನೇಕ ವಿಕಲಚೇತನರು ಅತ್ಯಂತ ಆತ್ಮವಿಶ್ವಾಸದಿಂದ ಜೀವನ ನಡೆಸುತ್ತಿರುವುದು ಕಂಡುಬರುತ್ತದೆ. ವಿಜ್ಞಾನ ಲೋಕಕ್ಕೆ ವಿಸ್ಮಯಕಾರಿಯಾಗಿ ತೋರುವ ಇಂತಹ ವ್ಯಕ್ತಿಗಳ ದೈಹಿಕ ದೌರ್ಬಲ್ಯಗಳು ಎಂದೂ ಮುಖ್ಯವಾಗಬಾರದು. ಅವರನ್ನೂ ಮಾನವೀಯ ನೆಲೆಯಿಂದ ನೋಡುವ ಮನಸ್ಥಿತಿಯನ್ನು ರೂಢಿಸಿಕೊಳ್ಳಬೇಕಾದುದು ಸಮಾಜದ ಆರೋಗ್ಯದ ದೃಷ್ಟಿಯಿಂದ ಮುಖ್ಯವೆನಿಸುತ್ತದೆ. ಈ ಹಿನ್ನೆಲೆಯಲ್ಲಿ ಗಮನಿಸಿದಾಗ, ಅವರಲ್ಲಿರುವ ಅಗಾಧ ಕಲಾಪ್ರತಿಭೆ ಎಂಥವರನ್ನೂ ಹುಬ್ಬೇರಿಸುವಂತೆ ಮಾಡುತ್ತದೆ. ಸಮಾಜದಿಂದ ನಿರ್ಲಕ್ಷ್ಯಕ್ಕೆ ಒಳಗಾದ ಜೋಗತಿ ಕಲಾವಿದರು ತಮ್ಮದೇಯಾದ ವಿಶಿಷ್ಟ ಕಲಾಪರಂಪರೆಯನ್ನು ಮುಂದುವರೆಸಿಕೊಂಡು ಹೋಗುವಲ್ಲಿ ಶ್ರಮಿಸುತ್ತಿರುವುದು ಗಮನಾರ್ಹ. ಅಂತಹ ವಿರಳ ಕಲಾವಿದರಲ್ಲಿ ಮಂಜಮ್ಮ ಜೋಗತಿಯೂ ಒಬ್ಬರು. ಜೋಗತಿ ಕಲೆಯ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಮೆರೆಸುವ ಮಂಜಮ್ಮ ಜೋಗತಿಯ ಬದುಕು ಮಾತ್ರ ಸಾಹಸದಿಂದ ಕೂಡಿದೆ. ಅಂತಹ ಸಾಹಸದ ಜೀವನ ನಡೆಸಿದ ಮಂಜಮ್ಮಳ ಬದುಕಿನ ಚಿತ್ರಣವನ್ನು ಡಾ. ಚಂದ್ರಪ್ಪ ಸೊಬಟಿ ಅವರು 'ಮಂಜಮ್ಮ ಜೋಗತಿ' ಕೃತಿಯಲ್ಲಿ ಅನಾವರಣಗೊಳಿಸಿದ್ದಾರೆ. ಮಂಜಮ್ಮಳ ಬದುಕಿನ ಜೊತೆಗೆ ಇಡೀ ಜೋಗತಿ ಸಮುದಾಯದ ಬದುಕಿನ ಬಹು ಆಯಾಮಗಳನ್ನು ಅರಿಯುವಲ್ಲಿ ಈ ಕೃತಿ ಮಹತ್ವದ್ದಾಗಿದೆ. ಇಂತಹ ಅಮೂಲ್ಯವಾದ ಕೃತಿಯನ್ನು ರಚಿಸಿಕೊಟ್ಟಿರುವ ಡಾ. ಚಂದ್ರಪ್ಪ ಸೊಬಟಿ ಅವರು ಅಭಿನಂದನಾರ್ಹರು.

■ ಪ್ರೊ. ಅಂಬಳಿಕೆ ಹಿರಿಯಣ್ಣ
ಕುಲಪತಿ

ISBN 978-93-83149-21-6
9 789383 149216
₹ : ೮೦/-

ವಿಸ್ತರಣೆ ಹಾಗೂ ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

Printed at : Raja Printers, Bangalore-560 027, Ph.: 22234066